# ಎಸ್.ಎಸ್.ಎಲ್.ಸಿ ಪ್ರಥಮ ಭಾಷೆ ಕನ್ನಡ

# ವ್ಯಾಕರಣಾಂಶಗಳು
# ಮತ್ತು

## 2019 ಮತ್ತು 2020 ರ ವಾರ್ಷಿಕ ಪರೀಕ್ಷೆಗಳ ಉತ್ತರ ಸಹಿತ ಪ್ರಶ್ನೆಪತ್ರಿಕೆ

ಕೆ. ಮುನಿಯಪ್ಪ
ಎಂ.ಎ, ಎಂ.ಇಡಿ, ಎಂ.ಫಿಲ್
ಕನ್ನಡ ಸಹ ಶಿಕ್ಷಕರು
ಧರ್ಮಸಾಗರ ಪ್ರೌಢಶಾಲೆ, ದೊಮ್ಮಸಂದ್ರ



# ಕನ್ನಡ
# ೧. ವರ್ಣಮಾಲೆ
## ವರ್ಣಮಾಲೆ

- ಸ್ವರಗಳು
  - ಹ್ರಸ್ವಸ್ವರಗಳು ೦೬
    ಅ ಇ ಉ ಋ ಎ ಒ
  - ದೀರ್ಘಸ್ವರಗಳು ೦೭
    ಆ ಈ ಊ ಏ ಓ ಐ ಔ
- ವ್ಯಂಜನಗಳು –೩೪
  - ವರ್ಗೀಯ ವ್ಯಂಜನಗಳು ೨೫
    - ಅಲ್ಪಪ್ರಾಣ
      ಕ್ ಗ್ ಚ್ ಜ್ ಟ್ ಡ್ ದ್ ತ್ ಪ್ ಬ್
    - ಮಹಾಪ್ರಾಣ
      ಖ್ ಘ್ ಝ್ ಠ್ ಢ್ ಥ್ ಧ್ ಫ್ ಭ್
    - ಅನುನಾಸಿಕ
      ಙ್ ಞ್ ಣ್ ನ್ ಮ್
  - ಅವರ್ಗೀಯ ವ್ಯಂಜನಗಳು ೦೯
    ಯ್ ರ್ ಲ್ ವ್ ಶ್ ಷ್ ಸ್ ಹ್ ಳ್
- ಯೋಗವಾಹಕಗಳು
  - ಅನುಸ್ವರ ಂ
  - ವಿಸರ್ಗ ಃ

ನಾವು ಮಾತನಾಡುವ ಮಾತುಗಳೆಲ್ಲ ವಾಕ್ಯಗಳಾಗಿರುತ್ತದೆ. ವಾಕ್ಯಗಳು ಪದಗಳಿಂದ ಕೂಡಿರುತ್ತದೆ ಪದಗಳು ಅಕ್ಷರಗಳಿಂದ ಕೂಡಿರುತ್ತದೆ .

ಕನ್ನಡ ಭಾಷೆಯಲ್ಲಿ ಬಳಸುವ ಅಕ್ಷರಗಳ (49) ಸಮೂಹವೇ ವರ್ಣಮಾಲೆ ಅಥವಾ ಅಕ್ಷರ ಮಾಲೆ .

ಕನ್ನಡ ವರ್ಣಮಾಲೆಯನ್ನು ಮೂರು ವಿಧಗಳನ್ನಾಗಿ ಮಾಡಲಾಗಿದೆ .

1). ಸ್ವರಗಳು (13)

2). ವ್ಯಂಜನಗಳು (34)

3). ಯೋಗವಾಹಕಗಳು (02)

* **ಸ್ವರಗಳು :** ಸ್ವತಂತ್ರವಾಗಿ ಉಚ್ಚಾರ ಮಾಡಲಾಗುವ ಅಕ್ಷರಗಳನ್ನು ಸ್ವರಗಳೆಂದು ಕರೆಯುತ್ತೇವೆ . ಸ್ವರಗಳು 13 ಅವುಯಾವುವೆಂದರೆ

ಅ,ಆ,ಇ,ಈ,ಉ,ಊ,ಋ,ಎ,ಏ,ಐ,ಒ,ಓ,ಔ.

ಸ್ವರಗಳಲ್ಲಿ ಮತ್ತೆ ಮೂರು ವಿಧಗಳನ್ನು ಕಾಣಬಹುದಾಗಿದೆ .

1. ಹ್ರಸ್ವ ಸ್ವರಗಳು : ಒಂದು ಮಾತ್ರೆಯ ಕಾಲದಲ್ಲಿ ಉಚ್ಚರಿಸುವ ಸ್ವರಾಕ್ಷರಗಳಿಗೆ ಹ್ರಸ್ವ ಸ್ವರಗಳೆಂದು ಕರೆಯುತ್ತಾರೆ .

   ಅವು :– ಅ,ಇ,ಉ,ಋ,ಎ,ಒ .

2. ದೀರ್ಘ ಸ್ವರಗಳು : ಎರಡು ಮಾತ್ರೆಗಳ ಕಾಲದಲ್ಲಿ ಉಚ್ಚರಿಸಲ್ಪಡುವ ಸ್ವರಾಕ್ಷರಗಳಿಗೆ ದೀರ್ಘಸ್ವರಗಳೆಂದು ಕರೆಯುತ್ತಾರೆ.

   ಅವು – ಆ,ಈ,ಊ,ಏ,ಓ,ಐ,ಔ .

   ಐ,ಔ ಅಕ್ಷರಗಳನ್ನು ಸಂಧ್ಯಾಕ್ಷರಗಳೆಂದೂ ಕರೆಯುವರು.

3. ಪ್ಲುತಸ್ವರಗಳು : ಎರಡಕ್ಕಿಂತ ಹೆಚ್ಚು ಮಾತ್ರೆಗಳ ಕಾಲದಲ್ಲಿ ಉಚ್ಚರಿಸಲ್ಪಡುವ ಸ್ವರಾಕ್ಷರಗಳಿಗೆ ಪ್ಲುತ ಸ್ವರಗಳು ಎನ್ನುವರು . ಪ್ಲುತ ಸ್ವರಗಳನ್ನು

ಅಮ್ಮಾ ss ಗುರುತಿಸಲಾಗುತ್ತದೆ . ಅಕ್ಕss, ದೇವರೇss, ಗುರುಗಳೇss,ಮಕ್ಕಳಿಕಾss .

* **ವ್ಯಂಜನಗಳು :** ಸ್ವರಗಳ ಸಹಾಯದಿಂದ ಮಾತ್ರ ಉಚ್ಚಾರ ಮಾಡಲಾಗುವ ಅಕ್ಷರಗಳನ್ನು ವ್ಯಂಜನಗಳೆಂದು ಕರೆಯುತ್ತಾರೆ.

| | | | | | | | | |
|---|---|---|---|---|---|---|---|---|
| ಕ್ | ಖ್ | ಗ್ | ಘ್ | ಙ್ | – ಕವರ್ಗ | – | ಕಂಠ್ಯ ಅಕ್ಷರಗಳು |
| ಚ್ | ಛ್ | ಜ್ | ಝ್ | ಞ್ | – 'ಚ' ವರ್ಗ | – | ತಾಲವ್ಯ ಅಕ್ಷರಗಳು |
| ಟ್ | ಠ್ | ಡ್ | ಢ್ | ಣ್ | – 'ಟ' ವರ್ಗ | – | ಮೂರ್ಧನ್ಯ ಅಕ್ಷರಗಳು |
| ತ್ | ಥ್ | ದ್ | ಧ್ | ನ್ | – 'ತ' ವರ್ಗ | – | ದಂತ್ಯ ಅಕ್ಷರಗಳು |
| ಪ್ | ಫ್ | ಬ್ | ಭ್ | ಮ್ | – 'ಪ' ವರ್ಗ | – | ಓಷ್ಠ್ಯ ಅಕ್ಷರಗಳು |

ಯ್ , ರ್ , ಲ್ , ವ್ , ಶ್ , ಷ್ , ಸ್ , ಹ್ , ಳ್

ವ್ಯಂಜನಾಕ್ಷರಗಳಲ್ಲಿ 2 ವಿಧಗಳಿವೆ

1) **ವರ್ಗೀಯ ವ್ಯಂಜನಗಳು :** ವರ್ಗೀಸಲು ( ಗುಂಪು) ಮಾಡಲು ಸಾಧ್ಯವಾಗುವ ಅಕ್ಷರಗಳನ್ನು ವರ್ಗೀಯ ವ್ಯಂಜನಗಳೆಂದು ಕರೆಯಲಾಗಿದೆ.

ಅವು **'ಕ'** ವರ್ಗ – ಕ್ , ಖ್ , ಗ್ , ಘ್ , ಙ್

**'ಚ'** ವರ್ಗ – ಚ್ , ಛ್ , ಜ್ , ಝ್, ಞ್

**'ಟ'** ವರ್ಗ – ಟ್ , ಠ್ , ಡ್ , ಢ್ , ಣ್

**'ತ'** ವರ್ಗ – ತ್ , ಥ್ , ದ್ , ಧ್ , ನ್

**'ಪ'** ವರ್ಗ – ಪ್ , ಫ್ ಬ್ , ಭ್ , ಮ್

ಈ ವರ್ಗೀಯ ವ್ಯಂಜನಗಳಲ್ಲಿ ಮೂರು ರೀತಿಯ ಅಕ್ಷರಗಳನ್ನು ಕಾಣಬಹುದಾಗಿದೆ ಅವು ಯಾವುದೆಂದರೆ .

**1) <u>ಅಲ್ಪ ಪ್ರಾಣ</u> :** ಅಲ್ಪ ಎಂದರೆ ಕಡಿಮೆ ಉಸಿರಿನಿಂದ ಉಚ್ಚರಿಸುವ ವ್ಯಂಜನಾಕ್ಷರಗಳಿಗೆ ಅಲ್ಪ ಪ್ರಾಣಾಕ್ಷರಗಳೆಂದು ಕರೆ0ಯುತ್ತಾರೆ.

ಪ್ರತಿಯೊಂದು ವರ್ಗದ 1 ನೆಯ ಮತ್ತು 3 ನೇಯ ವ್ಯಂಜನಾಕ್ಷರಗಳನ್ನು ಅಲ್ಪ ಪ್ರಾಣಾಕ್ಷರಗಳನ್ನೆಬಹುದು

ಅವು – ಕ್ , ಚ್ , ಟ್ , ತ್ , ಪ್

ಗ್ , ಜ್ , ಡ್ , ದ್ , ಬ್

2) **<u>ಮಹಾಪ್ರಾಣ</u> :** ಮಹಾಪ್ರಾಣ ಎಂದರೆ ಹೆಚ್ಚು ಹೆಚ್ಚು ಉಸಿರಿನಿಂದ ಉಚ್ಚರಿಸಲ್ಪಡುವ ವ್ಯಂಜನಾಕ್ಷರಗಳಿಗೆ ಮಹಾಪ್ರಾಣಾಕ್ಷರಗಳೆಂದು ಕರೆ0ಯುತ್ತಾರೆ. ಪ್ರತಿ0ಯೊಂದು ವರ್ಗದ 2 ನೇ ಮತ್ತು 4 ನೇ ವ್ಯಂಜನಾಕ್ಷರಗಳನ್ನು ಅಲ್ಪ ಪ್ರಾಣಾಕ್ಷರಗಳೆನ್ನಬಹುದು

ಅವು : ಖ್ , ಛ್ , ಠ್ , ಥ್ , ಫ್

ಘ್ , ಝ್ , ಢ್ , ಧ್ , ಭ್

3) **<u>ಅನುನಾಸಿಕ</u> :** ನಾಸಿಕ ಎಂದರೆ ಮೂಗು ಮೂಗಿನ ಸಹಾಯದಿಂದ ಉಚ್ಚರಿಸಲ್ಪಡುವ ವ್ಯಂಜನಾಕ್ಷರಗಳಿಗೆ ಅನುನಾಸಿಕಾಕ್ಷರಗಳೆನ್ನುವರು ಪ್ರತಿ0ಯೊಂದು ವರ್ಗದ 5 ನೇ ವ್ಯಂಜನಾಕ್ಷರವನ್ನು ಅನುನಾಸಿಕಾಕ್ಷರವೆನ್ನುವರು ,

ಅವು : ಙ್ , ಞ್ , ಣ್ , ನ್ , ಮ್

**ಯೋಗವಾಹಗಳು** : ಯೋಗ ವಾಹಗಳನ್ನು ಪ್ರತ್ಯೇಕವಾಗಿ ಉಚ್ಚಾರ ಮಾಡಲಾಗುವುದಿಲ್ಲ ಇನ್ನೊಂದು ಅಕ್ಷರದ ಸಂಬಂಧವನ್ನು ಇವು ಹೊಂದಿದಾಗಲೇ ಉಚ್ಚಾರ ಮಾಡಲು ಇರುತ್ತವೆ . ಯೋಗ ಎಂದರೆ ಸಂಬಂಧವನ್ನು ವಾಹಕ ಎಂದರೆ ಹೊಂದಿದ ಎಂಬ ಅರ್ಥ ಬರುತ್ತದೆ. ಅದ್ದರಿಂದ ಒಂದು ಅಕ್ಷರದ

ಸಂಬಂಧವನ್ನು ಹೊಂದಿದ ಮೇಲೆಯೇ ಉಚ್ಚಾರ ಮಾಡಲುಬರುವುದಕ್ಕೆ ಯೋಗವಾಹಕಗಳು ಎನ್ನುವರು

ಂ = ಅನುಸ್ವರ ಃ = ವಿಸರ್ಗಗಳೇ ಯೋಗವಾಹಕಗಳು

2. **ಅವರ್ಗೀಯ ವ್ಯಂಜನಗಳು :** ವರ್ಗೀಸಲು (ಗುಂಪು ಮಾಡಲು) ಸಾಧ್ಯವಾಗದೇ ಇರುವ ಅಕ್ಷರಗಳಿಗೆ ಅವರ್ಗೀಯ ವ್ಯಂಜನಾಕ್ಷರಗಳೆಂದು ಕರೆ0ಯುತ್ತಾರೆ.

ಅವು : ಯ್ , ರ್ , ಲ್ , ವ್ , ಶ್ , ಷ್ , ಸ್ , ಹ್ , ಳ್

* ಯಾವ ಯಾವ ಅಕ್ಷರಗಳು ಎಲ್ಲೆಲ್ಲಿ ಹುಟ್ಟುತ್ತವೆ.

ಅಕ್ಷರಗಳೆಲ್ಲ ಹೊಕ್ಕಳಿನ ಮೂಲ ಭಾಗದಿಂದ ಹೊರಟ ಶಬ್ದವೊಂದರಿಂದ ಹುಟ್ಟುತ್ತವೆ ಹಾಗೆ ಹೊರಟ ಶಬ್ದವು ಗಂಟಲು , ದವಡೆ,

ಮೂರ್ಧ (ನಾಲಗೆಯ ಮೇಲೆ ಭಾಗ) ತುಟಿ , ಹಲ್ಲು ಇತ್ಯಾದಿಗಳ ಸಹಾಯದಿಂದ ಬೇರೆ ಬೇರೆ ಅಕ್ಷರಗಳಾಗುತ್ತವೆ .

1. ಅ , ಆ , ಕ , ಖ , ಗ , ಘ , ಙ , ಹ ಮತ್ತು ವಿಸರ್ಗ (ಃ) ಇವು ಕಂಠದಲ್ಲಿ ಹುಟ್ಟುತ್ತೆವಾದ್ದರಿಂದ ಇವನ್ನು ಕಂಠ್ಯ ವರ್ಣಗಳೆನ್ನುತ್ತಾರೆ.
2. ಇ , ಈ , ಚ , ಛ , ಜ , ಝ , ಞ , ಯ , ಶ ಇವುಗಳು ತಾಲುವಿನ (ದವಡೆಯ) ಸಹಾಯದಿಂದ ಹುಟ್ಟತ್ತವಾದ್ದರಿಂದ ಇವನ್ನು ತಾಲವ್ಯ ಎನ್ನುವರು.
3. ಋ , ಟ , ಠ , ಡ , ಢ , ಣ , ರ , ಷ – ಅಕ್ಷರಗಳು ನಾಲಿಗೆಯ ಮೇಲ್ಭಾಗವಾದ ಮೂರ್ಧವೆಂಬುದರ ಸಹಾಯದಿಂದ
   ಉಚ್ಚರಿಸಲ್ಪಡುವುದರಿಂದ ಇವುಗಳನ್ನು ಮೂರ್ಧನ್ಯಗಳೆಂದು ಕರೆಯುವರು
4. ತ , ಥ , ದ , ಧ , ನ , ಲ , ಸ – ಅಕ್ಷರಗಳು ಹಲ್ಲುಗಳ ಸಹಾಯದಿಂದ ಉಚ್ಚರಿಸಲ್ಪಡುವುದರಿಂದ ಇವುಗಳನ್ನು ದಂತ್ಯ ವರ್ಣಗಳೆನ್ನುವರು .
5. ಉ , ಊ , ಪ , ಫ , ಬ , ಭ , ಮ – ಅಕ್ಷರಗಳು ತುಟಿಯ (ಓಷ್ಠ್ಯದ) ಸಹಾಯದಿಂದ ಉಚ್ಚರಿಸಲ್ಪಡುವುದರಿಂದ ಇವುಗಳನ್ನು ಓಷ್ಠ್ಯದ ವರ್ಣಗಳೆನ್ನುವರು .
6. ಙ , ಞ , ಣ , ನ , ಮ – ಅಕ್ಷರಗಳು ಮೂಗಿನ ಸಹಾಯದಿಂದ ಉಚ್ಚರಿಸಲ್ಪಡುವುದರಿಂದ ಇವುಗಳನ್ನು ಅನುನಾಸಿಕ ಅಕ್ಷರಗಳೆನ್ನುವರು .

## ಗುಣಿತಾಕ್ಷರಗಳು

ವ್ಯಂಜನಾಕ್ಷರಗಳನ್ನು ದ್ ವ್ ರ್ ಹೀಗೆ ಬರೆದು ಅರ್ಥವತ್ತಾದ ಶಬ್ದಗಳನ್ನು ಮಾಡಲಾಗುವುದೇ ಇಲ್ಲ . ಅವುಗಳಿಗೆಲ್ಲ ಸ್ವರಗಳು ಸೇರಲೇಬೇಕು ದ್ + ಏ = ದೇ , ವ್ + ಅ = ವ , ರ್ + ಉ = ರು – ಹೀಗೆ ಸ್ವರಗಳನ್ನು ಸೇರಿಸಿದ ಮೇಲೆಯೇ ದೇವರು ಎಂದು ಉಚ್ಚಾರ ಮಾಡಲು ಸಾಧ್ಯವಾಗುತ್ತದೆ. .ದೇವರು ಎಂದಾಗ ಅದರಲ್ಲಿರುವ ದ್ , ಏ , ವ್ , ಅ , ರ್ , ಉ ವ್ಯಂಜನ ಸ್ವರಗಳನ್ನು ಬಿಡಿ ಬಿಡಿಯಾಗಿ ಬರೆಯಲಾಗುವುದಿಲ್ಲ. ವ್ಯಂಜನದಲ್ಲಿ ಸ್ವರವನ್ನು ಸೇರಿಸಿ ಒಂದು ಹೊಸ ಆಕಾರದ ಅಕ್ಷರವನ್ನು ಮಾಡಿ ಬರೆಯುತ್ತೇವೆ . ಅಂದರೆ ಒಂದು ವ್ಯಂಜನಾಕ್ಷರಕ್ಕೆ ಒಂದು ಸ್ವರಾಕ್ಷರ ಸೇರಿ ಆಗುವ ಅಕ್ಷರವನ್ನು ಗುಣಿತಾಕ್ಷರ ಎಂದು ಕರೆಯುತ್ತಾರೆ .

| ವ್ಯಂಜನ | + | ಸ್ವರ | = | ಗುಣಿತಾಕ್ಷರ |
|---|---|---|---|---|
| ಕ್ | + | ಅ | = | ಕ |
| ಕ್ | + | ಆ | = | ಕಾ |
| ಕ್ | + | ಇ | = | ಕಿ |
| ಕ್ | + | ಈ | = | ಕೀ |
| ಕ್ | + | ಉ | = | ಕು |

| | | | | |
|---|---|---|---|---|
| ಕ್ | + | ಊ | = | ಕೂ |
| ಕ್ | + | ಋ | = | ಕೃ |
| ಕ್ | + | ಎ | = | ಕೆ |
| ಕ್ | + | ಏ | = | ಕೇ |
| ಕ್ | + | ಐ | = | ಕೈ |
| ಕ್ | + | ಒ | = | ಕೊ |
| ಕ್ | + | ಓ | = | ಕೋ |
| ಕ್ | + | ಔ | = | ಕೌ |

ಇದರಿಂದ ಎಲ್ಲ ಸ್ವರಗಳನ್ನು (13) 34 ವ್ಯಂಜನಗಳಲ್ಲಿಯೂ ಸೇರಿಸಿ ಹೊಸ ಆಕಾರದ ಅಕ್ಷರಗಳನ್ನು ಮಾಡಿಕೊಳ್ಳುತ್ತೇವೆ ಇದೇ ಗುಣಿತಾಕ್ಷರಗಳೆಂದು ಕರೆಯಿಸಿಕೊಳ್ಳುತ್ತವೆ. (ಎರಡು ಯೋಗವಾಹಗಳು ಸೇರಿಯೂ ಗುಣಿತಾಕ್ಷರ ಮಾಡಲಾಗುತ್ತದೆ).

* 34 ವ್ಯಂಜನಾಕ್ಷರಗಳಿಗೆ 13 ಸ್ವರಾಕ್ಷರಗಳು ಸೇರಿ 442 ಗುಣಿತಾಕ್ಷರಗಳು ಬರುತ್ತವೆ.

* 34 ವ್ಯಂಜನಾಕ್ಷರಗಳಿಗೆ 13 ಸ್ವರಾಕ್ಷರಗಳು ಹಾಗೂ 2 ಯೋಗವಾಹಕಗಳು ಸೇರಿ 510 ಗುಣಿತಾಕ್ಷರಗಳು ಬರುತ್ತವೆ.

## ಒತ್ತಕ್ಷರಗಳು (ಸಂಯುಕ್ತಾಕ್ಷರಗಳು)

ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳಿಗೆ ಅಂತ್ಯದಲ್ಲಿ ಒಂದುಸ್ವರ ಸೇರಿ ಆಗುವ ಅಕ್ಷರವನ್ನು ಒತ್ತಕ್ಷರ ಅಥವಾ ಸಂಯುಕ್ತಾಕ್ಷರ ಎಂದು ಕರೆಯಲಾಗುತ್ತದೆ.

ಸಂಯುತ್ತಾಕ್ಷರಗಳಲ್ಲಿ ಎರಡು ವಿಧಗಳನ್ನು ಕಾಣಬಹುದಾಗಿದೆ. ಅವು ಯಾವುವೆಂದರೆ

1) ಸಜಾತೀಯ ಸಂಯುಕ್ತಾಕ್ಷರ

2) ವಿಜಾತೀಯ ಸಂಯುಕ್ತಾಕ್ಷರ

ಅಕ್ಕ ಎಂಬ ಶಬ್ದದಲ್ಲಿ ಯಾವ ಯಾವ ಅಕ್ಷರಗಳಿವೆಂದರೆ ಅ+ಕ್+ಕ್+ಅ ..., ಹೀಗೆ ನಾಲ್ಕು ಅಕ್ಷರಗಳು ಸೇರಿ ಅಕ್ಕ ಶಬ್ದವಾಗಿದೆ.

ಇಲ್ಲಿ ಕ್ಕ ಎಂದರೆ  ಕ್ + ಕ್ + ಅ

ಣ್ಣ ಎಂದರೆ ಣ್ + ಣ್ + ಅ

ಇಲ್ಲಿ ಎರಡೆರಡು ವ್ಯಂಜನ ಸೇರಿಕೊಂಡು ಒಂದಾಕ್ಷರವಾಗಿದೆ. ಈ ಎರಡೂ ವ್ಯಂಜನಗಳೂ ಒಂದೇ ಜಾತಿಯವು ಅಂದರೆ. ಒಂದೇ ಜಾತಿಯ (ರೀತಿಯ) ಎರಡು ವ್ಯಂಜನಗಳು ಸೇರಿ ಆಗುವ ಅಕ್ಷರವೇ ಸಜಾತೀಯ ಸಂಯುಕ್ತಾಕ್ಷರ.

ಉದಾಹರಣೆ:- ಅಪ್ಪ, ಅಕ್ಕ, ಅಜ್ಜ, ಕಜ್ಜ, ಕಟ್ಟು, ಹತ್ತ, ಸುತ್ತ, ಅಯ್ಯ, ಅಮ್ಮ, ತಮ್ಮ, ಎನ್ನು, ಹಣ್ಣು, ಮೆಚ್ಚು, ಕತ್ತಲು. ಇಲ್ಲ ಎಚ್ಚರ,ಕಣ್ಣಿಗೆ, ಬಟ್ಟೆ, ಇತ್ಯಾದಿಗಳು...,

ಭಕ್ತ ಎಂಬ ಶಬ್ದದಲ್ಲಿ ಭ್ + ಅ + ಕ್ + ತ್ + ಅ ಎಂಬ ಐದು ಅಕ್ಷರಗಳಿವೆ ಅಷ್ಟು ಎಂಬ ಶಬ್ದದಲ್ಲಿ

ಅ + ಷ್ + ಟ್ + ಎ ಎಂಬ

ನಾಲ್ಕು ಅಕ್ಷರಗಳಿವೆ 'ಸ್ತ್ರೀ' ಎಂಬ ಶಬ್ದದಲ್ಲಿ ಸ್ + ತ್ + ರ್ + ಈ ಎಂಬ ನಾಲ್ಕು ಅಕ್ಷರಗಳಿವೆ.

ಮೇಲಿನ ಈ ಉದಾಹರಣೆಗಳಲ್ಲಿ ಎರಡೆರಡು ಮೂರು ಮೂರು ವ್ಯಂಜನಗಳು ಸೇರಿ ಒಂದೊಂದು ಅಕ್ಷರಗಳಾಗಿವೆ. ಆದರೆ ಹೀಗೆ ಇಲ್ಲಿ ಸೇರಿರುವ ವ್ಯಂಜನಗಳು ಬೆರೆ ಬೇರೆ ಜಾತಿಯವು. ಅಂದರೆ ಬೇರೆ ಬೇರೆ ಜಾತಿಯ ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ವ್ಯಂಜನಗಳ ಸೇರಿ ಆಗುವ ಅಕ್ಷರವೇ ವಿಜಾತೀಯ ಸಂಯುಕ್ತಾಕ್ಷರ.

ಉದಾಹರಣೆಗೆ : ಉಷ್ಣ , ಅಸ್ತ್ರ , ಅಕ್ಷರ , ಶಕ್ತಿ , ಸ್ವಾರ್ಥ , ಜ್ಞಾನ , ವಸ್ತ್ರ , ಸಿದ್ಧಾರ್ಥ , ಸೂರ್ಯ , ಶ್ರವಣ, ಲಕ್ಷಣ , ಪುತ್ರ , ಪ್ರವೇಶ , ಹೊಗಳ್ವೆ , ಸದ್ಗುಣ , ಅಗ್ನಿ , ಕಾರ್ಯ , ಶಸ್ತ್ರ , ಸ್ಫೋಟಿಸು ಅದ್ಭುತ , ಡಾಕ್ಟರ್ ಇತ್ಯಾದಿಗಳು

**ಕನ್ನಡ ಅಂಕಿಗಳು**

ಭಾರತದ ಎಲ್ಲಾ ಭಾಷೆಗಳಲ್ಲಿ ಬಹುತೇಕ ಭಾಷೆಗಳು ಸ್ವಂತ ಅಂಕಿಗಳನ್ನು ಹೊಂದಿದೆ .

ಕನ್ನಡದ ಅಂಕಿಗಳು ೧ , ೨ , ೩ , ೪ , ೫ , ೬ , ೭ , ೮ , ೯.........೯೯ ರವರೆಗಿನ ಎಲ್ಲಾ ಅಂಕಿಗಳು ಕನ್ನಡ ಭಾಷೆಯ ಅಂಕಿಗಳಾಗಿವೆ. ನಂತರದ ಅಂಕಿಗಳನ್ನು ಕನ್ನಡವು ಸಂಸ್ಕೃತ ಮತ್ತು ಇತರ ಭಾಷೆಗಳಿಂದ ಎರವಲು ಪಡೆದಿದೆ .

ಉದಾ :– ಸಾವಿರ ಎನ್ನುವುದು ಸಂಸ್ಕೃತದ ಸಹಸ್ರ ಎಂಬ ಶಬ್ದದ ತದ್ಭವ ರೂಪ ಹಾಗೆಯೇ ಲಕ್ಷ , ಕೋಟಿ ,ಬಿಲಿಯನ್, ಮಿಲಿಯನ್ ಎಲ್ಲವೂ ಬೇರೆ ಬೇರೆ ಭಾಷೆಗಳಿಂದ ಎರವಲು ಪಡೆದಂತವುಗಳು . ಕನ್ನಡದಲ್ಲಿ ಕಾಲು, ಅರ್ಧ , ಮುಕ್ಕಾಲು ಏಂಬುದನ್ನು ಸೂಚಿಸಲು ಕನ್ನಡದಲ್ಲಿ ಪ್ರತ್ಯೇಕ ಸಂಕೇತಗಳಿವೆ. (ಕಾಲು) (ಅರ್ಧ) (ಮುಕ್ಕಾಲು) – ಇವೇ ಆ ಸಂಕೇತಗಳು

**ನಾಮಪದಗಳು**

ನಾವು ಮಾತನಾಡುವ ಮಾತುಗಳಲ್ಲಿ ಅನೇಕ ಬಗೆಯ ಶಬ್ದಗಳಿರುತ್ತವೆ. ಆ ಶಬ್ದಗಳಿಗೆ ನಾವು ಬೇರೆ ಬೇರೆ ಹೆಸರು ಕೊಟ್ಟಿರುತ್ತೇವೆ . ಅಂದರೆ ಒಂದೊಂದು ಜಾತೀಯ ಶಬ್ದಗಳನ್ನು ಒಂದೊಂದು ಗುಂಪು ಮಾಡಿ ವಾಕ್ಯದಲ್ಲಿ ಹೇಳುತ್ತೇವೆ

ಉದಾ :– ಆತನು ಮನೆಯನ್ನು ಚೆನ್ನಾಗಿ ಕಟ್ಟಿದನು.

ಇಲ್ಲಿ – ಆತನು ಮನೆಯನ್ನು – ಇವು ನಾಮಪದಗಳು
ಕಟ್ಟಿದನು – ಇದು ಕ್ರಿಯಾಪದ
ಚೆನ್ನಾಗಿ – ಇವು ಅವ್ಯಯ

ಹೀಗೆ ನಾವು ಆಡುವ ಮಾತುಗಳನ್ನು ಮುಖ್ಯವಾಗಿ ಮೂರು ಗುಂಪುಗಳಾಗಿ ಮಾಡುತ್ತೇವೆ :

1) ನಾಮಪದ 2) ಕ್ರಿಯಾಪದ 3) ಅವ್ಯಯ

ಹೀಗೆ ನಾವು ಆಡುವ ಮಾತುಗಳನ್ನು ಮುಖ್ಯವಾಗಿ ಮೂರು ಗುಂಪುಗಳಾಗಿ ಮಾಡುತ್ತೇವೆ :

1) ನಾಮಪದ 2) ಕ್ರಿಯಾಪದ 3) ಅವ್ಯಯ

'ಪದ' ಎಂದರೆ ಮೂಲರೂಪ ಪ್ರಕೃತಿವೊಂದಕ್ಕೆ ಪ್ರತ್ಯಯ ಸೇರಿದ ರೂಪ .

| ಉದಾ : ನಾಮ ಪ್ರಕೃತಿ | + | ನಾಮ ವಿಭಕ್ತಿ ಪ್ರತ್ಯಯ | = | ನಾಮಪದ |
|---|---|---|---|---|
| ಮನೆ | + | ಉ | = | ಮನೆಯು |
| ಕಲ್ಲು | + | ಅನ್ನು | = | ಕಲ್ಲನ್ನು |
| ಹೊಲ | + | ಇಂದ | = | ಹೊಲದಿಂದ |
| ನೆಲ | + | ಕ್ಕೆ | = | ನೆಲಕ್ಕೆ |
| ಶಾಲೆ | + | ಅಲ್ಲಿ | = | ಶಾಲೆಯಲ್ಲಿ |

ಇಲ್ಲಿರುವ ಮನೆ , ಕಲ್ಲು , ಹೊಲ , ನೆಲ , ಶಾಲೆ – ಇವುಗಳು ನಾಮಪ್ರಕೃತಿಗಳು

ಉ : ಅನ್ನೂ , ಇಂದ ಕ್ಕೆ, ಅಲ್ಲಿ – ಇವೆಲ್ಲ ನಾಮವಿಭಕ್ತಿ ಪ್ರತ್ಯಯಗಳು ಮನೆಯು , ಕಲ್ಲನ್ನೂ , ಹೊಲದಿಂದ , ನೆಲಕ್ಕೆ

ಶಾಲೆಯಲ್ಲಿ – ಇವೆಲ್ಲ ನಾಮಪದಗಳು .

**ನಾಮಪ್ರಕೃತಿ**

ನಾಮಪದ ಮೂಲರೂಪವಾಗಿಯೂ , ಕ್ರಿಯೆಯ ಅರ್ಥವನ್ನು ಕೊಡದೆಯೂ ಇರುವ ಶಬ್ದವೇ ನಾಮಪ್ರಕೃತಿಗಳು ಎನ್ನಬಹದು.

ನಾಮ ಎಂದರೆ ಹೆಸರು , ಹೆಸರನ್ನು ಸೂಚಿಸುವ ಪದಗಳೇ ನಾಮಪದ ( ವ್ಯಕ್ತಿ , ವಸ್ತು , ಸ್ಥಳ , ಪ್ರಾಣಿಗಳ ಹೆಸರನ್ನು

ಸೂಚಿಸುವ ಪದಗಳು) ಉದಾ:- ರಾಮ , ರಂಗ , ಹುಡುಗ , ಸದಿ , ಹಳ , ಬೆಟ್ಟ , ಮೈಸೂರು , ದೊಮ್ಮಸಂದ್ರ , ಹುಸ್ಕೂರು , ಜಿಂಕೆ , ಹಸು , ಕುರಿ , ಇತ್ಯಾದಿ.

**ನಾಮವಾಚಕ ಪ್ರಕೃತಿಗಳಲ್ಲಿ 8 ವಿಧಗಳಿವೆ ಅವು ಯಾವುವೆಂದರೆ**

**1. ವಸ್ತು ವಾಚಕಗಳು:** ವಸ್ತುಗಳ ಹೆಸರನ್ನು ಹೇಳುವ ಶಬ್ದಗಳೆಲ್ಲ ವಸ್ತುವಾಚಕಗಳು. ಇದರಲ್ಲಿ ಚೇತನವುಳ್ಳ ವಸ್ತುಗಳು, ಚೇತನವಿಲ್ಲದ ವಸ್ತುಗಳೆಂದು ವಿಭಾಗಿಸಲಾಗಿದೆ

**ಚೇತನವುಳ್ಳ ವಸ್ತುಗಳು ಉದಾಹರಣೆಗೆ:** ಮನುಷ್ಯ, ಹೆಂಗಸು, ಬಸವ, ಕೃಷ್ಣ, ಮುದುಕ, ಎತ್ತು, ಎಮ್ಮೆ, ನರಿ, ನಾಯಿ

**ಚೇತನವಿಲ್ಲದ ವಸ್ತುಗಳು ಉದಾಹರಣೆ:** ಕಲ್ಲು, ಮರ, ನೆಲ, ಜಲ, ಎಲೆ, ಹೂ, ಹಣ್ಣು, ಕಾಯಿ, ಬೆಟ್ಟ, ಅಡವಿ, ಮನೆ, ಮಠ, ಶಾಲೆ

**ವಸ್ತುವಾಚಕಗಳಲ್ಲಿ 3 ವಿಧಗಳಿವೆ,**

1. ರೂಢನಾಮ 2. ಅಂಕಿತನಾಮ 3. ಅನ್ವರ್ಥಕನಾಮ

* **ರೂಢನಾಮ:-** ರೂಢಿಯಿಂದ ಬಂದ ಸಾಮನ್ಯವಾಚಕಗಳು ರೂಢನಾಮಗಳು

ಉದಾ:- ನದಿ, ಪರ್ವತ, ಮನುಷ್ಯ, ಹೆಂಗಸು, ಹುಡುಗ, ಪಟ್ಟಣ, ದೇಶ, ಊರು, ಪ್ರಾಣಿ.

* **ಅಂಕಿತನಾಮ:** ವ್ಯವಹಾರದ ಉಪಯೋಗಕ್ಕೆ ಇಟ್ಟುಕೊಂಡು ಹೆಸರುಗಳೆಲ್ಲವು ಅಂಕಿತನಾಮಗಳು, ಉದಾ:- ಗಂಗಾ, ಕಾವೇರಿ, ರಾಮ, ಶಂಕರ, ಸಾವಿತ್ರಿ, ಬೀಮ, ಗೌತಮ, ಭಾರತ, ಕರ್ನಾಟಕ, ಬೇವು, ಹುಲಿ, ಕಮಲಾಕ್ಷ, ಬುದ್ಧ. ಇತ್ಯಾದಿ...............

* **ಅನ್ವರ್ಥಕನಾಮ:-** ಅರ್ಥಕ್ಕೆ ಅನುಗುಣವಾಗಿ ಇಟ್ಟ ಹೆಸರುಗಳೆಲ್ಲ ಅನ್ವರ್ಥಕನಾಮ

ಉದಾ:- ಕುಂಟ ಹೆಳವ, ಕಿವುಡ, ವ್ಯಾಪಾರಿ, ವಿದ್ವಾಂಸ, ರೋಗಿ, ಯೋಗಿ, ಪೂಜಾರಿ, ಶಿಕ್ಷಕ, ವಿಜ್ಞಾನಿ. ಪಂಡಿತ, ವೈದ್ಯ ಇತ್ಯಾದಿ....

**2. ಗುಣವಾಚಕಗಳು;** ವಸ್ತುಗಳ ಗುಣ, ರೀತಿ, ಸ್ವಭಾವಗಳನ್ನು ತಿಳಿಸುವ ವಿಶೇಷಣಗಳೆಲ್ಲಾ ಗುಣವಾಚಕಗಳು ಎನಿಸುತ್ತದೆ.

ಉ:- ಕೆಂಪು, ಚಿಕ್ಕ, ಕಿರಿದು, ಒಳ್ಳೆಯ, ಕೆಟ್ಟದು, ಬಿಳಿದು, ಕರಿದು, ಹೊಸದು. ಹಳೆಯ, ಹಳತು, ಪಿರಿದು, ಎಳದು ಇತ್ಯಾದಿಗಳು...

**3. ಸಂಖ್ಯೇ0ಯ ವಾಚಕಗಳು:** ಸಂಖ್ಯೆಯಿಂದ ಕೂಡಿದ ವಸ್ತುಗಳನ್ನು ಹೇಳುವ ಶಬ್ದಗಳೇ ಸಂಖ್ಯೇ0ಯ ವಾಚಕಗಳು.

ಉದಾ:- ಮೂರನೆಯ, ಎರಡನೆಯ, ಐದನೆಯ, ಮೂವರು, ನಾಲ್ವರು, ಹತ್ತನೆಯ ಎಂಬತ್ತನೆಯ.

**4. ಸಂಖ್ಯಾವಾಚಕಗಳು:–** ಸಂಖ್ಯೇ0ಯನ್ನು ಸೂಚಿಸುವ ಶಬ್ದಗಳೆಲ್ಲ ಸಂಖ್ಯಾವಾಚಕಗಳು. ಉದಾ:– ಹತ್ತು, ಹನ್ನೆರಡು, ಐವತ್ತು, ಎಂಬತ್ತು ನಾಲ್ಕು, ಐದು, ಮೂರು, ಸಾವಿರ, ಲಕ್ಷ

**5. ಭಾವ ನಾಮಗಳು:** ವಸ್ತುಗಳ ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಶಬ್ದಗಳೆಲ್ಲ ಭಾವನಾಮಗಳೆಸುವುವು. ಉದಾ:–ಬಿಳಿಪು, ಕಪ್ಪು, ಕೆಂಪು, ಹಿರಿಮೆ, ನೋಟ, ಮಟ, ಆಟ, ಕೂಟ, ಹೆಮ್ಮೆ, ಬಿಳ್ಪು, ಕರ್ಪು, ಪೆಂಪು

**6. ಪರಿಮಾಣ ವಾಚಕಗಳು:–** ವಸ್ತುಗಳ ಸಾಮಾನ್ಯ ಅಳತೆ, ಪರಿಮಾಣ, ಗಾತ್ರ ಇತ್ಯಾದಿಗಳನ್ನು ಹೇಳುವ ಶಬ್ದಗಳೇ ಪರಿಮಾಣ ವಾಚಕಗಳು. ಉದಾ:– ಅಷ್ಟು. ಇಷ್ಟು. ಹಲವು, ಕೆಲವು, ಅನಿತು, ಇನಿತು, ಎನಿತು, ಪಲವು

**7. ದಿಗ್ವಾಚಕಗಳು:** ದಿಕ್ಕುಗಳ (ನಿಟ್ಟುಗಳ) ಹೆಸರನ್ನು ಸೂಚಿಸುವ ಶಬ್ದಗಳೆಲ್ಲ ದಿಗ್ವಾಚಕಗಳು. ಉದಾ:– ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ಈಶಾನ್ಯ, ವಾಯುವ್ಯ, ಆಗ್ನೇಯ ನೈಋತ್ಯ, ಮೂಡಣ, ತೆಂಕಣ, ಬಡಗಣ, ಪಡುವಣ, ಆಚೆ, ಈಚೆ, ಇತ್ಯಾದಿಗಳು.

**8. ಪ್ರಕಾರ ವಾಚಕಗಳು:** ವಸ್ತುಗಳ ಸ್ಥಿತಿ ಅಥವಾ ರೀತಿಗಳನ್ನು ತಿಳಿಸುವ ಶಬ್ದಗಳೆಲ್ಲ ಪ್ರಕಾರವಾಚಕಗಳು. ಇವು ಒಂದು ಬಗೆಯ ಗುಣವಾಚಕಗಳೇ ಉದಾ:– ಅಂಥ. ಅಂಥಹುದು, ಇಂಥ, ಇಂಥದು, ಇಂಥಹುದು, ಎಂತಹ, ಎಂಥ, ಎಂಥವನು, ಅಂಥವಳು, ಅಂಥದು, ಅಂತಹನು, ಇಂತಹನು, ಅಂತಹುದು, ಇತ್ಯಾದಿ.........

## ಸರ್ವನಾಮಗಳು.

ಶ್ರೀರಾಮನು ಕಾಡಿಗೆ ಹೋದನು. ಅವನ ಸಂಗಡ ಸೀತಾಲಕ್ಷ್ಮಣರೂ ಹೊರಟರು. ಅವರು ಅಲ್ಲಿ ಪರ್ಣ ಶಾಲೆಯಲ್ಲಿ ವಾಸಿಸುತ್ತಿದ್ದರು.

ಈ ವಾಕ್ಯದಲ್ಲಿ ಅವನ ಸಂಗಡ ಎಂದರೆ ರಾಮನ ಸಂಗಡ ಎಂದರ್ಥ ಅವರು, ಅಲ್ಲಿ ಶಬ್ದಗಳು ನಾಮಪದಗಳ ಸ್ಥಾನದಲ್ಲಿ ಅವುಗಳಿಗೆ ಬದಲಾಗಿ ಕೆಲವು ಬೇರೆ ಬಗೆಯ ಶಬ್ದಗಳನ್ನು ಪ್ರಯೋಗಿಸುತ್ತೇವೆ. ಆ ಶಬ್ದಗಳೇ ಸರ್ವನಾಮಗಳು "ವಸ್ತುವಾಚಕಗಳಾದ ನಾಮಪದಗಳ ಜಾಗದಲ್ಲಿ ನಿಂತು ಅವನ್ನು ಬೋಧಿಸುವ (ಸೂಚಿಸುವ) ಶಬ್ದಗಳೇ ಸರ್ವನಾಮಗಳು.

**ಉದಾ:–**ಅದು. ಇದು. ಎಲ್ಲಾ .ಯಾವುದು, ಏನು, ಅವನು. ಇವಳು, ಯಾವನು, ಅವಳು, ಯಾವಳು, ತಾನು, ತಾವು, ನೀನು, ನೀವು, ಅವುದು, ಆರು, ಆಂಅನ್ ನಾಂ(ನಾನ್) ನೀಂ (ನೀನ್) ಇತ್ಯಾದಿಗಳು.

* ಸರ್ವನಾಮಗಳನ್ನು ಮೂರು ವಿಭಾಗಗಳಾಗಿ ಮಾಡಬಹುದು. ಅವು

1. ಪುರುಷಾರ್ಥಕ ಸರ್ವನಾಮಗಳು
2. ಪ್ರಶ್ನಾರ್ಥಕ ಸರ್ವನಾಮಗಳು
3. ಆತ್ಮಾರ್ಥಕ ಸರ್ವನಾಮಗಳು.

**ಪುರುಷಾರ್ಥಕ ಸರ್ವನಾಮಗಳು:**

| **ಪುರುಷವಾಚಕ** | **ಏಕವಚಕ** | **ಬಹುವಚನ** |
|---|---|---|
| ಉತ್ತಮ ಪುರುಷ | ನಾನು | ನಾವು |
| ಮಧ್ಯಮ ಪುರುಷ | ನೀನು | ನೀವು |
| ಪ್ರಥಮ ಪುರುಷ | ಅವನು, ಇವಳು | ಅವರು |
| | ಅವಳು, ಇವನು | ಇವರು |
| | ಅದು, ಇದು | ಇವು, ಅವು |

* **ಪ್ರಶ್ನಾರ್ಥಕ ಸರ್ವನಾಮಗಳು :** ಯಾವುದು? ಏನು? ಏತರದು? ಆವುದು? ಯಾವುದು? ಏನ್? ಯಾರು? ಇತ್ಯಾದಿ ಪ್ರಶ್ನೆಗಳಿಗೆ ಸಂಬಂಧಿಸಿದ ಪದಗಳು ಪ್ರಶ್ನಾರ್ಥಕ ಸರ್ವನಾಮಗಳು.

* **ಆತ್ಮಾರ್ಥಕ ಸರ್ವನಾಮ :** ತಾನು, ತಾವು, ತನ್ನ, ತಮ್ಮ ಮುಂತಾದವುಗಳನ್ನು ಆತ್ಮಾರ್ಥಕ ಸರ್ವನಾಮಗಳು ಎನ್ನುತ್ತೇವೆ.

## ವಿಭಕ್ತಿಗಳು

'ಭೀಮನು ತನ್ನ ಬಲಗಾಲಿನಿಂದ ಚೆಂಡನ್ನು ಒದೆದನು' ಈ ವಾಕ್ಯವು ಭೀಮ ತಾನು, ಬಲಗಾಲು, ಚೆಂಡು–ಹೀಗೆ ಕೇವಲ ನಾಮ ಪ್ರಕೃತಿಗಳನ್ನೆ ಹೇಳಿ ಒದೆದನು ಎಂದಿದ್ದರೆ ಅರ್ಥವಾಗುತ್ತಿರಲಿಲ್ಲ.
ಭೀಮ, ತಾನು, ಬಲಗಾಲು, ಚೆಂಡು ಈ ನಾಲ್ಕು ಪ್ರಕೃತಿಗಳಿಗೆ ಪರಸ್ಪರ ವಾಕ್ಯದಲ್ಲಿ ಒಂದು ಸಂಬಂಧವಿದೆ ಈ ಸಂಬಂಧವನ್ನು ಪ್ರತ್ಯಯಗಳು ಉಂಟು ಮಾಡುತ್ತವೆ.
* ಭೀಮನು ಎಂಬಲ್ಲಿಯ 'ಉ' ಪ್ರತ್ಯಯ ಕರ್ತೃರ್ಥದಲ್ಲೂ
* ಚೆಂಡನ್ನು ಎಂಬಲ್ಲಿಯ 'ಅನ್ನು' ಪ್ರತ್ಯಯ ಕಮಾರ್ಥದಲ್ಲೂ
* ತನ್ನ ಎಂಬಲ್ಲಿಯ 'ಅ' ಪ್ರತ್ಯಯ ಸಂದರ್ಭದಲ್ಲೂ
* ಬಲಗಾಲಿನಿಂದ ಎಂಬಲ್ಲಿಯ 'ಇಂದ' ಪ್ರತ್ಯೇ0ಯ ಸಾಧನಾರ್ಥದಲ್ಲೂ ಎಂದರೆ ಕರಣಾರ್ಥದಲ್ಲೂ ಸೇರಿ ವಾಕ್ಯದಲ್ಲಿ ಪರಸ್ಪರ ಸಂಬಂಧವನ್ನುಂಟು ಮಾಡುವವು.
"ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧಿಕರಣಾಧಿಕಾರಕಾರ್ಥಗಳನ್ನು ವಿಭಾಗಿಸಿ ಕೊಡುವ ಶಬ್ದರೂಪವೇ ವಿಭಕ್ತಿ ಎನಿಸುವುದು? ವಾಕ್ಯದಲ್ಲಿ ಪ್ರಯೋಗವಾಗುವ ನಾಮಪದ ಹಾಗೂ ವಾಕ್ಯರ್ಥಕ್ಕೆ ಸಂಬಂಧ ಕಲ್ಪಿಸಿ ಕೊಡುವ ಪ್ರತ್ಯಯ ರೂಪಗಳೇ ವಿಭಕ್ತಿ ಪ್ರತ್ಯಯಗಳು. ಅವು ನಾಮ ಪ್ರಕೃತಿಗಳ ಸಂಬಂಧ ಹಾಗೂ ವಾಕ್ಯಾರ್ಥ ಕಾರ್ಯವನ್ನು ಸಹಜವಾಗಿ ನಿರೂಪಿಸುವುದು.

| ಸಂಖ್ಯೆ | ವಿಭಕ್ತಿಗಳು | ಅರ್ಥಗಳ ಕಾರರ್ಥಗಳು | ವಿಭಕ್ತಿ ಪ್ರತ್ಯೆ0ಯ | | ಹೊಸಗನ್ನಡ ನಾಮಪದ | | ಹಳಗನ್ನಡ ನಾಮಪದ | |
|---|---|---|---|---|---|---|---|---|
| | | | ಹೊಸಗನ್ನಡ | ಹಳಗನ್ನಡ | ಏಕ ವಚನ | ಬಹು ವಚನ | ಏಕವಚನ | ಬಹು ವಚನ |
| 1 | ಪ್ರಥಮ | ಕರ್ತ್ರರ್ಥ | ಉ | ಮ್ | ಭೀಮನು | ಭೀಮರ | ಭೀಮಮ್ | ಭೀಮರ್ |
| 2 | ದ್ವಿತೀ0ಯ | ಕರ್ಮಾರ್ಥ | ಅನ್ನು | ಅಂ | ಭೀಮನನ್ನು | ಭೀಮರನ್ನು | ಭೀಮನಂ ಭೀಮನಿಂ | ಭೀಮರಂ |
| 3 | ತೃತೀ0ಯಾ | ಕರಣಾರ್ಥ ಸಾಧನಾರ್ಥ | ಇಂದ | ಇಂ ಇಂದು ಇಂದ | ಭೀಮನಿಂದ | ಭೀಮರಿಂದ | ಭೀಮನಿಂದ ಭೀಮರಿಂದೆ | ಭೀಮರಿಂ ಭೀಮರಿಂದ ಭೀಮರಿಂದೆ |
| 4 | ಚತುರ್ಥಿ | ಸಂಪ್ರದಾನ ಕೊಡುವಿಕೆ | ಗ, ಇಗೆ, ಕ್ಕೆ, ಅಕ್ಕೆ | ಗೆ.ಕ್ಕೆ | ಭೀಮನಿಗೆ | ಭೀಮರಿಗೆ | ಭೀಮಂಗೆ | ಭೀಮರ್ಗೆ |
| 5 | ಪಂಚಮಿ | ಅಪಾದಾನ ಅಗಲಿಕೆ | ದೆಸೆಯಿಂದ | ಅತ್ತಣಿಂ ಅತ್ತಣಿಂದಂ ಅತ್ತಣಿಂದೆ | ಭೀಮನದೆ ಸೆಯಿಂದ | ಭೀಮರ ದೆಸೆಯಿಂದ | ಭೀಮನತ್ತಣಿಂ ಭೀಮನತ್ತಣಿಂದಂ ಭೀಮನತ್ತಣಿಂದೆ | ಭೀಮರತ್ತಣಿ ಭೀಮರತ್ತಣಿಂದಂ ಭೀಮರತ್ತಣಿದೆ |
| 6 | ಷಷ್ಠಿ | ಸಂಬಂಧ | ಅ | ಅ | ಭೀಮನ | ಭೀಮರ | ಭೀಮನ | ಭೀಮರ |
| 7 | ಸಪ್ತಮಿ | ಅಧಿಕರಣಾ | ಅಲ್ಲಿ ಅಲ್ಲಿ | ಒಳ್ | ಭೀಮನಲ್ಲಿ ಭೀಮನಲಿ | ಭೀಮರಲ್ಲಿ ಭೀಮರಲಿ | ಭೀಮರಲ್ಲಿ | ಭೀಮರೊಳ್ |

## ವಿಭಕ್ತಿ ಪಲ್ಲಟ:

ನಾವು ಮಾತಾನಾಡುವಾಗ ಶಬ್ದಗಳಿಗೆ ಪ್ರಕೃತಿಗಳಿಗೆ ಯಾವ ಯಾವ ವಿಭಕ್ತಿ ಪ್ರತ್ಯಯಗಳನ್ನು ಹಚ್ಚಿ ಹೇಳ ಬೇಕೋ ಅದನ್ನು ಬಿಟ್ಟು ಬೇರೆ ವಿಭಕ್ತಿ ಪ್ರತ್ಯಯಗಳನ್ನು ಹಚ್ಚಿ ಹೇಳುವುದುಂಟು, ಹೀಗೆ ಬರಬೇಕಾದ ವಿಭಕ್ತಿ ಪ್ರತ್ಯಯಕ್ಕೆ ಪ್ರತಿಯಾಗಿ ಬೇರೊಂದು ವಿಭಕ್ತಿ ಪ್ರತ್ಯ0ಯ ಬರುವಂತೆ ಹೇಳುವುದೇ ವಿಭಕ್ತಿ ಪಲ್ಲಟ.

**ಉದಾಹರಣೆ:–**

1. ಬಂಡಿಯನ್ನು ಹತ್ತಿದನು (ಬಂಡಿಗೆ ಹತ್ತಿದನು)
2. ಊರನ್ನು ಸೇರಿದನು (ಊರಿಗೆ ಸೇರಿದನು)
3. ಬೆಟ್ಟವನ್ನು ಹತ್ತಿದನು (ಬೆಟ್ಟಕ್ಕೆ ಹತ್ತಿದನು)
4. ಮರದ ದೆಸೆಯಿಂದ ಹಣ್ಣು ಉದುರಿತು (ಮರದಿಂದ ಹಣ್ಣೂ ಉದುರಿತು)
5. ಆತನ ದೆಸೆಯಿಂದ ಕೇಡಾಯಿತು (ಆತನಿಂದ ಕೇಡಾಯಿತು)
6. ಮನೆಯ ಯಜಮಾನ (ಮನೆಗೆ ಯಜಮಾನ)
7. ನಮ್ಮ ಉಪಾಧ್ಯಾಯರು (ನಮಗೆ ಉಪಾಧ್ಯಯರು)
8. ಹಳ್ಳದಲ್ಲಿ ಬಿದ್ದನು (ಹಳ್ಳಕ್ಕೆ ಬಿದ್ದನು)
9. ಅವನಲ್ಲಿ ಸಾಮರ್ಥ್ಯವಿಲ್ಲ (ಅವನಿಗೆ ಸಾಮರ್ಥ್ಯವಿಲ್ಲ)

**ಕ್ರಿಯಾಪದ**

1. ತಾಯಿಯು ಅಡುಗೆಯನ್ನು ಮಾಡುತ್ತಾಳೆ.
2. ತಂದೆಯು ಕೆಲಸವನ್ನು ಮಾಡಿದನು.
3. ಅಣ್ಣನು ಊಟವನ್ನು ಮಾಡುವನು.
4. ದೇವರು ಒಳ್ಳೆ0ಯದನ್ನು ಮಾಡಲಿ.
5. ಅವನು ನಾಳೆಯ ದಿನ ಮಾಡಿಯಾನು.
6. ಅವನು ಊಟವನ್ನು ಮಾಡನು.

ಮೇಲೆ ಇರುವ ವಾಕ್ಯಗಳಲ್ಲಿ ಮಾಡುತ್ತಾಳೆ ಮಾಡಿದನು, ಮಾಡುವನು ಮಾಡಲಿ, ಮಾಡಿಯಾನು, ಮಾಡನು,– ಇವೆಲ್ಲ ಒಂದೊಂದು ಕ್ರಿಯೆಯು ಪೂರ್ಣಗೊಂಡ ಅರ್ಥ ಕೊಡುವಂತ ಪದಗಳಾಗಿವೆ. ಹೀಗೆ ಪೂರ್ಣಗೊಂಡ ಒಂದು ಕ್ರಿಯೆಯ ಅರ್ಥ ಕೊಡುವ ಪದಗಳನ್ನು ಸಾಮಾನ್ಯವಾಗಿ ಕ್ರಿಯಾಪದ ಎನ್ನುತ್ತಾರೆ.

ಮೇಲೆ ಹೇಳಿದ ಆರು ಕ್ರಿಯಾ ಪದಗಳಿಗೆಲ್ಲ ಮೂಲ ಮಾಡು ಎಂಬ ಶಬ್ದವಾಗಿದೆ. ಇದು ಕ್ರಿಯೆಯ ಅರ್ಥವನ್ನು ಕೊಡುವ ಮೂಲ ರೂಪವೇ ಆಗಿದೆ. ಇಂತಹ ಕ್ರಿಯಾಪದದ ಮೂಲರೂಪವನ್ನು 'ಧಾತು' ಅಥವಾ ಕ್ರಿಯಾಪ್ರಕೃತಿ ಎನ್ನುವರು. ಕ್ರಿಯಾರ್ಥವನ್ನು ಕೊಡುವದಾಗಿಯೂ ಪ್ರತ್ಯಯವನ್ನು ಹೊಂದದೆಯೂ ಇರುವ ಶಬ್ದಕ್ಕೆ ಧಾತು ಎನ್ನುವರು

**ಧಾತುಗಳಲ್ಲಿ ಎರಡು ವಿಧಗಳಿವೆ. ಅವು 1) ಮೂಲಧಾತು 2) ಸಾಧಿತಧಾತು**

**ಮೂಲಧಾತು:–** ಮಾಡು, ತಿನ್ನು ಹೋಗು, ಮಲಗು, ನಡೆ, ನೋಡು, ಓಡು, ನಿಲ್ಲು ಓದು, ಹೊಳೆ, ಬದುಕು, ನಡುಗ, ದಾಟು, ಹೊಗಳು, ತೆಗೆಳು, ಬೀಳು, ತಾಳು. ಕುಣಿ, ಸುತ್ತು, ಬೆಳಗು, ಸೆಳೆ, ಸುಳಿ, ಗುಡಿಸು, ಇತ್ಯಾದಿ ಉದಾಹರಣೆ

* **ಸಾಧಿತಧಾತು:** ಕೆಲವು ನಾಮ ಪ್ರಕೃತಿಗಳ ಮೇಲೂ ಧಗ,ಧಗ,ಭಟ್,ಭಟ್, ಮೊದಲಾದ ಅನುಕರಣ ಶಬ್ದಗಳ ಮೇಲೂ 'ಇಸು' ಎಂಬ ಪ್ರತ್ಯಯ ಸೇರಿದಾಗ ಅವುಗಳಿಗೆ ಸಾಧಿತ ಧಾತುಗಳ ಎಂದು ಹೆಸರು.

ಉದಾ:– ನಾಮ ಪ್ರಕೃತಿ + ಇಸು = ಸಾಧಿತಧಾತು = ಕ್ರಿಯಾಪದ

ಕನ್ನಡ + ಇಸು = ಕನ್ನಡಿಸು = ಕನ್ನಡಿಸಿದನು

ಓಲಗ + ಇಸು = ಓಲಗಿಸು = ಓಲಗಿಸುತ್ತಾನೆ.

ಅಬ್ಬರ + ಇಸು ಅಬ್ಬರಿಸು = ಅಬ್ಬರಿಸುವುದು

ಅನುಕರಣ ಶಬ್ದಗಳ ಧಾತುಗಳಿಗೆ ಉದಾಹರಣೆ–

ನಾಮ ಪ್ರಕೃತಿ + ಇಸು =ಧಾತು – ಕ್ರಿಯಾಪದ

ಧಗಧಗ + ದಗದಗಿಸು = ಧಗಧಗಿಸುತ್ತಾನೆ

ಗಮಗಮ + ಇಸು =ಗಮಗಮಿಸು – ಗಮಗಮಿಸುವುದ

ಭಟಭಟ + ಇಸು = ಭಟಭಟಿಸು – ಭಟಭಟಿಸುತ್ತದೆ.

ಥಳ ಥಳ + ಇದು = ಥಳಥಳಿಸು – ಥಳಥಳಿಸುತ್ತಾನೆ

ಮಾಡಿಸು, ಯತ್ನಿಸು, ಪ್ರಯತ್ನಿಸು, ಭವಿಸು, ಭಂಗಿಸು, ರಕ್ಷಿಸು, ಪ್ರಲಾಪಿಸು, ತಿನ್ನಿಸು, ಸಿದ್ಧಿಸು, ದುಃಖಿಸು, ಪಾಲಿಸು, ಸೇವಿಸು.......

**ಸಕರ್ಮಕ ಧಾತುಗಳು (ಸಕರ್ಮಕ ಕ್ರಿಯಾಪದಗಳು)**

ಕರ್ಮಪದವನ್ನು ಅಪೇಕ್ಷಿಸುವ ಧಾತುಗಳು (ಸಕರ್ಮಕ ಕ್ರಿಯಾಪದಗಳು)

| **ಕರ್ತೃಪದ** | **ಕರ್ಮಪದ** | **ಕ್ರಿ0ಯಾಪದ** | **ಧಾತು** |
|---|---|---|---|
| ದೇವರು | ಲೋಕವನ್ನು | ರಕ್ಷಿಸು | ರಕ್ಷಿಸು |
| ಶಿಲ್ಪಿಗಳು | ಗುಡಿಯನ್ನು | ಕಟ್ಟಿದರು | ಕಟ್ಟು |
| ವಿದ್ಯಾರ್ಥಿಗಳು | ಪಾಠವನ್ನು | ಓದಿದರು | ಓದು |
| ಹುಡುಗರು | ಮನೆ0ಯನ್ನು | ಸೇರಿದರು | ಸೇರು |

ಇಲ್ಲಿ ರಕ್ಷಿಸುವನು, ಕಟ್ಟಿದರು, ಓದಿದರು, ಸೇರಿದರು ಇತ್ಯಾದಿ ಕ್ರಿ0ಯಾಪದಗಳನುಳ್ಳ ವಾಕ್ಯಗಳಲ್ಲಿ ಕರ್ಮಪದ ಇದ್ದೇ ಇರಬೇಕು. ರಕ್ಷಿಸು ಎಂಬ ಕ್ರಿಯಗೆ ಏನನ್ನು ಎಂಬ ಪ್ರಶ್ನೆ ಹುಟ್ಟೆ ಹುಟ್ಟುತ್ತದೆ. ಅದ್ದರಿಂದ 'ರಕ್ಷಿಸು' ಎಂಬ ಧಾತು ಕರ್ಮಪದವನ್ನು ಅಪೇಕ್ಷಿಸುವ ಧಾತು ಇದರ ಹಾಗೆಯೇ ಕಟ್ಟು ಓದು ಮಾಡು, ತಿನ್ನು, ಬರೆ ಇತ್ಯಾದಿ ಧಾತುಗಳಿಗೆ ಕರ್ಮಪದ ಬೇಕೇ ಬೇಕು. ಇಂಥ ಧಾತುಗಳೇ ಸಕರ್ಮಗಳು :– ಉದಾ:– ಮಾಡು, ಕೊಡು, ಕೆರೆ, ಬಿಡು, ಉಣ್ಣು ತೊಡು, ಉಜ್ಜು, ಇಕ್ಕು, ದಾಟು, ತಿದ್ದು, ನಾಯಿ, ಹೊಡೆ, ತಡೆ, ಸೇರು ಇತ್ಯಾದಿಗಳು.

**ಅಕರ್ಮಕಧಾತುಗಳು (ಅಕರ್ಮಕ ಕ್ರಿಯಾಪದಗಳು)**

ಅಕರ್ಮಕ ಪದದ ಅಪೇಕ್ಷೆಯಿಲ್ಲದ ಧಾತುಗಳನ್ನು ಅಕರ್ಮಕ ಧಾತುಗಳು ಎನ್ನುವರು. ಕೆಲವು ಧಾತುಗಳಿಗೆ ಕರ್ಮಪದದ ಅವಶ್ಯಕತೆ ಇರುವುದಿಲ್ಲ.

| **ಕರ್ತೃಪದ** | **ಕ್ರಿ0ಯಾಪದ** | **ಧಾತು** |
|---|---|---|
| ಕೂಸು | ಮಲಗಿತು | ಮಲಗು |
| ಭೀಮನು | ಓಡಿದನು | ಓಡು |
| ಆಕಾಶ | ಹೊಳೆ0ಯುತ್ತದೆ | ಹೊಳೆ |
| ಅವನು | ಬದುಕಿದನು | ಬದುಕು |
| ಗಿಡವು | ಹುಟ್ಟಿತು | ಹುಟ್ಟು |

ಮೇಲಿನ ವಾಕ್ಯಗಳಲ್ಲಿ ಕರ್ಮಪದಗಳಿಲ್ಲ. ಮಲಗಿತು ಎಂಬ ಕ್ರಿಯಾಪದಕ್ಕೆ ಏನನ್ನು? ಎಂಬ ಪ್ರಶ್ನೆ ಮಾಡುವುದಕ್ಕೆ ಉತ್ತರ ಬರುವುದಿಲ್ಲ ಏನನ್ನು ಮಲಗಿತು ? ಎಂದು ಯಾರು ಕೇಳುವುದಿಲ್ಲ ಅಂದರೆ ಏನನ್ನು ಓಡಿತು? ಎಂದು 0ಯಾರು ಕೇಳುವುದಿಲ್ಲ, ಅಂದರೆ ಈ ಕ್ರಿ0ಯುಗಳಿಗೆ ಕರ್ಮ ಪದಗಳು ಬೇಕಾಗಿಲ್ಲ.

ಉದಾ:– ಮಲಗು, ಓಡು, ಬದುಕು, ಬಾಳೂ, ಹೋಗು, ಬರು, ನಾಚು, ಹೆದರು, ಬೀಳು, ಏಳು, ಉರುಳು, ಇತ್ಯಾದಿ...

## ಕ್ರಿಯಾರೂಪಗಳು

1. ವಿಧ್ಯರ್ಥಕ ಕ್ರಿಯಾರೂಪ
2. ನಿಷೇಧಾರ್ಥಕ ಕ್ರಿಯಾರೂಪ
3. ಸಂಭಾವನಾರ್ಥಕ ಕ್ರಿಯಾರೂಪ.

***ವಿಧ್ಯರ್ಥಕ ಕ್ರಿಯಾಪದಗಳು:** ಆಶೀರ್ವಾದ, ಅಪ್ಪಣೆ, ಆಜ್ಞೆ, ಆರೈಕೆ, ಸಮ್ಮತಿ ಇತ್ಯಾದಿಗಳು ತೋರುವಾಗ ಧಾತುಗಳಿಗೆ ಅಖ್ಯಾತ ಪ್ರತ್ಯಯಗಳು ಸೇರಿ ವಿಧ್ಯರ್ಥಕ ಕ್ರಿಯಾಪದಗಳೆನಿಸುವುವು. (ಅಖ್ಯಾತ ಪ್ರತ್ಯ0ಯ, ಅಲಿ, ಎ, ವ, ಓಣ, ಉವಾ

ಉದಾ:–! ದೇವರು ನಿನಗೆ ಒಳ್ಳೆಯದು ಮಾಡಲಿ
2. ಅವರು ಪಾಠವನ್ನು ಓದಲಿ
3. ನೀನು ಆ ಕೆಲಸವನ್ನು ಮಾಡು
4. ಅವನಿಗೆ ಜಯವಾಗಲಿ
5. ಅವನು ಹಾಳಾಗಿ ಹೋಗಲಿ

ಇಲ್ಲಿ ಮೇಲೆ ಬಂದಿರುವ ಮಾಡಲಿ, ಓದಲಿ, ಮಾಡು, ಆಗಲಿ, ಹೋಗಲಿ, ಇತ್ಯಾದಿ
ಕ್ರಿಯಾಪದಗಳಲ್ಲಿ – ದೇವರು ನಿನಗೆ ಒಳ್ಳೆಯದು ಮಾಡಲಿ ಎನ್ನುವಾಗ ಒಳ್ಳೆಯ ಆರೈಕೆಯೂ, ಅವರು ಪಾಠವನ್ನು ಓದಲಿ ಎನ್ನುವಾಗ ಸಮ್ಮತಿಯೂ, ನೀನು ಆ ಕೆಲಸವನ್ನು ಮಾಡು ಎನ್ನುವಲ್ಲಿ ಆಜ್ಞೆಯೂ, ಅವನಿಗೆ ಜಯವಾಗಲಿ ಎನ್ನುವಾಗ ಆಶೀರ್ವಾದವೂ, ಅವನು ಹಾಳಾಗಿ ಹೋಗಲಿ ಎನ್ನುವಾಗ ಕೆಟ್ಟ ಹಾರೈಕೆಯೂ (ಶಾಪ) ತೋರಿ ಬರುತ್ತದೆ. ಮಾಡಲಿ, ಹಾಡಲಿ, ಕಟ್ಟಲಿ, ಮಾಡು, ಮಾಡಿ, ಮಾಡಿರು ಬರೆಯಿಲಿ, ಮಾಡೋಣ, ಓದಲಿ, ಓಡಲಿ, ತಿನ್ನಲಿ, ನೋಡಲಿ, ಕೇಳಲಿ......

***ನಿಷೇಧಾರ್ಥಕ ಕ್ರಿಯಾಪದಗಳು:** ಕ್ರಿಯೆಯು ನಡೆಯಲಿಲ್ಲ ಅಥವಾ ನಡೆ0ಯುವುದಿಲ್ಲ ಎಂಬರ್ಥ ತೋರುವಾಗ ಧಾತುಗಳ ಮೇಲೆ ಅಖ್ಯಾತ ಪ್ರತ್ಯ0ಯುಗಳು (ನಡೆಯುವುದಿಲ್ಲ) ಸೇರಿ ನಿಷೇಧಾರ್ಥಕ ಕ್ರಿಯಾಪದಗಳನಿಸುವುದು. (ಅಖ್ಯಾತ, ಪ್ರತ್ಯಯಗಳು, ಅನು ಅಳು, ಅದು, ಎ, ಏನು, ಆರು, ಆವು, ಏವು)

**ಉದಾ:– 1) ಅವನು ನಾಳೆ ಬಂದಾನು. 2) ಹರಿ ಹಣ್ಣನ್ನು ತಿನ್ನನು**
3) ಅನ್ನವನ್ನು ಆತ ತಿಂದಾನು 4) ಕಮಲ ಆಟಕ್ಕೆ ಬಾರಳು
5) ಅದು ಮೇಲಕ್ಕೆ ಏರಿತು 6) ರಾಜು ಶಾಲೆಗೆ ಹೋಗನು
7) ಅವನು ತಿನ್ನನು 8) ನಾವು ತಿನ್ನೆವು
9) ಅವಳು ಬಾರಳು

ಮಾಡನು, ಹಾಡನು, ಬರೆಯನು, ಓದನು, ಮಾಡದು, ಮಾಡೆ, ಮಾಡೆನು, ಮಾಡೆವು, ಓಡನು, ತಿನ್ನಳು, ಓದರು, ಮಾಡವು, ಕೇಳನು, ನೋಡನು, ಕಟ್ಟನು.

* **ಸಂಭಾವನಾರ್ಥ ಕ್ರಿಯಾಪದಗಳು:** ಕ್ರಿಯೆಯು ನಡೆಯುವಿಕೆಯಲ್ಲಿ ಸಂಶ೦ಯು ಅಥವಾ ಊಹೆ ತೋರುವಲ್ಲಿ ಧಾತುಗಳ ಮೇಲೆ ಅಖ್ಯಾತ ಪ್ರತ್ಯಯಗಳು ಸೇರಿ ಸಂಭಾವನಾರ್ಥ ಕ್ರಿಯಾಪದಗಳೆನಿಸುವುವು. (ಅಖ್ಯಾತ ಪ್ರತ್ಯಯಗಳು, ಅನು, ಆಳು, ಈತು ಈ೦ಯು, ಏನು, ಆರು, ಆವು, ಈರಿ, ಏವು)

ಉದಾ:– 1) ರಮೇಶನು ಶಾಲೆಗೆ ಹೋದಾನು.

2) ವಿದ್ಯಾರ್ಥಿಗಳು ಶಾಲೆಗೆ ಹೋದಾರು.

3) ಸೀತೆ ಮನಗೆ ಬಂದಾಳು.

4) ಅವರು ನಾಳೆ ಬಂದಾರು.

5) ಚೆಂಡು ಮೇಲಕ್ಕೆ ಹೋದೀತು.

ಮಾಡಿಯಾನು, ಮಾಡಿಯಾರು, ಓಡೇನು, ಹಾಡೇನು, ಮಾಡೇನು, ಮಾಡೇವು, ಮಾಡೀತು, ಫಲಸೀತು, ಕಟ್ಟೇನು, ನೋಡೇನು, ಓದೇನು, ಬರೆದೇನು, ಕೇಳೇನು, ತಿಂದಾಳು, ಓದಿಯಾರು

## ಕಾಲರೂಪ

1. **ಭೂತಕಾಲ ಕಾಲದ ಕ್ರಿಯಾರೂಪಗಳು:** ಧಾತುಗಳಿಗೆ ಭೂತಕಾಲದಲ್ಲಿ ಅಖ್ಯಾತ ಪ್ರತ್ಯಯಗಳು ಸೇರಿ ಭೂತಕಾಲದಲ್ಲಿ ಅಖ್ಯಾತ ಪ್ರತ್ಯಯವು ಸೇರಿ ಭೂತಕಾಲದ ಕ್ರಿಯಾರೂಪಗಳೆಸುವುವು. ಭೂತಕಾಲದಲ್ಲಿ 'ದ' ಕಾಲ ಸೂಚಕ ಪ್ರತ್ಯಯವು ಸಾಮನ್ಯಾವಾಗಿ ಎಲ್ಲ ಕಡೆಗೂ ಬರುತ್ತದೆ. ಹಾಗೇಯ ಎಲ್ಲ ಧಾತುಗಳ ಮೇಲೆ ಅನು, ಆರು, ಅಳು, ಇತು, ಅವು, ಎ, ಇರಿ, ಎನು, ಎವು ಎಂಬ ಅಖ್ಯಾತ ಪ್ರತ್ಯಯಗಳು ಸೇರಿಸಿ ಹೇಳಬೇಕು.

**ಉದಾ:– ಧಾತು + ಕಾಲಸೂಚಕ ಪ್ರತ್ಯಯ + ಅಖ್ಯಾತ ಪ್ರತ್ಯಯ = ಕ್ರಿಯಾಪದ ಏಕವಚನ/ಬಹುವಚನ**

| | | | | | | |
|---|---|---|---|---|---|---|
| 2. | ಅವನು | ತಿಳಿ | + | ದ | + ಅನು | = ತಿಳಿದನು, ತಿಳಿದರು |
| 3. | ಅವಳು | ತಿಳಿ | + | ದ | + ಅಳು | = ತಿಳಿದಳು, ತಿಳಿದರು |
| 4. | ಅದು | ತಿಳಿ | + | ದ | + ಇತು | = ತಿಳಿಯಿತು, ತಿಳಿದವು |
| 5. | ನೀನು | ತಿಳಿ | + | ದ | + ಎ | = ತಿಳಿದೆ, ತಿಳಿದಿರಿ |
| 6. | ನಾನು | ತಿಳಿ | + | ದ | + ಏನು | = ತಿಳಿದೆನು, ತಿಳಿದೆವು. |

2. ವರ್ತಮಾನ ಕಾಲದ ಕ್ರಿಯಾರೂಪಗಳು: ಧಾತುಗಳಿಗೆ ವರ್ತಮಾನ ಕಾಲದಲ್ಲಿ ಅಖ್ಯಾತ ಪ್ರತ್ಯಯಗಳು ಸೇರಿ ವರ್ತಮಾನ ಕಾಲ ಕ್ರಿಯಾಪದಗಳೆನುವುವು. ವರ್ತಮಾನ ಕಾಲದಲ್ಲಿ ಧಾತುಗಳಿಗೆ ಅಖ್ಯಾತ ಪ್ರತ್ಯಯಕ್ಕೂ ಮಧ್ಯದಲ್ಲಿ ಉತ್ತ ಎಂಬ ಕಾಲಸೂಚಕ ಪ್ರತ್ಯಯ ಬರುತ್ತದೆ. ಹಾಗೆಯೇ ಎಲ್ಲ ಧಾತುಗಳ ಮೇಲೆ ಆನೆ, ಆಳೆ, ಅದೆ, ಈಯೆ, ಏನೆ, ಆರೆ, ಅವೆ, ಈರಿ, ಏವೆ ಎಂಬ ಅಖ್ಯಾತ ಪ್ರತ್ಯಯಗಳು ಬರುತ್ತದೆ.

**ಧಾತು +ಕಾಲಸೂಚಕ ಪ್ರತ್ಯ೦ು + ಅಖ್ಯಾತ ಕ್ರಿ೦ುಾಪದ ಏಕವಚನ/ ಬಹುವಚನ**

ಅವನು ಹೋಗು + ಉತ್ತ + ಆನೆ = ಹೋಗುತ್ತಾನೆ / ಹೋಗುತ್ತಾರೆ

ಅವಳು ಹೋಗು + ಉತ್ತ + ಆಳೆ = ಹೋಗುತ್ತಾಳೆ / ಹೋಗುತ್ತಾರೆ

ಅದು ಹೋಗು + ಉತ್ತ + ಅದೆ = ಹೋಗುತ್ತದೆ / ಹೋಗುತ್ತವೆ

ನೀನು ಹೋಗು + ಉತ್ತ + ಈ೦ಯೆ = ಹೋಗುತೀ೦ಯ / ಹೋಗುತ್ತೀರ

ನಾನು ಹೋಗು + ಉತ್ತ + ಏನೆ = ಹೋಗುತ್ತೇನೆ / ಹೋಗುತ್ತೇವೆ.

7. **ಭವಿಷತ್ ಕಾಲದ ಕ್ರಿಯಾರೂಪಗಳು:** ಧಾತುಗಳಿಗೆ ಭವಿಷ್ಯತ್ ಕಾಲದಲ್ಲಿ ಅಖ್ಯಾತ ಪ್ರತ್ಯಯಗಳು ಸೇರಿ ಭವಿಷ್ಯತ್ ಕಾಲದ ಕ್ರಿಯಾಪದಗಳೆನಿಸುವುವು. ಭವಿಷತ್ ಕಾಲದಲ್ಲಿ ಧಾತುಗಳಿಗೆ 'ವ' ಉವ' ಎಂಬ ಕಾಲ ಸೂಚಕ ಪ್ರತ್ಯ೦ುವು ಆಗಮವಾಗಿ ಬರುವುದು. ಹಾಗೆಯೇ ಎಲ್ಲಾ ಧಾತುಗಳಿಗೆ ಅನು ಅರು, ಅಳು, ಅದು, ಅವು, ಎ, ಇರಿ, ಎನು, ಎವು, ಎಂಬ ಅಖ್ಯಾತ ಪತ್ಯಯ ಬರುತ್ತದೆ.

**ಉದಾ: ಧಾತು + ಕಾಲಸೂಚಕ ಪ್ರತ್ಯ೦ು + ಅಖ್ಯಾತ ಪ್ರತ್ಯ೦ು = ಕ್ರಿ೦ುಾಪದ – ಏಕವಚನ – ಬಹುವಚನ**

| | | |
|---|---|---|
| ಅವನು ಕೊಡು + ವ +ಅನು | = ಕೊಡುವನು | + ಕೊಡುವರು |
| ಅವಳು ಕೊಡು + ವ + ಅಳು | = ಕೊಡುವಳು | + ಕೊಡುವರು |
| ಅದು ಕೊಡು + ವ + ಅದು | = ಕೊಡುವರು | + ಕೊಡುವುವು |
| ನೀನು ಕೊಡು + ವ + ಎ | = ಕೊಡುವೆ | + ಕೊಡುವಿರಿ |
| ನಾನು ಕೊಡು + ವ + ಏನು | = ಕೊಡುವೆನು | + ಕೊಡುವೆವು |

## ಕರ್ಮಣಿ ಪ್ರಯೋಗಗಳು

ಕನ್ನಡ ಭಾಷೆಯಲ್ಲಿ ಕರ್ಮಣಿ ಪ್ರಯೋಗಗಳ ಬಳಕೆ ತೀರಾ ಕಡಿಮೆ. ಆದರೂ ಸಂಸ್ಕೃತ ಭಾಷಯೆಲ್ಲಿ ವಿಶೇಷವಾಗಿರುವ ಈ ಪ್ರಯೋಗಗಳನ್ನು ಅನುಕರಣ ಮಾಡಿ ಕನ್ನಡದಲ್ಲಿಯೂ ಕೆಲವು ಮಾಡಲಾಗುತ್ತಿದೆ.

| **1 ನೆ0ಯುಗುಂಪು** | **2 ನೆ0ಯುಗುಂಪು** |
|---|---|
| 1. ಭೀಮನು ಅನ್ನವನ್ನು ಉಂಡನು | 1. ಭೀಮನಿಂದ ಅನ್ನವು ಉಣ್ಣಲ್ಪಟ್ಟಿತು. |
| 2. ರಾಮನು ರಾವಣನ್ನು ಕೊಂದನು | 2. ರಾಮನಿಂದ ರಾವಣಾನು ಕೊಲ್ಲಲ್ಪಟ್ಟನು |
| 3. ಮಕ್ಕಳು ಪುಸ್ತಕವನ್ನು ಓದಿದರು | 3. ಮಕ್ಕಳಿಂದ ಪುಸ್ತಕವು ಓದಲ್ಪಟ್ಟಿತು |
| 4. ಶಿಕ್ಷಕರು ಪಾಠವನ್ನು ಹೇಳಿದರು | 4. ಶಿಕ್ಷಕರಿಂದ ಪಾಠವನ್ನು ಹೇಳಲ್ಪಟ್ಟಿತು |
| 5. ಜನರು ಜಾತ್ರೆ0ಯನ್ನು ಮಾಡಿದರು | 5. ಜನರಿಂದ ಜಾತ್ರೆ0ಯನ್ನು ಮಾಡಲ್ಪಟ್ಟಿತು |

ಇಲ್ಲಿ 1 ಮತ್ತು 2 ನೆಯ ಗುಂಪಿನ ವಾಕ್ಯಗಳು ಒಂದೇ ಅರ್ಥವನ್ನು ಕೊಡುವಂಥವುಗಳು, ಆದರೂ ಕರ್ತೃ, ಕರ್ಮ, ಕ್ರಿಯಾಪದಗಳ ಮೇಲೆ ಸೇರಿರುವ ಪ್ರತ್ಯಯಗಳು ಬೇರೆ ಬೇರೆಯಾಗಿವೆ. 1ನೆಯ ಗುಂಪಿನಲ್ಲಿರುವ ಭೀಮನು, ರಾಮನು, ಮಕ್ಕಳು ಮೊದಲಾದವುಗಳು ಕರ್ತೃಪದಗಳು ಪ್ರಥಮಾ ವಿಭಕ್ತ್ಯಂತವಾಗಿದೆ. ಅನ್ನವನ್ನು, ರಾವಣನನ್ನು ಮುಂತಾದ ಕರ್ಮಪದಗಳು ದ್ವಿತೀಯಾಂತವಾಗಿವೆ. 2ನೆಯ ಗುಂಪಿನಲ್ಲಿರುವ ಕರ್ಮಪದಗಳು ಪ್ರಥಮ ವಿಭಕ್ತ್ಯಂತವಾಗಿವೆ. ಉಂಡನು ಕೊಂದನು, ಮೊದಲಾದ ಕ್ರಿಯಾಪದಗಳು ಉಣ್ಣಲ್ಪಟ್ಟನು ಕೊಲ್ಲಲ್ಪಟ್ಟನು. ( ಕೊಲ್ಲು + ಅಲ್ಪಡು + ದೆ + ಅನು ) ಆಗಿದೆ, ಕ್ರಿಯಾಪದಗಳಲ್ಲಿ ಧಾತುವಿನ ಮುಂದೆ, ಅಲ್ಪಡು ಪತ್ಯಯವು ಬಂದು ಕ್ರಿಯಾಪದಗಳಾಗಿವೆ. ( ಉಣ್ಣು + ಅಲ್ಪಡು + ದ + ಇನು )

**"ಸಕರ್ಮಕ ಧಾತುಗಳ ಮೇಲೆ ಅಲ್ಪಡು ಪ್ರತ್ಯಯವು ಸೇರಿದ ಮೇಲೆ ಕಾಲಸೂಚಕ ಪ್ರತ್ಯಯವೂ, ಅಖ್ಯಾತ ಪ್ರತ್ಯ0ಯಗಳೂ ಸೇರಿ ಕರ್ಮಣಿ ಪ್ರಯೋಗಗಳಾಗುತ್ತವೆ"**

**1. ನೆ0ಯ ಗುಂಪು**

ಮಾಡು + ಅಲ್ಪಡು + ಉತ್ತ + ಆನೆ = ಮಾಡಲ್ಪಡುತ್ತಾನೆ

ಮಾಡು + ಅಲ್ಪಡು + ಉತ್ತ + ಆಳೆ = ಮಾಡಲ್ಪಡುತ್ತಾಳೆ

ಮಾಡು + ಅಲ್ಪಡು + ಉತ್ತ + ಅದೆ = ಮಾಡಲ್ಪಡುತ್ತದೆ

ಮಾಡು + ಅಲ್ಪಡು + ಉತ್ತ + ಈ0ಯೆ = ಮಾಡಲ್ಪಡುತ್ತೀಯ

ಮಾಡು + ಅಲ್ಪಡು + ಉತ್ತ + ಏನೆ = ಮಾಡಲ್ಪಡುತ್ತೇನೆ

ಮಾಡಲಡುತ್ತಾರೆ, ಮಾಡಲ್ಪಡುತ್ತೇವೆ, ಮಾಡಲ್ಪಡುತ್ತೇವೆ, ಮಾಡಲ್ಪಡುತ್ತೀರಿ, ಕರೆ0ಯುಲ್ಪಟ್ಟರು, ಕರೆ0ಯುಲ್ಪಟ್ಟರು, ಕರೆಯುಲ್ಪಡುವನು, ಕರೆ0ಯುಲ್ಪಡುವರು

| **ಕರ್ತರಿ ಪ್ರ0ಯೋಗ** | **ಕರ್ಮಣಿ ಪ್ರ0ಯೋಗ** |
|---|---|
| ರಾಮನು ಹೊಲವನ್ನು ಕೊಂಡನು | ರಾಮನಿಂದ ಹೊಲವನ್ನು ಕೊಳ್ಳಲ್ಪಟ್ಟಿತು |

| | |
|---|---|
| ತಂದೆ0ಯು ಮಗವನನ್ನು ರಕ್ಷಿಸುವನು | ತಂದೆಯಿಂದ ಮಗುವು ರಕ್ಷಿಸಲ್ಪಡುವುದು |
| ಅವನು ನನ್ನನ್ನು ಹೊಡೆದನು | ಅವನಿಂದ ನಾನು ಹೊಡೆ0ಯಲ್ಪಟ್ಟೆನು |
| ಕವಿ0ಯು ಕಾವ್ಯವನ್ನು ಬರೆ0ಯುತ್ತಾನೆ | ಕವಿಯಿಂದ ಕಾವ್ಯವು ಬರೆ0ಯಲ್ಪಡುತ್ತದೆ |
| ತಾಯಿ0ಯು ಹಾಲನ್ನು ಕೊಡುವಳು | ತಾಯಿಯಿಂದ ಹಾಲು ಕೊಡಲ್ಪಡುವುದು |

# ಅನ್ಯದೇಶ್ಯ ಪದಗಳು

ಯಾವುದೇ ದೇಶದ ಭಾಷೆಯಾಗಲಿ, ಅದು ತನ್ನ ಸುತ್ತ ಮುತ್ತಣ ಬೇರೆ ಬೇರೆ ಭಾಷೆಗಳ ಸಂಬಂಧವನ್ನು ಪಡೆಯುತ್ತಾ, ಆಯಾ ಭಾಷೆಗಳ ಶಬ್ದಗಳನ್ನು ತನ್ನಲ್ಲಿ ಸೇರಿಸಿಕೊಂಡು ಬೆಳೆಯುತ್ತದೆ, ನಾವಾಡುವ ಕನ್ನಡ ಭಾಷೆಯಲ್ಲೂ ಅನೇಕ ಶಬ್ದಗಳು ಸೇರಿವೆ. ನಮ್ಮ ಕನ್ನಡ ಶಬ್ಧಗಳೂ ಕೂಡ ಬೇರೆ ಬೇರೆ ಭಾಷೆಗಳಲ್ಲೂ ಸೇರಿವೆ. ಭಾಷೆಗಳು ಹೀಗೆ ಕೊಂಡುಕೊಳ್ಳುವ ವ್ಯವಹಾರದಿಂದ ಬೆಳೆಯುತ್ತವೆ. ಬೇರೆ ಭಾಷೆಗಳಿಂದ ಹೀಗೆ ಶಬ್ಧಗಳನ್ನು ಸೇರಿಸಿಕೊಂಡರು. ತನ್ನ ಮೂಲ ಶಬ್ದಗಳನ್ನು ಮಾತ್ರ ಕೈ ಬಿಡಬಾರದು. ಅವೂ ಇರಬೇಕು ಪರಭಾಷಾ ಶಬ್ದಗಳೂ ಇರಬೇಕು. ಆಗಲೇ ಭಾಷೆಯ ಸಂಪತ್ತು ಹೆಚ್ಚುವುದು.

ಉದಾ:– "ಮೋಟಾರುಗಳಲ್ಲಿ ಜಬರ್ದಸ್ತಿನಿಂದ ಓಡಾಡುವುದೇ ಜೀವನದ ಮುಖ್ಯ ಗುರಿಯಲ್ಲವೆಂದು ನಾವು ತಿಳಿಯಬೇಕು"

ಇಲ್ಲಿ ಮೋಟಾರು ಇಂಗ್ಲೀಷ್ ಭಾಷೆ.

ಜಬರ್ದಸ್ತ್ – ಹಿಂದಿ ಭಾಷೆ

ಜೀವನದ ಮುಖ್ಯ – ಸಂಸ್ಕೃತ ಭಾಷೆ

ಓಡಾಡು, ಗುರಿ, ನಾವು, ತಿಳಿಯ ಬೇಕು – ಕನ್ನಡ ಭಾಷೆಯ ಶಬ್ದಗಳು.

**ಅಚ್ಚಗನ್ನಡ ಶಬ್ದಗಳು (ದೇಶ್ಯ ಪದಗಳು)**

ಮನೆ, ಹೊಲ, ಗದ್ದೆ, ಹಿತ್ತಲು, ಕದ, ಮರ, ಗಿಡ, ನೆಲ, ತೆಂಕಣ, ಮೂಡಣ, ಪಡುವಣ, ಬಡಗಣ, ತವರು, ತಗ್ಗು, ಇಳಿ ನೇಸರ, ತಿಂಗಳು, ಕಲ್ಲು, ಕಲ್ಲಿ, ನೆಲ್ಲು, ಹೊಳೆ, ಹೋಗು, ಬರು, ತಿನ್ನು, ಒಂದು, ಎರಡು, ನೂರು, ಹೆಚ್ಚು, ಕಡಿಮೆ, ಮೆಲ್ಲಗೆ, ಚೆನ್ನಾಗಿ, ತಿಳುವಳಿಕೆ, ನಡವಳಿಕೆ, ನೀರು, ಮೀನು, ಬಾನು, ಅರಸು, ಹುಡುಕು, ಆಗಿ, ಅಲರು, ಆರೆ, ನುರಿ, ಉಡು, ತೊಡು, ಕೈ, ಕಾಲು, ಬಾಯಿ, ಕಣ್ಣು, ತಲೆ, ಕಿವಿ, ಮೂಗು, ಬೆನ್ನೀರು, ಕನ್ನೀರು, ಬೆಚ್ಚಗೆ, ತಣ್ಣಗೆ, ಕಮ್ಮಗೆ, ಸಣ್ಣ, ದೊಡ್ಡ, ಬಿಳಿದು, ಕರಿದು, ಹಿರಿದು, ಜೇನು, ತುಪ್ಪ, ಹಾಲು, ಮೊಸರು, ಮಜ್ಜಿಗೆ, ಅವು, ಕರು, ತುರು, ನೆರೆ ಸೇರು, ಕಾರು, ಹೀರು, ಸೋರು, ಸಾರು, ಹುಳಿ, ಹುರುಳಿ, ಹುಲ್ಲು, ರಾಗಿ, ಜೋಳ, ಬೆಲ್ಲ, ಎಳ್ಳು, ಎಣ್ಣೆ, ಬೆಣ್ಣೆ, ಇತ್ಯಾದಿ.

**ಅನ್ಯದೇಶ್ಯ ಶಬ್ದಗಳು**

ಸಂಸ್ಕೃತ ಭಾಷೆಯಿಂದ ಬಂದ ಶಬ್ದಗಳು: ಭೂಮಿ, ಪೃಥ್ವಿ ನದಿ ಆರ್ಯ, ರಾತ್ರಿ, ದಿವಸ, ಸಂಧ್ಯಾ, ರಾಮ, ಲಕ್ಷ್ಮಣ ಭರತ, ಶತ್ರುಘ್ನ, ಕುಮಾರ, ಪಿತೃ, ಮಾತೃ, ಸಹೋದರ, ಅಂಗ, ಅಂಗವಿಕಲ, ಸಂಗಮ, ಸಮಾಗಮ, ದೇವತಾ, 0ಯಾತ್ರಾ, ದೇವಾಲಯ, ಋಷಿ, ಮುನಿ, ವೇದ ಪುರಾಣಾ, ಶಾಸ್ತ್ರ, ಆಗಮ, ಉಪನಿಷತ್ತು ಅರಣ್ಯ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಸೋಮವಾರ, ಮಂಗಳವಾರ, ನಕ್ಷತ್ರ ಗ್ರಹ, ಗೃಹ, ಬ್ರಹ್ಮಚಾರಿ, ವಿದ್ಯಾರ್ಥಿ, ಅನ್ನ, ತೀರ್ಥ, ವಿಶೇಷ, ಜ್ಞಾನ, ವಿದ್ಯಾ, ಶಾಲ, ವಿಶ್ವ ವಿದ್ಯಾಲಯ, ವಿವಾಹ, ಲಗ್ನ, ನಗರ, ಗ್ರಾಮ, ಅಧಿಕಾರ, ಮಂತ್ರಿರಾಣಿ, ಶತಕ, ಶತಮಾನ, ಫಲಾಹಾರ, ಆಕಾಶ, ಯುದ್ಧ, ವೈದ್ಯ, ದಲಿತ, ಮಾರ್ಗ, ಪಂಚಾಂಗ ಇತ್ಯಾದಿಗಳು.....

**ಹಿಂದೂಸ್ಥಾನಿ ಭಾಷೆಯಿಂದ ಬಂದ ಶಬ್ದಗಳು.**

ಅರ್ಜಿ, ಕಛೇರಿ, ತಯಾರ್, ಬದಲ್, ಕಾರ್ಖಾನೆ, ಸರ್ಕಾರ, ರೈತ, ಸಲಾಮು, ಕಾನೂನು, ಬದಲಾವಣೆ, ಚುನಾವಣೆ, ಮಂಜೂರು, ದರ್ಬಾರು. ಕುರ್ಚಿ, ಜಮೀನ್‌ದಾರ್, ಗುಲಾಮ, ಖಾಜಿ, ಸುಬೇದಾರ್, ದಫೇದಾರ್, ಹವಲ್ದಾರ್, ದಾಖಲ್, ದುಖಾನ್, ಅಮಲ್ದಾರ್, ಸವಾರ, ಕಾಗದ, ಹುಜೂರು, ಮಹಲ್, ಮುಂತಾದವುಗಳು...... ಹತಾರ, ಸಿಪಾಯಿ, ಕಾಗದ, ಹುಕುಂ ಮುಂತಾದವುಗಳು.

**ಇಂಗ್ಲೀಷ್ ಭಾಷೆಯಿಂದ ಬಂದ ಶಬ್ದಗಳು.**

ರೋಡ್, ರೈಲ್, ಕೋರ್ಟ್, ಬೆಂಚ್, ಪ್ಲೇಗು, ಮೈಲು, ಬ್ಯಾಂಕ್, ಪೋಲೀಸ್, ಪೋಸ್ಟ್, ಕಾರ್ಡ್, ಕವರು, ಟಿಕೆಟ್, ಹೋಟೆಲ್, ಚೇರ್‌ಮನ್, ರೂಂ, ಸ್ಕೂಲ್, ಕಾಲೇಜ್, ರಿಕಾರ್ಡ್, ಆಕ್ಸಿಜನ್, ಯೂನಿವರ್ಸಿಟಿ, ರಿಜಿಸ್ಟರ್, ಆಸಿಡ್, ಲೈಟು, ಪೆನ್ನು, ಬಸ್ಸು, ಕಾರು, ಡಿಪ್ಲೋಮಾ, ಸೋಪು, ಸ್ಯಾನಿಟರಿ, ಮ್ಯಾಜಿಕ್, ರಿಜೆಂಟ್, ಡ್ರೆಸ್, ಬೈಸಿಕಲ್, ಬೋರ್ಡ್, ಟೀ, ಕಾಫೀ, ಪೆಟ್ರೋಲ್, ಡಿಗ್ರಿ, ಡಾಕ್ಟರ್, ಸ್ಕೂಟರ್, ಆರ್ಡರ್, ಪ್ರೈಮರಿ
ನರ್ಸರಿ, ಹೈಸ್ಕೂಲ್, ಬುಕ್, ನೋಟ್ಸ್, ಪೇಜ್, ರೀಡರ್, ಸಿನಿಮಾ, ಬಲ್ಬ್, ಇತ್ಯಾದಿಗಳು.....

**ಪೋರ್ಚುಗೀಸ್ ಭಾಷೆಯಿಂದ ಬಂದ ಶಬ್ದಗಳು:–**

ಅಲಮಾರು, ಜಂಗಾಲ, ಸಾಬೂನು, ಪಾದ್ರಿ, ಮೇಜು, ತಂಬಾಕು, ಅನಾನಸು, ಬಟಾಟಿ, ರಶೀದಿ, ಚೊಂಬು, ಚಾ, ಇಸ್ತ್ರಿ, ಆಸ್ಪತ್ರೆ, ಇತ್ಯಾದಿ.....

**ಗ್ರೀಕ್, ಮತ್ತು ರೋಮನ್ ಭಾಷೆಯಿಂದ ಬಂದ ಪದಗಳು:–**

ದಮ್ಮಡಿ, ದಮ್ಮು, ದಮಡಿ, ದೀನಾರ, ಗದ್ಯಾಣ.

**ಪರ್ಷಿಯನ್ (ಪಾರ್ಸಿ) ಭಾಷೆಯಿಂದ ಬಂದ, ಶಬ್ದಗಳು:**

ಅಬಕಾರಿ, ರಸ್ತೆ, ದವಾಖಾನೆ, ಚೌಕಾಷಿ, ಜಮೀನು, ಅಜಮಾಯಿಸಿ, ಆಮದು, ದಲ್ಲಾಳಿ, ಮಸಲತ್ತ, ಕಾರಾಕೂನ, ದಿವಾನ......

**ಅರಬ್ಬೀ ಭಾಷೆಯಿಂದ ಬಂದ ಶಬ್ದಗಳು:–**

ಅಮಾನತು, ಅಸಲು, ಇನಾಮು ಕಾಯ್ದೆ, ಗಲೀಜು, ತಕರಾರು, ತರಬೇತು, ನಕಲಿ, ಸಾಹೇಬ....

**ಉರ್ದು ಭಾಷೆಯಿಂದ ಬಂದ ಶಬ್ದಗಳು:–**

ಇಲಾಖೆ, ತಾರೀಖು, ತಾಲ್ಲೂಕು ದರ್ಜೆ, ಬಂದೂಕು, ಅಹವಾಲು, ಕಿಮ್ಮತ್ತು ಶಾಮೀಲು, ರುಜು, ಶುರು,
ನೆನಪಿನಲ್ಲಿಟ್ಟು ಕೊಳ್ಳುವುದಕ್ಕೆ ಸುಲಭ ಮಾರ್ಗ ಈ ವಾಕ್ಯಗಳು.

**ಪಾರ್ಸಿ :** ಪಾರ್ಸಿ ದಳ್ಳಾಳಿಯು ದವಾಖಾನೆಯ ರಸ್ತೆ ಬಳಿಯ ಜಮೀನಿಗಾಗಿ ಚೌಕಾಸಿ ಮಾಡಿ ಕೊನೆಗೆ ಆಮದು ಮಾಡಿಕೊಳ್ಳುವುದಾಗಿ ಅಬಕಾರಿ ಅಧಿಕಾರಿಗೆ ಅಜಮಾಯಿಸಿ ನಿಡಿದ.

**ಉರ್ದು:–** ಉರ್ದು ಇಲಾಖೆಗೆ ತಾರೀಖು 14–04–2020 ರಂದು ಬಂದ ನಮ್ಮ ತಾಲ್ಲೂಕಿನ ಮೂರನೇ ದರ್ಜೆಯ ಬಂದೂಕುಧಾರಿ ಯಾರ ಅಹವಾಲಿಗೂ ಕಿಮ್ಮತ್ತು ನೀಡಿದೆ ಅಪರಾಧದಲ್ಲಿ ಶಾಮೀಲಾಗಿರುವುದಾಗಿ ಬರೆದು ರುಜು ಮಾಡಲು ಒಪ್ಪದೆ ಗಲಾಟೆ ಶುರು ಮಾಡಿದನು.

**ಗ್ರೀಕ್:** ಗ್ರೀಕ್‌ನೊಬ್ಬ ದಮ್ಮು ಬಿಗಿದು ದಮ್ಮಡಿ ಬಡಿದು ದಮ್ಮಡಿ ದಿನಾರ ಗದ್ಯಾಣ ಎಂದ

**ಅರಬ್ಬೀ:** ಅರಬ್ಬೀ ಅಧಿಕಾರಿಯೊಬ್ಬ ಅಸಲಿ ನಕಲಿ ಅರಿಯದೆ ತರಬೇತಿಗೆ ಒಂದು ಕಾಯ್ದೆ ಮೀರಿ ಗಲೀಜು ಮಾಡಿ ತಕರಾರು ಎಬ್ಬಿಸಿ ಅಮಾನತು ಗೊಂಡು ತಕ್ಕ ಇನಾಮ ಪಡೆದ.

**ಹಿಂದೂಸ್ಥಾನಿ:** ಹಿಂದೂಸ್ಥಾನಿ ಕಛೇರಿ ಕಾರ್ಖಾನೆಗಳಲ್ಲಿ ಕೆಲಸ ಗಿಟ್ಟಿಸಿಕೊಳ್ಳಲು ಕಾಗದದಲ್ಲಿ ಅರ್ಜಿ ಬರೆದು ಕುರ್ಚಿ ಮೇಲೆ ಕುಳಿತು ದರ್ಬಾರಿನಿಂದ ಹುಕುಂ ಮಾಡುವವರಿಗೆ ಸಲಾಮು ಹೊಡೆಯಬೇಕು.

**ಪೋರ್ಚುಗೀಸ್ :** ಪೋರ್ಚುಗೀಸ್ ನಿಂದ ರಶೀದಿ ಪಡೆಯದೆ ತಂಬಾಕು ತಂದು ಮೇಜಿನ ಮೇಲಿಟ್ಟು ಸಾಬೂನು ಹಾಕಿ ಚೊಂಬಿನಲ್ಲಿದ್ದ ನೀರಿನಿಂದ ಕೈ ತೊಳೆದು ಅನಾನಸು ತಿಂದು ಚಾ ಕುಡಿದು ಬಟ್ಟೆ ಇಸ್ತ್ರಿ ಮಾಡುವಾಗ ಕೈ ಸುಟ್ಟು ಆಸ್ಪತ್ರೆ ಸೇರಿದ.

# ತತ್ಸಮ – ತದ್ಭವ

**ತತ್ಸಮಗಳು:** ಸಂಸ್ಕೃತದಿಂದ ವಿಕಾರ ಹೊಂದದೆ ಕನ್ನಡದಲ್ಲಿ ಬಳಸಲ್ಪಡುವ ಶಬ್ದಗಳು ತತ್ಸಮಗಳು. 'ತತ್' ಎಂದರೆ ಅದಕ್ಕೆ (ಸಂಸ್ಕೃತಕ್ಕೆ) 'ಸಮ' ಎಂದರೆ ಸಮಾನವಾದುದು ಇಲ್ಲಿ ಅದಕ್ಕೆ ಎಂದರೆ ಸಂಸ್ಕೃತಕ್ಕೆ ಸಮಾನ. ತತ್ಸಮ ಎಂದರೆ ಕನ್ನಡಕ್ಕೂ, ಸಂಸ್ಕೃತಕ್ಕೂ ಸಮವಾದ ಶಬ್ದ ಎಂದರ್ಥ. ಅಲ್ಲದೆ ತದ್ಭವ ಶಬ್ದಗಳ ಸಂಸ್ಕೃತ ರೂಪಗಳನ್ನು ತತ್ಸಮಗಳೆಂದೇ ಕರೆಯುತ್ತಾರೆ.

**ಉದಾ:–** ರಾಮ, ಭೀಮ,ಕಾಮ, ವಸಂತ, ಸೂರ್ಯ. ಯತಿ, ಗತಿ, ಗ್ರಹ, ಭವನ, ಶಿಶು, ಭಾನು, ಕವಿ, ವನ, ಮಧು

**ತದ್ಭವಗಳು:** ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಅಲ್ಪಸ್ವಲ್ಪ ವಿಕಾರವನ್ನಾಗಲಿ, ಪೂರ್ಣ ವಿಕಾರವನ್ನಾಗಲಿ ಹೊಂದಿ ಬಂದಿರುವ ಶಬ್ಧಗಳನ್ನು ತದ್ಭವಗಳೆನ್ನುತ್ತಾರೆ. 'ತತ್' ಎಂದರೆ ಅದರಿಂದ(ಸಂಸ್ಕೃತದಿಂದ) 'ಭವ' ಎಂದರೆ ಹುಟ್ಟಿದ ಅಥವಾ ನಿಷ್ಪನ್ನವಾದ ಎಂದರ್ಥ. ಸಂಸ್ಕೃತದಿಂದ ಹುಟ್ಟಿದ್ದು ಎಂದರ್ಥ ಬರುತ್ತದೆ. ಕನ್ನಡ ರೂಪಗಳಿಗೆ(ಪದ) ತದ್ಭವಗಳೆಂದೂ ಹೇಳಬಹುದು.

**ತದ್ಭವಗಳಿಗೆ ಉದಾಹರಣೆ:–**

ಉದಾ:– ಮಾಲೆ, ಸೀತೆ, ಅಜ್ಜ, ಬಂಜೆ, ಸಿರಿ, ಬಾವಿ, ದನಿ, ನಿದ್ದೆ, ಗಂಟೆ, ಜೋಗಿ, ರಾ0ಯ, ಸಂತೆ, ಪಕ್ಕ, ಚಿತ್ತಾರ, ಕತ್ತರಿ, ಆಸೆ, ವನ, ಇತ್ಯಾದಿ

| **ತತ್ಸಮ – ತದ್ಭವ** | **ತತ್ಸಮ – ತದ್ಭವ** | **ತತ್ಸಮ – ತದ್ಭವ** |
|---|---|---|
| ದೃಷ್ಠಿ – ದಿಟ್ಟ | 0ಯಶ – ಜಸ | ಪತಿವ್ರತೆ – ಹರಿಬದೆ |
| ವಿಜ್ಞಾನ – ಬಿನ್ನಾಣ | ವ್ಯ0ಯ – ಬೀ0ಯ | ತೃತೀ0ಯಾ – ತದಿಗೆ |
| ವಿಜ್ಞಾಪನೆ – ಬಿನ್ನಹ | ಸಂದೇಶ – ಸಂದೇ0ಯ | ಚತುರ್ಥಿ – ಚೌತಿ |
| ಅಮೃತ – ಅಮರ್ದು | ಪುಣ್ಯ – ಹೊಸ್ಯ | ಅಮೃತ – ಅಮರ್ದು |
| ಶ್ರೀ – ಸಿರಿ | ಬ್ರಹ್ಮ – ಬೊಮ್ಮ | ಸಾಹಸ – ಸಾಸ |
| ಭಕ್ತ – ಭಕುತ | ಕಲಶ – ಕಳಸ | ಕುಕ್ಕಟ – ಕೋಳಿ |
| ಚಂದ್ರ – ಚಂದಿರ | ವಂಧ್ಯಾ – ಬಂಜೆ | ಲಕ್ಷ – ಲಕ್ಕ |
| ಕುಠಾರ – ಕೊಡಲಿ | ದ್ಯೂತ – ಜೂಜು | ರಕ್ಷಾ – ರಕ್ಕೆ |
| ತಪಸ್ವಿ – ತವಸಿ | ವೈಶಾಖ – ಬೇಸಗೆ | ಹಂಸ – ಅಂಚೆ |
| ಮುಖಶಾಲೆ –ಮೊಗಸಾಲೆ | ಅರ್ಕ – ಎಕ್ಕ | ವಿಸ್ತಾರ – ಬಿತ್ತರ |
| ಸಾಮಂತ– ಸವಂತ | ಶುನಕ – ಸೊಣಗ | ಜಟಾ – ಜಡೆ |
| ತಟ – ತಡಿ | 0ಯುದ್ದ – ಜುದ್ಧ | ಸಂಜೆ – ಸನ್ನೆ |
| ರಾ0ಯ – ರಾಜ | ಬಣ್ಣ – ವರ್ಣ | ಸ್ಮಶಾನ – ಮಸಣ |
| ವ್ಯಾಘ್ರ – ಬಗ್ಗೆ | ಚೀರ – ಸೀರೆ | ವ್ಯವಸಾ0ಯ – ಬೇಸಾ0ಯ |
| ವಂಶಿ – ಬಂಚ | ಅಡವಿ – ಅಟವಿ | ವಸತಿ – ಬಸದಿ |
| ಪಟ್ಟಣ – ಪತ್ತನ | 0ಯಜ್ಞ – ಜನ್ನ | ರಾಕ್ಷಸ – ರಕ್ಕಸ |
| ಕೋಕಿಲಾ – ಕೋಗಿಲೆ | 0ಯುಗ – ಜುಗ | ರತ್ನ – ರನ್ನ |
| ಕಾವ್ಯ – ಕಬ್ಬ | ಪ್ರಸಾದ – ಹಸಾದ | ದಂಷ್ಟ್ರ – ದಾಡೆ |
| ಕಣಿ – ಗಣಿ | ರಕ್ತ – ರಕುತ | ಋಷಿ – ರಿಸಿ |
| ಶಶಿ – ಸಸಿ | ಕವಿ – ಕಬ್ಬಿಗ | ಮೃಗ – ಮಿಗ |
| ಅಂಕುಶ – ಅಂಕುಸ | ಪ್ರತೀಹಾರಿ – ಪಡಿಯರ | ಸ್ವರ್ಗ – ಸಗ್ಗ |
| ವಿದ್ಯಾಧರ – ಬಿಜ್ಜೋಧರ | ಶೃಂಗಾರ – ಸಿಂಗಾರ | ಗ್ರಂಥಿ – ಗಂಟು |

| | | |
|---|---|---|
| ಪಾದುಕಾ – ಹಾವುಗೆ | ಕಾಂಸತಾಲ್ಯ – ಕಂಸಾಳೆ | ಜೋತಿಷ – ಜೋಯಿಸ |
| ಗ್ರಹ – ಗರ | ನಿತ್ಯ – ನಿಚ್ಚ | ವೃಷಭ – ಬಸವ |
| ಧಾತೃ – ದಾತಾರ | ಬೆತ್ತ – ವೇತ್ರ | ಶಕ್ತಿ – ಶಕುತಿ |
| ಸುಧೆ – ಸೊದೆ | ಪುಸ್ತಕ – ಹೊತ್ತಿಗೆ | ಪ್ರಾಣ – ಹರಣ |
| ವರ್ಷ – ವರುಷ | ಕಸ್ತೂರಿ – ಕತೋರಿ | ವಿನೋದ – ಬಿನದ |
| ವೀರ – ಬೀರ | ಗೋಷ್ಠಿ – ಗೊಟ್ಟಿ | ದುಃಖ – ದುಕ್ಕ |
| ದಿಶಾ – ದಿಸೆ | ಕೀರ್ತಿ – ಕೀರುತಿ | ಸಕ್ಕರೆ – ಶರ್ಕರ |
| ಸ್ಥಾನ – ತಾಣ | ಕ್ಷಣ – ಚಣ | ಹೃದ0ಯ – ಎದೆ |
| ಬೀದಿ – ವೀದಿ | ಜನ್ಮ – ಜನುಮ | ಮಾಣಿಕ್ಯ – ಮಾಣಿಕ |
| ಕಾ0ರ್ಯ – ಕಜ್ಜ | ಧಾನ್ಯ – ಜಾನ | ಮುಕ್ತಿ – ಮುಕುತಿ |
| ಅಕ್ಷರ – ಅಕ್ಕರ | ಉದ್ಯೋಗ – ಉಜ್ಜುಗ | ಹಗೆ – ಪಗೆ |
| ಭಾಷೆ – ಬಾಸೆ | ಘಂಟಾ – ಗಂಟೆ | ಮುಕ್ತ – ಮುಕುತ |
| ವ್ಯಾಪಾರಿ – ಬೇಹಾರಿ | ಛತ್ರಿಕಾ – ಸತ್ತಿಗೆ | |
| ದೀವಿಗೆ – ದೀಪಿಕ | ಮುಖ – ಮೊಗ | |
| ಪಕ್ಷಿ – ಹಕ್ಕಿ | ಗಾದೆ – ಗಾಹೆ | |
| ಶಿರ – ಸಿರ | ವಸಂತ – ಬಸಂತ | |
| ಲಕ್ಷೀ – ಲಕ್ಕ್ಮಿ | | |
| ಸಂಸ್ಥಾ – ಸಂಸ್ಥೆ | | |
| ಗಂಗಾ –ಗಂಗೆ | | |
| 0ಯೋಧ – ಜೋದ | | |
| 0ಯೌವನ – ಜವ್ವನ | | |
| ವಿದ್ಯಾ – ಬಿಜ್ಜೆ | | |

## ದ್ವಿರುಕ್ತಿ

1. ಭಿಕ್ಷುಕರ ಮನೆಮನೆಗಳನ್ನು ತಿರುಗಿ ಭಿಕ್ಷೆ ಬೇಡಿದರು.
2. ಮಗನೇ ಬೇಗ ಬೇಗ ಬಾ.
3. ಮಕ್ಕಳು ಓಡಿ ಓಡಿ ದಣಿದರು.
4. ಅಕ್ಕಟಕ್ಕಟಾ :ಕಷ್ಟ ಕಷ್ಟ
5. ಈ ಗೀಗ ಅವನು ಚೆನ್ನಾಗಿ ಓದುತ್ತಾನೆ.
6. ದೊಡ್ಡ ದೊಡ್ಡ ಮಕ್ಕಳು ಬಂದರು

ಮೇಲಿನ ವಾಕ್ಯಗಳಲ್ಲಿ ಕೆಳಗೆ ಗೆರೆ ಎಳೆದಿರುವ ಶಬ್ದಗಳನ್ನು ನೋಡಿರಿ, ಇಲ್ಲಿ ಮನೆಮನೆ, ಬೇಗ, ಬೇಗ ಓಡಿ ಓಡಿ, ಅಕ್ಕಟಾ ಅಕ್ಕಟಾ, ಈಗ ಈಗ, ದೊಡ್ಡ ದೊಡ್ಡ ಶಬ್ದಗಳು ಒಂದೇ ಪದ ಅರ್ಥ ಸ್ಪಷ್ಟತೆಗಾಗಿ ಎರಡೆರಡು ಸಲ ಬಳಕೆಯಾಗುತ್ತದೆ. "ಒಂದು ವಿಶೇಷಾರ್ಥವನ್ನು ವ್ಯಕ್ತಪಡಿಸುವುದಕ್ಕಾಗಿ ಒಂದು ಪದವನ್ನೋ ಒಂದು ವಾಕ್ಯವನ್ನೋ, ಎರಡೆರಡು ಸಲ ಪ್ರಯೋಗ ಮಾಡುವುದಕ್ಕೆ" ದ್ವಿರುಕ್ತಿ ಎನ್ನುವರು.
ದ್ವಿರುಕ್ತಿ ಸಾಮಾನ್ಯವಾಗಿ ಉತ್ಸಾಹ, ಕೋಪ, ಸಂಭ್ರಮ, ಆಶ್ಚರ್ಯ ಆಕ್ಷೇಪ, ಹರ್ಷ, ಒಪ್ಪಿಗೆ, ಅನೇಕ ವಸ್ತುಗಳಲ್ಲಿ ಒಂದನ್ನೆ ಗುರುತಿಸಿ ಹೇಳುವಾಗ ಹೀಗೆ ಆನೇಕ ಅರ್ಥಗಳಲ್ಲಿ ಬರುತ್ತದೆ.

**ಉದಾ:–** ಉತ್ಸಾಹದಲ್ಲಿ 1. ಹೌದು ಹೌದು! ನಾನೇ ಗೆದ್ದೆ

2. ನಿಲ್ಲು ನಿಲ್ಲು! ನಾನೂ ಬರುತ್ತೇನೆ.

**ಕೋಪದಲ್ಲಿ:–**

1. ಎಲೆಲಾ! ಮೂರ್ಖ, ನಿಲ್ಲು ನಿಲ್ಲು, ಬಂದೆ
2. ಎಲೆಲೆ, ನಿನ್ನನ್ನು ಕೊಲ್ಲದೆ ಬಿಡುವೆನು?

**ಸಂಭ್ರಮದಲ್ಲಿ :–**

1. ಬನ್ನಿ ಬನ್ನಿ! ಕುಳಿತುಕೊಳ್ಳೀ.
2. ಹತ್ತಿರ ಬಾ, ಹತ್ತಿರ ಬಾ

**ಆಶ್ಚರ್ಯದಲ್ಲಿ:–**

1. ಅಬ್ಬಬ್ಬಾ! ಎಂಥ ರಮ್ಯ ನೋಟವಿದು!
2. ಅಹಹಾ? ಈತನ ಆಟ ಆಶ್ಚರ್ಯಕರ.

**ಅಕ್ಷೇಪದಲ್ಲಿ:–**

1. ಬೇಡ ಬೇಡ ಅವನಿಗೆ ಕೊಡಬೇಡ
2. ನಡೆ ನಡೆ ದೊಡ್ಡವರ ರೀತಿ ಅವನಿಗೇಕೆ?

**ಹರ್ಷದಲ್ಲಿ:–**

1. ಅಹಹಾ (ಅಹಾ+ಅಹಾ) ನಾವೇಧನ್ಯರು.
2. ಅಮ್ಮಾ ಅಮ್ಮಾ, ನಾನೆ ಈ ಚಿತ್ರ ಬರೆದವನು.

**ಒಪ್ಪಿಗೆಯಲ್ಲಿ:–**

1. ಆಗಲಿ ಆಗಲಿ ನೀವು ಬರುವುದು ಸಂತೋಷಕರ
2. ಇರಲಿ ಉತ್ತಮನಾದವನೇ ಇರಲಿ.

**ಅವಸರದಲ್ಲಿ :–**

1) ಓಡು ಓಡು ಬೇಗ ಬೇಗ ಓಡು
2) ಬಾ ಬಾ ಬೇಗ ಬೇಗ ಬಾ

**ಅನೇಕ ವಸ್ತುಗಳಲ್ಲಿ ಒಂದನ್ನು ಗುರುತಿಸುವಿಕೆಯಲ್ಲಿ**

1. ಹಣ್ಣುಗಳಲ್ಲಿ ಚಿಕ್ಕ ಚಿಕ್ಕವನ್ನು ಆರಿಸಿ ಬೇರೆ ಇಡು
2. ದೊಡ್ಡ ದೊಡ್ಡ ಕಲ್ಲುಗಳನ್ನೆ ಎತ್ತಿ ತಾ.

**ವಿಶೇಷ ರೂಪಗಳು:–**

1. ಮೊದಲು+ಮೊದಲು = ಮೊಟ್ಟಮೊದಲು, ಮೊತ್ತಮೊದಲು
2. ಕಡೆಗೆ+ಕಡೆಗೆ = ಕಟ್ಟಕಡೆಗೆ, ಕಡೆಕಡೆಗೆ
3. ನಡುವೆ+ನಡುವೆ = ನಟ್ಟನಡುವೆ, ನಡುನಡುವೆ
4. ಬಯಲು + ಬಯಲು = ಬಟ್ಟಬಯಲು
5. ತುದಿ+ತುದಿ = ತುತ್ತತುದಿ
6. ಕೊನೆಗೆ+ಕೊನೆಗೆ = ಕೊನೆ ಕೊನೆಗೆ
7. ಮೆಲ್ಲನೆ+ಮೆಲ್ಲನೆ = ಮೆಲ್ಲನೆಮೆಲ್ಲನೆ.

| | | | |
|---|---|---|---|
| ಸುಡುಸುಡು | ಬನ್ನಿ ಬನ್ನಿ | ನಗು ನಗು | ದೊಡ್ಡ ದೊಡ್ಡ |
| ನಿಲ್ಲು ನಿಲ್ಲು | ಹೌದುಹೌದು | ಮಂಜು ಮಂಜು | ಮನೆಮನೆಗಳಲ್ಲಿ |
| ಆಗಲಿ ಆಗಲಿ | ಅಗೋ ಅಗೋ | ದುಂಡು ದುಂಡು | ನಟ್ಟ ನಡುವೆ |
| ಬೇಡ ಬೇಡ | ಈಗ ಈಗ | ಸಾಕುಸಾಕು | ನಡು ನಡುವೆ |
| ಭಲೇಭಲೇ | ಓಡು ಓಡು | ಮರ ಮರಳಿ | ಒಬ್ಬೊಬ್ಬ |
| ಹಚ್ಚ ಹಸಿರು | ಈಗೀಗ | ಮೊತ್ತಮೊದಲು | ಕಡೆಕಡೆಗೆ |
| ನಮೋ ನಮೋ | ಮಾಡು ಮಾಡು | ತುತ್ತ ತುದಿ | ತಿರು ತಿರುಗಿ |
| ಓಡಿ ಓಡಿ | ಅಹಹಾ | ಜೋರು ಜೋರಾಗಿ | ಮೆಲ್ಲ ಮೆಲ್ಲನೆ |
| ಹೆಚ್ಚು ಹೆಚ್ಚು | ಇರಲಿ ಇರಲಿ | ಚೊರು ಚೊರುಗಿ | ಒಮ್ಮೊಮ್ಮೆ |
| ಅಬ್ಬಬ್ಬಾ | ಹೆಜ್ಜೆ ಹೆಜ್ಜೆಗೆ | ಕೊನೆ ಕೊನೆಗೆ | ಬಂದೆ ಬಂದೆ |
| ಆಗಲಿ ಆಗಲಿ | ಬಟ್ಟ ಬ೦ಯಲು | ಕೇರಿ ಕೇರಿಗಳನ್ನು | |

# ಜೋಡಿಪದ(ಜೋಡಿನುಡಿ)

ಕನ್ನಡ ಭಾಷೆಯಲ್ಲಿ ಒಂದು ಪದದ ಜೊತೆಗೆ ಇತರೆ ಪದವು ಜೋಡಿಯಾಗಿ ಬರುತ್ತವೆ. ಇವನ್ನು ಜೊಡಿ ಪದಗಳು ಎನ್ನುತ್ತಾರೆ. ಅಂದರೆ ದ್ವಿರುಕ್ತಿಯಂತೆಯೇ ಪ್ರಾಸಕ್ಕಾಗಿಯೋ ಭಾಷೆಯ ಸೊಬಗನ್ನು ಹೆಚ್ಚಿಸಲೆಂದೋ ವ್ಯವಹಾರದಲ್ಲಿ ಜೊತೆ ಜೊತೆಯಾಗಿಯೇ ಬಳಕೆಯಾಗುವ ಕೆಲವು ಪದಗಳನ್ನು ಜೋಡಿನುಡಿಗಳೆಂದು ಕರೆಯುತ್ತಾರೆ.

**1. ಎರಡು ಪದಗಳಿಗೆ ಅರ್ಥವಿರುವಂತಹವು:** ಸತಿಪತಿ, ಕೆನೆಮೊಸರು, ಹಾಲುಜೇನು, ಮಕ್ಕಳುಮರಿ, ಹಿತಮಿತ, ಜಪತಪ, ಪಶುಪಕ್ಷಿ, ವೀರಶೂರ, ತೀರ್ಥ ಪ್ರಸಾದ, ಮನೆಮಠ, ಇತ್ಯಾದಿ.

**2. ಮೊದಲ ಪದಕ್ಕೆ ಮಾತ್ರ ಅರ್ಥವಿರುವಂತಹ:** (ಪ್ರತಿಧ್ವನಿ ಶಬ್ದಗಳು) ಮಾತಿಗೊಂದು ನೀತಿ
ಕಾಫಿಗೀಫಿ, ಹುಳಹುಪ್ಪಡಿ, ದೇವರುಗೀವರು, ಹಣಗಿಣ, ಪುಸ್ತಕ ಗೀಸ್ತಕ, ಚಂದಗಿಂದ, ತಲೆಗಿಲೆ, ಸೊಪ್ಪು ಸೊದೆ, ಬಟ್ಟೆ ಬರೆ, ಇತ್ಯಾದಿ......

**3. ಎರಡು. ಪದ ವಿರುದ್ಧಾರ್ಥ ಬರುವಂತಹವು:–** ಸುಖ ದುಃಖ, ನಗು ಅಳು, ನೋವು ನಲಿವು, ಏಳು ಬೀಳು, ಕೊಡು ಕೊಳು, ಮೇಲೆ ಕೆಳಗೆ, ಹಗಲಿರುಳು

| | | | |
|---|---|---|---|
| ಅಂದ ಚೆಂದ | ಉಪ್ಪು ಕಾರ | ಕಥೆ ಕವನ | ಜಾತಿ–ಮತ |
| ಅರಮನೆ ನೆರೆಮನೆ | ಉಪ್ಪು ಹುಳಿ | ಕಾಡು ಮೇಡು | ಜುಟ್ಟು ಜನಿವಾರ |
| ಅಕ್ಕಿ ಬೇಳೆ | ಉಬ್ಬರ ಇಳಿತ | ಕಾಮದೇನು ಕಲ್ಪವೃಕ್ಷ | ತಂದೆ ತಾಯಿ |
| ಅರಿಶಿನ ಕುಂಕುಮ | ಉಬ್ಬು ತಬ್ಬು | ಕುಂದು ಕೊರತೆ | ತಳಿರು ತೋರಣ |
| ಅಂಕು ಡೊಂಕು | ಉಡುಗೆ ತೊಡುಗೆ | ಕ್ರಿಮಿ ಕೀಟ | ತಂಟೆ ತರಕಾರು |
| ಅಂಗಡಿ ಮುಂಗಟ್ಟು | ಎಂಜಲು ಮುಸುರೆ | ಕೆರೆ ಕಟ್ಟೆ | ತಾಳ ಮೇಳ |
| ಆಚಾರ–ವಿಚಾರ | ಎಣ್ಣೆ ಸೀಗೆಕಾಯಿ | ಗದ್ದೆ ಬ0ಯಲು | ತಾಳ ತಂಬೂರಿ |
| ಆಳು ಕಾಳು | ಎಳ್ಳು ನೀರು | ಗಂಧ ಗಾಳಿ | ದವಸ ಧಾನ್ಯ |
| ಆಸ್ತಿ ಪಾಸ್ತಿ | ಎದ್ದು ಬಿದ್ದು | ಗುಡುಗು ಸಿಡಿಲು | ದ0ಯ ಧಾಕ್ಷಿಣ್ಯ |
| ಆಳು ಅರಸ | ಏಳು ಬೀಳು | ಗಡ್ಡೇ ಗೆಣಸು | ದೇಶ ಕಾಲ |
| ಇತಿ ಮಿತಿ | ಕಥೆ ಗಿತೆ | ಗೊತ್ತು ಗುರಿ | ಧನ ಧಾನ್ಯ |
| ಇಷ್ಟ ಅನಿಷ್ಟ | ಕಸ ಕಡ್ಡಿ | ಚಿನ್ನ ಬೆಳ್ಳಿ | ದುಃಖ ದುಮ್ಮಾನ |
| ಇಂದ್ರ ಚಂದ್ರ | 0ಯಜ್ಞ – 0ಯಾಗ | ಛತ್ರ ಚಾಮರ | ನ0ಯ ನಾಜೂಕು |
| ಈಡು ಜೋಡು | ಕಷ್ಟ ಸುಖ | ಸಾವು ನೋವು | ನಗ ನಾಣ್ಯ |
| ನಾಡು ನುಡಿ | ಪೂಜೆ ಪುನಸ್ಕಾರ | ಹಮ್ಮು ಬಿಮ್ಮು | ತನು ಮನ |
| ನಯ ವಿನಯ | ಪುಂಡ ಪೋಕರಿ | ಹಣ್ಣು ಕಾಯಿ | ಪೂರ್ವ ಪಶ್ಚಿಮ |
| ನ್ಯಾಯ ನೀತಿ | ರೆಕ್ಕೆ ಪುಕ್ಕ | ಹಾಸ್ಯ ಲಾಸ್ಯ | ಪೀಡೆ ಪಿಶಾಚಿ |
| ನೆರೆ ಹೊರೆ | ರಾಮ ಲಕ್ಷ್ಮಣ | ಹೋಮ ಹವನ | ಬಟ್ಟೆ ಬರೆ |
| ನೋವು ನಲಿವು | ವಜ್ರ ವೈಡೂ0ರ್ಯ | ರೀತಿ ನೀತಿ | ಬಂಧು ಬಳಗ |
| ಪಂಚೆ ಶಲ್ಯ | ಸಂಧಿ ಗೊಂದಿ | ಅವಳಿ ಜವಳಿ | ಬಜಾ ಬಜಂತ್ರಿ |
| ಪಾಪ ಪುಣ್ಯ | ಲಾಭ ನಷ್ಟ | ಬಿಂಕಾ ಬಿನ್ನಾಣ | ಬಿಲ್ಲು ಬಾಣ |
| ಸಿಹಿ ಕಹಿ | ವ್ಯಾಪಾರ | ವಹಿವಾಟು | ಬೇವು ಬೆಲ್ಲ |
| ಭ0ಯ ಭಕ್ತಿ | ರೆಂಬೆ ಕೊಂಬೆ | ಮನೆ ಬಾಗಿಲು | ಲಂಗು ಲಗಾಮು |

# ಗ್ರಾಂಥಿಕ ರೂಪ

ಗ್ರಾಮೀಣ ಭಾಗದ ಜನರು ಮಾತನಾಡುವ ಭಾಷೆ ಗ್ರಾಂಥಿಕ ಭಾಷೆಯಿಂದ ಸ್ವಲ್ಪ ಬಿನ್ನವಾಗಿರುತ್ತದೆ. ಅಂತಹ ಪದಗಳನ್ನು ಗ್ರಾಂಥಿಕ ಭಾಷೆಗೆ ಪರಿವರ್ತಿಸಿ ಬರೆಯುವ ರೂಪವೆ ಗ್ರಾಂಥಿಕ ರೂಪ ಎನ್ನಬಹುದು. ವ್ಯವಹಾರಿಕ ಭಾಷೆಯ ಗ್ರಾಮ್ಯಪದವನ್ನು ಗ್ರಾಂಥಿಕ ಭಾಷೆಗೆ ಅನುಗುಣವಾಗಿ ವ್ಯಾಕರಣ ಬದ್ಧವಾಗಿ ಬದಲಿಸಿದರೆ ಅದು ಗ್ರಾಂಥಿಕ ಪದ.

**ಉದಾಹರಣೆ:–**

ಹೀಂಗ – ಹೀಗೆ
ಮ್ಯಾಗ – ಮೇಲೆ
ಕಳುವ್ಯಾರ – ಕಳುಹಿಸಿದ್ದಾರೆ
ಇಲ್ಲಧ್ಹಂಗ – ಇಲ್ಲದ ಹಾಗೆ
ಇಸವಾಸ – ವಿಶ್ವಾಸ
ಸಕ್ಕಾರಿ – ಸಕ್ಕರೆ
ಕುಂತವಳೆ – ಕುಳಿತಿದ್ದಾಳೆ
ಏನ್ರಯ್ಯಾ – ಏನು ಅಯ್ಯಗಳಿರಾ
ಕಟ್ತಾ ಇದ್ದೀವಿ – ಕಟ್ಟುತ್ತಿದ್ದೇವೆ
ನಿಲ್ಸಿ – ನಿಲ್ಲಿಸಿ
ವೊಯ್ತಾಯಿದ್ದು – ಹೋಗುತ್ತಿದ್ದು
ಏಸೊಂದು – ಎಷ್ಟೊಂದು
ಕುಂತಾಳು – ಕುಳಿತಿದ್ದಾಳೆ
ತೊಳೆದೇನು – ತೊಳೆಯುತ್ತೇನೆ
ಎತ್ವಾಸ – ವ್ಯತ್ಯಾಸ
ಹೊಲ್ದಾಗ – ಹೊಲದಲ್ಲಿ
ಎಂಗೈತಿ – ಹೇಗಿದೆ
ಅಯ್ತ್ವರ – ಆದಿತ್ಯವಾರ (ಭಾನುವಾರ)
ಬೆಸ್ತಾರ – ಬೃಹಸ್ಪತಿವಾರ (ಗುರುವಾರ)
ಹೊಟ್ಗೆ – ಹೊಟ್ಟೆಗೆ
ಇದ್ರು – ಇದ್ದರು
ಬ್ಯಾಡ – ಬೇಡ
ಸಿವಾ – ಶಿವಾ
ಮಕ್ಕೈಲ್ಲಾ – ಮಕ್ಕಳೆಲ್ಲಾ
ಸಾಕಾಯ್ತು – ಸಾಕಾಗಿದೆ
ಎಂಗೋ – ಹೇಗೋ
ಪರ್ತಾಪ – ಪ್ರತಾಪ
ನಿಮ್ದೇ – ನಿಮ್ಮದೇ
ಹೆಂಗಾರ – ಹೇಗಾದರು
ವಚ್ನ – ವಚನ
ಐತಿ – ಇದೆ
ಮುರ್ದಂಗೆ ಮುರಿದಹಾಗೆ
ಆತ್ಲಾಗಿರ್ಲಿ – ಆಕಡೆ ಇರಲಿ
ವೊಂಟೋಯ್ತಿನಿ – ಹೊರಟು ಹೊಗುತ್ತೇನೆ
ವೊಪ್ಕಂಬಿಡಿ – ಒಪ್ಪಿಕೊಂಡು ಬಿಡಿ
ಈ ವಾಗ್ಲೇ – ಈಗಲೇ
ವೋ – ಓಹೋ
ಹಂಗ – ಹಾಗೆ
ನೆನೆಯಾಲಿ – ನೆನೆಯುವುದು
ತಕ್ಕೋಂಡು – ತೆಗೆದುಕೊಂಡು
ಮಾರ್ಕೊಂಡು – ಮಾರಿಕೊಂಡು
ದಾದೇರು – ದಾದಿಯರು
ಒಪ್ಕತ್ತಾಳೆ – ಒಪ್ಪಿಕೊಳ್ಳುತಾಳೆ
ಬಂದ್ಬಿಡು – ಬಂದುಬಿಡು
ಕೇಳ್ಕೊಂಡ – ಕೇಳಿಕೊಂಡು
ಕರ್ಕೊಂಡು – ಕರೆದು ಕೊಂಡು
ಅನ್ತಾಳೆ–ಅನ್ನುತ್ತಾಳೆ

# ಸಂಧಿಗಳು

ನಾವು ಮಾತನಾಡುವಾಗ ಕೆಲವು ಶಬ್ದಗಳನ್ನು (ಪದಗಳನ್ನು) ಬಿಡಿ ಬಿಡಿ ಯಾಗಿ ಹೇಳದೆ ಕೂಡಿಸಿ ಹೇಳುತ್ತೇವೆ. ಊರು+ಊರು ಎಂಬೆರಡು ಶಬ್ದಗಳನ್ನು (ಪದಗಳನ್ನು) ಊರೂರು ಎಂದು ಕೂಡಿಸಿಯೇ ಮಾತನಾಡುತ್ತೇವೆ. ಹೀಗೆ ಪದ ರಚನೆ0ಯಾಗುವಾಗ ಎರಡು ಅಕ್ಷರಗಳು ಕಾಲ ವಿಳಂಬವಿಲ್ಲದೇ ಒಟ್ಟು ಸೇರುವುದೇ ಸಂಧಿ. ಈ ರೀತಿ ಪದಗಳು ಒಟ್ಟಾಗಿ ಸೇರುವಾಗ ಮೂಲ ಪದಗಳ ಅರ್ಥಕ್ಕೆ ಯಾವ ಲೋಪವೂ ಆಗಬಾರದು ಅರ್ಥಕ್ಕೆ ಲೋಪ ಬರುವುದಾದಲ್ಲಿ ಸಂಧಿ ಮಾಡಬಾರದೆಂಬ ನಿಯಮವಿದೆ. "ಸಂಧಿ ಎಂದರೆ ಎರಡು ಅಕ್ಷರಗಳು ಪರಸ್ಪರ ಯಾವಕಾಲ ವಿಳಂಬವೂ ಇಲ್ಲದೆ ಸೇರುವುದು" ಎಂದು ಅರ್ಥ." ಅಕ್ಷರಗಳು ಎಡಬಿಡದೆ ಅರ್ಧ ಮಾತ್ರೆಕಾಲ ವ್ಯವಧಾನವಿಲ್ಲದೆ ಸೇರುವಿಕೆ0ಯೇ ಅಥವಾ ಸಂಧಿಸುವಿಕೆಯೇ ಸಂಧಿಯೆನಿಸುವುದು.

ಸಂಧಿ ಮಾಡುವಾಗ ಸ್ವರದ ಮುಂದೆ ಸ್ವರ ಬಂದು ಸಂಧಿಯಾದರೆ ಅದನ್ನು 'ಸ್ವರ ಸಂಧಿ' ಎನ್ನುತ್ತೇವೆ. ಸ್ವರದ ಮುಂದೆ ವ್ಯಂಜನ ಅಥವಾ ವ್ಯಂಜನದ ಮುಂದೆ ಸ್ವರ ಬಂದು ಸಂಧಿಯಾದರೆ ಅದು ವ್ಯಂಜನ ಸಂಧಿ' ಎನ್ನುತ್ತೇವೆ. ಯಾವಾಗಲೂ ಸಂಧಿ ಪೂರ್ವ ಪದದ ಕೊನೆಯ ಸ್ವರಾಕ್ಷರ ಮತ್ತು ಉತ್ತರ ಪದದ ಮೊದಲಾಕ್ಷರಗಳ ನಡುವೆಯೇ ಸಂಧಿ ನಡೆಯುತ್ತದೆ. ಇದನ್ನು ಸಂಧಿ ಕಾರ್ಯ ಎನ್ನಬಹುದು.

**ಸಂಧಿಯ ವಿಧಗಳು :–** ಸಂಧಿಗಳಲ್ಲಿ ಎರಡು ವಿಧಗಳಿವೆ. ಅವು

1. ಕನ್ನಡ ಸಂಧಿಗಳು
2. ಸಂಸ್ಕೃತ ಸಂಧಿಗಳು

**ಕನ್ನಡ ಸಂಧಿಗಳು:** ಕನ್ನಡ ಪದಗಳೇ ಸೇರಿ ಅಥವಾ ಕನ್ನಡ ಮತ್ತು ಸಂಸ್ಕೃತ ಪದಗಳು ಸೇರಿ ಸಂಧಿಯಾದರೆ ಅದು ಕನ್ನಡ ಸಂಧಿಗಳು

**ಸಂಸ್ಕೃತ ಸಂಧಿಗಳು:** ಸಂಸ್ಕೃತ ಪದಗಳು ಸೇರಿ ಸಂಧಿಯಾದರೆ ಅದನ್ನು ಸಂಸ್ಕೃತ ಸಂಧಿಗಳು ಎಂದು ಕರೆ0ಯುತ್ತಾರೆ.

**ಕನ್ನಡ ಸಂಧಿಗಳು**

ಕನ್ನಡ ಸಂಧಿಗಳಲ್ಲಿ ಮೂರು ವಿಧಗಳಿವೆ, ಅವು ಯಾವುವೆಂದರೆ

1) ಲೋಪಸಂಧಿ 2) ಆಗಮಸಂಧಿ 3) ಆದೇಶಸಂಧಿ

**ಲೋಪಸಂಧಿ:–** "ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ ಪೂರ್ವದಲ್ಲಿರುವ ಸ್ವರವು ಲೋಪವಾಗಿ, ಅರ್ಥವು ಕೆಡದೇ ಸಂಧಿಯಾದರೆ ಅದನ್ನು 'ಲೋಪಸಂಧಿ'"ಎಂದು ಕರೆಯುತ್ತಾರೆ.

ಉದಾ :– 1. ನಾವು+ಎಲ್ಲಾ = ನಾವೆಲ್ಲಾ (ಉಕಾರ ಬಿಟ್ಟು ಹೋಯಿತು)

(ಉ+ಎ)

2. ನಿನಗೆ+ಅಲ್ಲದೆ = ನಿನಗಲ್ಲದೆ = (ಎಕಾರ ಲೋಪಸಂಧಿ ವಾಯಿತು)

(ಎ+ಅ)

3. ಬೇರೆ+ಒಬ್ಬ = ಬೇರೊಬ್ಬ = (ಎಕಾರ ಲೋಪವಾಗಿದೆ)

(ಏ+ಒ)

4. ಮಾತು+ಇಲ್ಲ = ಮಾತಿಲ್ಲ – (ಉಕಾರ ಲೋಪವಾಗಿದೆ)

(ಉ+ಇ)

| | | | | |
|---|---|---|---|---|
| ಊರೂರು | = ಊರು | + | ಊರು | = ಲೋಪಸಂಧಿ |
| ಬಲ್ಲೆನೆಂದು | = ಬಲ್ಲೆನು | + | ಎಂದು | = ಲೋಪಸಂಧಿ |

| | | | | | | | |
|---|---|---|---|---|---|---|---|
| ಮಾತಂತು | = | ಮಾತು | + | ಅಂತು | = | ಲೋಪಸಂಧಿ |
| ಕಾಣಲಾಗದು | = | ಕಾಣಲು | + | ಆಗದು | = | ಲೋಪಸಂಧಿ |
| ತಪ್ಪಲೀಯದೆ | = | ತಪ್ಪಲು | + | ಈಯದೆ | = | ಲೋಪಸಂಧಿ |
| ಬಂದಲ್ಲದೆ | = | ಬಂದು | + | ಅಲ್ಲದೆ | = | ಲೋಪಸಂಧಿ |
| ತಕ್ಕನಿತು | = | ತಕ್ಕ | + | ಅನಿತು | = | ಲೋಪಸಂಧಿ |
| ಪೊಳ್ದೆಡೆ | = | ಪೊಳ್ದ್ | + | ಎಡೆ | = | ಲೋಪಸಂಧಿ |
| ಇರುಳಿರುಳು | = | ಇರುಳು | + | ಇರುಳು | = | ಲೋಪಸಂಧಿ |
| ತೆರೆದಿಕ್ಕುವ | = | ತೆರೆದು | + | ಇಕ್ಕುವ | = | ಲೋಪಸಂಧಿ |
| ಚರಿಸುತದ್ವರದ | = | ಚರಿಸುತ | + | ಅದ್ವರದ | = | ಲೋಪಸಂಧಿ |
| ತೆಗೆದುತ್ತರೀಯಮಂ | = | ತೆಗೆದು | + | ಉತ್ತರೀಯಮಂ | = | ಲೋಪಸಂಧಿ |
| ಬೇಡರಸುಗಳ | = | ಬೇಡ | + | ಅರಸುಗಳ | = | ಲೋಪಸಂಧಿ |
| ನಿಂತಿರ್ದನ | = | ನಿಂತು | + | ಇರ್ದನು | = | ಲೋಪಸಂಧಿ |
| ಕಾದಾಟದಾಟ | = | ಕಾದಾಟದ | + | ಆಟ | = | ಲೋಪಸಂಧಿ |
| ನಿಮ್ಮಡಿಗಳಲಿ | = | ನಿಮ್ಮ | + | ಅಡಿಗಳಲಿ | = | ಲೋಪಸಂಧಿ |
| ಒಮ್ಮೊಮ್ಮೆ | = | ಒಮ್ಮೆ | + | ಒಮ್ಮೆ | = | ಲೋಪಸಂಧಿ |
| ತಿಂಗಳಿನೂರು | = | ತಿಂಗಳಿನ | + | ಊರು | = | ಲೋಪಸಂಧಿ |
| ನಿಮ್ಮರಸ | = | ನಿಮ್ಮ | + | ಅರಸ | = | ಲೋಪಸಂಧಿ |

ಈಗೀಗ, ಆದನೆಂಬ, ನೆತ್ತರೊಂದೆ, ಜೀವತೆತ್ತವರು, ಲೇಖನವನೋದಿ, ಮಿಗಿಲಾಗಿ, ಹೆಸರಾಗಿದೆ, ಮುಚ್ಚಿಟ್ಟು, ಬಾನಿನಡೆ, ತಾಸಾಗಿದೆ, ಊರಿಂದ, ಇಂದಳುತ, ಒಡನಿರ್ದು, ತಾನೆಲ್ಲಿ ಪಡೆದಿದ್ದೇನೆ ಅವನೂರು, ಇವನಿಗಾನು, ಏನಾದುದು ಭೀಮರಿಂದ, ಊರಲ್ಲಿ, ಆಡಿಸು

**ಆಗಮಸಂಧಿ:–** "ಸ್ವರದ ಮುಂದೆ ಸ್ವರವು ಬಂದು ಸಂಧಿ ಕಾರ್ಯ ನಡೆಯುವಾಗ ಎರಡು ಸ್ವರಗಳ ಮಧ್ಯದಲ್ಲಿ ಹೊಸದಾಗಿ ಒಂದು ಅಕ್ಷರ ಬಂದು ಸೇರಿ ಸಂಧಿಯಾದರೆ ಅದನ್ನು ಆಗಮಸಂದಿ," ಎನ್ನುವರು 'ಯ್' ಕಾರ ಹೊಸದಾಗಿ ಆಗಮವಾಗಿ ಬಂದು ಸೇರಿ ಸಂಧಿಯಾದರೆ ಅದನ್ನು 'ಯ; ಕಾರಾಗಮ' ಸಂಧಿಯೆಂದು, 'ವ್' ಕಾರ ಹೊಸದಾಗಿ ಆಗಮವಾಗಿ ಬಂದು ಸೇರಿ ಸಂಧಿಯಾದರೆ ಅದನ್ನು 'ವಕಾರಾಗಮ' ಸಂಧಿ ಎಂತಲೂ ಕರೆಯುತ್ತಾರೆ.

ಉದಾ:–

| | | | |
|---|---|---|---|
| ಕಾ+ಅದೆ | (ಕಾ+ಯ್+ಅದೆ) | = | ಕಾ0ುದೆ |
| ಗಿರಿ+ಅನ್ನು | (ಗಿರಿ+ಯ್+ಅನ್ನು) | = | ಗಿರಿಯನ್ನು |
| ಮೀ+ಅಲು | (ಮೀ+ಯ್+ಅಲು) | = | ಮೀಯಲು |
| ಮೇ+ಇಸು | (ಮೇ+ಯ್+ಇಸು) | = | ಮೇಯಿಸು |
| ಮೈ+ಅನ್ನು | (ಮೈ+ಯ್+ಅನ್ನು) | = | ಮೈಯನ್ನು |
| ಮಡು+ಅನ್ನ | (ಮಡು+ವ್+ಅನ್ನು) | = | ಮಡುವನ್ನು |
| ಪ್+ಇಂದ | (ಪ್+ವ್+ಇಂದ) | = | ಪೂವಿಂದ |
| ಗೋ+ಅನ್ನು | (ಗೋ+ವ್+ಅನ್ನು) | = | ಗೋವನ್ನು |

| | | |
|---|---|---|
| ಕೈ+ಅನ್ನು | ಕೈಯನ್ನು | = ಆಗಮ ಸಂಧಿ |
| ಮಳೆ+ಇಂದ | ಮಳೆಯಿಂದ | = ಆಗಮ ಸಂಧಿ |
| ಜಾಗ+ಅನ್ನು | ಜಾಗವನ್ನು | = ಆಗಮ ಸಂಧಿ |
| ಶಾಲೆ+ಅಲ್ಲಿ | ಶಾಲೆಯಲ್ಲಿ | = ಆಗಮ ಸಂಧಿ |
| ವೇದಿಕೆ+ಅಲ್ಲಿ | ವೇದಿಕೆಯಲ್ಲಿ | = ಆಗಮ ಸಂಧಿ |
| ಓಣಿ+ಅಲ್ಲಿ | ಓಣಿಯಲ್ಲಿ | = ಆಗಮ ಸಂಧಿ |
| ಮರ+ಅನ್ನು | ಮರವನ್ನು | = ಆಗಮ ಸಂಧಿ |
| ಅತಿ+ಆದ | ಅತಿಯಾದ | = ಆಗಮ ಸಂಧಿ |
| ಆನಂದ+ಆಯಿತು | ಆನಂದವಾಯಿತು | = ಆಗಮ ಸಂಧಿ |
| ಭೇದ+ಇಲ್ಲ | ಭೇದವಿಲ್ಲ | = ಆಗಮ ಸಂಧಿ |
| ಆನಂದ + ಆಯಿತು | ಆನಂದವಾಯಿತು | = ಆಗಮ ಸಂಧಿ |

ವೃಧ್ಧಿಯಾಗಿ, ಶವವಾದವು, ಭೇಧವಾಗಿ, ಮನೆಯೊಳಗೆ, ಗಡಿಯಲ್ಲಿ, ಮಾತೃವನ್ನು, ಕುಲವನ್ನು, ಆವುಂಗರ, ಆವೂಟ, ನೋಯಲು, ಕೆರೆಯನ್ನು.

**ಆದೇಶಸಂಧಿ:–** "ಸಂಧಿ ಕಾರ್ಯ ನಡೆಯುವಾಗ ಇರುವ ಅಕ್ಷರಗಳಲ್ಲಿ ಒಂದು ಅಕ್ಷರ ಬಿಟ್ಟು ಹೋಗಿ, ಅದೇ ಜಾಗಕ್ಕೆ ಬೇರೊಂದು ಅಕ್ಷರ ಆದೇಶವಾಗಿ ಬಂದು ಸೇರಿ ಸಂಧಿಯಾಗುವುದಕ್ಕೆ (ಉತ್ತರ ಪದದ ಆದಿಯಲ್ಲಿರುವ ವ್ಯಂಜನದ ಬದಲಿಗೆ ಬೇರೊಂದು ವ್ಯಂಜನ ಬಂದು ಸೇರುವುದು) ಆದೇಶ ಸಂಧಿ," ಎಂದು ಕರೆಯುತ್ತಾರೆ. ಕ.ತ.ಪ.ಗಳಿಗೆ ಗ,ದ.ಬ ಗಳು ಆದೇಶವಾಗಿ ಬರುತ್ತದೆ. ಕೆಲವೊಮ್ಮೆ ಪ..ಬ.ಮ.ಗಳಿಗೆ 'ವ' ಕಾರವೂ. ಆದೇಶವಾಗಿ ಬರುತ್ತದೆ.

| | | | |
|---|---|---|---|
| ಮಳೆ | + | ಕಾಲ | = ಮಳೆಗಾಲ (ಮಳೆ+ಗ್, ಆಲ) |
| ಬೆಟ್ಟ | + | ತಾವರೆ | = ಬೆಟ್ಟದಾವರೆ (ಬೆಟ್ಟ+ದ್, ಆವರೆ) |
| ಕಣ್ | + | ಪನಿ | = ಕಂಬನಿ (ಕಂ+ಬ್, ಅನಿ) |
| ಚಳಿ | + | ಕಾಲ | = ಚಳಿಗಾಲ = ಆದೇಶಸಂಧಿ |
| ಕಣ್ | + | ಕೆಟ್ಟು | = ಕಂಗೆಟ್ಟು = ಆದೇಶಸಂಧಿ |
| ಹುಲ್ಲು | + | ಕಾವಲು | = ಹುಲ್ಲುಗಾವಲು = ಆದೇಶಸಂಧಿ |
| ಹಳ | + | ಕನ್ನಡ | = ಹಳಗನ್ನಡ = ಆದೇಶಸಂಧಿ |
| ಕಳೆ | + | ಕೂಡಿ | = ಕಳೆಗೂಡಿ = ಆದೇಶಸಂಧಿ |
| ಎಳೆ | + | ಕರು | = ಎಳೆಗರು = ಆದೇಶಸಂಧಿ |
| ಮನೆ | + | ಕೆಲಸ | = ಮನೆಗೆಲಸ = ಆದೇಶಸಂಧಿ |
| ಮೈ | + | ತೊಳೆ | = ಮೈದೊಳೆ = ಆದೇಶಸಂಧಿ |
| ಮೇರೆ | + | ತಪ್ಪು | = ಮೇರೆದಪ್ಪು = ಆದೇಶಸಂಧಿ |
| ಬೆನ್ | + | ಪತ್ತು | = ಬೆಂಬತ್ತು = ಆದೇಶಸಂಧಿ |
| ನೀರ್ | + | ಪೊನಲ್ | = ನಿರ್ವೊನಲ್ (ಪ,ಬ,ಮ, ಗಳಿಗೆ 'ವ'ಕಾರ) |
| ಎಳ | + | ಪೆರೆ | = ಎಳವರೆ = |
| ಬೆಮರ್ | + | ಪನಿ | = ಬೆಮರ್ವನಿ |

| | | | | |
|---|---|---|---|---|
| ಬೇರ್ | + | ಬೆರಸಿ | = | ಬೇರ್ವೆರಸಿ |
| ಕಡು | + | ಬೆಳ್ಪು | = | ಕಡುವೆಳ್ಪು |
| ಎಳ | + | ವಳ್ಳಿ | = | ಎಳವಳ್ಳಿ |
| ಮೆಲ್ | + | ಮಾತು | = | ಮೆಲ್ವಾತು |
| ನೆಲೆ | + | ಮನೆ | = | ನೆಲೆವನೆ |
| ಚೆಲ್ | + | ಬೆಳಕು | = | ಚೆಲ್ವೆಳಕು |
| ಕೆನೆ | + | ಪಾಲ್ | = | ಕೊನೆವಾಳ್ |
| ಕೈ | + | ಪಿಡಿ | = | ಕೈವಿಡಿ |
| ನೆರೆ | + | ಬೀದಿ | = | ನೆರೆವೀದಿ |
| ಪೊರೆ | + | ಬೀಡು | = | ಪೊರೆವೀಡ |

ಮೈದೋರು, ಕೈವಿಡಿದ, ಧೃತಿಗೆಟ್ಟು, ಪೋಗಲ್ವೇಳ್ಕುಂ, ಹೊಸಗಾಲ, ಬಲ್ಲಯ್ಯ, ಬಿಲ್ಗೊಂಡು, ಪೊದೋಟ, ಒಳಗಣ್ಣು, ಬಾಗಿಲು ಗಟ್ಟಳೆ, ತೇಜಗೆಡೆ, ಮತಿಗೆಟ್ಟು, ವಿಸ್ಮಯಂಬಟ್ಟು, ಕಳ್ಗುಡಿ, ಹೂಬುಟ್ಟಿ, ಸಿರಿಗನ್ನಡ,

ಕನ್ನಡದಲ್ಲಿ 2 ಸ್ವರ ಸಂಧಿಗಳಿವೆ ಅವು
1) ಲೋಪಸಂಧಿ 2) ಆಗಮಸಂಧಿ

ಕನ್ನಡದ ವ್ಯಂಜನ ಸಂಧಿ – ಆದೇಶಸಂಧಿ

## ಸಂಸ್ಕೃತ ಸಂಧಿಗಳು (ಏಳು)

ಸಂಸ್ಕೃತ ಸಂಧಿಗಳಲ್ಲಿ ನಾಲ್ಕು ಸ್ವರ ಸಂಧಿಗಳು ಹಾಗೂ ಮೂರು ವ್ಯಂಜನ ಸಂಧಿಗಳಿವೆ ಅವುಗಳೆಂದರೆ

1. ಸವರ್ಣ ದೀರ್ಘ ಸಂಧಿ 2. ಗುಣ ಸಂಧಿ
3. ವೃದ್ಧಿ ಸಂಧಿ 4. ಯಣ್ ಸಂಧಿ } ಸ್ವರ ಸಂಧಿಗಳು

5. ಜಸ್ತ್ವ ಸಂಧಿ
6. ಶ್ಚುತ್ವ ಸಂಧಿ
7. ಅನುನಾಸಿಕ ಸಂಧಿ } ವ್ಯಂಜನ ಸಂಧಿಗಳು

**1. ಸವರ್ಣ ದೀರ್ಘಸಂಧಿ :–** ಸವರ್ಣ ಸ್ವರಗಳು ಒಂದರ ಮುಂದೆ ಒಂದು ಸೇರಿ ಸಂಧಿಯಾಗುವಾಗ ಅವೆರಡರ ಸ್ಥಾನದಲ್ಲಿ (ಜಾಗದಲ್ಲಿ) ಅದೇ ಜಾತಿಯ (ಸವರ್ಣ ಅಕ್ಷರ) ದೀರ್ಘಸ್ವರ ಆದೇಶವಾಗಿ ಬಂದರೆ ಅದನ್ನು ಸವರ್ಣ ದೀರ್ಘ ಸಂಧಿ ಎನ್ನುವರು, ಅಂದರೆ ಸಂಧಿ ನಡೆಯುವಾಗ ಸವರ್ಣ ಅಕ್ಷರಗಳು (ಅ,ಆ,ಇ,ಈ,ಉ,ಊ) ಸ್ವರದ ಮುಂದೆ ಸ್ವರ ಬಂದಾಗ ಅದೇ ಸವರ್ಣ ಅಕ್ಷರ ದೀರ್ಘವಾಗಿ ಸಂಧಿಯಾಗುವುದು.

ದ್+ಯ್+ಆ+ಅ = ದ್+ಯ್+ಆ = ಆ

ವಿದ್ಯಾ+ಅಭ್ಯಾಸ = ವಿದ್ಯಾಭ್ಯಾಸ

ಇಲ್ಲಿ ಪೂರ್ವ ಪದದ ಕೊನೆಯಲ್ಲಿರುವ ಆಸ್ವರದ ಮುಂದೆ ಉತ್ತರ ಪದದ ಆದಿಯಲ್ಲಿ ಅ ಸ್ವರ ಇರುವುದು, ಇವೆರೆಡು ಸ್ವರಗಳು ಸೇರಿ ಸಂಧಿಯಾದಾಗ ದೀರ್ಘಸ್ವರವಾಗಿ ಪರಿವರ್ತನೆಯಾಗುತ್ತದೆ. ಹೀಗಾಗಿ ಇದು ಸವರ್ಣದೀರ್ಘಸಂಧಿ.

ಉದಾ:–

ಗಿರಿ+ಈಶ – ಗಿರೀಶ

ರ್+ಇ+ಈ ರ್=ಈ

ಗುರು+ ಉಪದೇಶ = ಗುರೂಪದೇಶ

ರ್+ಉ+ಉ ರ್+ಊ

| | | |
|---|---|---|
| ರಾಮ+ಆಯಣ | = ರಾಮಾಯಣ | – ಸವರ್ಣದೀರ್ಘ ಸಂಧಿ |
| ದೇವ+ಅಸುರ | = ದೇವಾಸುರ | – ಸವರ್ಣದೀರ್ಘ ಸಂದಿ |
| ಸುರ+ಅಸುರ | = ಸುರಾಸುರ | – ಸವರ್ಣದೀರ್ಘ ಸಂದಿ |
| ಮಹಾ+ಆತ್ಮ | = ಮಹಾತ್ಮ | – ಸವರ್ಣದೀರ್ಘ ಸಂದಿ |
| ಕವಿ+ಇಂದ್ರ | = ಕವೀಂದ್ರ | – ಸವರ್ಣದೀರ್ಘ ಸಂದಿ |
| ಲಕ್ಷ್ಮೀ+ಈಶ | = ಲಕ್ಷ್ಮೀಶ | – ಸವರ್ಣದೀರ್ಘ ಸಂದಿ |
| ವಧು+ಉಪೇತ | = ವಧೂಪೇತ | – ಸವರ್ಣದೀರ್ಘ ಸಂದಿ |
| ಸಕಳ+ಆಚಾರ್ಯ | = ಸಕಳಾಚಾರ್ಯ | – ಸವರ್ಣದೀರ್ಘ ಸಂದಿ |
| ಜಿನ+ಆಲಯು | = ಜೀನಾಲಯ | – ಸವರ್ಣದೀರ್ಘ ಸಂದಿ |
| ನಿಜ+ಆಶ್ರಮ | = ನಿಜಾಶ್ರಮ | – ಸವರ್ಣದೀರ್ಘ ಸಂದಿ |

ಚಂದ್ರಾರ್ಕ, ಗೃಹಸ್ಥಾಶ್ರಮ, ಪರಮಾನಂದ, ಬ್ರಹ್ಮಾಸ್ತ್ರ, ವದನಾರವಿಂದ, ಪ್ರಾಣಾಹುತಿ, ವಾಚನಾಲಯ, ಸಂಗ್ರಹಾಲಯ, ವಲ್ಕಲಾಮೃತ, ದ್ರವ್ಯಾರ್ಥಿ, ದಿವ್ಯಾರ್ಥಿ, ದೇವಾಲಯ, ಮೃಗಾಲಯ.........

**2. ಗುಣಸಂಧಿ:–** "'ಅ ಆ' ಕಾರಗಳಿಗೆ 'ಇ ಈ' ಕಾರಗಳು ಪರವಾದರೆ ಅವೆರಡರ ಜಾಗದಲ್ಲಿ (ಸ್ಥಾನದಲ್ಲಿ) 'ಏ' ಕಾರವೂ 'ಉಊ' ಕಾರಗಳು ಪರವಾದರೆ ಅವೆರಡರ ಜಾಗದಲ್ಲಿ 'ಓ' ಕಾರವೂ 'ಋ' ಕಾರ ಪರವಾದರೆ ಅಲ್ಲಿ 'ಅರ್' ಕಾರವೂ ಆದೇಶವಾಗಿ ಬಂದು ಸೇರಿ ಸಂಧಿಯಾದರೆ ಅದನ್ನು ಗುಣಸಂಧಿ," ಎನ್ನುವರು.

ಉದಾ:– ಸುರ+ಈಶ = ಸುರೇಶ

(ಅ+ಈ) = ಏ

ಸೂರ್ಯ+ಉದಯ = ಸುರ್ಯೋದಯ

(ಅ + ಉ) = ಓ

ಮಹಾ+ಋಷಿ = ಮಹರ್ಷಿ

(ಆ + ಋ) = ಅರ್

ದೇವ+ಇಂದ್ರ = ದೇವೇಂದ್ರ – ಗುಣ ಸಂಧಿ

ಮಹಾ+ಈಶ = ಮಹೇಶ – ಗುಣ ಸಂಧಿ

ಧರಾ+ಇಂದ್ರ = ಧರೇಂದ್ರ – ಗುಣ ಸಂಧಿ

ಮಹಾ+ಈಶ್ವರ = ಮಹೇಶ್ವರ – ಗುಣ ಸಂಧಿ

ಚಂದ್ರ+ಉದಯ= ಚಂದ್ರೋದಯ – ಗುಣ ಸಂಧಿ

ಏಕ+ಊನ = ಏಕೋನ – ಗುಣ ಸಂಧಿ

ದೇವ+ಋಷಿ = ದೇವರ್ಷಿ – ಗುಣ ಸಂಧಿ

ಮಹಾ+ಋಷಿ = ಮಹರ್ಷಿ – ಗುಣ ಸಂಧಿ

ಸಪ್ತ+ಋಷಿ = ಸಪ್ತಋಷಿ – ಗುಣ ಸಂಧಿ

ಜ್ಞಾನ+ಈಶ್ವರ = ಜ್ಞಾನೇಶ್ವರ – ಗುಣ ಸಂಧಿ

ಕಲಾ+ಉಪಾಸಕ = ಕಲೋಪಾಸಕ – ಗುಣ ಸಂಧಿ

ಲಕ್ಷೋಪಲಕ್ಷ, ನವೋದಯ, ಮಂಡಲೇಶ್ವರ, ಬ್ರಹ್ಮರ್ಷಿ, ವಿಶ್ವೇಶ್ವರಯ್ಯ, ಜ್ಞಾನೋದಯ, ಅರುಣೋದಯ, ಮಹೋನ್ನತ, ಮದನ್ಮೋತ್ತ, ಶತಮಾನೋತ್ಸವ, ಮಹೋತ್ಸವ, ಘ್ರಾಣೇಂದ್ರಿಯ, ಪಂಚೇಂದ್ರಿಯ, ಕೌರವೇಂದ್ರ.......

**3. ವೃದ್ಧಿ ಸಂಧಿ:–** "'ಅ' 'ಆ' ಕಾರಗಳಿಗೆ 'ಏ' ಕಾರಗಳು ಪರವಾದಾಗ ಅವೆರಡರ ಜಾಗದಲ್ಲಿ 'ಐ' ಕಾರವೂ, 'ಓ' 'ಔ' ಕಾರಗಳು ಪರವಾದಾಗ ಅವೆರಡರ ಜಾಗದಲ್ಲಿ ಔ ಕಾರವೂ ಆದೇಶವಾಗಿ ಬಂದು ಸೇರಿ ಸಂಧಿಯಾದರೆ ಅದನ್ನು ವೃದ್ಧಿ ಸಂಧಿ" ಎನ್ನುವರು

ಉದಾ:–

ಏಕ+ಏಕ = ಏಕೈಕ

ಅ+ಏ = ಐ

ಅಷ್ಟ+ಐಶ್ವರ್ಯ = ಅಷ್ಟೈಶ್ವರ್ಯ

ಅ+ಐ = ಐ

ವನ+ಔಷಧಿ = ವನೌಷದಿ

ಅ+ಔ = ಔ

ಮಹಾ + ಔನ್ನತ್ಯ = ಮಹೌನ್ನತ್ಯ – ವೃದ್ಧಿ ಸಂಧಿ

ಲೋಕ + ಏಕವೀರ = ಲೋಕೈಕವೀರ – ವೃದ್ಧಿ ಸಂಧಿ

ಜನ + ಐಕ್ಯ = ಜನೈಕ್ಯ – ವೃದ್ಧಿ ಸಂಧಿ
ವಿಧ್ಯಾ + ಐಶ್ವರ್ಯ = ವಿದ್ವೈಶ್ವರ್ಯ – ವೃದ್ಧಿ ಸಂಧಿ
ಜಲ + ಓಘ = ಜಲೌಘ – ವೃದ್ಧಿ ಸಂಧಿ
ಘನ + ಔದಾರ್ಯ = ಘನೌದಾರ್ಯ – ವೃದ್ಧಿ ಸಂಧಿ
ಮಹಾ + ಔದಾರ್ಯ = ಮಹೌದಾರ್ಯ – ವೃದ್ಧಿ ಸಂಧಿ
ಭಾವ + ಏಕ = ಭಾವೈಕ್ಯ – ವೃದ್ಧಿ ಸಂಧಿ

**4. ಯಣ್ ಸಂಧಿ:–** "ಇ,ಈ,ಉ,ಊ,ಋ, ಕಾರಗಳಿಗೆ ಸವರ್ಣವಲ್ಲದ ಸ್ವರ ಪರವಾದರೆ ಇಈ ಕಾರಗಳಿಗೆ 'ಯ್' ಕಾರವೂ ಉ ಊ ಕಾರಗಳಿಗೆ 'ವ್' ಕಾರವೂ ಋ ಕಾರಕ್ಕೆ 'ರ್' ಕಾರವೂ ಆದೇಶವಾಗಿ ಬಂದು ಸೇರಿ ಸಂಧಿ ಯಾದರೆ ಅದನ್ನು 0ಯಣ್ ಸಂಧಿ" ಎನ್ನುವರು.

ಉದಾ:– ಅತಿ+ಅಂತ = ಅತ್ಯಂತ
(ಇ+ಅ =ಯ್ ಅ)
ಮನು+ಅಂತರ – ಮನ್ವಂತರ
(ಉ+ಅ = ವ್ ಅ)
ಪಿತೃ +ಅರ್ಜಿತ = ಪಿತ್ರಾರ್ಜಿತ
(ಋ +ಅ = ರ್.ಅ)

ಅತಿ +ಅವಸರ = ಅತ್ಯವಸರ – 0ಯಣ್ ಸಂಧಿ
ಜಾತಿ +ಅತೀತ = ಜಾತ್ಯಾತೀತ – 0ಯಣ್ ಸಂದಿ
ಕೋಟಿ +ಅಧೀಶ = ಕೋಟ್ಯಾಧೀಶ – 0ಯಣ್ ಸಂದಿ
ಗತಿ +ಅಂತರ = ಗತ್ಯಂತರ – 0ಯಣ್ ಸಂದಿ
ಪ್ರತಿ +ಉತ್ತರ = ಪ್ರತ್ಯುತ್ತರ – 0ಯಣ್ ಸಂದಿ
ಪತಿ +ಅರ್ಥ = ಪತ್ಯರ್ಥ – 0ಯಣ್ ಸಂದಿ
ಅತಿ +ಆಶೆ = ಅತ್ಯಾಶೆ – 0ಯಣ್ ಸಂದಿ
ಆಧಿ +ಆತ್ಮ = ಆಧ್ಯಾತ್ಮ – 0ಯಣ್ ಸಂದಿ
ಗುರು +ಆಜ್ಞೆ = ಗುರ್ವಾಜ್ಞೆ (ಉ ಕಾರಕ್ಕೆ 'ವ್' ಕಾರಾದೇಶ)
ಮನು +ಆದಿ = ಮನ್ವಾದಿ (ಉ ಕಾರಕ್ಕೆ 'ವ್' ಕಾರಾದೇಶ)
ವಧೂ +ಆಭರಣ = ವಧ್ವಾಭರಣ (ಊ ಕಾರಕ್ಕೆ 'ವ್' ಕಾರಾದೇಶ)
ವಧೂ +ಅನ್ವೇಷಣ = ವಧ್ವನ್ವೇಷಣಾ ( ಋ ಕಾರಕ್ಕೆ 'ಅರ್' ಕಾರಾದೇಶ)
ಪಿತೃ +ಅರ್ಥ = ಪಿತ್ರಂಶ (ಋ ಕಾರಕ್ಕೆ 'ಅರ್' ಕಾರಾದೇಶ)
ಮಾತೃ +ಅಂಶ = ಮಾತ್ರಂಶ ( ಋ ಕಾರಕ್ಕೆ 'ಅರ್' ಕಾರಾದೇಶ)
ಕರ್ತೃ +ಅರ್ಥ = ಕರ್ತ್ರರ್ಥ ( ಋ ಕಾರಕ್ಕೆ 'ಅರ್' ಕಾರಾದೇಶ)
('ಉ' ಕಾರಕ್ಕೆ 'ವ್' ಕಾರಾದೇಶ) ('ಉ' ಕಾರಕ್ಕೆ 'ವ್' ಕಾರಾದೇಶ)
('ಊ' ಕಾರಕ್ಕೆ 'ವ್' ಕಾರಾದೇಶ) ('ಋ' ಕಾರಕ್ಕೆ 'ರ್' ಕಾರಾದೇಶ)
ಇತ್ಯಾದಿ, ಅತ್ಯಮೂಲ್ಯ, ಅತ್ಯುನ್ನತ, ಶಾಲ್ಯನ್ನು, ಪರ್ಯಾವಸಾನ, ಕೋಟ್ಯಾನುಕೋಟಿ, ಅತ್ಯಾದರ..........

**5. ಜಸ್ತ್ವಸಂಧಿ:** “ಪೂರ್ವ ಪದದ ಕೊನೆಯಲ್ಲಿರುವ ವರ್ಗದ ಪ್ರಥಮಾಕ್ಷರಕ್ಕೆ ಅಂದರೆ ಕ್.ಚ್.ಟ್.ತ್.ಪ್. ಗಳಿಗೆ ಯಾವ ವರ್ಣ ಪರವಾದರೂ ಅದೇ ವರ್ಗದ ಮೂರನೇ ವ್ಯಂಜನಾಕ್ಷರಗಳಾದ ಗ್, ಜ್,ಡ್.ದ್.ಬ್. ಗಳು ಆದೇಶವಾಗಿ ಬರುವುದಕ್ಕೆ ಜಶ್ತ್ವ ಸಂಧಿ” ಎನ್ನುವರು.

ಉದಾ:– ದಿಕ್+ಅಂತ = ದಿಗಂತ (ಪೂರ್ವದ ಕ ಕಾರಕ್ಕೆ ಗ ಕಾರಾದೇಶ)

ಕ್+ಅ = ಗ

ಷಟ್+ಆನನ =ಷಡಾನನ (‘ಟ’ಕಾರಕ್ಕೆ ‘ಡ ಕಾರಾದೇಶ)

ಟ್+ಅ – ಡ

| | | | |
|---|---|---|---|
| ಅಚ್ | + ಅಂತ | = ಅಜಂತ | (‘ಚ’ ಕಾರಕ್ಕೆ ‘ಜ’ ಕಾರಾದೇಶ) |
| ಸತ್ | + ಅಂದ | = ಸದಾನಂದ | (‘ತ’ ಕಾರಕ್ಕೆ ‘ದ’ ಕಾರಾದೇಶ) |
| ಅತ್ | +ಆ | = ಅಬ್ಧಿ | (‘ತ’ ಕಾರಕ್ಕೆ ‘ಬ’ ಕಾರಾದೇಶ) |
| ವಾಕ್ | +ದೇವಿ | = ವಾಗ್ದೇವಿ | = ಜಶ್ತ್ವಸಂಧಿ |
| ವಾಕ್ | +ದಾನ | = ವಾಗ್ದಾನ | = ಜಶ್ತ್ವಸಂಧಿ |
| ವಾಕ್ | +ಅಧಿಪ | = ವಾಗಧೀಪ | = ಜಶ್ತ್ವಸಂಧಿ |
| ದಿಕ್ | +ದೇಶ | = ದಿಗ್ದೇಶ | = ಜಶ್ತ್ವಸಂಧಿ |
| ದಿಕ್ | +ದಿಗಂತ | =ದಿಗ್ದಿಗಂತ | = ಜಶ್ತ್ವಸಂಧಿ |
| ದಿಕ್ | +ದೇವತೆ | = ದಿಗ್ದೇವತೆ | = ಜಶ್ತ್ವಸಂಧಿ |
| ಅಚ್ | +ಆದಿ | = ಅಜಾದಿ | = ಜಶ್ತ್ವಸಂಧಿ |
| ಷಟ್ | +ಅಂಗ | = ಷಡಂಗ | = ಜಶ್ತ್ವಸಂಧಿ |
| ವಿರಾಟ | +ರೂಪ | = ವಿರಾಡ್ರೂಪ | = ಜಶ್ತ್ವಸಂಧಿ |
| ಸತ್ | +ಉದ್ದೇಶ | =ಸದುದ್ದೇಶ | = ಜಶ್ತ್ವಸಂಧಿ |
| ಸತ್ | +ಉದ್ಯೋಗ | = ಸದುದ್ಯೋಗ | = ಜಶ್ತ್ವಸಂಧಿ |
| ಅಪ್ | +ಅಂಶ | = ಅಂಬರ | = ಜಶ್ತ್ವಸಂಧಿ |
| ಅಪ್ | +ದ | = ಅಬ್ದ | = ಜಶ್ತ್ವಸಂಧಿ |
| ದಿಕ್ | +ಮಂಡಲ | = ದಿಗ್ಮಂಡಲ | = ಜಶ್ತ್ವಸಂಧಿ |

**6. ಶ್ಚುತ್ವ ಸಂಧಿ**

(ಶ್= ಶಕಾರ, ಚವರ್ಗಾಕ್ಷರಗಳು ಚು. ಚ. ಛ. ಜ. ಝ. ಞ)

“ಸ್,ಕಾರ,ತ್, ವರ್ಗಾಕ್ಷರಗಳಿಗೆ ಶ್ ಕಾರ, ಚ್ ವರ್ಗಾಕ್ಷರಗಳು ಪರವಾದಾಗ ಸ್ ಕಾರಕ್ಕೆ ಶ್ ಕಾರವೂ, ತ್ ವರ್ಗ (ತ್,ಥ್,ದ್,ಧ್,ನ್) ಗಳಿಗೆ ಚವರ್ಗಗಳು (ಚ್,ಛ್,ಜ್,ಝ್,ಞ,) ಆದೇಶವಾಗಿ ಬಂದು ಸಂಧಿಯಾಗುವುದಕ್ಕೆ ಶ್ಚುತ್ವಸಂಧಿ” ಎಂದು ಕರೆಯುವರು.

ಉದಾ:– ಮನಸ್ + ಶುದ್ದಿ = ಮನಶ್ಶುದ್ಧಿ (‘ಸ’ಕಾರಕ್ಕೆ ‘ಶ’ಕಾರ ಪರವಾಗಿ ಸ ಕಾರಕ್ಕೆ–ಶ ಆದೇಶ)

ಯಶಸ್+ಚಂದ್ರಿಕೆ = ಯಶಶ್ಚಂದ್ರಿಕೆ (‘ಸ’ಕಾರಕ್ಕೆ ‘ಚ’ಕಾರ ಪರವಾಗಿ ಸಕಾರಕ್ಕೆ ಶಕಾರದೇಶ)

ಲಸತ್+ಚಿತ್ರ = ಲಸಚ್ಚಿತ್ರ (‘ತ’ಕಾರಕ್ಕೆ ‘ಚ’ಕಾರ ಪರವಾಗಿ ‘ಅ’ಕಾರಕ್ಕೆ ‘ಚ’ಕಾರಾದೇಶ)

ಸತ್+ಚಿತ್ರ = ಸಚ್ಚಿತ್ರ (‘ತ’ಕಾರಕ್ಕೆ ‘ಚ’ಕಾರ ಪರವಾಗಿ ತಕಾರಕ್ಕೆ ಚಕಾರಾದೇಶ)

ಬೃಹತ್ + ಛತ್ರ = ಬೃಹಚ್ಛತ್ರ (‘ತ’ಕಾರಕ್ಕೆ ‘ಛ’ಕಾರ ಪರವಾಗಿ ತಕಾರಕ್ಕೆ ಚಕಾರದೇಶ)

ಪಯಸ್+ಶಯನ = ಪಯಶ್ಶಯನ

ಮನಸ್+ಚಂಚಲ = ಮನಶ್ಚಂಚಲ

ಮನಸ್+ಚಾಪಲ= ಮನಶ್ಚಾಪಲ್ಯ

ಶರತ್+ಚಂದ್ರ = ಶರಚ್ಚಂದ್ರ.

ಜಗತ್+ಜ್ಯೋತಿ = ಜಗಜ್ಜ್ಯೋತಿ

ಯಶಸ್+ಶರೀರ = ಯಶಶ್ಶರೀರ

ಚಲಚ್ಚಿತ್ರ ಚಲಚ್ಚಾಮರ, ಜ್ವಲಜ್ಜ್ಯೋತಿ, ಬ್ರಹ್ಮಜ್ಯೋತಿ, ಮನಶ್ಶಾಂತಿ, ಮನಶ್ಚಪಲ

**7. ಅನುನಾಸಿಕ ಸಂಧಿ. :–** "ವರ್ಗದ ಪ್ರಥಮಾಕ್ಷರಗಳಿಗೆ (ಕ್.ಚ್.ಟ್.ತ್.ಪ್) ಯಾವುದೇ ಅನುನಾಸಿಕ ಅಕ್ಷರಗಳು ಪರವಾದರೂ ಅವುಗಳಿಗೆ ಅಂದರೆ ವರ್ಗದ ಪ್ರಥಮಾಕ್ಷರಗಳಿಗೆ ಅದೇ ವರ್ಗದ ಅನುನಾಸಿಕ ಅಕ್ಷರಗಳು (ಙ,ಞ,ಣ,ನ,ಮ) ಆದೇಶವಾಗಿ ಬಂದು ಸಂಧಿಯಾಗುವುದಕ್ಕೆ ಅನುನಾಸಿಕ ಸಂಧಿ," ಎನ್ನುವರು.

ಷಟ್ +ಮುಖ = ಷಣ್ಮುಖ

ಸತ್ +ಮಾನ = ಸನ್ಮಾನ

ಅಪ್ +ಮಯ = ಅಮ್ಮಯ (ಜಲಮಯ)

ದಿಕ್ +ನಾಗ = ದಿಙ್ನಾಗ

ಷಟ್ +ಮಾಸ = ಷಣ್ಮಾಸ

ವಾಕ್ +ಮಾಧುರ್ಯ = ವಾಙ್ಮಾಧುರ್ಯ

ಚಿತ್ +ಮಯ = ಚಿನ್ಮಯ

ಚಿತ್ +ಮಾಲ = ಚಿನ್ಮಾಲ

ಶ್ರೀಮಂತ್+ಮಹಾ = ಶ್ರೀಮನ್ಮಹಾ

ಉತ್ +ಮಾದ = ಉನ್ಮಾದ

ತತ್ +ಮಯ = ತನ್ಮಯ

ಸತ್ +ಮಣಿ = ಸನ್ಮಣಿ

## ಸಮಾಸಗಳು

1. **ಅರಸನ** ಮನೆಯಲ್ಲಿ ಸಂಭ್ರಮ ಬಹಳ.
2. **ಹಿರಿದಾದ** ತೊರೆಯು ಹರಿಯುತ್ತಿತ್ತು.
3. **ಕಾಲಿನ** ಬಳೆಗಳನ್ನು ತಂದನು.

ಈ ಮೇಲಿನ ವಾಕ್ಯಗಳಲ್ಲಿ ಗೆರೆ ಹಾಕಿರುವ ಅರಸನ , ಹಿರಿದಾದ , ಕಾಲಿನ ಎಂಬ ಪದಗಳು ಮನೆಯಲ್ಲಿ ತೊರೆಯು ಬಳೆಗಳನ್ನು ಎಂಬ ಪದಗಳು ಅರ್ಥಗಳು ಬೇರೆ ಬೇರೆ ಆಗಿದೆ . ಆದರೆ ಅದೇ ಅರ್ಥವೇ ಬರುವಂತೆ ಅವೆರಡು ಪದಗಳನ್ನು ಒಂದೇ ಪದ ಮಾಡಿ ಹೇಳಬಹುದು.

1) ಅರಮನೆಯಲ್ಲಿ ಸಂಭ್ರಮ ಬಹಳ

2) ಹೆದ್ದೊರೆ ಹರಿಯುತ್ತಿತ್ತು

3) ಕಾಲು ಬಳೆಗಳನ್ನು ತಂದನು.

ಹೀಗೆ ಒಂದೇ ಪದ ಮಾಡಿ ಹೇಳುವುದರಿಂದ ಸ್ವಲ್ಪ ಕಾಲವೂ ಧ್ವನಿಯೂ ಬರೆಯುವ ಶ್ರಮವೂ ಕಡಿಮೆಯಾಯಿತು. ಅರ್ಥವೂ ಕೆಡುವುದಿಲ್ಲ ."ಎರಡು ಅಥವಾ ಆನೇಕ ಪದಗಳು ಅರ್ಥಕ್ಕನುಸಾರವಾಗಿ ಸೇರಿ ಮಧ್ಯದಲ್ಲಿರುವ ವಿಭಕ್ತಿ ಪ್ರತ್ಯಯವನ್ನು ಲೋಪ ಮಾಡಿಕೊಂಡು ಒಂದು ಪದವಾಗುವುದೇ ಸಮಾಸ".
ಸಮಾಸದಲ್ಲಿ ಬರುವ ಮೊದಲನೆಯ ಪದವು ಪೂರ್ವ ಪದವೆಂದೂ ಎರಡನೆಯ ಪದವು ಉತ್ತರ ಪದವೆಂದೂ ಕರೆಯುವರು ಸಮಾಸ ಪದವನ್ನು ಬಿಡಿಸಿ ಬರೆಯುವುದಕ್ಕೆ ವಿಗ್ರಹ ವಾಕ್ಯ ಎನ್ನುವರು .
ಉದಾ:ಪೂರ್ವಪದ + ಉತ್ತರಪದ = ಸಮಾಸ (ಸಮಸ್ತಪದ)

ಉದಾ:- ಪೂರ್ವಪದ + ಉತ್ತರಪದ = ಸಮಾಸ

1) ಮರದ + ಕಾಲು = ಮರಗಾಲು
2) ಚಳಿಯ + ಕಾಲ = ಚಳಿಗಾಲ
3) ಕಾಲಿನ + ಬಳೆ = ಕಾಲುಬೆಳೆ
4) ಹಿರಿದು + ಜೇನು = ಹೆಜ್ಜೇನು
5) ದೊಡ್ಡದಾದ+ ಕಲ್ಲು = ದೊಡ್ಡಕಲ್ಲು
6) ಕೈಯ + ಮುಂದು = ಮುಂಗೈ
7) ಕಾಲಿನ + ಹಿಂದು = ಹಿಂಗಾಲು
8) ಮೂರು + ಕಣ್ಣವುಳ್ಳವನು = ಮುಕ್ಕಣ್ಣ (ಶಿವ)

**ಸಮಾಸಗಳ ವಿಧಗಳು**

ಕನ್ನಡದಲ್ಲಿ ಒಟ್ಟು ಎರಡು ಸಮಾಸಗಳಿವೆ . ಅವು 0ಯಾವುವೆಂದರೆ

1) ತತ್ಪುರುಷ ಸಮಾಸ , 2) ಕರ್ಮಧಾರೆಯ ಸಮಾಸ 3) ದ್ವಿಗು ಸಮಾಸ 4) ಅಂಶಿಸಮಾಸ

5) ದ್ವಂದ್ವ ಸಮಾಸ 6) ಬಹುವ್ರೀಹಿ ಸಮಾಸ 7) ಕ್ರಿಯಾ ಸಮಾಸ 8) ಗಮಕ ಸಮಾಸ .

**1) ತತ್ಪುರುಷ ಸಮಾಸ :** "ಎರಡು ನಾಮಪದಗಳು ಸೇರಿ ಸಮಾಸವಾದಾಗ ಉತ್ತರ ಪದದ ಅರ್ಥ ಪ್ರಧಾನವಾಗಿ ಉಳ್ಳ ಸಮಾಸಕ್ಕೆ ತತ್ಪುರುಷ ಸಮಾಸ" ಎನ್ನುವರು.

ಉದಾ :- ಅರಮನೆ ಎಂಬ ಸಮಾಸ ಪದವನ್ನು ಬಿಡಿಸಿದಾಗ ಅರಸನ + ಮನೆ ಎಂದು ಆಗುವುದು . ಇಲ್ಲಿ ಅರಸನ ಎಂಬ ಪದದ ಅರ್ಥ ಮುಖ್ಯವೊ ? ಮನೆ ಎಂಬ ಪದದ ಅರ್ಥ ಮುಖ್ಯವೊ ? ಎಂದರೆ ಮನೆ ಎಂಬ ಪದದ ಅರ್ಥವೇ ಮುಖ್ಯ . ಯಾರ ಮನೆ ? ಎಂಬ ಪ್ರಶ್ನೆಗೆ ಅರಸನ ಸಂಬಂಧವಾದ ಮನೆ ಎಂದು ಗೊತ್ತಾಗುವುದು ಆದುದರಿಂದ ಮನೆ ಎಂಬ ಉತ್ತರ ಪದವೇ ಮುಖ್ಯ.

ಹಗಲಿನಲ್ಲಿ + ಕನಸು = ಹಗಲುಗನಸು (ಸಪ್ತಮೀ ತತ್ಪುರುಷ )
ಬೆಟ್ಟದ + ತಾವರೆ = ಬೆಟ್ಟದಾವರೆ (ಷಷ್ಠೀ ತತ್ಪುರುಷ )
ವಯಸ್ಸಿನಿಂದ + ವೃದ್ಧ = ವಯೋವೃದ್ಧ (ತೃತೀಯಾ ತತ್ಪುರುಷ )

ಕೊಟ್ಟಿರುವ ಪದಗಳನ್ನು ಗಮನಿಸಿದಾಗ ಎರಡೆರಡು ಪದಗಳು ಸೇರಿ ಒಂದು ಪದವಾಗಿರುವುದನ್ನು ಪೂರ್ವ ಪದದ ಅಂತ್ಯದಲ್ಲಿ ವಿಭಕ್ತಿ ಪ್ರತ್ಯ0ಯವಿದ್ದು, ಸಮಾಸವಾಗುವಾಗ ಆ ಪ್ರತ್ಯ0ಯಗಳು ಲೋಪವಾಗಿರುವುದು ಕಂಡು 0ಯಾವ ವಿಭಕ್ತಿ ಪ್ರತ್ಯ0ಯ ಲೋಪವಾಗಿದೆಯೋ ಅದರ ಆಧಾರದಿಂದ ಸಮಾಸವನ್ನು ಹೆಸರಿಸುವರು.

ದೈವದ + ಭಕ್ತಿ = ದೈವಭಕ್ತಿ – ತತ್ಪುರುಷ ಸಮಾಸ
ಪರರ + ಧನ = ಪರಧನ – ತತ್ಪುರುಷ ಸಮಾಸ
ಪೂವಿನ + ತೋಟ = ಪೂದೋಟ – ತತ್ಪುರುಷ ಸಮಾಸ
ಕಾಲಿನ + ಬಳೆ = ಕಾಲುಬಳೆ – ತತ್ಪುರುಷ ಸಮಾಸ
ಧನದ + ಹರಣ = ಧನಹರಣ – ತತ್ಪುರುಷ ಸಮಾಸ
ಸ್ವಾಮಿಗೆ + ದ್ರೋಹ = ಸ್ವಾಮಿದ್ರೋಹ – ತತ್ಪುರುಷ ಸಮಾಸ

| | | | | | | |
|---|---|---|---|---|---|---|
| ಮರದ | + | ಕಾಲು | = | ಮರಗಾಲು | – | ತತ್ಪುರುಷ ಸಮಾಸ |
| ಕಲ್ಲಿನ | + | ಹಾಸಿಗೆ | = | ಕಲ್ಲುಹಾಸಿಗೆ | – | ತತ್ಪುರುಷ ಸಮಾಸ |
| ಕಣ್ಣಿನಿಂದ | + | ಕುರುಡ | = | ಕಣ್ಣುಕುರುಡು | – | ತತ್ಪುರುಷ ಸಮಾಸ |
| ತೇರಿಗೆ | + | ಮರ | = | ತೇರು ಮರ | – | ತತ್ಪುರುಷ ಸಮಾಸ |
| ಕವಿಗಳಿಂದ | + | ವಂದಿತ | = | ಕವಿವಂದಿತ | – | ತತ್ಪುರುಷ ಸಮಾಸ |
| ವ್ಯಾಘ್ರದೆಸೆಯಿಂದ | + | ಭಯ | = | ವ್ಯಾಘ್ರಭಯ | – | ತತ್ಪುರುಷ ಸಮಾಸ |
| ದೇವರ | + | ಮಂದಿರ | = | ದೇವಮಂದಿರ | – | ತತ್ಪುರುಷ ಸಮಾಸ |

**2) ಕರ್ಮಧಾರೆಯ ಸಮಾಸ**

"ಪೂರ್ವೋತ್ತರ ಪದಗಳು ಲಿಂಗ ವಚನ, ವಿಭಕ್ತಿಗಳಿಂದ ಸಮಾಸವಾಗಿದ್ದು, ವಿಶೇಷಣ ವಿಶೇಷ್ಯ ಸಂಬಂಧದಿಂದ ಕೂಡಿ ಆಗುವ ಸಮಾಸಕ್ಕೆ ಕರ್ಮಧಾರೆಯ ಸಮಾಸ ಎನ್ನುವರು".

ಉದಾ :– ದೊಡ್ಡವನು + ಹುಡುಗನು = ದೊಡ್ಡಹುಡುಗನು
ದೊಡ್ಡವಳು + ಹೆಂಗಸು = ದೊಡ್ಡಹೆಂಗಸು
ಹಿರಿಯರು + ಮಕ್ಕಳು = ಹಿರಿಯಮಕ್ಕಳು
ಚಿಕ್ಕವರಿಂದ + ಮಕ್ಕಳಿಂದ = ಚಿಕ್ಕಮಕ್ಕಳಿಂದ

ಮೇಲಿನ ಈ ಉದಾಹರಣೆಗಳನ್ನು ನೋಡಿದರೆ–ದೊಡ್ಡವನು, ದೊಡ್ಡವಳು,ಹಿರಿಯರು,ಚಿಕ್ಕವರು ಇತ್ಯಾದಿ ಪದಗಳನ್ನು ಕ್ರಮವಾಗಿ ಹುಡುಗನು,ಹೆಂಗಸು,ಮಕ್ಕಳು,ಮಕ್ಕಳಿಂದ ಎಂಬ ಪದಗಳಿಗೆ ವಿಶೇಷಣಗಳಾಗಿವೆ. ನಾಲ್ಕು ಕಡೆಯಲ್ಲೂ ವಿಭಕ್ತಿಗಳು ಸಮನಾಗಿದೆ. ಅಂದರೆ ದೊಡ್ಡವರು ಎಂಬುದು ಪ್ರಥಮ ವಿಭಕ್ತಿಯಾದರೆ ಹುಡುಗನು ಎಂಬುದು ಪ್ರಥಮ ವಿಭಕ್ತಿಯಾಗಿದೆ. ಚಿಕ್ಕವರಿಂದ ಎಂಬುದು ತೃತೀಯ ವಿಭಕ್ತಿಯಾದರೆ ಮಕ್ಕಳಿಂದ ಎಂಬುದೂ ತೃತೀಯ ವಿಭಕ್ತಿಯೇ ಆಗಿದೆ ವಚನಗಳು ಸಮಾನವಾಗಿಯೇ ಇವೆ . ಅಲ್ಲದೆ ಲಿಂಗಗಳು ಸಮವಾಗಿವೆ. ಅಂದರೆ ಪೋರ್ವೋತ್ತರ ಪದಗಳು ಲಿಂಗ,ವಚನ,ವಿಭಕ್ತಿಗಳಿಂದ ಸಮಾನಾಗಿರುತ್ತದೆ ಎಂದರ್ಥ.

| | | | | | | |
|---|---|---|---|---|---|---|
| ಹಿರಿದು | + | ಜೇನು | = | ಹೆಜ್ಜೇನು | – | ಕರ್ಮಧಾರೆಯ ಸಮಾಸ |
| ಹಳೆಯದು | + | ಕನ್ನಡ | = | ಹಳಗನ್ನಡ | – | ಕರ್ಮಧಾರೆಯ ಸಮಾಸ |
| ಹಿರಿದು | + | ಮರ | = | ಹೆಮ್ಮರ | – | ಕರ್ಮಧಾರೆಯ ಸಮಾಸ |
| ಇನಿದು | + | ಸರ | = | ಇಂಚರ | – | ಕರ್ಮಧಾರೆಯ ಸಮಾಸ |
| ಹಿರಿದು | + | ಬಾಗಿಲು | = | ಹೆಬ್ಬಾಗಿಲು | – | ಕರ್ಮಧಾರೆಯ ಸಮಾಸ |
| ಚಿಕ್ಕದು | + | ಮಗು | = | ಚಿಕ್ಕಮಗು | – | ಕರ್ಮಧಾರೆಯ ಸಮಾಸ |
| ಮೆಲ್ಲಿತು | + | ಮಾತು | = | ಮೆಲ್ವಾತು | – | ಕರ್ಮಧಾರೆಯ ಸಮಾಸ |
| ಬಿಳಿದು | + | ಕೊಡೆ | = | ಬೆಳ್ಗೊಡೆ | – | ಕರ್ಮಧಾರೆಯ ಸಮಾಸ |
| ಶ್ವೇತವಾದ | + | ವಸ್ತ್ರ | = | ಶ್ವೇತವಸ್ತ್ರ | – | ಕರ್ಮಧಾರೆಯ ಸಮಾಸ |
| ನೀಲವಾದ | + | ಸಮುದ್ರ | = | ನೀಲಸಮುದ್ರ | – | ಕರ್ಮಧಾರೆಯ ಸಮಾಸ |
| ಪೀತವಾದ | + | ಅಂಬರ | = | ಪೀತಾಂಬರ | – | ಕರ್ಮಧಾರೆಯ ಸಮಾಸ |
| ದಿವ್ಯವಾದ | + | ಪ್ರಕಾಶ | = | ದಿವ್ಯಪ್ರಕಾಶ | – | ಕರ್ಮಧಾರೆಯ ಸಮಾಸ |

**3) ದ್ವಿಗು ಸಮಾಸ**

"ಪೂರ್ವಪದವು ಸಂಖ್ಯಾವಾಚಕಗಳಾಗಿದ್ದು ಉತ್ತರ ಪದ ನಾಮಪದದಲ್ಲಿರುವ ನಾಮಪದದೊಡನೆ ಸೇರಿ ಆಗುವ ಸಮಾಸವೇ ' ದ್ವಿಗು ಸಮಾಸ' ಎಂದು ಹೆಸರು.

| | | | | |
|---|---|---|---|---|
| ಒಂದು | + | ಕಟ್ಟು | = | ಒಗ್ಗಟ್ಟು |
| ಎರಡು | + | ಮಡಿ | = | ಇಮ್ಮಡಿ |
| ಮೂರು | + | ಮಡಿ | = | ಮುಮ್ಮಡಿ |

ಈ ಮೂರು ಸಮಾಸಗಳಲ್ಲಿ ಪೂರ್ವಪದ ಸಂಖ್ಯಾವಾಚಕಗಳಾಗಿದ್ದು, ಉತ್ತರಪದ ನಾಮಪದದಿಂದ ಕೂಡಿವೆ

.

| | | | | |
|---|---|---|---|---|
| ಮೂರು | + | ಕಣ್ಣು | = | ಮುಕ್ಕಣ್ಣು |
| ಸಪ್ತಗಳಾದ | + | ಸ್ವರಗಳು | = | ಸಪ್ತಸ್ವರಗಳು |
| ಮೂರು | + | ಗಾವುದು | = | ಮುಗಾವುದ |
| ಒಂದು | + | ಏಟು | = | ಒಂದೇಟು |
| ನಾಲ್ಕು | + | ಮಡಿ | = | ನಾಲ್ವಡಿ |
| ಐದು | + | ಮಡಿ | = | ಐವಡಿ(ಐದುಮಡಿ) |
| ಎರಡು | + | ಬಾಳ್ | = | ಇರ್ಬಾಳ್ (ಇರ್ತೆರ) |
| ಎರಡು | + | ಮಾತು | = | ಎರಳ್ಮಾತು |
| ಒಂದು | + | ಕಣ್ಣು | = | ಒಕ್ಕಣ್ಣು |
| ಪಂಚಗಳಾದ | + | ಇಂದ್ರೀಯಗಳು | = | ಪಂಚೇಂದ್ರೀಯಗಳು |
| ಸಪ್ತಗಳಾದ | + | ಅಂಗಗಳು | = | ಸಪ್ತಾಂಗಳು |
| ದಶಗಳಾದ | + | ಮುಖಗಳು | = | ದಶಮುಖಗಳು |
| ತ್ರಿ ಆದ | + | ನೇತ್ರಗಳು | = | ತ್ರೀನೇತ್ರಗಳು |
| ಏಕವಾದ | + | ಅಂಗ | = | ಏಕಾಂಗ |
| ಎರಡು | + | ತೆರೆ | = | ಎರಳ್ತೆರ(ಇರ್ತೆರ) |
| ದ್ವಿಆದ | + | ಶಿರ | = | ದ್ವಿಶಿರ |

ಸಪ್ತಸಾಗರಗಳು, ಅಷ್ಟದಶಪುರಾಣಗಳು, ಸಪ್ತಲೋಕಗಳು, ದಶವಾಯುಗಳು, ಪಂಚವಟಗಳು

**4) ಅಂಶಿ ಸಮಾಸ**

"ಪೂರ್ವೋತ್ತರ ಪದಗಳು ಅಂಶಾಂಶಿಭಾವ ಸಂಬಂಧದಿಂದ ಸೇರಿ ಪೂರ್ವ ಪದದ ಅರ್ಥ ಪ್ರಧಾನವುಳ್ಳ ಸಮಾಸಕ್ಕೆ ಅಂಶಿ ಸಮಾಸ" ಎನ್ನುವರು(ಪೂರ್ವಪದವು ಅಂಶವಾಚಕವಾಗಿಯೂ ಉತ್ತರ ಪದವು ಅಂಶಿವಾಚಕವಾಗಿಯೂ ಇರುತ್ತದೆ .

ಅಂಗೈ , ಮುಂಗೈ = ಈ ಸಮಾಸಗಳನ್ನು ಕೈಯ + ಅಡಿ

ಕೈಯ + ಮುಂದು ಎಂದು ವಿಗ್ರಹಿಸಿ ಹೇಳಬಹುದು .ಈ ಎರಡು ಪದಗಳಲ್ಲಿ ಒಂದು ಕೈ ಎಂಬ ಪದವೂ ಇನ್ನೊಂದು ಅದರ (ಕೈಯ) ಒಂದು ಅಂಶವನ್ನು ಹೇಳುವ ಅಡಿ ಎಂಬ ಪದವೂ ಇವೆ. ಕೈ ಎಂಬುದು ಅನೇಕ ಅಂಶಗಳನ್ನೊಳಗೊಂಡ ಅಂಶಿ. ಅಂಶ ಹೀಗೆ ಒಂದು ಅಂಶಿ ಒಂದು ಅಂಶ ಇವುಗಳನ್ನೊಳಗೊಂಡು ಸಮಾಸವಾಗುವುದೇ ಅಂಶಿ ಸಮಾಸ.

| | | | | | | |
|---|---|---|---|---|---|---|
| ಕಾಲ | + | ಅಡಿ | = | ಅಂಗಾಲು | = | ಅಂಶಿಸಮಾಸ |
| ಮೂಗಿನ | + | ತುದಿ | = | ತುದಿಮೂಗು | = | ಅಂಶಿಸಮಾಸ |
| ರಾತ್ರಿಯ | + | ನಡು | = | ನಡುರಾತ್ರಿ | = | ಅಂಶಿಸಮಾಸ |
| ಮನೆಯ | + | ನಡು | = | ನಡುಮನೆ | = | ಅಂಶಿಸಮಾಸ |
| ತಲೆಯ | + | ಹಿಂದೆ | = | ಹಿಂದಲೆ | = | ಅಂಶಿಸಮಾಸ |

| | | | | | | | | |
|---|---|---|---|---|---|---|---|---|
| ಕಣ್ಣಿನ | + | ಕಡೆ | = | ಕಡೆಗಣ್ಣು | = | ಅಂಶಿಸಮಾಸ | | |
| ಕೈಯ | + | ಮುಂದೆ | = | ಮುಂಗೈ | = | ಅಂಶಿಸಮಾಸ | | |
| ಅಡವಿಯ | + | ನಡುವೆ | = | ನಟ್ಟಡುವೆ | = | ಅಂಶಿಸಮಾಸ | | |
| ಕಾಲು | + | ಮೇಲು | = | ಮೇಂಗಾಲ್ | = | ಅಂಶಿಸಮಾಸ | | |
| ಕಾಲ | + | ಮುಂದು | = | ಮುಂಗಾಲು | = | ಅಂಶಿಸಮಾಸ | | |
| ತಲೆಯ | + | ಹಿಂದು | = | ಹಿಂದಲೆ | = | ಅಂಶಿಸಮಾಸ | | |
| ತಲೆಯ | + | ಮುಂದು | = | ಮುಂದಲೆ | = | ಅಂಶಿಸಮಾಸ | | |
| ಹುಬ್ಬಿನ | + | ಕೊನೆ | = | ಕೊನೆಹುಬ್ಬು | = | ಅಂಶಿಸಮಾಸ | | |
| ಹುಬ್ಬಿನ | + | ಕರಡಿ | = | ಕುಡಿಹುಬ್ಬು | = | ಅಂಶಿಸಮಾಸ | | |
| ಕಣ್ಣಿನ | + | ಕಡೆ | = | ಕಡೆಗಣ್ಣು | = | ಅಂಶಿಸಮಾಸ | | |
| ಮೈಯ | + | ಹೊರೆಗೆ | = | ಹೊರಮೈ | = | ಅಂಶಿಸಮಾಸ | | |
| ಮೈಯ | + | ಒಳಗೆ | = | ಒಳಮೈ | = | ಅಂಶಿಸಮಾಸ | | |
| ತುಟಿಯ | + | ಕೆಳಗು | = | ಕೆಳದುಟಿ | = | ಅಂಶಿಸಮಾಸ | | |
| ಕೆರೆಯ | + | ಕೆಳಗು | = | ಕೆಳಗೆರೆ (ಕಿಳ್ಗೆರೆ – ಹಳಗನ್ನಡ) ಅಂಶಿಸಮಾಸ | | | | |

**5) ದ್ವಂದ್ವ ಸಮಾಸ**

"ಎರಡು ಅಥವಾ ಅನೇಕ ನಾಮಪದಗಳು ಸಹಯೋಗ ತೋರುವಂತೆ ಸಮಾಸವಾಗುವಾಗ ಎಲ್ಲ ಪದಗಳ ಅರ್ಥವೂ ಪ್ರಧಾನವಾಗಿ ಇರುವ ಸಮಾಸಕ್ಕೆ ದ್ವಂದ್ವ ಸಮಾಸ ಎನ್ನುವರು"

ಉದಾ :– ಕೆರೆಯೂ + ಕಟ್ಟೆಯೂ + ಬಾವಿಯೂ = ಕೆರೆಕಟ್ಟೆ ಬಾವಿಗಳು

ಗಿಡವೂ + ಮರವೂ + ಬಳ್ಳಿಯೂ = ಗಿಡಮರಬಳ್ಳಿಗಳು

ಗುಡುಗು + ಮಿಂಚು + ಸಿಡಿಲು + ಗುಡುಗುಮಿಂಚುಸಿಡಿಲುಗಳು

ಈ ಉದಾಹರಣೆಗಳನ್ನು ಗಮನಿಸಿದಾಗ ಬೇರೆ ಸಮಾಸಗಳಲ್ಲಿದ್ದಂತೆ ಪೂರ್ವಪದ ಉತ್ತರ ಪದ ಎಂಬ ವಿಭಾಗಗಳು ಇಲ್ಲವೆಂಬುದು ಗೋಚರವಾಗುತ್ತದೆ. ಅಲ್ಲದೆ ಅರ್ಥ ಪ್ರಾಧಾನ್ಯದಲ್ಲೂ ಒಂದೇ ಪದಕ್ಕೆ ಅಂದರೆ ಪೂರ್ವ ಪದ ಅಥವಾ ಉತ್ತರ ಪದಕ್ಕೆ ಸೀಮಿತವಾಗಿಲ್ಲದೆ ಎಲ್ಲ ಪದಗಳ ಅರ್ಥ ಪ್ರಧಾನವಾಗಿರುತ್ತದೆ.

ಸೂರ್ಯನೂ + ಚಂದ್ರನೂ = ಸೂರ್ಯಚಂದ್ರರು = ದ್ವಂದ್ವ ಸಮಾಸ

ಗಿರಿಗಳೂ + ವನಗಳೂ + ದುರ್ಗಗಳೂ = ಗಿರಿವನದುರ್ಗಗಳು = ದ್ವಂದ್ವ ಸಮಾಸ

ಕರಿಯೂ + ತುರಗವೂ + ರಥವೂ = ಕರಿತುರಗರಥ

ಹನುಮನೂ + ಭೀಮನೂ + ರಾಮನೂ = ಹನುಮಭೀಮರಾಮ

ಪಾರ್ಥನೂ + ಭೀಮನೂ = ಪಾರ್ಥಭೀಮರು

ಮಾದ್ರರೂ + ಮಾಗದರೂ + 0ಯಾದವರು = ಮಾದ್ರಮಾಗಧಯಾದವರು

ಆನೆಯೂ + ಕುದುರೆಯೂ + ಒಂಟೆಯೂ = ಆನೆಕುದುರೆಒಂಟೆಗಳು

ಸೂ0ರ್ಯನೂ + ಚಂದ್ರನೂ + ನಕ್ಷತ್ರವೂ = ಸೂ0ರ್ಯಚಂದ್ರನಕ್ಷತ್ರಗಳು

**6) ಬಹುವ್ರೀಹಿ ಸಮಾಸ**

"ಎರಡು ಅಥವಾ ಅನೇಕ ನಾಮಪದಗಳು ಸೇರಿ ಸಮಾಸವಾದಾಗ ಬೇರೊಂದು ಪದದ (ಅನ್ಯಪದದ) ಅರ್ಥವು ಪ್ರಧಾನವಾಗಿ ಉಳ್ಳ ಸಮಾಸಕ್ಕೆ ಬಹುವ್ರೀಹಿ ಸಮಾಸ ಎನ್ನುವರು".

ಮೂರು + ಕಣ್ಣು ಉಳ್ಳವನು = ಮುಕ್ಕಣ್ಣ (ಶಿವ)

ಹಣೆಯಲ್ಲಿ + ಕಣ್ಣು ಉಳ್ಳವನು = ಹಣೆಗಣ್ಣ (ಶಿವ)

ಈ ಪದಗಳಲ್ಲಿ ಪೂರ್ವ ಪದದ ಅರ್ಥವಾಗಲೀ ಉತ್ತರ ಪದದ ಅರ್ಥವಾಗಲೀ ಪ್ರಧಾನವಾಗಿಲ್ಲದೆ ಬೇರೊಂದು ಪದವಾದ ಶಿವ ಪದದ ಅರ್ಥವೇ ಪ್ರಧಾನವಾಗಿದೆ.

| | | | | |
|---|---|---|---|---|
| ನಾಲ್ಕು | + | ಮೊಗವುಳ್ಳವನು | = | ನಾಲ್ಮೊಗ (ಬ್ರಹ್ಮ) |
| ಕೆಂಪು | + | ಕಣ್ಣುವುಳ್ಳವನು | = | ಕೆಂಗಣ್ಣ (ಶಿವ) |
| ಡೊಂಕು | + | ಕಾಲು ಉಳ್ಳವನು | = | ಡೊಂಕುಗಾಲ (ಶಕುನಿ) |
| ಚಕ್ರವು | + | ಪಾಣಿಯಲ್ಲಿ ಉಳ್ಳವ | = | ಚಕ್ರಪಾಣಿ (ವಿಷ್ಣು) |
| ಅಬ್ಜವು | + | ಉದರದಲ್ಲಿ ಉಳ್ಳವ | = | ಅಬ್ಜೋದರ (ವಿಷ್ಣು) |
| ಅಂತಕನ | + | ಆತ್ಮಜ ಯಾವನೋ ಅವನು | = | ಅಂತಕನಾತ್ಮಜ(ಧರ್ಮರಾಜ) |
| ದಿನಪನ | + | ಸುತನು ಯಾವನೋಅವನು | = | ದಿನಪಸುತ (ಕರ್ಣ) |
| ಅಬ್ಧಿಯನ್ನು | + | ಪಾಲಿಸುವವನು | = | ಅಬ್ಧಿಪ (ವರುಣ) |
| ಘಟದಲ್ಲಿ | + | ಸಂಭೂತ ಆದವನುಯಾರೋ | = | ಘಟಸಂಭೂತ (ದ್ರೋಣ) |
| ಇನನ | + | ತನೂಜ ಯಾವನೋ | = | ಇನತನೂಜ (ಕರ್ಣ) |
| ದನುಜನ | + | ರೀಪು ಯಾವನೋ | = | ದನುಜರಿಪು (ಕೃಷ್ಣ) |
| ಮುರನನ್ನು | + | ಅರಿದವನು ಯಾವನೋ | = | ಮುರಾರಿ (ಕೃಷ್ಣ) |
| ರಾಜೀವನ | + | ಸಖ ಯಾವನೋ | = | ರಾಜೀವಸಖ(ರವಿ) |
| ರವಿ೧ು | + | ಸುತ | = | ರವಿಸುತ (ಕರ್ಣ) |
| ಭೂಮಿಯ | + | ಜಾತೆ ಯಾವಳೋ | = | ಭೂಮಿಜಾತೆ (ಸೀತೆ) |
| ಮಹೀಯ(ಗೆ) | + | ಪತಿ ಯಾವನೋ | = | ಮಹೀಪತಿ (ರಾಜ) |
| ಶಿತಿಯ | + | ಕಂಠ ಉಳ್ಳವನು | = | ಶಿತಿಕಂಠ (ಶಿವ) |

ಗಾಂಡೀವಿ, ಪದವನಂದನ, ಮಂದಾಂಧ, ಮೇಧಿನಿಪತಿ, ನಾಣಿಲಿ, ಪದ್ಮನಾಭ, ಉರಗಪತಾಕ , ಸಿಂಹಕೇತನ, ಕಮಲಮುಖಿ.

**7) ಕ್ರಿಯಾ ಸಮಾಸ**

"ಪೂರ್ವಪದವು ಪ್ರಾಯಶಃ ದ್ವಿತೀಯಾಂತವಾಗಿದ್ದು ಉತ್ತರ ಪದದಲ್ಲಿರುವ ಕ್ರಿ೧ಯೆ೧ಯೊಡನೆ ಸೇರಿ ಆಗುವ ಸಮಾಸವನ್ನು ಕ್ರಿಯಾ ಸಮಾಸ" ಎನ್ನುವರು. ಪ್ರಾ೧ಯಶಃ ಎಂದು ಸೂತ್ರದಲ್ಲಿ ಹೇಳಿರುವುದರಿಂದ ಬೇರೆ ವಿಭಕ್ತಿಗಳು ಬರುತ್ತವೆಂದು ತಿಳಿಯಬೇಕು.

| | | | | | | |
|---|---|---|---|---|---|---|
| ಮೈಯನ್ನು | + | ತಡವಿ | = | ಮೈದಡವಿ | = | ಕ್ರಿಯಾಸಮಾಸ |
| ಕೈಯನ್ನು | + | ಮುಟ್ಟಿ | = | ಕೈಮುಟ್ಟಿ | = | ಕ್ರಿಯಾಸಮಾಸ |
| ಕಣ್ಣನ್ನು | + | ಮುಚ್ಚಿ | = | ಕಣ್ಣುಮುಚ್ಚಿ | = | ಕ್ರಿಯಾಸಮಾಸ |
| ತಲೆಯನ್ನು | + | ಕೊಡವಿ | = | ತಲೆಗೊಡವಿ | = | ಕ್ರಿಯಾಸಮಾಸ |
| ಮೈಯನ್ನು | + | ಮುಚ್ಚಿ | = | ಮೈಮುಚ್ಚಿ | = | ಕ್ರಿಯಾಸಮಾಸ |
| ತಲೆಯನ್ನು | + | ತೆಗೆದನು | = | ತಲೆದೆಗೆದನು | = | ಕ್ರಿಯಾಸಮಾಸ |
| ಕಣ್ಣನ್ನು | + | ತೆರೆದನು | = | ಕಣ್ಣು ತೆರೆದನು | = | ಕ್ರಿಯಾಸಮಾಸ |
| ಕಣ್ಣಂ | + | ತೆರೆ | = | ಕಣ್ದೆರೆ | = | ಕ್ರಿಯಾಸಮಾಸ |
| ಕೈಯನ್ನು | + | ಪಿಡಿದು | = | ಕೈವಿಡಿದು | = | ಕ್ರಿಯಾಸಮಾಸ |
| ಮಣೆಯನ್ನು | + | ಇತ್ತು | = | ಮಣೆಯಿತ್ತು | = | ಕ್ರಿಯಾಸಮಾಸ |
| ಬಟ್ಟೆಯನ್ನು | + | ತೋರು | = | ಬಟ್ಟೆದೋರು | = | ಕ್ರಿಯಾಸಮಾಸ |
| ಕೈಯನ್ನು | + | ಕೊಟ್ಟನು | = | ಕೈಕೊಟ್ಟನು | = | ಕ್ರಿಯಾಸಮಾಸ |

| | | | | | | | |
|---|---|---|---|---|---|---|---|
| ದಾರಿಯನ್ನು | + | ಕಾಣನು | = | ದಾರಿಗಾಣನು | = | ಕ್ರಿಯಾಸಮಾಸ |
| ನೀರಿನಿಂದ | + | ಕೂಡಿ | = | ನೀರ್ಗೂಡಿ | = | ಕ್ರಿಯಾಸಮಾಸ |
| ಕೈಯಂ | + | ತೊಳೆದು | = | ಕೈದೊಳೆದು | = | ಕ್ರಿಯಾಸಮಾಸ |
| ಕಾವ್ಯವನ್ನು | + | ಬರೆದನು | = | ಕಾವ್ಯ ಬರೆದನು | = | ಕ್ರಿಯಾಸಮಾಸ |
| ಮೈಯನ್ನು | + | ಮುಚ್ಚು | = | ಮೈಮುಚ್ಚು | = | ಕ್ರಿಯಾಸಮಾಸ |
| ಕೈಯಂ | + | ಕೊಳ್ವದು | = | ಕೈಗೊಳ್ವದು | = | ಕ್ರಿಯಾಸಮಾಸ |
| ಸಾಕ್ಷಿಯಂ | + | ಮಾಡಿ | = | ಸಾಕ್ಷಿಮಾಡಿ | = | ಕ್ರಿಯಾಸಮಾಸ |
| ಬಲದಿಂದ | + | ಬಂದು | = | ಬಲವಂದು | = | ಕ್ರಿಯಾಸಮಾಸ |
| ಮೋಸವನ್ನು | + | ಮಾಡು | = | ಮೋಸಮಾಡು | = | ಕ್ರಿಯಾಸಮಾಸ |
| ಕೈಯನ್ನು | + | ಅನು | = | ಕೈಯೂನು | = | ಕ್ರಿಯಾಸಮಾಸ |
| ಕಳ್ಳಂ | + | ಕುಡಿದು | = | ಕಳ್ಗುಡಿದು | = | ಕ್ರಿಯಾಸಮಾಸ |
| ಸೊಲ್ಲಂ | + | ಕೇಳಿ | = | ಸೊಲ್ಗೇಳಿ | = | ಕ್ರಿಯಾಸಮಾಸ |
| ಬಿಲ್ಲನ್ನು | + | ಕೊಂಡು | = | ಬಿಲ್ಗೊಂಡು | = | ಕ್ರಿಯಾಸಮಾಸ |
| ಬಿಲ್ಲರುವಂ | + | ಏರಿಸಿ | = | ಬಿಲ್ದಿರುವನೇರಿಸಿ | = | ಕ್ರಿಯಾಸಮಾಸ |
| ಹೊಗೆಯನ್ನು | + | ತೋರು | = | ಹೊಗೆದೋರು | = | ಕ್ರಿಯಾಸಮಾಸ |
| ಧನವನ್ನು | + | ಹರಣ | = | ಧನಹರಣ | = | ಕ್ರಿಯಾಸಮಾಸ |
| ಕಣ್ಣಂ | + | ಕೆಡು | = | ಕಂಗೆಡು | = | ಕ್ರಿಯಾಸಮಾಸ |
| ಮೈಯನ್ನು | + | ಮುರಿ | = | ಮೈಮುರಿ | = | ಕ್ರಿಯಾಸಮಾಸ |

**8) ಗಮಕ ಸಮಾಸ**

"ಪೂರ್ವಪದವು ಸರ್ವನಾಮ ಅಥವಾ ಕೃದಂತಗಳಲ್ಲಿ ಒಂದಾಗಿದ್ದು ಉತ್ತರದಲ್ಲರುವ ನಾಮಪದದೊಡನೆ ಕೂಡಿ ಆಗುವ ಸಮಾಸವೇ ಗಮಕಸಮಾಸ."

ಈ ಸಮಾಸದಲ್ಲಿ ಅರಿಸಮಾಸ ದೋಷವನ್ನು ಎಣಿಸಕೂಡದು .

| | | | | |
|---|---|---|---|---|
| ಅವನು | + | ಹುಡುಗ | = | ಆ ಹುಡುಗ |
| ನೇಯ್ದುದು | + | ವಸ್ತ್ರ | = | ನೇಯ್ದವಸ್ತ್ರ |
| ಮಾಡಿದುದು | + | ಅಡಿಗೆ | = | ಮಾಡಿದಡಿಗೆ |
| ಇದು | + | ಬೆಕ್ಕು | = | ಈ ಬೆಕ್ಕು |
| ಅದು | + | ಕಲ್ಲು | = | ಆ ಕಲ್ಲು |
| ಅವಳು | + | ಹೆಂಗಸು | = | ಆ ಹೆಂಗಸು |
| ಇವಳು | + | ಮುದುಕಿ | = | ಈ ಮುದುಕಿ |
| ಇದು | + | ನಾಯಿ | = | ಈ ನಾಯಿ |
| ತಿಂದುದು | + | ಕೂಳು | = | ತಿಂದಕೂಳು |
| ಅರಳುವುದು | + | ಮೊಗ್ಗು | = | ಅರಳುಮೊಗ್ಗು |
| ಸೊಕ್ಕಿದುದು | + | ಆನೆ | = | ಸೊಕ್ಕಾನೆ |
| ಕಡೆಯುವುದು | + | ಕೋಲು | = | ಕಡೆಗೋಲು |
| ಬೆಂದುದು | + | ಅಡಿಗೆ | = | ಬೆಂದಡಿಗೆ |
| ಆರಿದುದು | + | ಅಡಿಗೆ | = | ಆರಿದಡಿಗೆ |
| ಸಿಡಿಯುವುದು | + | ಮದ್ದು | = | ಸಿಡಿಮದ್ದು |

| | | | | |
|---|---|---|---|---|
| ಅವನು | + | ಮನುಷ್ಯ | = | ಆ ಮನುಷ್ಯ |
| ಮಾಡಿದುದು | + | ಕಾರ್ಯ | = | ಮಾಡಿದ ಕಾರ್ಯ |
| ಪೂಸಿದು | + | ಭಸ್ಮ | = | ಪೂಸಿಭಸ್ಮ |
| ತೆಯ್ದುದು | + | ಶ್ರೀಗಂಧ | = | ತೇಯ್ದಶ್ರೀಗಂಧ |
| ಕಂಡುದು | + | ವಿಚಾರ | = | ಕಂಡವಿಚಾರ |

## ವಾಕ್ಯಗಳು

ನಾವು ನಮ್ಮ ಮನಸ್ಸಿನ ಅಭಿಪ್ರಾಯಗಳನ್ನು ಇತರರಿಗೆ ಮಾತುಗಳ ಮೂಲಕ ತಿಳಿಯ ಪಡಿಸುತ್ತೇವೆ. ಅಥವಾ ಬರವಣಿಗೆಯಿಂದ ತಿಳಿಯಪಡಿಸುತ್ತೇವೆ. 1) ಮಗುವು ಓಡಿತು 2)ದೇವರು ಲೋಕವನ್ನು ಕಾಪಾಡುವನು 3)ಭೀಮನಿಂದ ಬಕಾಸುರನು ಕೊಲ್ಲಲ್ಪಟ್ಟನು

ಹೀಗೆ ಮೇಲೆ ಹೇಳಿರುವ ವಾಕ್ಯಗಳೆಲ್ಲ ಒಂದು ಪೂರ್ಣಾರ್ಥವನ್ನು ಕೊಡತಕ್ಕವುಗಳೇ. ಈ ವಾಕ್ಯಗಳಲ್ಲಿ ಒಂದೊಂದು ಪದವು ಇಲ್ಲದಿದ್ದರೂ ಅರ್ಥವು ಪೂರ್ಣವಾಗದೆ ಪುನಃ ಪ್ರಶ್ನೆ ಮಾಡ ಬೇಕಾಗುತ್ತದೆ. ಅಂದರೆ ಕರ್ತೃ, ಕರ್ಮ ಕ್ರಿಯಾಪದಗಳಿಂದ ಕೂಡಿದ ಪದ ಸಮೂಹವೇ ವಾಕ್ಯವಾಗುತ್ತದೆ. ಆದರೆ ಕೆಲವು ವಾಕ್ಯಗಳಲ್ಲಿ ಕರ್ಮಪದದ ಅವಶ್ಯಕತೆ ಇರುವುದಿಲ್ಲ. ಏಕೆಂದರೆ ಕ್ರಿಯಾಪದವೇ ಕರ್ಮಪದವನ್ನು ಆಪೇಕ್ಷಿಸುವುದಿಲ್ಲ, ಮಗು ಓಡಿತು, ಎಂಬಲ್ಲಿ ಕರ್ಮಪದದ ಅವಶ್ಯಕತೆ ಇರುವುದಿಲ್ಲ. ಏಕೆಂದರೆ ಕ್ರಿಯಾಪದವೇ ಕರ್ಮವನ್ನು ಅಪೇಕ್ಷಿಸುವುದಿಲ್ಲ. 'ಮಗು ಓಡಿತು' ಎಂಬಲ್ಲಿ ಕರ್ಮಪದದ ಅವಶ್ಯಕತೆ ಇಲ್ಲ

"ಕರ್ತೃಪದ, ಕರ್ಮಪದ, ಕ್ರಿಯಾಪದಗಳಿಂದ ಅವುಗಳ ವಿಶೇಷಣಗಳಿಂದ ಕ್ರಮವಾಗಿ ಬರೆದ ಪದ ಸಮೂಹವನ್ನು ವಾಕ್ಯ ಎನ್ನುವರು" ಅನೇಕ ವಾಕ್ಯಗಳನ್ನು ಪರಸ್ಪರ ಸಂಬಂಧವುಂಟಾಗುವಂತೆ ಜೋಡಿಸುವುದೇ ವಾಕ್ಯ ರಚನೆ ಎನಿಸುತ್ತದೆ.

ವಾಕ್ಯದಲ್ಲಿ ಕರ್ತೃಪದ ಮೊದಲು, ಕರ್ಮಪದ ಅನಂತರ. ಕ್ರಿಯಾಪದ ಕೊನೆಯಲ್ಲಿ ಬರುತ್ತದೆ. ವಿಶೇಷಣಗಳು ಆಯಾಯ ಪದಗಳ ಹಿಂದೆ ಇರುತ್ತವೆ, ಇದು ಸಾಮನ್ಯ ನಿಯಮ.

ಉದಾ:– ಮಹಾಶೂರನಾದ ಶ್ರೀ ರಾಮಚಂದ್ರನು ದುಷ್ಟನಾದ ರಾವಣನನ್ನು ತೀಕ್ಷ್ಣವಾದ ಬಾಣಗಳಿಂದ ಕೊಂದನು.

ಇಲ್ಲಿ ಶ್ರೀ ರಾಮ ಚಂದ್ರನು – ಕರ್ತೃ ಪದ

ರಾವಣನನ್ನು – ಕರ್ಮ

ಕೊಂದನು – ಕ್ರಿಯಾಪದ.

ಮೊದಲು ಕರ್ತೃಪದ ಅದರ ಹಿಂದೆ ವಿಶೇಷಣವಾದ ಮಹಾಶೂರನಾದ ಎಂಬ ವಿಶೇಷಣ ಅನಂತರ ಕರ್ಮಪದ ಅದರ ಹಿಂದೆ ಅದರ ವಿಶೇಷವಾದ ದುಷ್ಟನಾದ. ನಂತರ ಕ್ರಿಯಾಪದ ಅದರ ಹಿಂದೆ ತೀಕ್ಷ್ಣವಾದ ಬಾಣಗಳಿಂದ ಎಂಬುದು ವಿಶೇಷಣವಾಗಿ ಬಂದಿದೆ.

ವಾಕ್ಯಗಳ ಪ್ರಕಾರಗಳು ವಾಕ್ಯಗಳಲ್ಲಿ ಮೂರು ರೀತಿಯ ಪ್ರಧಾನವಾದ ಭೇದಗಳನ್ನು ಕಾಣಬಹುದು

1) ಸಾಮಾನ್ಯ ವಾಕ್ಯ 2) ಸಂಯೋಜಿತ ವಾಕ್ಯ 3)ಮಿಶ್ರವಾಕ್ಯ.

1) **ಸಾಮಾನ್ಯ ವಾಕ್ಯ:** ಒಂದು ಪೂರ್ಣ ಕ್ರಿಯಾಪದದೊಡನೆ ಸ್ವತಂತ್ರವಾಗಿರುವ ವಾಕ್ಯಗಳೇ ಸಾಮಾನ್ಯ ವಾಕ್ಯಗಳೆನಿಸುವುವು.

ಉದಾ:– ಬೆಂಗಳೂರಿನಲ್ಲಿ ಕೊರೋನ ವ್ಯಾಪಕವಾಗಿ ಹಬ್ಬಿತು

2. ಬೆಂಗಳೂರಿನಲ್ಲಿ ಉದ್ಯೋಗಿಯಾಗಿದ್ದ ವೀರೇಶ್ವರ ಪಾಠಕ್ ಕೊರೋನಾದಿಂದ ಬಳಲಿದರು.

3. ವೀರೇಶ್ವರ ಪಾಠಕ್ ರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಲಾಯಿತು

4. ರೈತನು ಹೊಲಕ್ಕೆ ಹೋಗಿ, ಭತ್ತವನ್ನು ಬಿತ್ತಿದನು

5. ಜಿಂಕೆ ಹುಲ್ಲನ್ನು ತಿಂದಿತು .

6. ಕೃಷ್ಣನು ಧೇನುಕಾಸುರನನ್ನು ಕೊಂದ

7. ಸುಬ್ರಹ್ಮಣ್ಯಂ ನಮ್ಮನ್ನು ವಿಶ್ವಾಸದಿಂದ ಸ್ವಾಗತಿಸಿದರು

8. ಹತ್ತನೆಯ ಶತಮಾನದವರೆಗೆ ಗಂಗರು ತಲೆಯೆತ್ತಿ ಬಾಳಿದರು.

ಉದಾ: ಬೆಂಗಳೂರಿನಲ್ಲಿ ಕೊರೊನಾ ಹಬ್ಬಿ ವೀರೇಶ್ವರ ಪಾಠಕ್ ರವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ, ಅವರು ಅಲ್ಲಿಂದ ವರ್ಗಾವಣೆ ಹೊಂದುವಂತೆ ಆಯಿತು

ಈ ವಾಕ್ಯದಲ್ಲಿ ಆಯಿತು ಎಂಬ ಒಂದೇ ಕ್ರಿಯಾಪದವಿದ್ದು ಹಬ್ಬಿ, ಬೀರಿ ಎಂಬ ಸಾಪೇಕ್ಷ ಕ್ರಿಯಾಪದಗಳು ಮಧ್ಯದಲ್ಲಿ ಬಂದಿದೆ ಹಾಗಾಗಿ ಇದೂ ಕೂಡ ಸಾಮಾನ್ಯ ವಾಕ್ಯವಾಗಿದೆ.

**2) ಸಂಯೋಜಿತ ಅಥವಾ ಸಂಯುಕ್ತ ವಾಕ್ಯ:–**

"ಸ್ವತಂತ್ರ ವಾಕ್ಯಗಳಾಗಿ ನಿಲ್ಲ ಬಲ್ಲ ಅನೇಕ ಉಪ ವಾಕ್ಯಗಳೊಡನೆ ಒಂದು ಪೂರ್ಣಭಿಪ್ರಾಯದ ವಾಕ್ಯವಾಗಿದ್ದರೆ ಅದು ಸಂಯೋಜಿತ ವಾಕ್ಯ ವೆನಿಸುವುದು.

ಉದಾ:– ಕಾರವಾರದಲ್ಲಿ ಮಲೇರಿಯಾ ಹಬ್ಬಿತು. ಅದ್ದರಿಂದ ವೀರೇಶ್ವರ ಪಾಠಕ್ ರವರು ಮಲೇರಿಯಾದಿಂದ ಬಳಲಬೇಕಾಯ್ತು ಈ ಕಾರಣದಿಂದ ಅವರನ್ನು ಅಲ್ಲಿಂದ ವರ್ಗಾಯಿಸಲಾಯ್ತು.

ಈ ಮೂರು ವಾಕ್ಯ ಸಮೂಹದಲ್ಲಿ ಮೂರು ಬೇರೆ ಬೇರೆ ವಾಕ್ಯಗಳಿವೆ. ಆದರೆ ಈ ವಾಕ್ಯಗಳು ಒಂದಕ್ಕೊಂದು ಸಂಯೋಜನೆಗೊಂಡು ಒಂದು ಪೂರ್ಣ ವಾಕ್ಯವಾಗಿದೆ.

1) ರೈತನು ಹೊಲಕ್ಕೆ ಹೋದನು, ಭತ್ತವನ್ನು ಬಿತ್ತಿದನು.

2. ಅಮೇರಿಕಾ ದೇಶವು ಕೊರೊನಾದ ತವರೂರೆನಿಸಿತ್ತು, ಅದ್ದರಿಂದ ವಿರೇಶ್ವರನವರೂ ಅಲ್ಲಿ ಕೊರೊನಾದಿಂದ ಬಳಲ ಬೇಕಾಯಿತು. ಈ ಕಾರಣದಿಂದಲೇ ಅವರು ಅಲ್ಲಿಂದ ವರ್ಗ ಮಾಡಿಸಿಕೊಂಡರು.

3. ಪಾಂಡವರ ಯಜ್ಞ ತುರಗ ಮಣಿಪುರವನ್ನು ಪ್ರವೇಶಿಸಿತು; ಆಗ ಬಭ್ರುವಾಹನನು ಅದನ್ನು ಕಟ್ಟಿ ಹಾಕಿದನು; ಆದ್ದರಿಂದ ಬಭ್ರುವಾಹನನಿಗೂ ಅರ್ಜುನನಿಗೂ ಯುದ್ದ ನಡೆಯಿತು.

ಉದಾ:– ಶ್ರೀ ರಾಮನ ಅಶ್ವಮೇಧ ಯಾಗದ ಕುದುರೆಯು ವಾಲ್ಮೀಕಿಗಳ ಪುಣ್ಯಶ್ರಮದ ಉಪವನವನ್ನು ಹೊಕ್ಕಿತು; ಆಗ ಆ ತೋಟದ ಕಾವಲು ಮಾಡುತ್ತಿದ್ದ ಲವನು ಅದನ್ನು ಕಟ್ಟಿ ಹಾಕಿದನು; ಅದ್ದರಿಂದ ಲವನನ್ನು ಕುದುರೆಯ ಕಾವಲಿನ ಭಟರು ಹಿಡಿದುಕೊಂಡು ಹೋದರು. ಮೇಲಿನ ಈ ಮೂರು ಸ್ವತಂತ್ರ ಕ್ರಿಯಾಪದವುಳ್ಳ ವಾಕ್ಯಗಳು ಒಂದಕ್ಕೊಂದು 'ಆಗ' ಅದ್ದರಿಂದ, ಎಂಬ ಶಬ್ದಗಳ ಸಂಬಂಧದಿಂದ ಒಂದು ಅಭಿಪ್ರಾಯವನ್ನು ಪೂರ್ಣ ಹೇಳುವ ಸಂಯೋಜಿತ ವಾಕ್ಯವೆನಿಸಿದೆ.

**3) ಮಿಶ್ರವಾಕ್ಯ:–** ಒಂದು ಅಥವಾ ಆನೇಕ ವಾಕ್ಯಗಳೂ ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅಂತಹ ವಾಕ್ಯವನ್ನು ಮಿಶ್ರವಾಕ್ಯ ಎಂದು ಕರೆಯುವರು.

**ಉದಾ:–** ಆಶಾ ಗಾಯನ ಸ್ಪರ್ಧೆಯಲ್ಲಿ ಗೆದ್ದಳಾದರೂ ಅವಳಿಗೆ ಬಹುಮಾನ ಸ್ವೀಕರಿಸಲು ಸಾಧ್ಯವಾಗದಿದ್ದಾಗ ಆಕೆ ತುಂಬಾ ನೊಂದುಕೊಂಡಳು.

ಈ ಮೇಲಿನ ವಾಕ್ಯದಲ್ಲಿ ಆಕೆ ತುಂಬಾ ನೊಂದುಕೊಂಡಳು ಎಂಬ ಪ್ರಧಾನ ವಾಕ್ಯಕ್ಕೆ ಆಶಾ ಗಾಯನ ಸರ್ಧೆಯಲ್ಲಿ ಗೆದ್ದಳು. ಅವಳಿಗೆ ಬಹುಮಾನ ಸ್ವೀಕರಿಸಲು ಸಾಧ್ಯವಾಗಲಿಲ್ಲ, ಎಂಬ ಉಪವಾಕ್ಯಗಳು ಅಧೀನವಾಗಿರುವುದರಿಂದ ' ಇದು ಮಿಶ್ರವಾಕ್ಯ.

1. ರೈತನು ಹೊಲಕ್ಕೆ ಹೋಗಿದ್ದರಿಂದ ಭತ್ತವನ್ನು ಬಿತ್ತಿದನು.

2. ನಮ್ಮ ಪರೀಕ್ಷೆ ಮುಗಿಯಿತೆಂದು, ತಂದೆಗೆ ಮಗನು ತಿಳಿಸಿದನು,

3. ಶಂಕರನಿಗೆ ವಿದ್ಯಾರ್ಥಿ ವೇತನ ಸಿಕ್ಕಿತೆಂಬುದನ್ನು ಅವನಿಂದಲೇ ಕೇಳಿದೆನು.

4. ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯನವರು ನಿರ್ಧರಿಸಿದರಾದರೂ ಅವರ ನಿರ್ಧಾರಕ್ಕೆ ಬ್ರಿಟೀಷ್ ಸರ್ಕಾರದ ಅಪ್ಪಣೆ ದೊರೆಯಲಿಲ್ಲವೆಂಬ ವಿಷಯ ತಿಳಿದಾಗ ಬಹುವಾಗಿ ಮರುಗಿದರು.

## ಲೇಖನ ಚಿಹ್ನೆಗಳು

ಬರವಣಿಗೆಯಲ್ಲಿ ಲೇಖನ ಚಿಹ್ನೆಗಳ ಪಾತ್ರ ಅತ್ಯಂತ ಪ್ರಮುಖವಾದುದು ಲೇಖನ ಚಿಹ್ನೆಗಳಿಲ್ಲದ ಬರವಣಿಗೆಯು ಸ್ಪಷ್ಟಾರ್ಥವನ್ನು ಕೊಡದೆ ಆನೇಕ ತೊಡುಕುಗಳಿಗೆ ಕಾರಣವಾಗುವುದುಂಟು. ಆದುದರಿಂದ ಲೇಖನ ಚಿಹ್ನೆಗಳ ಕಡೆಗೆ ಅತ್ಯಂತ ಲಕ್ಷ್ಯ ಅವಶ್ಯಕ.

ಸಾಮಾನ್ಯವಾಗಿ ಬರವಣಿಗೆಯಲ್ಲಿ ಖಚಿತ ಸ್ಥಳದಲ್ಲಿ ಪೂರ್ಣ ನಿಲುಗಡೆ, ಅರ್ಧ ಇಲವೇ ಅಲ್ಪ ನಿಲುಗಡೆ, ಪ್ರಶ್ನೆ, ಅಚ್ಚರಿ, ಒಪ್ಪಿತ ಭಾವಗಳನ್ನು ಸೂಕ್ತ ರೀತಿಯಲ್ಲಿ ಸೂಚಿಸಲು ಅವಶ್ಯ ಸಂಕೇತಗಳನ್ನು ಬಳಸುವುದು ರೂಢಿ ಅಂತಹ ಸ್ಪಷ್ಟಾರ್ಥ ಸೂಚಿತ ಭಾವಗಳನ್ನು ಲಿಖಿತ ಸಂಕೇತಗಳ ಮೂಲಕ ನಿರ್ದೇಶಿಸುವುದೇ ಲೇಖನ ಚಿಹ್ನೆಗಳು ಲೇಖನ ಚಿಹ್ನೆಗಳು ಇಲ್ಲದ ಬರವಣಿಗೆ ಖಚಿತ ಭಾವಾರ್ಥವನ್ನು ಕೊಡದು.

**1.ಪೂರ್ಣ ವಿರಾಮ :–(.)** – "ಒಂದು ಪೂರ್ಣ ಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಈ ಪೂರ್ಣ ವಿರಾಮ ಚಿಹ್ನೆಯನ್ನು ಬಳಸಬೇಕು.

ಉ:–! ರಾಮನು ಮರವನ್ನು ಕಡಿದನು.

2. ಮಗುವು ಮಲಗಿತು.

3. ಭೀಮನು ದುಷ್ಟನಾದ ಬಕನನ್ನು ಕೊಂದನು.

4. ಭಾರತೀಯ ಕಾಲಗಣನೆಯ ಪ್ರಕಾರ ವರ್ಷಗಳನ್ನು ಸಂವತ್ಸರಗಳೆಂದು ಕರೆಯುತ್ತಾರೆ.

5. ಮೀರಾ ಹಾಡನ್ನು ಹಾಡಿದಳು.

6. ಕನ್ನಡ ಭಾಷೆಯು ತುಂಬ ಪ್ರಾಚೀನವಾದ ಭಾಷೆ.

**2.ಅರ್ಧ ವಿರಾಮ (;) :–**

"ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗೆಲ್ಲ ಅರ್ಧ ವಿರಾಮ ಚಿಹ್ನೆ ಯನ್ನು ಬಳಸಲಾಗುವುದು."

ಉದಾ:– ಅವನು ಕಾಶಿರಾಮೇಶ್ವರಗಳಿಗೆ ಹೋಗಿ ಬಂದನು; ಆದರೂ ಕೆಟ್ಟ ಬುದ್ಧಿಯನ್ನು ಬಿಡಲಿಲ್ಲ.

2. ಆ ದಿನ ಮಳೆ ಬಂದಿತ್ತು; ಆದುದರಿಂದ ಆಟವಾಡಲಿಲ್ಲ; ಇದು ಆಟಗಾರರಿಗೆ ಸ್ವಲ್ಪ ನಿರಾಸೆಯನ್ನುಂಟು ಮಾಡಿತು.

3. ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ.

4. ಕೊಟ್ಟಿದ್ದು ತನಗೆ; ಬಚ್ಚಿಟ್ಟಿದ್ದು ಪರರಿಗೆ.

5. ಧರ್ಮದ ಸ್ವರೂಪ ಬಹು ಸೂಕ್ಷ್ಮವಾದದ್ದು; ಅದನ್ನು ಮಹಾತ್ಮರೂ ತಿಳಿಯುವುದು ಕಷ್ಟ.

6. ಒಂದು ಸಂಗತಿಯೇನೋ ನಿಶ್ಚಯ; ಈ ಕಾಲಕ್ಕೆ ಕೊನೆಗಾಲ ಇದಾಗಿದೆ; ಅದಕ್ಕೆ ಈ ಕೌರವರು ಲೋಭ ಮೋಹಗಳಿಗೆ ವಶರಾಗಿದ್ದಾರೆ.

**3. ಅಲ್ಪ ವಿರಾಮ (,)–**

"ಸಂಬೋಧನೆಯ ಮುಂದೆ, ಅನೇಕ ಬೇರೆ ಬೇರೆ ವಿಶೇಷಣಗಳು ಕರ್ತೃ ಪದಕ್ಕಾಗಲಿ, ಕರ್ಮಪದಕ್ಕಾಗಲಿ, ಕ್ರಿಯಾಪದಕ್ಕಾಗಲಿ ವಿಶೇಷಣಗಳಾಗಿದ್ದಾಗ ಕೊನೆಯ ವಿಶೇಷಣವನ್ನುಳಿದು ಉಳಿದವುಗಳ ಮುಂದೆ ಅಲ್ಪವಿರಾಮ ಚಿಹ್ನೆಯನ್ನು ಬಳಸಬೇಕು.

ಉದಾ:– 1. ಬಟ್ಟೆಗಿರಣಿ, ರಟ್ಟು, ಪೆನ್ಸಿಲ್, ಬೆಂಕಿಕಡ್ಡಿ ತಯಾರಿಕ ಘಟಕಗಳನ್ನು ಸ್ಥಾಪಿಸಲಾಗಿದೆ.

2. ರಾಮಾ, ಊಟಮಾಡು,

3. ಪರಮಾತ್ಮ, ಕಾಪಾಡು

4. ಮಕ್ಕಳೇ, ಬನ್ನಿರಿ.

5. ಶೂರನು, ಉದಾರಿಯೂ, ಪ್ರಜಾರಂಜಕನೂ ಆದ ರಾಜನಾಗಿದ್ದನು.

6. ಆತನು, ದೊಡ್ಡದೂ, ಭಾರವುಳ್ಳದೂ, ಉಪಯುಕ್ತವು ಆದ ಕಲ್ಲನ್ನು ಎತ್ತಿ ತಂದನು.

7. ಆತನ ಬರವಣಿಗೆ ನೋಡಲು ಅಂದವಾಗಿಯೂ, ಮನಮೋಹಕವಾಗಿಯೂ, ಸ್ಫುಟವಾಗಿಯೂ, ಅಚ್ಚುಕಟ್ಟಾಗಿಯೂ ಕಾಣುತ್ತದೆ.

**4) ಪ್ರಶ್ನಾರ್ಥಕ ಚಿಹ್ನೆ** (?)

ಪ್ರಶ್ನಾರ್ಥಕ ಪದ ಮತ್ತು ವಾಕ್ಯಗಳ ಮುಂದೆ ಪ್ರಶ್ನಾರ್ಥಕ ಚಿಹ್ನೆಯನ್ನು (?) ಹಾಕ ಬೇಕು.

ಉದಾ:–1. ಏಕೆ? ಯಾವುದು?

2. ಇದು ನಿನಗೆ ಬೇಕೆ?

3. ನಿನ್ನ ವಯಸ್ಸು ಏನು?

4. ಯಾವ ವೆಂಕಟಸುಬ್ಬಯ್ಯ?

5. ರಾಜನು ಮಾಡಿದ ಶಪಥವೇನು?

6. ದಶರಥ ಯಾರು?

**5) ಆಶ್ಚರ್ಯಸೂಚಕ ಚಿಹ್ನೆ (ಭಾವ ಸೂಚಕ ಚಿಹ್ನೆ)**(!)

ಕೋಪ, ಆನಂದ, ಹರ್ಷ, ಆಶ್ಚರ್ಯ, ಸಂತೋಷ, ವಿಷಾದ ದುಃಖ, ಮುಂತಾದ ಭಾವನೆಗಳನ್ನು ಸೂಚಿಸುವ ಪದಗಳ ಮುಂದೆ ಭಾವಸೂಚಕ ಚಿಹ್ನೆ (!) ಹಾಕಬೇಕು.

ಉದಾ:– 1. ಆಹಾ! ಎಷ್ಟು ಸುಂದರವಾಗಿದೆ!

2. ಅಯ್ಯೋ! ಹೀಗಾಗ ಬಾರದಿತ್ತು!

3. ಅಕ್ಕಟಾ! ತಪ್ಪಾಯಿತು!

4. ಛೀ! ಮೂರ್ಖ ತೊಲಗು!

5. ಓ! ಮರ ಉರುಳಿ ಹೋಯಿತು!

6. ಎಲೆಲೇ ಪಾರ್ಥಿವರೇ! ಇದು ತರವಲ್ಲ!!

**6. ಉದ್ಧರಣ ಚಿಹ್ನೆ** (“ ”) ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಉದ್ದರಣ ಚಿಹ್ನೆ (“ ”) ಯನ್ನು ಬಳಸಲಾಗುವುದು.

ಉದಾ: “ಶಿಕ್ಷಣವು ಕೆಲವೇ ಜನರ ಸ್ವತ್ತಾಗದೇ ಪ್ರಗತಿ ಪರ ರಾಜ್ಯದಲ್ಲಿ ಎಲ್ಲರ ಆ ಜನ್ಮಸಿದ್ದ ಹಕ್ಕಾಗ ಬೇಕು” ಎಂದು ವಿಶ್ವೇಶ್ವರಯ್ಯನವರು ಹೇಳಿದರು.

2. ನಿನ್ನೆ ಭಾಷಣದಲ್ಲಿ ನಮ್ಮ ಶಿಕ್ಷಕರು “ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಕಷ್ಟ ಪಟ್ಟು ಓದಬೇಕು” ಎಂದು ಹೇಳಿದರು.

3. ಮಹಾಭಾರತದಲ್ಲಿ “ಧರ್ಮಕ್ಕೆ ಜಯ ಉಂಟು” ಎಂದು ಹೇಳಿದೆ

4. ಬುದ್ಧನು “ನಮ್ಮ ಯೋಚನೆ ಏನಾಗಿರುತ್ತದೆಯೋ, ಫಲಿತಾಂಶವು ಅದೇ ಆಗಿರುತ್ತದೆ” ಎಂದು ಹೇಳಿದ್ದಾನೆ.

5. ನಾನು “ನೀವು ಕನ್ನಡದಲ್ಲಿ ಚೆನ್ನಾಗಿ ಮಾತನಾಡುತ್ತೀರಿ” ಎಂದೆ.

6. “ಇತಿಹಾಸವನ್ನು ಮರೆತವರು, ಇತಿಹಾಸವನ್ನು ಸೃಷ್ಟಿಸಲಾರರು” ಎಂದು ಅಂಬೇಡ್ಕರರವರು ಹೇಳಿದ್ದಾರೆ.

**7.ವಾಕ್ಯವೇಷ್ಟನ ಚಿಹ್ನೆ (‘ ’):** “ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆಯ ಪದಗಳನ್ನು ಬಳಸುವಾಗ ‘ವಾಕ್ಯ ವೇಷ್ಟನ’ ಚಿಹ್ನೆಯನ್ನು ಬಳಸಲಾಗುವುದು.”

ಉದಾ:– ಕನ್ನಡದಲ್ಲಿ ಅನೇಕ ‘ಇಂಗ್ಲೀಷ್’ ಪದಗಳು ಸೇರಿ ಬಳಕೆಗೆ ಬಂದಿದೆ.

2. ನಿನ್ನೆ ಶಿಕ್ಷಕರು ‘ಹೈಡ್ರೋಜನ್’ ವಿಷಯದಲ್ಲಿ ಪಾಠ ಹೇಳಿದರು.

3. ಎ.ಆರ್ ಕೃಷ್ಣ ಶಾಸ್ತ್ರಿಗಳು ‘ಭಾಸಕವಿ’ ‘ಸಂಸ್ಕೃತ ನಾಟಕಗಳು’ ‘ನಿರ್ಮಲ ಭಾರತೀ’ ‘ಕೃಥಾಮೃತ’ ‘ವಚನ ಭಾರತ’ ಮುಂತಾದ ಗ್ರಂಥಗಳನ್ನು ರಚಿಸಿದ್ದಾರೆ.

4. ಕನ್ನಡ ಭಾಷೆಯಲ್ಲಿ ‘ಇಂಗ್ಲಿಷ್’ ‘ಪೋರ್ಚುಗೀಸ್’ ‘ಪರ್ಷಿಯನ್’ ಭಾಷೆಗಳ ಪದಗಳನ್ನು ಬಳಸಲಾಗುತ್ತದೆ.

5. ಬಿ.ಎಂ. ಶ್ರೀ ಕಂಠಯ್ಯನವರ ಕಾವ್ಯನಾಮ ‘ಶ್ರೀ’ ಎಂದು.

6. ಇದ್ದಕ್ಕಿದ್ದಂತೆ 0ಯಾವುದೋ ಮೂಲೆಯಲ್ಲಿ ‘ಕೊಯ್’ ಶಬ್ದ ಪ್ರಾರಂಭವಾಯಿತು.

**8. ಆವರಣ ಚಿಹ್ನೆ ( )**

ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಆವರಣ ಚಿಹ್ನೆ ‘()’ಯನ್ನು ಬಳಸಲಾಗುತ್ತದೆ.

ಉದಾ:– ಒಂದು ದಿನ ಒಂದು ನರಿಯು ಕೊಕ್ಕರೆಯನ್ನು (ನೀರು ಹಕ್ಕಿಯನ್ನು) ತನ್ನ ಮನೆಗೆ ಊಟಕ್ಕೆ ಕರೆಯಿತು.

2. ನೀರನ್ನು ವಿಭಜಿಸಿದರೆ ಅಮ್ಲಜನಕ (ಆಕ್ಸಿಜನ್) ಜಲಜನಕ (ಹೈಡ್ರೋಜನ್)ಗಳು ಉತ್ಪತ್ತಿಯಾಗುತ್ತವೆ.

3.ಗಾಂಧೀಜಿಯವರು ರಾಟೆ (ಚರಕ) ಯನ್ನು ಬಳಸುತ್ತಿದ್ದರು.

4. ವೀರಗಾಸೆ, ನೃತ್ಯದಲ್ಲಿ ಪಂಚವಾದ್ಯಗಳನ್ನು (ತಾಳ, ಶೃತಿ, ಚಮ್ಮಾಳ, ಓಲಗ, ಕರಡೆ) ಬಳಸಲಾಗುವುದು.

5. ಗೀತ ಕುಣಿತ, ವೇಷಭೂಷಣ, ಮಾತುಗಾರಿಕೆ, ವಾದ್ಯ ಇವು ಬ0ಯಲಾಟದ (ಮ್ಯಾಳ ಅಥವಾ ಅಟ್ಟದಾಟ) ಪಂಚ ಅಂಗಗಳು.

**9. ವಿವರಣಾತ್ಮಕ ಚಿಹ್ನೆ (:–)**

ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ‘ ವಿವರಣಾತ್ಮಕ ಚಿಹ್ನೆ’ (:) ಯನ್ನು ಬಳಸಲಾಗುತ್ತದೆ.

ಉದಾ:– 1. ಇದುವರೆಗೆ ನಳನ ಪಾಕ ಶಾಸ್ತ್ರ ನೈಪುಣ್ಯ ಹೇಳಿದ್ದಾಯಿತು. ಇನ್ನು ಭೀಮಸೇನನ ವಿಚಾರ : ಭೀಮ ಸೇನೆ ಹುಟ್ಟಿದತಿಥಿ, ವಾರ, ನಕ್ಷತ್ರ.....

2. ಸಂಧಿ:– ಎರಡು ಪದಗಳ ಅರ್ಥ ಕೆಡದಂತೆ ಸೇರುವುದು.

3. ಪಂಚವಾದ್ಯಗಳು:– ತಾಳ, ಹಳಗ, ಗಂಟೆ, ಮೌರಿ ಸನಾದಿ.

4. ಉದಾಹರಣೆ:– ಜಾಣನ ತನ, ಜಾಣತನ.

ಈ ವಾಕ್ಯಗಳನ್ನು ಗಮನಿಸಿ:–

ಅಲ್ಲಿಹಿರಿದಾದ ತೊರೆಯು ಹರಿಯುತ್ತಿತ್ತು.

**ಪದಗಳ ಅರ್ಥ**

| | | | | | |
|---|---|---|---|---|---|
| ಅಡಸು | = ಉಂಟಾಗು, | ಅರ್ಥಿ | = ಬೇಡುವವನು | ಖಳ | = ದುಷ್ಟ |
| ಕುಪ್ಪೆ | = ಕಸದ ತಿಪ್ಪೆ | ಕಡಸಿಗ್ಗು | = ತೀವ್ರ ನಾಚಿಕೆ | ದ್ವಿಜ | = ಬ್ರಾಹ್ಮಣ |
| ಅವನೀತಳ | = ಭೂಮಂಡಲ,ಇಳೆ | ಕನಕ ಪಾತ್ರೆ | = ಚಿನ್ನದ ಪಾತ್ರೆ | ಚಟ್ಟರಿಂ | = ಶಿಷ್ಯರಿಂದ |
| ನಾಣಿಲಿ | = ನಾಚಿಕೆ ಇಲ್ಲದ | ಎರೆ | = ಬೇಡು | ತುರಗ | = ಕುದುರೆ |
| ವಾಸಿ | = ಪ್ರತಿಜ್ಞೆ | ಅಗಡು | = ಶೌರ್ಯ | ಉರ್ವಿ | = ಭೂಮಂಡಲ ಇಳೆ, |
| ಇಂಬು | = ಅವಕಾಶ | ಚೋದ್ಯಂ | = ಅಚ್ಚರಿ | ಅರ್ತಿ | = ಪ್ರೀತಿ |

| | | | | | |
|---|---|---|---|---|---|
| ಭಾರ್ಯ | = ಪತ್ನಿ | ಹುಸಿ | = ಸುಳ್ಳು | ತಮಾಲ | = ಕತ್ತಲು |
| ಪನ್ನಗ | = ಹಾವು | ಲುಬ್ಧತೆ | = ದುರಾಸೆ | ಘ್ರಾಣೇಂದ್ರಿಯ | = ಮೂಗು |
| ಕ್ಷೋಭೆ | = ತಳಮಳ | ಬೆಳ್ಳಿ | = ಶುಕ್ರ | ಜಲದ | = ತೀವ್ರ |
| ಪೊಡೆಮಟ್ಟು | = ನಮಸ್ಕರಿಸಿ | ಇದಿರ್ಚಿ | = ಹೋರಾಡಿ | ಪಡೆಯರ | = ದ್ವಾರಪಾಲಕ |
| ಸಮಂತು | = ಚೆನ್ನಾಗಿಯೋಚಿಸು | ಭಾರ್ಗವ | = ಪರಶುರಾಮ | ಮಹೀಪತಿ | = ರಾಜ |
| ವರಂ | = ಶ್ರೇಷ್ಠ | ಮೃತ್ಪಾತ್ರ | = ಮಣ್ಣಿನ ಪಾತ್ರೆ | ಮದಿರಾ | = ಸುರಾಪಾನ |
| ಅಂಜಿಕೆ | = ಹೆದರಿಕೆ | ಅಬ್ಧಿಪ | = ವರುಣ | ಕದಳಿ | = ಬಾಳೆ |
| ದ್ರುಮಕ್ಕೆ | = ಬುಡಕ್ಕೆ | ಅಳವು | = ಪರಾಕ್ರಮ | | |
| ಹರಿಕಾರ | = ಮುಂದಾಳು | ನೋಳಪಿಂಗೆ | = ನೊಣಕೆ | ಆರ್ತತೆ | = ಬಯಕೆ |
| ಕೃತ್ರಿಮ | = ಮೋಸ | ತನುಜ | = ಮಗ | ಸಖ | = ಗೆಳೆಯ |
| ಉದಾತ್ತ | = ಉನ್ನತ | ಹಾಸುಗಲ್ಲು | = ಅಮೃತಶಿಲೆ | ಮುಂಡಾಸು | = ಪೇಟ, |
| ಬಡವಾ | = ಹೆಣ್ಣು ಕುದುರೆ | ಬುನಾದಿ | = ತಳಹದಿ, ಅಡಿಪಾಯ | ಛವಿ | = ಕಾಂತಿ |
| ಪೊರ್ಲು | = ಚಂದ | ಮಸಗು | = ಹರಡು | ಮಾರ್ದನಿ | = ಪ್ರತಿಧ್ವನಿ |
| ಶುಕ | = ಗಿಳಿ | ಶಿಥಿಲಾಕ್ಷರ | = ತೊದಲು ಮಾತು | ಕಟ್ಟುಗೆ | = ಸೇತುವೆ |
| ಆರಯ | = ಪಾಲನೆ | ರುಜೆ | = ರೋಗ | ಸತ್ತಿಗೆ | = ಛತ್ರಿ |

ಹೀಗೆ ಪ್ರತಿ ಪಾಠ, ಪದ್ಯಗಳಲ್ಲಿ ನಿಮಗೆ ಗೊತ್ತಿಲ್ಲದ ಕಠಿಣ ಪದಗಳನ್ನು ಸಂಗ್ರಹಿಸಿ ಕಲಿಯಿರಿ.

## ಅವ್ಯಯ

ಅವನು ಚೆನ್ನಾಗಿ ಓದಿದನು.
ಅವಳು ಚೆನ್ನಾಗಿ ಓದಿದಳು.
ಅವರು ಚೆನ್ನಾಗಿ ಓದಿದರು.
ಅದು ಚೆನ್ನಾಗಿ ಓದುತ್ತದೆ.

ಮೇಲಿನ ವಾಕ್ಯಗಳಲ್ಲೆಲ್ಲಾ ಬಂದಿರುವ 'ಚೆನ್ನಾಗಿ' ಎಂಬ ಪದವನ್ನು ಗಮನಿಸಿ. ಅದು ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳಲ್ಲೂ, ಏಕವಚನ, ಬಹುವಚನಗಳಲ್ಲೂ ಯಾವ ವ್ಯತ್ಯಾಸವನ್ನೂ ಹೊಂದದೆ ಒಂದೇ ರೀತಿಯಾಗಿದೆ. 'ಚೆನ್ನಾಗಿ' ಎಂಬುದರ ಮೇಲೆ ಯಾವ ವಿಧವಾದ ಪ್ರತ್ಯಯಗಳನ್ನೂ ಹಚ್ಚಲಾಗುವುದಿಲ್ಲ ಇದು ನಾಮಪದ ಹಾಗೂ ಕ್ರಿಯಾಪದಗಳ ಹಾಗೆ ರೂಪದಲ್ಲಿ ಯಾವ ಭೇದವನ್ನೂ ಹೊಂದುವುದಿಲ್ಲ; ಇದ್ದ ಹಾಗೇಯೇ ಯಾವಾಗಲೂ ಇರುತ್ತದೆ, ಹೀಗೆ "ಲಿಂಗ, ವಚನ ವಿಭಕ್ತಿಗಳಿಂದ ಯಾವ ವ್ಯತ್ಯಾಸವನ್ನು ಹೊಂದದ ಅನೇಕ ಶಬ್ದಗಳನ್ನು ಭಾಷೆಯಲ್ಲಿ ಬಳಸುತ್ತೇವೆ. ಸುಮ್ಮನೆ ನೆಟ್ಟಗೆ, ಮೆಲ್ಲಗೆ, ಸುತ್ತಲೂ, ತರುವಾಯ, ಎಲ್ಲ, ಇತ್ಯಾದಿಗಳು, ಇವುಗಳನ್ನು ಅವ್ಯಯ" ಎಂದು ಕರೆಯುತ್ತಾರೆ.

"ನಾಮಪದ, ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಿಂದ ರೂಪಭೇಧವನ್ನು ಹೊಂದದೆ, ಏಕರೂಪವಾಗಿರುವ ಶಬ್ದಗಳನ್ನು ಅವ್ಯಯಗಳು ಎನ್ನುವರು".

ಇಂಥ ಅವ್ಯಯಗಳನ್ನು –

1) ಸಾಮಾನ್ಯವ್ಯಯ 2) ಅನುಕರಣಾವ್ಯಯ, 3)ಭಾವಸೂಚಕಾವ್ಯಯ
4) ಕ್ರಿಯಾರ್ಥಕಾವ್ಯಯ 5) ಸಂಬಂಧಾರ್ಥಕಾವ್ಯಯ 6) ಅವಧಾರಣಾರ್ಥಕಾವ್ಯಯ.

ಎಂದು ವಿಂಗಡಿಸಲಾಗಿದೆ.

**1. ಸಾಮಾನ್ಯಾವ್ಯಯಗಳು:**

"ಯಾವುದಾದರೊಂದು ಕ್ರಿಯೆ ನಡೆದ ರೀತಿಯನ್ನು ಹೇಳುವಂತಹ ಅವ್ಯಯಗಳನ್ನು ಸಾಮನ್ಯಾವ್ಯಯಗಳು ಎಂದು ಕರೆಯುತ್ತಾರೆ"

ಉದಾ:– ಚೆನ್ನಾಗಿ, ನೆಟ್ಟಗೆ, ತಟ್ಟನೆ, ಬಿಮ್ಮನೆ, ಬಿಮ್ಮಗೆ, ಸೊಗಸಾಗಿ, ಸುಮ್ಮನೆ, ತರುವಾಯ, ಹಾಗೆ, ಅಂತು, ಬೇರೆ, ಬಳಿಕ, ಕೂಡಲೆ, ಸುಮ್ಮಗೆ, ಕಮ್ಮನೆ, ಬೇಗನೆ, ಮೆಲ್ಲಗೆ, ಮೆಲ್ಲನೆ, ಹೀಗೆ, ಇಂತು, ಇನ್ನು, ಒಡನೆ, ಬೇಗ, ಸುತ್ತಲೂ. ಇತ್ಯಾದಿಗಳು.

**2.) ಅನುಕರಣಾವ್ಯಯ:–**

"ನಿರ್ದಿಷ್ಟ ಅರ್ಥವಿಲ್ಲದ ಧ್ವನಿ ವಿಶೇಷಗಳನ್ನು ತಾನು ಕಿವಿಯಿಂದ ಕೇಳಿದಂತೆ ಅನುಕರಣೆ ಮಾಡಿ ಹೇಳುವ ಪದಗಳನ್ನು ಅನುಕರಣಾವ್ಯಯಗಳು" ಎಂದು ಕರೆಯುತ್ತಾರೆ.

1. ನೀರು ದಬದಬ ಬಿದ್ದಿತು
2. ಪಟಪಟ ಮಳೆ ಸುರಿಯಿತು.

ಚಟಚಟ. ಕರಕರ, ಚುರುಚುರು, ಸಿಮಿಸಿಮಿ, ಧಗಧಗ, ತಟತಟ, ಸುಯ್ಯನೆ, ಧಿಗಿಲನೆ, ಭೋರ್ರನೆ, ಘುಳುಘುಳು, ಗುಡುಗುಡು, ಕೊತಕೊತ, ಜುಳುಜುಳು, ಡವಡವ, ಢಣಢಣ, ಫಳಫಳ, ಗುಳುಗುಳು, ಸರಸರ ಡಿಶುಂಡಿಶುಂ, ಇತ್ಯಾದಿಗಳು......

**3. ಭಾವಸೂಚಕಾವ್ಯಯಗಳು:–**

"ಮನಸ್ಸಿನಲ್ಲಿ ಉಂಟಾಗುವ ಕೋಪ, ಹರ್ಷ, ದುಃಖ ಮೆಚ್ಚುಗೆ, ಅಕ್ಷೇಪ, ತಿರಸ್ಕಾರ, ಇತ್ಯಾದಿ ಭಾವಗಳನ್ನು ವ್ಯಕ್ತ ಪಡಿಸುವಾಗ ಅರ್ಥವಿಲ್ಲದ ಕೆಲವು ಪದಗಳನ್ನು ಬಳಸುತ್ತೇವೆ. ಅಂತಹ ಪದಗಳನ್ನು ಭಾವಸೂಚಕಾವ್ಯಯಗಳು ಎಂದು ಕರೆಯುತ್ತಾರೆ.

ಉದಾ:– ಎಲಾ! ಅಯ್ಯೋ! ಅಕ್ಕಟಾ! ಅಕಟಕಟಾ! ಆಹಾ! ಭಲೇ! ಭಳಿರೇ! ಛೇ! ಥೂ! ಅಬ್ಬಾ! ಅಹಹಾ! ಅಹಾ! ಓಹೋ! ಹೋ! ಹೋಹೋ! ಆಃ! ಎಲೆಲಾ! ಓ! ಏ! ಅಃ! ಹಹಹ!... ಇತ್ಯಾದಿಗಳು...

**4. ಕ್ರಿಯಾರ್ಥಕಾವ್ಯಯಗಳು:–**

"ಕ್ರಿಯಾಪದದ ಸ್ಥಾನದಲ್ಲಿ ನಿಂತು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯಗಳನ್ನು ಕ್ರಿಯಾರ್ಥಕಾವ್ಯಗಳು" ಎಂದು ಕರೆಯಬಹುದು.

ಉದಾ:– ಉಂಟು, ಬೇಕು, ಬೇಡ, ಅಲ್ಲ, ಅಹುದು, ಹೌದು, ಸಾಕು, ಇಲ್ಲ – ಇತ್ಯಾದಿಗಳು.

**5. ಸಂಬಂಧಾರ್ಥಕಾವ್ಯಯಗಳು:**

"ಎರಡು ಪದಗಳನ್ನಾಗಲಿ, ಅಥವಾ ಹಲವು ಪದ ಸಮುಚ್ಚಯಗಳನ್ನಾಗಲಿ, ವಾಕ್ಯಗಳನ್ನಾಗಲಿ, ಜೋಡಿಸುವಂತಹ ಮತ್ತು ಸಂಬಂಧಗೊಳಿಸುವಂತ ಶಬ್ದಗಳನ್ನು ಸಂಬಂಧಾರ್ಥಕಾವ್ಯ0ಯಗಳು" ಎಂದು ಕರೆಯುತ್ತಾರೆ.

ಉದಾ:– ಊ, ಉಂ, ಮತ್ತು, ಅಥವಾ, ಅದ್ದರಿಂದ, ಆದುದರಿಂದ, ಅಲ್ಲದೆ, ಇತ್ಯಾದಿಗಳು.

**ಪದಗಳ ಜೋಡಿಸುವಿಕೆ:–**

1. ರಾಮನೂ(ಊ), ಭೀಮನೂ(ಊ), ಸೀತೆಯೂ(ಊ), ಬಂದರು.
2. ರಾಮನುಂ (ಉಂ) ಭೀಮನುಂ (ಉಂ), ಸೀತೆಯುಂ(ಉಂ) ಬಂದರ್.
3. ರಾಮನೂ, ಲಕ್ಷ್ಮಣನೂ, ಸೀತೆಯೂ, ಕಾಡಿಗೆ ಹೊರಟರು.

**ಪದ ಸಮುಚ್ಚಯ ಜೋಡಣೆ:–**

1. ಅವನು ಬರುವುದೂ (ಊ) ಬೇಡ; ಆ ಕೆಲಸವಾಗುವುದೂ (ಊ) ಬೇಡ.
2. ಅವನು ಮತ್ತು ನೀನು ಇಬ್ಬರೂ (ಊ) ಹೋಗಿರಿ.
3. ತಂದೆ ತಾಯಿಗಳ ಸೇವೆ ಮಾಡಬೇಕು ಮತ್ತು ಅವರ ಆಜ್ಞೆಯನ್ನು ಪಾಲಿಸಬೇಕು.

**ವಾಕ್ಯಗಳ ಜೋಡಣೆ:–**

1. ಅವನು ಬರಲಿಲ್ಲ ಆದ್ದರಿಂದ ನಾನು ಬರಲಿಲ್ಲ.
2. ಮಳೆ ಬಂದಿತು ಆದರೆ ಕೆರೆ ತುಂಬಲಿಲ್ಲ.
3. ಅವನು ಬರಲಿಲ್ಲ ಆದುದರಿಂದ ಕೊಡಲಿಲ್ಲ.
4. ಹತ್ತು ಮೂಟೆ ಬಂತು, ಇನ್ನೂ ಐದು ಮೂಟೆ ಬರಬೇಕು
5. ನೀನು ಬರಬೇಕೆ? ಹಾಗಾದರೆ ಬೇಗ ಬಾ.
6. ಒಂದು ಮೂಟೆ ಅಕ್ಕಿ ಕೊಡು, ಅಥವಾ ನೂರಐವತ್ತು ರೂಪಾಯಿ ಕೊಡು.
7. ನೀನು ಇಲ್ಲಿಗೆ ಬಾ, ಆಗ ಎಲ್ಲವೂ ಸರಿ ಹೋಗುತ್ತದೆ.

**ಮೇಲಿನ ವಾಕ್ಯಗಳಲ್ಲಿ ಕೆಳಗೆ ಗೆರೆ ಎಳೆದ ಅವ್ಯಯಗಳು ಎರಡು ಸಂಬಂಧಗೊಳಿಸಿದ ಸಂಬಂಧಾರ್ಥಕಾವ್ಯಯಗಳು.**

**6. ಅವಧಾರಣಾರ್ಥಕಾವ್ಯ0ುಗಳು :–**

"ಒಂದು ನಿಶ್ಚಯಾರ್ಥದಲ್ಲಿರುವ ಅವ್ಯಯವನ್ನು ಅವಧಾರಣಾರ್ಥಕಾವ್ಯ0ುಗಳು" ಎಂದು ಕರೆಯುತ್ತಾರೆ. ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚಯವಾಗಿ ಹೇಳುವ ಸಂದರ್ಭದಲ್ಲಿ ಈ ಅವ್ಯಯವನ್ನು ಬಳಸಲಾಗುತ್ತದೆ.

ಉದಾ:– ಅದೇ ನನ್ನ ಪುಸ್ತಕ (ಅದು+ಏ)

2. ನಾನೇ ಅದನ್ನು ಬರೆದೆನು (ನಾನು+ಏ)

ಈ ಮೇಲಿನ ವಾಕ್ಯಗಳಲ್ಲಿ ಕೆಳಗೆ ಗೆರೆ ಎಳೆದ ಪದಗಳ ಕೊನೆಯಲ್ಲಿರುವ 'ಏ' ಎಂಬ ಅಕ್ಷರವೇ ಅವಧಾರಣಾರ್ಥಕಾವ್ಯ0ು ಅವನೇ, ಅದುವೇ, ಅವಳೇ, ನೀನೆ, ಅವರೇ, ಇತ್ಯಾದಿ ಪದಗಳ ಕೊನೆಯಲ್ಲಿರುವ ರುವ 'ಏ' ಎಂಬ ಅಕ್ಷರವೇ ಅವಧಾರಣಾರ್ಥಕಾವ್ಯಯ.

## ಕೃದಂತಗಳು :

ನಮ್ಮ ಮಾತುಗಳಲ್ಲಿ ಮಾಡಿದ, ಹೋಗುವ, ಬರೆಯುವ, ಮುಂತಾದ ಪದಗಳನ್ನು ಬಳಸುತ್ತೇವೆ, ಇಲ್ಲಿ ಮಾಡಿದ ಎಂಬ ಪದವನ್ನು ಬಿಡಿಸಿದಾಗ ಮಾಡು+ದ+ಅ ಹಾಗೆಯೇ ಹೋಗುವ ಪದದಲ್ಲಿ ಹೋಗು+ವ+ಅ, ಬರೆಯುವ ಪದದಲ್ಲಿ ಬರೆ+ಉವ+ಅ ಎಂಬ ಭಾಗಗಳನ್ನು ನೋಡಬಹುದು. ಇಲ್ಲಿ ಮೊದಲನೆಯದು ಧಾತು ಎಂತಲೂ ಎರಡೆನೆಯದು ಮೂರನೇಯದು ಪ್ರತ್ಯಯಗಳೆಂತಲೂ ಕರೆಯಲ್ಪಡುತ್ತವೆ. ಧಾತುಗಳಿಗೆ ಈ ಪ್ರತ್ಯಯಗಳು ಸೇರಿದ ರೂಪವನ್ನು ನಾಮ ಪ್ರಕೃತಿಗಳೆಂದು ಕರೆಯುತ್ತಾರೆ. ಇವುಗಳನ್ನು ಕೃದಂತ ನಾಮ ಪ್ರಕೃತಿಗಳೆಂದು ಕರೆಯಲಾಗುವುದು. ಈ ಕೃದಂತ ನಾಮ ಪ್ರಕೃತಿಗಳಿಗೆ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿದಾಗ ಅವುಗಳು ಕೃದಂತನಾಮ ಪದಗಳೆನಿಸುತ್ತದೆ. ಈ ಉದಾಹರಣೆಗಳ ಕೊನೆಯಲ್ಲಿರುವ 'ಅ' ಎಂಬುದೇ ಕೃತ್ ಪ್ರತ್ಯಯ.

"ಧಾತುಗಳಿಗೆ ಕೃತ್ ಪ್ರತ್ಯಯಗಳು ಸೇರಿ ಕೃದಂತಗಳೆನಿಸುತ್ತವೆ" ಇದಕ್ಕೆ ಕೃನ್ನಾಮಗಳೆಂಬ ಹೆಸರೂ ಇದೆ. ಕೃದಂತಗಳಲ್ಲಿ ಮೂರು ವಿಧಗಳಿವೆ. ಅವು ಯಾವುವೆಂದರೆ 1)ಕೃದಂತನಾಮ 2) ಕೃದಂತಭಾವನಾಮ 3)ಕೃದಂತಾವ್ಯಯ

**ಉದಾಹರಣೆ:–**

| **ಕೃದಂತ ನಾಮ** | **ಕೃದಂತ ಭಾವನಾಮ** | **ಕೃದಂತಾವ್ಯ0ು** |
|---|---|---|
| ಮಾಡಿದ | ಮಾಟ | ಮಾಡಿ |
| ತಿನ್ನುವ | ತಿನ್ನುವಿಕೆ | ತಿಂದು |
| ನಡೆಯುವ | ನಡೆತ | ನಡೆ0ುತ್ತ |

ಹೋಗದ ಹೋಗುವಿಕೆ ಹೋಗಲು

ಓಡಿದ ಓಟ ಓಡಿ

**ಕೃದಂತನಾಮಗಳು:–** 'ಧಾತುಗಳಿಗೆ ಕರ್ತೃ ಮೊದಲಾದ ಅರ್ಥದಲ್ಲಿ ಸಾಮಾನ್ಯವಾಗಿ 'ಅ' ಎಂಬ ಕೃತ್ ಪ್ರತ್ಯಯ ಬರುವುದು. ಆಗ ಧಾತುವಿಗೂ ಕೃತ್ ಪ್ರತ್ಯೆಯಕ್ಕೂ ನಡುವೆ ವರ್ತಮಾನ ಭವಿಷ್ಯತ್ ಕಾಲದಲ್ಲಿ 'ವ' ಉವ ಎಂಬ ಕಾಲಸೂಚಕ ಪ್ರತ್ಯಯಗಳೂ, ಭೂತಕಾಲದಲ್ಲಿ 'ದ' ಎಂಬ ಪ್ರತ್ಯಯವು ನಿಷೇಧಾರ್ಥಕದಲ್ಲಿ 'ಅದ' ಎಂಬ ಪ್ರತ್ಯ0ಯವು ಆಗಮವಾಗುತ್ತದೆ. ಇದನ್ನೆ ಕೃದಂತ ನಾಮಗಳು' ಎನ್ನುವರು.

ಉದಾ:– 1) ವರ್ತಮಾನ ಕೃದಂತಕ್ಕೆ:–

ಓಡು+ವ+ಅ = ಓಡುವ

ಬಾಳು+ವ+ಅ = ಬಾಳುವ

ಬರೆ+ಉವ+ಅ = ಬರೆಯುವ

ಮಾಡು+ವ+ಅ = ಮಾಡುವ

ತಿನ್ನು+ವ+ ಅ = ತಿನ್ನುವ

ಇದರಂತೆ, ಹೋಗುವ, ನೋಡುವ, ನಡೆಯುವ, ಕಾಣುವ, ಕೊಡುವ, ಇತ್ಯಾದಿಗಳು

**2) ಭೂತ ಕೃದಂತಕ್ಕೆ:–**

ಓಡು+ದ+ಅ = ಓಡಿದ

ಬಾಳು+ತ+ಅ = ಬಾಳಿದ

ಬರೆ+ದ+ಅ = ಬರೆದ

ತಿನ್ನು + ದ+ ಅ= ತಿಂದ

ಹೋಗು +ದ = ಹೋದ

ಇದರಂತೆ ಬರೆದ, ನೋಡಿದ, ನಡೆದ, ಕಂಡು, ಕರೆದ, ಇತ್ಯಾದಿಗಳು.

**3. ನಿಷೇಧ ಕೃದಂತಕ್ಕೆ:**

ಓಡು+ಅದ+ಅ= ಓಡದ

ಬಾಳು+ಅದ+ಅ = ಬಾಳದ

ಬರ+ಅದ+ಅ = ಬರೆಯದ

ಮಾಡು+ಅದ+ಅ = ಮಾಡದ

ತಿನ್ನು + ಅದ+ಅ = ತಿನ್ನದ

ಇದರಂತೆ ಹೋಗದ, ಬರದ, ನೋಡದ, ನುಡಿಯದ, ಇತ್ಯಾದಿಗಳು..

ಇವುಗಳಿಗೆ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿದಾಗ ಪುಲ್ಲಿಂಗ ಸ್ತ್ರೀಲಿಂಗ, ನಪುಂಸಕಲಿಂಗಗಳಲ್ಲಿ ಆಗುವ ವ್ಯಾಕರಣ ವಿಶೇಷಣಗಳನ್ನು ಗಮನಿಸಿ.

**ಪುಲ್ಲಿಂಗದಲ್ಲಿ :–**

ಓಡುವ+ಅವನು+ಉ = ಓಡುವವನು

ಓಡುವ+ಅವನು+ಅನ್ನು = ಓಡುವವನನ್ನು

ಓಡುವ+ಅವನು+ಇಂದ = ಓಡುವವನಿಂದ

**ಸ್ತ್ರೀಲಿಂಗದಲ್ಲಿ**

ಬರೆದ+ಅವಳು+ಇಗೆ = ಬರೆದವಳಿಗೆ

ಬರೆದ+ಅವರು+ಇಗೆ = ಬರೆದವರಿಗೆ

ಬರೆದ+ಅವಳು+ಅಲ್ಲಿ = ಬರೆದವಳಲ್ಲಿ

ಬರೆದ+ಅವರು+ಅಲ್ಲಿ = ಬರೆದವರಲ್ಲಿ

ಬರೆದ+ಅವಳು+ಅನ್ನು = ಬರೆದವಳನ್ನು

**ನಪುಂಸಕಲಿಂಗದಲ್ಲಿ**

ಹೋಗುವ+ಉದು+ಉ = ಹೋಗುವುದು

ಹೋಗುವ+ಉದು+ಅನ್ನು = ಹೋಗುವುದನ್ನು

ಹೋಗುವ + ಉವು +ಅನ್ನು = ಹೋಗುವುವನ್ನು

ಹೋಗುವ+ಉದು+ಆರು+ಇಂದ = ಹೋಗುವುದರಿಂದ

**2. ಕೃದಂತ ಭಾವನಾಮ:**

1. ಆತನ <u>ಓಟ</u> ಚೆನ್ನಾಗಿತ್ತು.
2. ಅದರ <u>ನೆನಪು</u> ಇಲ್ಲ
3. ಗಡಿಗೆಯ <u>ಮಾಟ</u> ಸೊಗಸು
4. ಇದರ <u>ಕೊರೆತ</u> ಹಸನಾಗಿದೆ

ಮೇಲಿನ ವಾಕ್ಯಗಳಲ್ಲಿ ಕೆಳಗೆ ಗೆರೆ ಎಳೆದಿರುವ ಓಟ, ಮಾಟ, ನೆನೆಪು, ಕೊರೆತ, ಈ ಶಬ್ದಗಳನ್ನು ಗಮನಿಸೋಣ. *ಓಡುವ ರೀತಿಯೇ ಓಟ, ಓಡು+ಟ

*ಮಾಡಿರುವ ರೀತಿಯೇ ಮಾಟ – ಮಾಡು + ಟ

*ನೆನೆಯುವ ರೀತಿಯೇ ನೆನಪು – ನೆನೆ+ಪು

*ಕೊರೆದಿರುವಿಕೆಯೇ ಕೊರೆತ – ಕೊರೆ+ತ

ಇವೆಲ್ಲ ಕ್ರಿಯೆಯ ಭಾವವನ್ನು ತಿಳಿಸುತ್ತದೆ. ಆದುದರಿಂದ ಇದನ್ನು ಕೃದಂತ ಭಾವನಾಮಗಳು ಅಥವಾ ಭಾವ ಕೃದಂತಗಳು ಎನ್ನುತ್ತಾರೆ.

**"**ಧಾತುಗಳ ಮೇಲೆ ಭಾವಾರ್ಥದಲ್ಲಿ ಕೃತ್ ಪ್ರತ್ಯಯಗಳು ಸೇರಿದಾಗ ಕೃದಂತ ಭಾವನಾಮಗಳಾಗುತ್ತವೆ**"**.

ಉದಾ:– ಧಾತು + ಭಾವಾರ್ಥದಲ್ಲಿ – ಕೃದಂತ – ಇತರ ರೂಪಗಳು

ಬಾಳು+ವಿಕೆ = ಬಾಳುವಿಕೆ = ಬರೆಯುವಿಕೆ, ಕೊರೆಯುವಿಕೆ, ನೋಡುವಿಕೆ, ತಿನ್ನುವಿಕೆ.

ಅಂಜು+ಇಕೆ = ಅಂಜಿಕೆ – ನಂಬಿಕೆ, ಹೊಗಳಿಕೆ, ತೆಗಳಿಕೆ, ಅಳಿಕೆ ನಾಚಿಕೆ, ಬಳಲಿಕೆ, ಕಲಿಕೆ

ಉಡು+ಗೆ = ಉಡುಗೆ – ತೊಡುಗೆ, ನಂಬುಗೆ, ಹೊಲಿಗೆ, ಏಳ್ಗೆ

ಓಡು + ಟ = ಓಟ + ನೋಟ, ಮಾಟ, ಆಟ, ಕಾಟ, ಕೂಟ

ನಗು+ಉದು = ನಗುವುದು – ನೋಡುವುದು, ತಿನ್ನುವುದು, ಮಾಡುವುದು,

ಉಡು+ಇಗೆ = ಉಡುಗೆ– ತೊಡಿಗೆ, ಅಡಿಗೆ, ಮುತ್ತಿಗೆ, ಹಾಸಿಗೆ, ಏಳಿಗೆ.

ಬರು+ಅವು = ಬರವು – ಸೆಳೆವು, ಮರುವು, ಓಲವು, ಕಳವು, ತೆರೆವು...

ಸಾ+ವು = ಸಾವು – ನೋವು, ಮೇವು, ದಣಿವು, ಅರಿವು

ತಿನ್ನು+ಇಕೆ = ತಿನ್ನುವಿಕೆ – ನೋಡುವಿಕೆ, ಬರೆಯುವಿಕೆ, ಕೊರೆಯುವಿಕೆ

ಕೊರೆ+ತ = ಕೊರೆತ – ಸೆಳೆತ, ಕಟೆತ, ಒಗೆತ, ತಿವಿತ, ಕುಣಿತ, ಇರಿತ.

ನಡೆ+ವಳಿ = ನಡೆವಳಿ – ನುಡಿವಳಿ, ಸಲುವಳಿ, ಹಿಡಿವಳಿ, ಕೂಡುವಳಿ, ಮುಗಿವಳಿ

ಕಾ+ಅಪು = ಕಾಪು – ಮೇಪು, ತೀರ್ಪು, ತಿಳಿಪು, ಹೋಳಪು, ನೆನಪು

ಮುಗ್ಗು+ಅಲು = ಮುಗ್ಗಲು –ಒಣಗಲು, ಜಾರಲು, ಬಿಕ್ಕಲು, ಒಕ್ಕಲು

ನಗು+ಎ = ನಗೆ – ಹೊರೆ

ಧಾತು + ಭಾವಾರ್ಥದಲ್ಲಿ – ಕೃದಂತ – ಇತರ ರೂಪಕಗಳು

ಕೃತ್ ಪ್ರತ್ಯಯ   ಭಾವನಾಮ

ಓಡು + ಟ + ಓಟ  – ನೋಟ, ಮಾಟ, ಆಟ, ಕಾಟ, ಕೂಟ

ಬೆರೆ+ಅಕೆ = ಬೆರಕೆ – ಮೊಳಕೆ

ಬೆಳೆ–ವಳಿಕೆ – ಬೆಳವಳಿಕೆ – ತಿಳಿವಳಿಕೆ, ನಡುವಳಿಕೆ

ಮೆರೆ+ವಣಿಗೆ – ಮೆರವಣಿಗೆ – ಬೆಳವಣಿಗೆ, ಬರವಣಿಗೆ

ಅಳೆ+ಅತೆ = ಅಳತೆ – ನಡತೆ

ಮುಳಿ+ಸು = ಮುಳಿಸು – ತೊಳೆಸು ,ಮುನಿಸು

ಮುರಿ+ಅಕು = ಮುರಕು – ಹರಕು

ಟ, ಎಕೆ, ಇಕೆ, ಗೆ, ಉದು, ವು, ಅವು, ಇಗೆ, ತ, ವಳಿ, ಪು, ಅಕೆ, ಅಲು, ಎ, ಅಕೆ, ವಳಿಕೆ, ವಣಿಗೆ, ಅತೆ, ಸು, ಅಕು,   ಉಕ, ಇತ, ಇವು ಭಾವಾರ್ಥ ಕೃತ್ ಪ್ರತ್ಯಯಗಳು.

3. **ಕೃದಂತಾವ್ಯಯಗಳು** : "ಧಾತುವಿನಿಂದ ಹುಟ್ಟಿ ಅವ್ಯಯದ ಗುಣವನ್ನು ಪಡೆದಂಥ ಶಬ್ದ ರೂಪಗಳೇ ಕೃದಂತಾವ್ಯಯಗಳು" ಅಥವಾ ಅವ್ಯಯ ಕೃದಂತಗಳು.

ಉದಾ:–

1. ರಾಮನು <u>ಉಣ್ಣದೆ</u> ಮಲಗಿದನು.
2. ಮಳೆ <u>ಬರಲು</u> ಕೆರೆ ತುಂಬಿತು.
3. ಅವನು <u>ಬರುತ್ತ</u> ತಿಂದನು.
4. ಅದನ್ನು <u>ಬರೆದು</u> ಕಳುಹಿಸಿದನು.
5. ಅಲ್ಲಿಗೆ <u>ಹೋಗಲಿಕ್ಕೆ</u> ತಡವಾಯಿತು.

ಮೇಲಿನ ವಾಕ್ಯಗಳಲ್ಲಿ ಗೆರೆ ಎಳೆದ ಪದಗಳಾದ ಉಣ್ಣದ, ಬರಲು, ಬರುತ್ತ, ಬರೆದು, ಹೋಗಲಿಕ್ಕೆ, ಇವು, ಉಣ್ಣು+ಅದೆ, ಬರು+ಅಲು. ಬರು+ಉತ್ತ, ಬರೆ+ದು, ಹೋಗು+ಲಿಕ್ಕೆ ಹೀಗೆ ಧಾತುಗಳ ಮೇಲೆ ಅದೆ, ಅಲು, ಉತ್ತ, ದು,ಅಲಿಕ್ಕೆ, ಪ್ರತ್ಯಯಗಳು ಬಂದು ಆದ ಶಬ್ದರೂಪಗಳು. ಇವು ಸ್ತ್ರೀಲಿಂಗ ಪುಲ್ಲಿಂಗ, ನಪುಂಸಕಲಿಂಗಗಳಲ್ಲೂ ಏಕವಚನ, ಬಹುವಚನಗಳಲ್ಲೂ ಒಂದೇ ರೂಪವಾಗಿರುತ್ತದೆ, ಅಲ್ಲದೆ ಅವುಗಳ ಮೇಲೆ ಇನ್ನಾವ ವಿಭಕ್ತಿ ಪ್ರತ್ಯಯಗಳು ಬರುವುದಿಲ್ಲ.  ಆದ್ದರಿಂದ ಇವು ಅವ್ಯಯದ ಗುಣ ಪಡೆದವು.

"ಧಾತುಗಳ ಮೇಲೆ ಉತ, ಉತ್ತ, ಅದೆ,, ದರೆ, ಅಲು, ಅಲಿಕ್ಕೆ, ಅ,ಇ,ದು, ಇತ್ಯಾದಿ ಪ್ರತ್ಯಯಗಳು ಸೇರಿ ಕೃದಂತಾವ್ಯಯಗಳೆನಿಸುವುವು"

ಧಾತು+ಪ್ರತ್ಯಯ = ಕೃದಂತಾವ್ಯಯಗಳು

ಧಾತು + ಪ್ರತ್ಯಯ = ಕೃದಂತಾವ್ಯಯ

| | | |
|---|---|---|
| ಉದಾ:– | ಮಾಡು+ ಉತ | = ಮಾಡುತ, ನೋಡುತ, ಮಾರುತ ಬರುತ. |
| | ತಿನ್ನು+ ಉತ್ತ | = ತಿನ್ನುತ್ತ, ಮಾಡುತ್ತ, ನೋಡುತ್ತ, ನಡೆಯುತ್ತ,ಬರುತ್ತ |
| | ಮಾಡು+ಅದೆ | = ಮಾಡದೆ ನೋಡದೆ, ತಿನ್ನದೆ, ಬರೆಯದೆ |
| | ಬರು+ಅಲು | = ಬರಲು, ತಿನ್ನಲು, ಉಣ್ಣಲು, ನೋಡಲು, ನುಡಿಯಲು, ಬರೆಯಲು |
| | ತಿನ್ನು+ಅಲಿಕ್ಕೆ | = ತಿನ್ನಲಿಕ್ಕೆ ಮಾಡಲಿಕ್ಕೆ, ತಿಳಿಯಲಿಕ್ಕೆ, ಬರಲಿಕ್ಕೆ, ನಡೆಯಲಿಕ್ಕೆ |
| | ಹೇಳು+ಅ | = ಹೇಳ, ಮಾಡ, ನೋಡ, ನುಡಿಯ |
| | ಮಾಡು+ಇ | = ಮಾಡಿ, ಹೇಳಿ, ಕೇಳಿ, ನೋಡಿ, |
| | ತಿನ್ನು+ದು | = ತಿಂದು, ನುಡಿದು, ನಡೆದು, ಕರೆದು, ಬರೆದು |
| | ಧಾತು + ಪ್ರತ್ಯಯ | = ಕೃದಂತಾವ್ಯಯ – ಇತರೆ ರೂಪಗಳು |
| | ಮಾಡು + ಉತ | = ಮಾಡುತ – ನೋಡುತ, ಬರುತ, ಮಾರುತ |

# ತದ್ಧಿತಾಂತಗಳು

1. ಮೋಸವನ್ನು ಮಾಡುವವನು ಇದ್ದಾನೆ.
2. ಅಲ್ಲಿ ಕನ್ನಡವನ್ನು ಬಲ್ಲವರು ಬಹಳ ಜನರಿದ್ದರು.
3. ಹಾವನ್ನು ಆಡಿಸುವವನು ಇನ್ನೂ ಬಂದಿಲ್ಲ.
4. ,ಮಡಿ0ುನ್ನು ಮಾಡುವವನು ಇನ್ನು ಬಂದಿಲ್ಲ
5. ಅಲ್ಲಿ ಚಿತ್ರವನ್ನು ಬರೆ0ುುವವನು ಇದ್ದಾನೆ.

ಇಲ್ಲಿ ಮೋಸವನ್ನು ಮಾಡುವವವನು ಎಂಬಲ್ಲಿ ಮೋಸವನ್ನು ಎಂಬ ಪದದ ಮುಂದೆ ಮಾಡುವವನು ಎಂದರ್ಥದಲ್ಲಿ "ಗಾರ" ಪ್ರತ್ಯ0ು ಸೇರಿಸಿ, ಮೋಸವನ್ನು + ಗಾರ ಮಾಡುತ್ತೇವೆ. ಒಂದೇ ಪ್ರಕೃತಿ0ು ಮೇಲೆ ಎರಡು ಪ್ರತ್ಯ0ು ಸೇರುವುದಿಲ್ಲ 'ಅನ್ನು' ಎಂಬ ಪ್ರತ್ಯ0ು ತೆಗೆದು ಮೋಸ + ಗಾರ = ಮೋಸಗಾರ ಹೀಗೆ ಒಂದು ಹೊಸ ಪದ ಸಿದ್ಧವಾಯಿತು. ಇಲ್ಲಿ 'ಗಾರ' ಎಂಬುದೇ ತದ್ಧಿತ ಪ್ರತ್ಯ0ು.

ಹಾಗೇಯೇ – ಕನ್ನಡವನ್ನು + ಇಗ = ಕನ್ನಡ+ಇಗ = ಕನ್ನಡಿಗ

ಹಾವನ್ನು + ಅಡಿಗ = ಹಾವು+ಅಡಿಗ = ಹಾವಾಡಿಗ

ಮಡಿಯನ್ನು + ವಳ ಮಡಿ+ವಳ = ಮಡಿವಾಳ

ಚಿತ್ರವನ್ನು + ಕಾರ = ಚಿತ್ರ+ಕಾರ = ಚಿತ್ರಕಾರ.

ತದ್ಧಿತ ಎಂಬ ಹೆಸರಿನ ಪ್ರತ್ಯಯಗಳು ಪದಾಂತ್ಯದಲ್ಲಿ ಉಳ್ಳವುಗಳನ್ನು ತದ್ಧಿತಾಂತಗಳೆಂದು ಕರೆಯುತ್ತಾರೆ. "ನಾಮಪದಗಳ ಮೇಲೆ ಬೇರೆ ಬೇರೆ ಅರ್ಥಗಳಲ್ಲಿ ಗಾರ, ಕಾರ, ಇಗ, ಅಡಿಗ, ವಂತ, ವಳ, ಇರ, ಅಳಿ,, ಮುಂತಾದ ತದ್ಧಿತ ಪ್ರತ್ಯಯಗಳ ಸೇರಿ ತದ್ಧಿತಾಂತಗಳೆನಿಸುವುವು"

ಈ ತದ್ಧಿತ ಪ್ರತ್ಯಯಗಳು ನಾಮ ಪದಗಳಿಗೆ ಸೇರುವಾಗ ಮಧ್ಯದ ವಿಭಕ್ತಿ ಪ್ರತ್ಯಯವು ಲೋಪವಾಗುವುದು ಸಾಮಾನ್ಯ.

ತದ್ಧಿತಾಂತಗಳಲ್ಲಿ 3 ವಿಧಗಳಿವೆ ಅವು ಯಾವುವೆಂದರೆ 1)ತದ್ಧಿತಾಂತನಾಮ 2)ತದ್ಧಿತಾಂತಭಾವನಾಮ 3)ತದ್ಧಿತಾಂತಾವ್ಯಯ.

1. **ತದ್ಧಿತಾಂತ ನಾಮಗಳು:**

ನಾಮಪದಗಳ ಮೇಲೆ ಗಾರ, ಕಾರ, ಇಗ, ವಂತ, ಇತ್ಯಾದಿ, ತದ್ಧಿತ ಪ್ರತ್ಯಯಗಳು ಸೇರಿ ತದ್ಧಿತಾಂತ ನಾಮಗಳಾಗುತ್ತದೆ.

ಉದಾ:– (ಪುಲ್ಲಿಂಗ ರೂಪದಲ್ಲಿ)

ತದ್ಧಿತಪ್ರತ್ಯಯ – ನಾಮಪದ+ಅರ್ಥ = ತದ್ಧಿತಾಂತರಚನೆ.

ಪ್ರತ್ಯಯ

| | | | |
|---|---|---|---|
| ಗಾರ – | ಮಾಲೆಯನ್ನು | + ಕಟ್ಟುವವನು | = ಮಾಲೆಗಾರ |
| | ಬಳೆಯನ್ನು | + ಮಾರುವವನು | = ಬಳೆಗಾರ |
| | ಮೋಸವನ್ನು | + ಮಾಡುವವನು | = ಮೋಸಗಾರ |
| | ಪಾಲನ್ನು | + ಹೊಂದುವವನು | = ಪಾಲುಗಾರ |
| | ಛಲವನ್ನು | + ಹೊಂದಿರುವವನು | = ಛಲಗಾರ |
| | ಕಾರ – ಓಲೆಯನ್ನು | + ತರುವವನು | = ಓಲೆಕಾರ |
| | ಕೋಲನ್ನು | + ಹಿಡಿಯುವವನು | = ಕೋಲುಕಾರ |
| | ಕೈದನ್ನು | + ಹಿಡಿದಿರುವವನು | = ಕೈದುಕಾರ |
| | ಇಗ – ಕನ್ನಡವನ್ನು | = ಬಲ್ಲವನು | = ಕನ್ನಡಿಗ |
| | ಲೆಕ್ಕವನ್ನು | + ಬಲ್ಲವನು | = ಲೆಕ್ಕಿಗ |

| | | |
|---|---|---|
| ಚೆನ್ನನ್ನು | + ಉಳ್ಳವ | = ಚೆನ್ನಿಗ |
| ಗಂಧವನ್ನು | + ಮಾರುವವನು | = ಗಂಧಿಗ |
| ಗಾಣವನ್ನು | + ಆಡಿಸುವವನು | = ಗಾಣೀಗ |
| ವಂತ – ಹಣವನ್ನು | + ಉಳ್ಳವನು | = ಹಣವಂತ |
| ಸಿರಿಯನ್ನು | + ಉಳ್ಳವನು | = ಸಿರಿವಂತ |
| ವಳ– ಮಡಿಯನ್ನು | + ಮಾಡುವವನು | = ಮಡಿವಾಳ |
| ಹಡಪವನ್ನು | + ಆಚರಿಸುವವನು | = ಹಡಪವಳ |
| ಅಡಿಗ – ಹಾವನ್ನು | + ಆಡಿಸುವವನು | = ಹಾವಾಡಿಗ |
| ಇಕ – ಕರಿಯದನ್ನು | + ಉಳ್ಳವನು | + ಕರಿಕ |
| ಬಿಳಿಯದನ್ನು | + ಉಳ್ಳವನು | = ಬಿಳಿಕ |
| ಅಳಿ ಮಾತನ್ನು | + ಹೆಚ್ಚು ಆಡುವವನು | = ಮಾತಾಳಿ |
| ಓದನ್ನು | + ಹೆಚ್ಚು ಆರಿಸುವವನು | = ಓದಾಳಿ |
| ಆಳಿ – ಜೂದನ್ನು | + ಆಡುವವನು | = ಜೂದಾಳಿ |
| ಗುಳಿ – ಲಂಚವನ್ನು ತೆಗೆದುಕೊಳ್ಳುವವನು | | – ಲಂಚಗುಳಿ |
| ಆನೆಯ – ಹತ್ತು | + ಸಂಖ್ಯೆಯನ್ನುಳ್ಳದು | = ಹತ್ತನೆಯ |
| ಆರ – ಕುಂಬವನ್ನು | +ಮಾಡುವವನು | = ಕುಂಬಾರ |

**ಸ್ತ್ರೀಲಿಂಗ ರೂಪದಲ್ಲಿ :**

ಇತಿ – ಬೀಗಿತಿ ಬ್ರಾಹ್ಮಣಿತಿ, ಕನ್ನಡತಿ

ಇತ್ತಿ – ಒಕ್ಕಲಗಿತ್ತಿ, ಹೂವಾಡಗಿತ್ತಿ

ಗಿತ್ತಿ – ನಾಯಿಂದಗಿತ್ತಿ, ಅಗಸಗಿತ್ತಿ

ತಿ – ಗೊಲ್ಲತಿ, ವಡ್ಡತಿ, ಮಾಲೆಗಾರ್ತಿ, ಕೋಲುಕಾರ್ತಿ

ಇ – ಅರಸಿ, ಅಣುಗಿ

ಎ– ಕಳ್ಳೆ, ಜಾಣೇ, ಗುಣವಂತೆ, ಸಿರಿವಂತೆ

ಸ್ತ್ರೀಲಿಂಗದಲ್ಲಿ ಇತಿ, ಇತ್ತಿ, ಗಿತ್ತಿ, ತಿ, ಇ, ಎ, ಇತ್ಯಾದಿ ತದ್ಧಿತ ಪ್ರತ್ಯಯಗಳು ಬಂದು ಸೇರಿ ಸ್ತ್ರೀಲಿಂಗ ತದ್ಧಿತಾಂತಗಳಾಗುತ್ತವೆ

ಪುಲ್ಲಿಂಗ – ಸ್ತ್ರೀಲಿಂಗ

ಮೋಸಗಾರ – ಮೋಸಗಾರ್ತಿ

ಬಳೆಗಾರ – ಬಳೆಗಾರ್ತಿ

ಸಿರಿವಂತ – ಸಿರಿವಂತೆ

ಬ್ರಾಹ್ಮಣ – ಬ್ರಾಹ್ಮಣತಿ

ಕೋಲುಕಾರ – ಕೋಲುಗಾರ್ತಿ

ಬೀಗ – ಬೀಗಿತಿ

ಒಕ್ಕಲಿಗ – ಒಕ್ಕಲಗಿತ್ತಿ

ಕನ್ನಡಿಗ – ಕನ್ನಡತಿ

2. **ತದ್ಧಿತಾಂತ ಭಾವ ನಾಮ :** "ಸಾಮಾನ್ಯವಾಗಿ ಷಷ್ಠಿ ವಿಭಕ್ತಿ ಪ್ರತ್ಯಯಾಂತ ನಾಮಪದಗಳಿಗೆ ಭಾವಾರ್ಥದಲ್ಲಿ ತನ, ಇಕೆ, ಪು, ಮೆ, ಇತ್ಯಾದಿ ತದ್ಧಿತ ಪ್ರತ್ಯಯಗಳು ಸೇರಿ ತದ್ಧಿತಾಂತಭಾವ ನಾಮ" ಗಳೆನಿಸುವುವು.

ಬಡವನ ಭಾವ – ಬಡತನ

ಸಿರಿ ಉಳ್ಳವನ ಭಾವ – ಸಿರಿತನ

ಗೌಡನ ಭಾವ – ಗೌಡಿಕೆ

ಹಿರಿದರಭಾವ – ಹಿರಿಮೆ

ಸಾಮಾನ್ಯವಾಗಿ ಈ ಪ್ರತ್ಯಯಗಳೆಲ್ಲ ಷಷ್ಠಿ ವಿಭಕ್ತಿ ಪ್ರತ್ಯಯಾಂತ ನಾಮಪದಗಳ ಮೇಲೆ ಬಂದಿರುವುದನ್ನು ಗಮನಿಸಬೇಕು.

ತದ್ಧಿತ ಪ್ರತ್ಯಯ ನಾಮಪದ = ಭಾವಾರ್ಥದಲ್ಲಿ ತದ್ಧಿತಾಂತ ಭಾವಭಾವ

ತನ – ದೊಡ್ಡವನ ಭಾವ ದೊಡ್ಡತನ

ಜಾಣನ ಭಾವ ಜಾಣತನ, ದಡ್ಡತನ, ಚಿಕ್ಕತನ, ಸಣ್ಣತನ, ಕೆಟ್ಟತನ,

ಕಿರಿತನ, ಕಳ್ಳತನ, ಸೋಮಾರಿತನ ಹುಡುಗತನ – ಇತ್ಯಾದಿ ಇಕೆ – ಬ್ರಾಹ್ಮಣನ ಭಾವ

ಚೆಲುವಿನ ಭಾವ

ಪು – ಬಿಳಿದರ ಭಾವ = ಬಿಳುಪು

ಕರಿದರ ಭಾವ = ಕಪ್ಪು

ಇನಿದರಭಾವ = ಇಂಪು

ತಣ್ಣನೆಯದರ ಭಾವ = ತಂಪು

ನುಣ್ಣನೆಯರ ಭಾವ = ನುಣುಪು

ಜಾಣೆಯ ಭಾವ = ಜಾಣ್ಮೆ

ಕೂರಿತ್ತರ ಭಾವ = ಕೂರ್ಮೆ

ಪಿರಿದರ ಭಾವ = ಪೆರ್ಮೆ

ಹಿರಿದರ ಭಾವ = ಹಿರಿಮೆ

ನುಣ್ಣನೆ0ಯದರ ಭಾವ= ನುಣುಪು

3. **ತದ್ಧಿತಾಂತಾವ್ಯಯ** : "ನಾಮಪದಗಳ ಮುಂದೆ ಅಂತೆ ವೊಲ್, ವೋಲ್, ತನಕ, ವರೆಗೆ, ಇಂತ, ಆಗಿ, ಓಡಿಸು, ಮುಂತಾದ ಪ್ರತ್ಯಯಗಳು ಸೇರಿ ತದ್ಧಿತಾಂತಾವ್ಯಯಗಳಾಗುತ್ತವೆ." ಈ ಪ್ರತ್ಯಯಗಳು ಬಂದಾಗ ನಾಮಪದದಲ್ಲಿರುವ ವಿಭಕ್ತಿ ಪ್ರತ್ಯಯಗಳು ಲೋಪವಾಗುವುದಿಲ್ಲ.

1. ಇವನು ಭೀಮನಂತೆ ಬಲಶಾಲಿ
2. ಶಾಲೆಯ ತನಕ ಬನ್ನಿ
3. ಆಕೆಗಿಂತ ಚಿಕ್ಕವಳು
4. ಊರವರೆಗೆ ನದೆದನು
5. ಆವನಿಗೋಸುಗ ಬಂದೆನು.

ಈ ವಾಕ್ಯಗಳಲ್ಲಿರುವ ಭೀಮನಂತೆ, ಶಾಲೆಯತನಕ, ಆಕೆಗಿಂತ, ಊರವರೆಗೆ,ಅವನಿಗೋಸುಗ ಎಂಬ ಪದಗಳನ್ನು ಬಿಡಿಸಿದಾಗ

ಭೀಮನ+ಅಂತೆ, ಶಾಲೆಯ+ತನಕ, ಆಕೆಗೆ+ಇಂತ, ಅವನಿಗೆ+ಓಸುಗ, ಊರ+ವರೆಗೆ

ಉದಾ:–

ತದ್ಧಿತ ಪ್ರತ್ಯಯ – ತದ್ಧಿತಾಂತವ್ಯಯ

ಅಂತೆ – ರಾಮನಂತೆ, ಚಂದ್ರನಂತೆ, ಭೀಮನಂತೆ, ಅವನಂತೆ

ವೊಲು – ಚಂದ್ರನವೊಲು, ಭೀಮನವೊಲು, ಅವನವೊಲು

ವೊಲು – ಚಂದ್ರನವೊಲ್, ಭೀಮನವೊಲ್, ನಿನ್ನವೊಲ್, ಅವಳವೊಲ್, ನನ್ನವೊಲ್.

ವೋಲು – ಮನೆಯವೋಲು, ಅವನವೋಲು, ಚಂದ್ರನಂತೆವೋಲು, ಇದರವೋಲ್

ತನಕ – ಮನೆಯತನಕ, ಹಿಮಾಲಯದತನಕ, ಊರತನಕ, ಅಲ್ಲಿಯತನಕ.

ವರಗೆ – ಶಾಲೆಯವರೆಗೆ, ಪಟ್ಟಣದವರೆಗೆ, ಊರವರೆಗೆ, ಚಂದ್ರನವರೆಗೆ.

ಮಟ್ಟಿಗೆ – ಇವಳಮಟ್ಟಿಗೆ, ಸುಂದರನಮಟ್ಟಿಗೆ, ಅವನಮಟ್ಟಿಗೆ, ನನ್ನಮಟ್ಟಿಗೆ ನಿನ್ನ ಮಟ್ಟಿಗೆ.

ಓಸ್ಕರ – ನನಗೋಸ್ಕರ, ಬೆಕ್ಕಿಗೋಸ್ಕರ

ಸಲುವಾಗಿ – ಭೀಮನ ಸಲುವಾಗಿ, ಅರ್ಜುನನ ಸಲುವಾಗಿ, ಕಟ್ಟಡದ ಸಲುವಾಗಿ, ನನ್ನ ಸಲುವಾಗಿ, ನಿನ್ನ ಸಲುವಾಗಿ

ಇಂತ – ರಾಧೆಗಿಂತ, ಚಂದ್ರನಿಗಿಂತ, ಅವನಿಗಿಂತ, ಇವನಿಗಿಂತ ಅದಕ್ಕಿಂತ.

ಆಗಿ – ನಿನಗಾಗಿ, ಇದಕ್ಕಾಗಿ, ಅದಕ್ಕಾಗಿ, ಅವನಿಗಾಗಿ, ನನಗಾಗಿ

ಓಸುಗ – ಮದುವೆಗೋಸುಗ, ಕಾಗೆಗೋಸುಗ, ಚಂದ್ರನಿಗೋಸುಗ, ಕಳ್ಳನಿಗೋಸುಗ.

**ಹೊಸಗನ್ನಡ ರೂಪ**

ವರಂ–ಶ್ರೇಷ್ಠ

ಅನೃತ – ಸುಳ್ಳು

ಕೈವಾರ – ಹೊಗಳಿಕೆ

ಧಾತಾರ – ಒಡೆಯ

ಖಳ – ದುಷ್ಟ

ಪೆರೆ – ಚಂದ್ರ

ಎವೆ – ಕಣ್ಣುರೆಪ್ಪೆ

ಸಿಂಪಿ – ದರ್ಜಿ

ಬಂಬಲ – ಗುಂಪು

ಹವಣು – ಸಿದ್ಧತೆ

ಅರ್ತಿ – ಪ್ರೀತಿ

ಊಣೆಯ – ಕೊರತೆ

ಅರುಹು – ಹೇಳು

ಕರ್ಪು – ಎಕ್ಕಡ

ಹಳು – ಕಾಡು

ಬನ್ನ – ಕಷ್ಟ

ವಾಜಿ – ಕುದುರೆ

ಅಗಡು – ಶೌರ್ಯ

ರಿಪು – ಶತ್ರು

ಗಡಣ – ಸಮೂಹ

ವಿಭೂತಿ – ಐಶ್ವರ್ಯ

ಸುರುಸಸಂ – ಸಾಸಿವೆಗಳು

ಅನ್ನೆಗಮ್ – ಅಷ್ಟರಲ್ಲಿ

ಕಾವಲ್ಗೆ – ಕಾವಲಿಗೆ

ಬಿಡಿಸದಿರ್ದೊಡ –ಬಿಡಿಸದಿದ್ದರೆ

ಅಪ್ಪುದರಿಂ – ಆದುದರಿಂದ

ಇರ್ವರ್ಗಂ – ಇಬ್ಬರಿಗೂ

ಎಂಬವೊಲ್ – ಎನ್ನುವಂತೆ

ನೋಳ್ಪೆನ್ – ನೋಡುವೆನು

ಇರ್ಪುವರಲ್ಲಮ್ – ಇರುವವರಲ

ಅದರ್ಕೆ – ಅದಕ್ಕೆ

ಇರ್ಪುದು – ಇರುವುದು

ನಿಂತಿರ್ದನು – ನಿಂತಿದ್ದನು

ಅದೆನ್ – ಆಗುವೆನು

ಓದಿಕೊಳ್ಳುತಿರ್ದನು – ಓದಿಕೊಳ್ಳುತ್ತಿದ್ದನು

ಅಂತಪ್ಪನನ್ – ಅಂತವನನ್ನು

ಕೈಯೊಳ್ – ಕೈಯಲ್ಲಿ

ಬರ್ಪುದಕಂ – ಬರುವುದಕ್ಕೂ

ಮೊಪ್ಪೆಂ – ಮಾಡುವೆನು

ಇರ್ವರ್ – ಇಬ್ಬರು

ಇರ್ದುದು – ಇರುವುದು

ಇರ್ಪವರ್ – ಇರುವವರು

ಬಂಚಿಸಿ – ವಂಚಿಸಿ

ಬಿಳ್ದುದನ್ – ಬೀಳುವುದನ್ನು

ಕಾಪು – ರಕ್ಷಣೆ

ಕೂರ್ಮೆ – ಸ್ನೇಹ

ಕೃತಿಮ – ಮೋಸ

ತಿಮಾಲ – ಕತ್ತಲೆ

ಒಡೆವೆಯನ್ – ಒಡವೆಗಳನ್ನು

ಪೊಳಲ್ – ಪಟ್ಟಣ

ಕಸವರ – ಚಿನ್ನ

ಹೋಹುದೆ – ಹೋಗುವುದೆ

ಇರ್ದೊಡೆ – ಇದ್ದರೆ.

ಹೊಸಗನ್ನಡ ರೂಪಕ್ಕೆ ಪಠ್ಯ ಪುಸ್ತಕದಲ್ಲಿ ಬರುವ ಹಳಗನ್ನಡ ಪಾಠ, ಪದ್ಯಗಳನ್ನು ಗ್ರಹಿಸುವಾಗ ಅಲ್ಲಿ ಬರುವ ಪ್ರಮುಖ ಪದಗಳನ್ನು ಗಮನಿಸಿ ಶಿಕ್ಷಕರು ಹೇಳುವ ಮುಖ್ಯವಾದ ಹೊಸಗನ್ನಡ ರೂಪ ಸಾರಾಂಶವನ್ನು ಗಮನಿಸಿ ನೆನಪಿನಲ್ಲಿಟ್ಟು ಕೊಂಡು ಓದಿ, ಅಭ್ಯಾಸ ಮಾಡಿ. ಹಳಗನ್ನಡ ಪಾಠ, ಪದ್ಯಗಳನ್ನು ಬಿಡಿಸಿ ಓದುವುದನ್ನು ಅರ್ಥೈಸಿಕೊಳ್ಳುವುದನ್ನು ಕಲಿಯಿರಿ ಸತತ ಅಭ್ಯಾಸದಿಂದ ಇದು ಸಾಧ್ಯ.

## ಅಲಂಕಾರಗಳು

ಮನುಷ್ಯನು ಚೆನ್ನಾಗಿ ಕಾಣುವ ಉದ್ದೇಶದಿಂದ ಅಥವಾ ಸುಂದರವಾಗಿ ಕಾಣಿಸಿಕೊಳ್ಳ ಬೇಕೆಂಬ ಕಾರಣದಿಂದ ಬಟ್ಟೆ, ಬರೆವಸ್ತು, ಒಡವೆ, ಇತ್ಯಾದಿಗಳನ್ನು ಧರಿಸಿಕೊಳ್ಳೋತ್ತಾನೆ. ಇದರ ಹಾಗೆ0ಯೇ ಮಾತನಾಡುವಾಗಲೂ, ಕೇಳುವವರಿಗೆ ಹರ್ಷವಾಗುವಂತೆ, ಕಿವಿಗೆ ಇಂಪಾಗುವಂತೆ ಚಮತ್ಕಾರವಾದ ರೀತಿಯಲ್ಲಿ

ಮಾತನಾಡುವುದೂ ಉಂಟು. ಉದಾಹರಣೆಗೆ: ನಿಮ್ಮ ಹೆಸರೇನು? ಎಂದು ಕೇಳುವುದಕ್ಕೆ ಬದಲಾಗಿ ತಮ್ಮ ಹೆಸರು 0ಯಾವ ಅಕ್ಷರಗಳಿಂದ ಅಲಂಕೃತವಾಗಿದೆ? ಎಂದು ಕೇಳಿದಾಗ ಎರಡೂ ಚಮತ್ಕಾರದ ವಾಣಿ ಕಾಣುವುದು. ಇದರ ಹಾಗೆಯೇ 'ಪೂರ್ವ ದಿಕ್ಕಿನಲ್ಲಿ ಸೂರ್ಯ ಹುಟ್ಟಿದನು' ಎನ್ನುವ ಮಾತನ್ನು ಪೂರ್ವ ದಿಕ್ಕಿನಲ್ಲಿ ಹುಟ್ಟಿದ ಸೂರ್ಯನು ಮುತ್ತೈದೆಯ ಹಣೆಯ ಕುಂಕುಮದಂತೆ ಕಾಣುತ್ತಿದ್ದನು' ಹೀಗೆ ಹೇಳಿದಾಗ ಸೌಂದ0ರ್ಯದ ಚಿತ್ರ, ಅರ್ಥ ಚಮತ್ಕಾರ, ಕೇಳುವವರ ಮನಸ್ಸಿನ ಮೇಲೆ ಪರಿಣಾಮಕಾರಿಯಾಗುವುದು.

" ಅಲಂಕಾರ ಎಂದರೆ ಸೌಂದರ್ಯವನ್ನು ಹೆಚ್ಚಿಸುವ ಸಾಧನ. ಅಂದರೆ ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವ ಸಾಧನ ಅಂದರೆ ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವ ಶಬ್ದಾರ್ಥ ವೈಚಿತ್ರವೇ ಅಲಂಕಾರ".

ಅಲಂಕಾರದಲ್ಲಿ ಎರಡು ವಿಧಗಳಿವೆ. ಅವು ಯಾವುವೆಂದರೆ 1) ಶಬ್ದಾಲಂಕಾರ 2) ಅರ್ಥಾಲಂಕಾರ.

**1. ಶಬ್ದಾಲಂಕಾರ:** ಶಬ್ದಗಳ ಜೋಡಣೆಯ ಚಮತ್ಕಾರದಿಂದ ಕಾವ್ಯದ ಸೌಂದರ್ಯವನ್ನು ಹೆಚ್ಚು ಮಾಡಿದರೆ ಅದನ್ನು ಶಬ್ದಾಲಂಕಾರ ಎಂದು ಕರೆಯುವರು.

ಉದಾ:– 1) ಬಲ್ಲವನೇ ಬಲ್ಲ ಬೆಲ್ಲದ ರುಚಿಯ.

2) ಕತ್ತೆಗೆ ಗೊತ್ತೆ? ಹೊತ್ತ ಕತ್ತುರಿಯ ಪರಿಮಳ?

3) ಎಳೆಗಿಳಿಗಳ ಬಳಗಗಳ ನಳನಳಿಸಿ ಬೆಳೆದ ಕಳವೆಯಎಳೆಯ ಕಾಳಿಗೆ ಆಶಿಸಿ ಬಂದವು.

ಮೇಲಿನ ವಾಕ್ಯಗಳಲ್ಲಿ ಒಂದೇ ವಾಕ್ಯದಲ್ಲಿ – ಬಲ್ಲ, ಬೆಲ್ಲ, ಬಲ್ಲ ಇತ್ಯಾದಿ ಶಬ್ದಗಳೂ, ಕತ್ತೆ, ಹೊತ್ತ, ಗೊತ್ತೆ, ಕತ್ತುರಿ, ಇತ್ಯಾದಿ ಶಬ್ದಗಳೂ, ಎಳೆ, ಗಿಳಿ, ಗಳೆ, ಬಳಗ, ಗಳು, ನಳ, ಕಳವೆ, ಎಳೆ, ಕಾಳು – ಇತ್ಯಾದಿ ಒಂದೇ ಶಬ್ದ ಅಥವಾ ಅಕ್ಷರಗಳು ಪದೇ ಪದೇ ಬಂದು ಶಬ್ದಗಳ ರಚನೆಯಲ್ಲಿ ಬುದ್ಧಿವಂತಿಕೆ ಕಂಡಂತಾಗಿ ಕೇಳುವವರಿಗೆ ಒಂದು ಬಗೆಯ ಹಿತವನ್ನುಂಟು ಮಾಡುವುವು. ಇವೆಲ್ಲ ಶಬ್ದಗಳ ಅಲಂಕಾರಗಳು.

ಶಬ್ದಾಲಂಕಾರದಲ್ಲಿ ಮೂರು ವಿಧಗಳಿವೆ. ಅವು

1) ಅನುಪ್ರಾಸ 2)ಯಮಕ 3) ಚಿತ್ರಕವಿತ್ವ

1. **ಅನುಪ್ರಾಸ** : ಒಂದು ವ್ಯಂಜನಾಕ್ಷರ ಅಥವಾ ಎರಡು ವ್ಯಂಜನಾಕ್ಷರಗಳುಳ್ಳ ಶಬ್ದ ಪದ್ಯದಲ್ಲಿ ಒಂದಕ್ಕಿಂತ ಹೆಚ್ಚು ಪುನರಾಅವರ್ತನೆ0ಯಾಅಗುವುದನ್ನು ಅನುಪ್ರಾಸ, ಎನ್ನುವರು.

ಅನುಪ್ರಾಸವನ್ನು ಮತ್ತೆ ಎರಡು ವಿಧಗಳಾಗಿ ವಿಂಗಡಿಸಲಾಗಿದೆ. 1)ವೃತ್ತ್ಯಾನುಪ್ರಾಸ 2) ಛೇಕಾನುಪ್ರಾಸ.

**ವೃತ್ತ್ಯಾನುಪ್ರಾಸ**:– ಒಂದು ಅಥವಾ ಎರಡು ವ್ಯಂಜನಾಕ್ಷರಗಳು ಪದ್ಯದ ಸಾಲುಗಳಲ್ಲಿ ಮತ್ತೆ ಮತ್ತೆ ಬಂದರೆ ಅಂದರೆ ಪುನಾರಾವರ್ತನೆಗೊಂಡರೆ ಅದನ್ನು 'ವೃತ್ತ್ಯಾನುಪ್ರಾಸ' ಎಂದು ಕರೆಯುತ್ತಾರೆ.

ಉದಾ:– ಬಲ್ಲವನೇ ಬಲ್ಲ ಬೆಲ್ಲದ ರುಚಿಯ

2. ಎಳಗಿಳಿಗಳ ಬಳಗಗಳು ನಳನಳಸಿ ಬೆಳೆದ ಕಳವೆಯ ಎಳೆಯ ಕಾಳೀಗೆ ಎಳಸಿ ಬಂದವು.

'ಲ' ಕಾರ 'ಬ' ಕಾರಗಳು ಪುನರಾವರ್ತನೆಗೊಂಡಿದೆ

'ಳ' ಕಾರ, 'ಗ' ಕಾರಗಳು ಪುನರಾವರ್ತಗೊಂಡಿದೆ.

**ಛೇಕಾನುಪ್ರಾಸ** : ಎರಡೆರಡು ವ್ಯಂಜನಾಕ್ಷರಗಳು ಪದ್ಯದ ಸಾಲುಗಳಲ್ಲಿ ಪುನಾರಾವರ್ತನೆಗೊಂಡರೆ ಅದನ್ನು ಛೇಕಾನುಪ್ರಾಸ' ಎಂದು ಕರೆಯುತ್ತಾರೆ.

ಉದಾ:– ಉಗುಳಿ ಉಗುಳಿ ರೋಗ, ಬಗುಳಿ ಬಗುಳಿ ರಾಗ

2. ಕೇಳಿ ಕೇಳಿ ಕೊಟ್ಟರು, ನೀಡಿ ನೀಡಿ ಕೆಟ್ಟರು

3. ಕೆಲದೊಳ್ ಪುಳಿಂದಿಯರೆ ಪೆ ರ್ಬುಲಿ ಬಂದೊಡ ಮಂಜನಳ್ಕ ನೋಡಂ ನೋಡಂ ಚಲದಿಂ ಕಾಡಂ ಕಾಡಂ ಸಲೆ ಪಸಿವಂ ಮರೆದು ತಣಿದು ಬೇಡಂ ಬೇಡಂ

4. ಮಾಡಿ ಮಾಡಿ ಕೆಟ್ಟರೂ ಮನವಿಲ್ಲದೆ ನೀಡಿ ನೀಡಿ ಕೆಟ್ಟರೂ ನಿಜವಿಲ್ಲದೆ.

**2. ಯಮಕ:–**

ಮೂರು ಅಥವಾ ಅದಕ್ಕಿಂತ ಹೆಚ್ಚು ಅಕ್ಷರಗಳುಳ್ಳ ಪದವಾಗಲಿ, ಪದಭಾಗವಾಗಲಿ ಪದ್ಯದ ಆದಿ, ಮಧ್ಯ ಅಥವಾ ಅಂತ್ಯದಲ್ಲಿ ನಿಯತವಾಗಿ ಮತ್ತೆ ಮತ್ತೆ ಬಂದರೆ ಅದನ್ನು ಯಮಕ ಎಂದು ಕರೆಯುವರು.

ಉದಾ:– ಅಮಳ್ಗಲ್ ನಯವಿಕ್ರಮಗುಣ
ದಮಳ್ಗಲ್ ನೃಪಶಾಸ್ತ್ರ ಪರಿಣತರವರಂ.
ಸಮರ ದೊಳಗಗ್ರ ಶೌರ್ಯಂ
ಸಮರಸ ಸಂಪನ್ನನಾವನುದಾರನಪ್ಪನ್.

**3. ಚಿತ್ರಕವಿತ್ವ:–**

ಪ್ರೌಢ ಪಂಡಿತ ಕವಿಗಳು ತಮ್ಮ ಬುದ್ಧಿ ಕೌಶಲ್ಯದಿಂದ ವೈಚಿತ್ರ್ಯ ಪೂರ್ಣವಾಗಿ ಅಕ್ಷರಗಳನ್ನು ಪದಗಳನ್ನು ಜೋಡಿಸಿ ಪದ್ಯ ರಚಿಸುತ್ತಾರೆ. ಇದಕ್ಕೆ ಚಿತ್ರ ಕವಿತ್ವ ಅಥವಾ ಬಂಧ ಎಂದು ಹೆಸರು. ಇದರಲ್ಲಿ ನಿರೋಷ್ಠ್ಯ, ತಾಲವ್ಯ, ಏಕಾಕ್ಷರ, ದಂತ್ಯಾಕ್ಷರ, ತ್ರ್ಯಕ್ಷರ ಹಾರ ಬಂಧ, ಮುರಜಬಂಧ ಇತ್ಯಾದಿ ಪ್ರಕಾರಗಳಿವೆ.

ಉದಾ:– ನನ್ದನ ನನ್ದನ ನಿನ್ನೊ
ನ್ನಧನ್ದ ಮೈ ಮುಂದೆ ನಿನ್ದುದೆನ್ದೆನೆ ಮುದದಿ
ನ್ದನ್ದಿನ್ದು ನ್ದೆನ್ನದೆ ನೀ
ನೆನ್ದುಂ ಮನ್ನನದೆ ನೆಮ್ಮಿನಿ ನ್ದೀ ಮುದಮುಂ.

ಇಲ್ಲಿ ಕವಿ ಬುದ್ಧಿ ಪೂರ್ವಕವಾಗಿ ಶಬ್ದಗಳನ್ನು ಬಳಸಿದ್ದರಿಂದ ಇದೊಂದು ಶಬ್ದಾಟದಂತಿದೆ.

**2. ಅರ್ಥಾಲಂಕಾರ**

ಕಾವ್ಯದಲ್ಲಿ ಬಳಸಲಾದ ಪದಗಳ ಅರ್ಥ ಚಮತ್ಕಾರದಿಂದ ಕಾವ್ಯದ ಸೌಂದರ್ಯ ಹೆಚ್ಚಾದರೆ ಅದನ್ನು ಅರ್ಥಾಲಂಕಾರ ಎಂದು ಕರೆಯುತ್ತಾರೆ. ಅರ್ಥಾಲಂಕಾರದಲ್ಲಿ ಸುಮಾರು ನೂರಕ್ಕೂ ಮಿಕ್ಕಿದ ಅಲಂಕಾರಗಳಿವೆ. ಇವುಗಳಲ್ಲಿ ಬರುವ ಉಪಮೇಯ, ಉಪಮಾನಗಳ ಸಹಾಯದಿಂದ ಅದು ಯಾವ ಅಲಂಕಾರ ಎಂದು ನಿರ್ಧರಿಸಲಾಗುವುದು.

ಉದಾ:– ಮಗುವಿನ ಮುಖವು ಚಂದ್ರನ ಮುಖದಂತೆ ಮನೋಹರವಾಗಿದೆ. ಮಗುವಿನ ಮುಖದಲ್ಲಿನ ಆಹ್ಲಾದಕರವೂ, ಚಂದ್ರನಲ್ಲಿರುವ ಆಹ್ಲಾದಕತ್ವವೂ ಸಮಾನಾಗಿದೆ. ಚಂದ್ರನನ್ನು ನೋಡಿದಾಗ ಉಂಟಾಗುವ ಮನೋಹರತ್ವವು ಮಗುವಿನ ಮುಖ ನೋಡಿದಾಗಲೂ ಆಗುತ್ತದೆ. ಈ ಅರ್ಥ ಚಮತ್ಕಾರ ವಾಕ್ಯದಲ್ಲಿ ಅಡಗಿದೆ.

**ಉಪಮೇಯ:** ಉಪಮೇಯವನ್ನು 'ವರ್ಣ್ಯ' ಎಂತಲೂ ಕರೆಯುವರು. ಅಲಂಕಾರ ವಾಕ್ಯದಲ್ಲಿ ಕವಿ ಯಾವ ವಸ್ತುವನ್ನು ವರ್ಣಿಸುತ್ತಾನೆಯೋ ಅದೇ ವರ್ಣ್ಯ:– ಅಂದರೆ ಕವಿ ಹೋಲಿಸುವ ವಸ್ತು. ಎಂದರ್ಥ.

**ಉಪಮಾನ:–** ಉಪಮಾನವನ್ನು 'ಅವರ್ಣ್ಯ' ಎಂತಲೂ ಕರೆಯುತ್ತಾರೆ. ಕವಿ ಯಾವ ವಸ್ತುವನ್ನು ಅಧಾರವಾಗಿಟ್ಟುಕೊಂಡು ಅಥವಾ ಮಾನವಾಗಿಟ್ಟುಕೊಂಡು ವರ್ಣಿಸಲಾಗುತ್ತದ0ಯೋ ಆ ವಸ್ತುವೇ ಅವರ್ಣ್ಯ ಅಥವಾ ಉಪಮಾನ. (ಹೋಲಿಕೆಗೆ ಒಳಪಡುವ ವಸ್ತು ಎಂದರ್ಥ)

**ವಾಚಕಪದ:–** ಉಪಮೇಯಕ್ಕೂ (ಹೋಲಿಸುವ ವಸ್ತುವಿಗೂ) ಉಪಮಾನಕ್ಕೂ ( ಹೋಲಿಕೆಗೆ ಒಳಪಡುವವಸ್ತುವಿಗೂ) ಹೋಲಿಕೆಯನ್ನು ಹೇಳು ವಂತಹ ಅಂತೆ, ವೋಲ್, ವೊಲ್, ಅಂಗ ಮುಂತಾದ ಪದಗಳೇ ವಾಚಕ ಪದಗಳು (ಉಪಮವಾಚಕ) ಇಲ್ಲಿ, ಅಂತೆ, ಅಂಗ,ವೊಲ್, ಎಂಬುದು ವಾಚಕ ಪದಗಳು.

**ಸಮಾನಧರ್ಮ:**ಉಪಮೇಯಕ್ಕೂ ಉಪಮಾನಕ್ಕೂ ಸಮಾನವಾಗಿ ಹೊಂದಿಕೆಯಾಗುವ ಕ್ರಿಯಾಪದವೇ ಸಮಾನಧರ್ಮ.

## ಉಪಮಾಲಂಕಾರ:

ಉಪಮಾ ಎಂದರೆ ಹೋಲಿಕೆ ಎಂದರ್ಥ ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಕಾರವೆನಿಸುವುದು. (ಹೋಲಿಕೆಯೆಂದರೆ ಆಕರ್ಷಕ ಹೋಲಿಕೆ.) ಒಂದು ವಸ್ತುವನ್ನು ಇನ್ನೊಂದು ವಸ್ತುವಿಗೆ ಅರ್ಥ ಸಾದೃಶ್ಯವಾಗಿ ಹೋಲಿಸಿ, ವರ್ಣಿಸುವುದಕ್ಕೆ ಉಪಮಾಲಂಕಾರ ಎಂದು ಕರೆಯುವರು.

ಉದಾ:– ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ ಇಲ್ಲಿ ಹಾವಿಗೆ ಹಾಲೆರೆದರೆ ವಿಷವೇ ವೃದ್ಧಿಯಾಗುವುದಲ್ಲದೆ ಬೇರಿಲ್ಲ. ಇದರ ಹಾಗೇಯೇ ನೀಚರಿಗೆ ಉಪಕಾರ ಮಾಡಿದರೆ ಅವರು ಅಪಕಾರವನ್ನೇ ಮಾಡುವರಲ್ಲದೆ ಪ್ರತಿಯಾಗಿ ಉಪಕಾರ ಮಾಡುವುದಿಲ್ಲ. ಇಲ್ಲಿ ನೀಚರಿಗೆ ಮಾಡಿದ ಉಪಕಾರವನ್ನು ಹಾವಿಗೆ ಹಾಲೆರೆಯುವ ಕ್ರಿಯೆಗೆ ಹೋಲಿಸಲಾಗಿದೆ.

**1. ಮನೋರಮೆಯ ಹಣೆ ಬಾಲಚಂದ್ರನಂತೆ ಆಕರ್ಷಣೀಯವಾಗಿತ್ತು**

ಅಲಂಕಾರ : ಉಪಮಾಲಂಕಾರ

ಉಪಮೇಯ : ಮನೋರಮೆಯ ಹಣೆ

ಉಪಮಾನ : ಬಾಲಚಂದ್ರ

ಉಪಮವಾಚಕ ಪದ : ಅಂತೆ

ಸಮಾನಧರ್ಮ : ಆಕರ್ಷಣೀಯವಾಗಿತ್ತು.

ಸಮನ್ವಯ : ಉಪಮೇಯವಾದ ಮನೋರಮೆಯ ಹಣೆಯನ್ನು

ಉಪಮಾನವಾದ ಬಾಲಚಂದ್ರನಿಗೆ ಹೋಲಿಸಿ, ವರ್ಣಿಸಲಾಗಿದೆ.

ಲಕ್ಷಣ : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ

**2. ಬಿರುಗಾಳಿಗೆ ತುತ್ತಾದ ಮರಗಿಡಗಳು ಬೀಳುವಂತೆ ಭರತ ಕುಲದ ನೂರೈವರು ಬಾಲಕರು ಬಿದ್ದರು.**

ಅಲಂಕಾರ : ಉಪಮಾಲಂಕಾರ.

ಉಪಮೇಯ : ಭರತ ಕುಲದ ನೂರೈವರು ಬಾಲಕರು

ಉಪಮಾನ : ಬಿರುಗಾಳಿಗೆ ತುತ್ತಾದ ಮರಗಿಡಗಳು

ಉಪಮವಾಚಕಪದ : ಅಂತೆ

ಸಮಾನಧರ್ಮ : ಬೀಳುವುದು.

ಸಮನ್ವ0ಯ : ಇಲ್ಲಿ ಉಪಮೇ0ಯವಾದ ಭರತ ಕುಲದ ನೂರೈವರ ಬಾಲಕರನ್ನೂ ಉಪಮಾನವಾದ ಬಿರುಗಾಳಿಗೆ ತುತ್ತಾದ ಗಿಡಮರಗಳಿಗೆ ಹೋಲಿಸಿ ವರ್ಣಿಸಲಾಗಿದೆ.

ಲಕ್ಷಣ: ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಲುವುದೇ ಉಪಮಾಲಂಕಾರ.

**3. ಗೀಜಗನ ಗೂಡುಗಳು ತೊಟ್ಟಿಲಿನಂತೆ ತೂಗಾಡುತ್ತಿದ್ದವು.**

ಅಲಂಕಾರ : ಉಪಮಾಲಂಕಾರ

ಉಪಮೇಯ : ಗೀಜಗನ ಗೂಡುಗಳು

ಉಪಮಾನ : ತೊಟ್ಟಿಲು

ಉಪಮಾವಾಚಕ ಪದ : ಅಂತೆ

ಸಮಾನಧರ್ಮ : ತೂಗಾಡುವುದು

ಸಮನ್ವಯ : ಉಪಮೇಯವಾದ ಗೀಜಗನ ಗೂಡುಗಳನ್ನು

ಉಪಮಾನವಾದ ತೊಟ್ಟಿಲಿಗೆ ಹೋಲಿಸಿ, ವರ್ಣಿಸಲಾಗಿದೆ.

ಲಕ್ಷಣ : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

**4. ಬಾನಿನಲಿ ಗಾಳಿಪಟಗಳು ಹಕ್ಕಿಗಳಂತೆ ಹಾರಾಡುತ್ತಿದ್ದವು**

ಅಲಂಕಾರ : ಉಪಮಾಲಂಕಾರ

ಉಪಮೇಯ: ಬಾನಿನಲಿ ಗಾಳಿಪಟಗಳು

ಉಪಮಾನ : ಹಕ್ಕಿಗಳು

ಉಪಮವಾಚಕ ಪದ : ಅಂತೆ

ಸಮಾಗಧರ್ಮ : ಹಾರಾಡುತ್ತಿದ್ದವು.

ಸಮನ್ವಯ : ಇಲ್ಲಿ ಉಪಮೇಯವಾದ ಬಾನಿನಲಿ ಗಾಳಿಪಟಗಳನ್ನು ಉಪಮಾನವಾದ ಹಕ್ಕಿಗಳಿಗೆ ಹೋಲಿಸಿ ವರ್ಣಿಸಲಾಗಿದೆ.

ಲಕ್ಷಣ : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

**5. ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.**

ಅಲಂಕಾರ : ಉಪಮಾಲಂಕಾರ

ಉಪಮೇಯ : ಭೀಮ ದುರ್ಯೋಧನನರು

ಉಪಮಾನ : ಮದಗಜಗಳು

ಉಪಮಾವಾಚಕಪದ : ಅಂತೆ

ಸಮಾನಧರ್ಮ : ಹೋರಾಟ

ಸಮನ್ವಯ : ಉಪಮೇಯವಾದ ಭೀಮ ದುರ್ಯೋಧನರನ್ನು ಉಪಮಾನವಾದ ಮದಗಜಗಳಿಗೆ ಹೋಲಿಸಲಾಗಿದೆ.

ಲಕ್ಷಣ : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

**6. ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ**

ಅಲಂಕಾರ : ಉಪಮಾಲಂಕಾರ.

ಉಪಮೇಯ : ಗುಂಡು ಸುರಿಯುವುದು

ಉಪಮಾನ : ಸಿಡಿಲು ಸಿಡಿಯುವುದು

ಉಪಮವಾಚಕ ಪದ : ಹಂಗ (ಅಂತೆ)

ಸಮಾನಧರ್ಮ : ಸುರಿಯುವುದು.

**ಸಮನ್ವಯ : ಉಪಮೇಯವಾದ ಗುಂಡು ಸುರಿಯುವುದನ್ನು ಉಪಮಾನವಾದ ಸಿಡಿಲು ಸಿಡಿದಂತೆ ಎಂದು ಹೋಲಿಸಿದ್ದಾರೆ.**

ಲಕ್ಷಣ: ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ.

ಉಪಮಾಲಂಕಾರಕ್ಕೆ ಉದಾಹರಣೆಗಳು

1. ಸೀತೆಯ ಮುಖ ಕಮಲದಂತೆ ಅರಳಿತು.
2. ಒಳಗಿನ ಮಂದಿ ಗುಂಡು ಹೊಡಿದರೂ ಮುಂಗಾರಿ ಸಿಡಿಲು ಸಿಡಿದ್ಹಾಂಗ.
3. ದುಷ್ಟ ಬುದ್ಧಿಯ ಮನೆಯೊಳ್ ಕಿಚ್ಚನಿಕ್ಕುವಂತೆ.
4. ಮರವನೇರಿದ ಮರ್ಕಟನಂತೆ.
5. ನೊಳವಿಂಗೆ ಕುಪ್ಪೆ ವರವೆಂಬವೊಲಾಂಬರ ಮುಂಟೆ ನಿನ್ನದೊಂದಳವು?
6. ಬಳ್ಳಾರಿಯ ಮನೆಯಂ ಪರಕೆಯ ಕುರಿಯಂ ಪುಗಿಸುವಂತೆ ವಟವಿಟಪಿ ಕೋಟರ ಕುಟೀರಾಂತರಮಂ ಪುಗಿಸಿ
7. ಹಸುಳೆಯಂದದಿ ಒಲಿದಳು
8. ದುರ್ಯೊಧನನು ಅರಗಿನ ಮನೆ ಕಟ್ಟಿದಂತೆ

9. ಪುಣ್ಯದೊಂದು ಪರ್ಮರನುಳಿದಂತೆ ನೀನುಳಿದೆ.

10. ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರೆತಂತೆ.

11. ಅಂದಣವನೇರಿದ ಸೊಣಗನಂತೆ

12. ನುಡಿದರೆ ಮುತ್ತಿನ ಹಾರದಂತಿರಬೇಕು

13. ನುಡಿದರೆ ಮಾಣಿಕ್ಯದ ದೀಪ್ತಿಯಂತಿರ ಬೇಕು.

14. ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು

15. ಬೆಂಕಿನಂತೆ ದೇಹವನ್ನು ಹುದುಗಿಸಿಕೊಂಡ ಹುಲಿ.

16. ಪ್ರಾಚೀನ ಮಹಾಕಾವ್ಯದಂತೆ ವೊಲವರ್ಥವೊಂದು ಮಹಾಕೋಶವಾಗಿದೆ

17. ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿಯಂತೆ

**ರೂಪಕಾಲಂಕಾರ**

1. ವಿದ್ವಾಂಸನಾದ ಆತನು ಸಾಕ್ಷತ್ ಸರಸ್ವತಿ
2. ಆ ಮನುಷ್ಯ ನಿಜವಾದ ದೇವರು
3. ಈ ಶಾಲೆಗೆ ಆ ವಿದ್ಯಾರ್ಥಿಯೊಂದು ರತ್ನ
4. ಮನೆಯೇ ಧರ್ಮಾಶ್ರಮ.

ಇಲ್ಲಿ – ವಿದ್ವಾಂಸನೂ ಸಾಕ್ಷತ್ ಸರಸ್ವತಿಯೂ ಒಂದೇ ಎಂದು ಭೇದವಿಲ್ಲದೆ ಹೇಳಲಾಗಿದೆ.

* ಮನುಷ್ಯನೂ, ದೇವರು ಒಂದೇ ಎಂದು ಭೇದವಿಲ್ಲದೇ (ಅಭೇದವಾಗಿ) ಹೇಳಿದೆ.
* ವಿದ್ಯಾರ್ಥಿಯೂ ರತ್ನವೂ ಒಂದೇ ಎಂದು ಭೇದವಿಲ್ಲದೆ ಹೇಳಲಾಗಿದೆ
* ಮನೆಯೂ ಧರ್ಮಾಶ್ರಮ ಒಂದೇ ಎಂದು ಭೇದವಿಲ್ಲದೆ (ಅಭೇದವಾಗಿ) ಹೇಳಲಾಗಿದೆ.

" ವರ್ಣಿಸುವ ವಸ್ತುವು (ಉಪಮೇಯ) ಇನ್ನೊಂದರಂತೆ (ಉಪಮಾನದಂತೆ) ಇದೆ ಎಂದು ಹೇಳದೆ, ಎರಡು ವಸ್ತುಗಳು ಎಂದರೆ ಉಪಮೇಯ ಉಪಮಾನಗಳೆರಡೂ ಒಂದೇ ಎಂದು ಭೇಧವಿಲ್ಲದಂತೆ ಹೇಳುವುದೇ ರೂಪಕಾಲಂಕಾರ".

ಉದಾ:– !ಪುರದ ಪುಣ್ಯಂ ಪುರಷರೂಪಿಂದ ಪೋಗುತಿದೆ.

**1. ಪರಿಜನದ ಭಾಗ್ಯದಡವಿಗೆ ನಡೆಯುತ್ತಿದೆ.**

ಇಲ್ಲಿ ಹರಿಶ್ಚಂದ್ರನೆಂಬ ಉಪಮೇಯವೂ ಪುರದ ಪುಣ್ಯವೆಂಬ ಉಪಮಾನವೂ ಒಂದೇ ಎಂದು ಹೇಳಲಾಗಿದೆ. ಎರಡನೆಯ ವಾಕ್ಯದಲ್ಲಿ ಹರಶ್ಚಂದ್ರನೆಂಬ ಉಪಮೇಯವೂ ಪರಿಜನರ ಭಾಗ್ಯವೆಂಬ ಉಪಮಾನವೂ ಒಂದೇ ಎಂದು ಹೇಳಲಾಗಿದೆ.

**ಸೀತೆಯ ಮುಖ ಕಮಲ ಅರಳಿತು.**

ಅಲಂಕಾರ : ರೂಪಕಾಲಂಕಾರ

ಉಪಮೇಯ : ಸೀತೆಯ ಮುಖ

ಉಪಮಾನ : ಕಮಲ

ಸಮನ್ವಯ : ಇಲ್ಲಿ ಉಪಮೇಯವಾದ ಸೀತೆಯ ಮುಖವನ್ನು ಉಪಮಾನವಾದ ಕಮಲಕ್ಕೆ ಅಭೇದವಾಗಿ ರೂಪಿಸಿದೆ. ಹಾಗಾಗಿ ಇದು ರೂಪಕಾಲಂಕಾರ

ಲಕ್ಷಣ: ಉಪಮೇಯ ಉಪಮಾನಗಳಲ್ಲಿ ಅಭೇದವನ್ನು ಕಲ್ಪಸಿ ವರ್ಣಿಸುವುದು.

**2. ಮಾರಿಗೌತಣವಾಯ್ತು ನಾಳಿನ ಭಾರತವು**

ಅಲಂಕಾರ : ರೂಪಕಾಲಂಕಾರ

ಉಪಮೇಯ : ನಾಳಿನ ಭಾರತವು

ಉಪಮಾನ : ಮಾರಿಗೌತಣವುಯ್ತು

ಸಮನ್ವಯ : ಇಲ್ಲಿ ಉಪಮೇಯವಾದ ನಾಳಿನ ಭಾರತವನ್ನು ಉಪಮಾನವಾದ ಮಾರಿಗೆ ಔತಣವಾಯ್ತು ಎಂದು ಅಭೇದ ಕಲ್ಪಿಸಿ ಹೇಳಿರುವುದರಿಂದ ರೂಪಕಾಲಂಕಾರ.

ಲಕ್ಷಣ: ಉಪಮೇಯ ಉಪಮಾನಗಳಲ್ಲಿ ಅಭೇದವನ್ನು ಕಲ್ಪಿಸಿ ವರ್ಣಿಸುವುದೇ ರೂಪಕಾಲಂಕಾರ.

**3. ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನ ನಿರಿಯದೆ ಪೇಳು ವಿಶ್ವಾಮಿತ್ರ.**

ಅಲಂಕಾರ : ರೂಪಕಾಲಂಕಾರ.

ಉಪಮೇಯ : ಒಡಲಬೇಗ

ಉಪಮಾನ : ಬೆಂಕಿಯುರಿ

ಸಮನ್ವಯ : ಉಪಮೇಯವಾದ ಅಯೋಧ್ಯೆಯ ಪ್ರಜೆಗಳ ಓಡಲ ಬೇಗೆಯನ್ನು ಉಪಮಾನವಾದ ಬೆಂಕಿಯ ಉರಿಗೆ ಅಬೇಧವಾಗಿ ಹೇಳಲಾಗಿದೆ.

ಲಕ್ಷಣ : ಉಪಮೇಯ ಮತ್ತು ಉಪಮಾನಗಳಿಗೆ ಭೇಧವು ಕಂಡು ಬಂದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದು ರೂಪಕಾಲಂಕಾರ.

**4.ಶೋಕದುಲ್ಕೆ**

ಅಲಂಕಾರ : ರೂಪಕಾಲಂಕಾರ

ಉಪಮೇಯ : ಶೋಕ (ಶ್ರೀರಾಮನ ಶೋಕ)

ಉಪಮಾನ: ಉಲ್ಕೆ

ಸಮನ್ವಯ : ಇಲ್ಲಿ ಉಪಮೇಯವಾದ ಶ್ರೀರಾಮನ ಶೋಕವನ್ನು ಉಪಮಾನವಾದ ಉಲ್ಕೆಗೆ ಅಭೇಧವಾಗಿ ಹೇಳಿರುವುದುರಿಂದ ಇದು ರೂಪಕಾಲಂಕಾರ

ಲಕ್ಷಣ : ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡು ಬರದೆ ಅವೆರಡೂ ಒಂದೇ ಎಂದು ವರ್ಣಿಸುವುದು.

**5. ವದನಾರವಿಂದ**

ಅಲಂಕಾರ : ರೂಪಕಾಲಂಕಾರ

ಉಪಮೇಯ : ವದನ (ಮುಖ)

ಉಪಮಾನ : ಅರವಿಂದ (ಕಮಲ)

ಸಮನ್ವಯ : ಇಲ್ಲಿ ಉಪಮೇಯವಾದ ಶಾನುಭೋಗರ ವದನವನ್ನು ಉಪಮಾನವಾದ ಅರವಿಂದ ಇವೆರಡರ ನಡುವೆ ಅಭೇದ ಕಲ್ಪನೆಯನ್ನು ಮಾಡಲಾಗಿದೆ.

ಲಕ್ಷಣ: ಉಪಮೇಯ ಮತ್ತು ಉಪಮಾನಗಳಿಗೆ ಭೇಧವು ಕಂಡು ಬರೆದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದು ರೂಪಕಾಲಂಕಾರ

**ರೂಪಕಾಲಂಕಾರಕ್ಕೆ ಉದಾಹರಣೆಗಳು**

1. ಕಾದಾಟದಾಟ
2. ಆತ್ಮ ಸುರಭಿ
3. ಮನೆವಾಳ್ತೆಯೇ ಧರ್ಮ (ಮನೆಯ ಬಾಳುವೆ – ಧರ್ಮ)
4. ವಿನಿಯನೂಳಿಗ ದೇವಪೂಜೆ (ಪತಿಯ ಸೇವೆ ದೇವರ ಪೂಜೆ)
5. ಬಂಗಾರ ಮೋರೆ ತೋಳೆದೇನು
6. ಕನಸಿನಿರುಳು
7. ಸಾವಿತ್ರಿಯ ಮುಖಕಮಲ ಅರಳಿತು
8. ಪ್ರೀತಿಯ ಹಣತೆ ಹಚ್ಚೋಣ
9. ವಿಶ್ವೇಶ್ವರಯ್ಯನವರು ಶಿಕ್ಷಣವು ಸಂಜೀವಿನಿ ಎಂಬುದನ್ನರಿತ್ತಿದ್ದರು.

**ದೃಷ್ಟಾಂತಾಲಂಕಾರ :**

1. ಊರು ಉಪಕಾರ ಅರಿಯದು; ಹೆಣ ಶೃಂಗಾರ ಅರಿಯದು
2. ಅಟ್ಟ ಮೇಲೆ ಒಲೆ ಉರಿಯಿತು; ಕೆಟ್ಟ ಮೇಲೆ ಬುದ್ಧಿ ಬಂತು.
3. ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ

ಈ ನಾಣ್ಣುಡಿಗಳನ್ನು ವಿಚಾರ ಮಾಡಿದರೆ ಮೊದಲನೆಯ ವಾಕ್ಯದಲ್ಲಿ ಊರಿಗೆ ಉಪಕಾರ ಮಾಡುವುದೂ, ಹೆಣಕ್ಕೆ ಶೃಂಗಾರ ಮಾಡುವುದೂ ಒಂದೇ

ಎರಡನೆಯ ವಾಕ್ಯದಲ್ಲಿ ಅಡಿಗೆಯಾದ ಮೇಲೆ ಒಲೆ ಉರಿಯಹತ್ತಿತ್ತು. ಮನುಷ್ಯ ಕೆಟ್ಟ ಮೇಲೆ ಬುದ್ಧಿ ಬಂತು. ಮೂರನೆಯ ವಾಕ್ಯದಲ್ಲಿ ಮಾತಿನ ಮಹತ್ವ ತಿಳಿದವನು ಜಗಳ ಮಾಡಬೇಕಾದ ಪ್ರಮೇಯವೇ ಇಲ್ಲ. ಊಟದ ಮರ್ಮ ಅರಿತವನಿಗೆ ರೋಗದ ಭಯವಿಲ್ಲ ಎಂಬ ಎರಡೆರಡು ಮಾತುಗಳ ಅರ್ಥ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿ ಬಿಂಬಗಳಂತೆ ಕಾಣುತ್ತದೆ.

'ಎರಡು ಬೇರೆ ಬೇರೆ ವಾಕ್ಯಗಳು (ವರ್ಣಿಸುವ ವಿಷಯದ ವಾಕ್ಯ, ಉಪಮಾನದ ವಾಕ್ಯಗಳು) ಅರ್ಥ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದು ದೃಷ್ಟಾಂತಾಲಂಕಾರ".

ಉದಾ:– ನಿಂದಿಸುವರ್ ದುರ್ಜನರ್ ಎಂ
ಬೊಂದು ಭಯಂಬೆತ್ತು ಸುಕವಿರಚಿಸನೆ ಕೃತಿಯಂ?
ಮಂದೇಹರಭಯದಿಂದರ
ವಿಂದಸಖಂ ನಿಜಮಯಾಖನಂ ಪ್ರಸರಿಸನೇ? (ರಾಜ ಶೇಖರ ವಿಲಾಸ)

1. ದುರ್ಜನರು ನಿಂದಿಸುತ್ತಾರೆಂಬ ಭಯದಿಂದ ಸತ್ಕವಿಯಾದವನು ತನ್ನ ಕೃತಿಯನ್ನು ರಚಿಸದಿರುವನೆ?
2. ಕತ್ತಲೆಯ ಭಯದಿಂದ ಸೂರ್ಯನು ತನ್ನ ಕಿರಣಗಳನ್ನು ಪ್ರಸರಿಸದಿಸುವನೆ?

ಇಲ್ಲಿ ದುರ್ಜನರು ನಿಂದಿಸುತ್ತಾರೆಂಬ ಹೆದರಿಕೆಯನ್ನು ಗಣನೆಗೆ ತೆಗೆದು ಕೊಳ್ಳದೇ ಒಳ್ಳೆಯ ಕವಿಯಾದವನು ಕೃತಿಯನ್ನು ರಚಿಸಿಯೇ ರಚಿಸುತ್ತಾನೆಂಬ ಮಾತಿಗೂ, ಕತ್ತಲೆಯ ಹೆದರಿಕೆಯಿಂದ ಸೂರ್ಯನು ಸುಮ್ಮನಿರದೆ ಕಿರಣವನ್ನು ಪಸರಿಸಿಯೇ ಪಸರಿಸುತ್ತಾನೆ. ಎಂಬ ಮಾತಿಗೂ ಅರ್ಥ ಸಾದೃಶ್ಯದಿಂದ ಬಿಂಬ ಪ್ರತಿಬಿಂಬ ಭಾವವು ಉಪಮೇಯ – ಉಪಮಾನಗಳೆರಡರಲ್ಲೂ ವ್ಯಕ್ತವಾಗುವುದರಿಂದ ಇದು ದೃಷ್ಟಾಂತಾಲಂಕಾರ

2. ಎನಿತೊಳವಪಾಯ ಕೋಟಿಗ
ಳನಿತರ್ಕ ಗೇಹಮಲ್ತೆ ದೇಹಮಿದಂನೆ
ಟ್ಟನೆ ಪೊತ್ತು ಸುಖವನರಸುವ
ಮನುಜಂ ಮೊರಡಿ ಯೊಳೆ
ಮಾಧುಫಳಮ ನರಸದಿರಂ (ಯಶೋಧರ ಚರಿತೆ)

1. ಅಪಾ0ಯಗಳೆಷ್ಟಿವೆ0ಯೋ ಅಷ್ಟೆಲ್ಲಕ್ಕೂ ಮನೆಯಂತಿರುವ ಈ ದೇಹವನ್ನು ಧರಿಸಿ ಸುಖವೇ ಬೇಕು ದುಃಖವು ಬೇಡ ಎನ್ನುವ ಮನುಷ್ಯನು.
2. ಕಲ್ಲು ಮೊರಡಿಯಲ್ಲಿ ಮಾದಳ ಫಲವನ್ನು ಅರಸದೆ ಇರುವನೇ?

ಇಲ್ಲಿ ಆನೇಕ ಆಪಾಯಗಳನ್ನು ಪಡೆಯುವುದಕ್ಕೆ ಕಾರಣವಾದ ಈ ದೇಹವನ್ನು ಧರಿಸಿ ಕೇವಲ ಸುಖವೇ ಬೇಕು ಎನ್ನುವ ಮನುಷ್ಯನೂ. ಕಲ್ಲು ಮೊರಡಿಯ ಪ್ರದೇಶದಲ್ಲಿ ಮಾದಳ ಹಣ್ಣನ್ನು ಹುಡುಕುವ ಮನುಷ್ಯನೂ ಒಂದೇ ಏಕೆಂದರೆ ಕಲ್ಲು ಮೊರಡಿಯಲ್ಲಿ ಮಾದಳ ಹಣ್ಣು ಸಿಗದು. ಅದರಂತೆ ಮನುಷ್ಯನ ದೇಹಕ್ಕು ಆಪಾಯಗಳು ಅನಿವಾರ್ಯ ಅವು ಬಂದೇ ಬರುತ್ತದೆ ಹೀಗೆ ಉಪಮೇಯ – ಉಪಮಾನ ವಾಕ್ಯಗಳಿಗೆ ಬಿಂಬ ಪ್ರತಿಬಿಂಬಭಾವ ತೋರುವುದರಿಂದ ಇದು ದೃಷ್ಟಾಂತಾಲಂಕಾರ.

## ಉತ್ರೇಕ್ಷಾಲಂಕಾರ:

"ರಕ್ತದ ಸಮುದ್ರಕ್ಕೆ ಸೇತುವೆಯನ್ನು ಕಟ್ಟಲು ಈ ರೀತಿ ಚಿಕ್ಕ ಚಿಕ್ಕ ಬೆಟ್ಟಗಳನ್ನು ಹೊಸದಾಗಿ ಹರಡಿರುವರೋ ಎನ್ನುವಂತೆ ಸತ್ತು ಬಿದ್ದ ಆನೆಗಳ ಹಿಂಡು ಕಾಣುತ್ತಿತ್ತು?

ಇಲ್ಲಿ ಸತ್ತು ಬಿದ್ದ ಆನೆಗಳು ರಣರಂಗದ ಸುತ್ತೆತ್ತಲೂ ಹರಡಿ ಬಿದ್ದಿದ್ದವು. ರಣರಂಗವೆಲ್ಲಾ ರಕ್ತಮಯವಾಗಿತ್ತು. ಈ ಸನ್ನಿವೇಶವನ್ನೂ ಕವಿ ಬೇರೊಂದು ರೀತಿಯಲ್ಲಿ ಕಲ್ಪಿಸಿಕೊಂಡನು. (ಸಂಭಾವಿಸಿದನು) ರಾಮ ಲಕ್ಷ್ಮಣರು ಹಿಂದೆ ಸಮುದ್ರಕ್ಕೆ ಸೇತುವೆ ಕಟ್ಟಲು ಬೆಟ್ಟಗಳನ್ನು ಕಿತ್ತು ತಂದು ಹರಡಿದ್ದರೆಂಬ ಪ್ರಸಿದ್ಧಾಂಶವನ್ನು ಜ್ಞಾಪಿಸಿಕೊಂಡ ಕವಿ, ಈಗ ಅವನ ಮಕ್ಕಳೇ ಆದ ಲವಕುಶರು ರಕ್ತದ ಸಮುದ್ರಕ್ಕೆ ಸೇತುವೆ ಕಟ್ಟಲು ಚಿಕ್ಕ ಚಿಕ್ಕ ಬೆಟ್ಟಗಳನ್ನು ತರಿಸಿ ಹರಡಿಸಿರುವರೋ ಎನ್ನುವ ಹಾಗೆ ರಕ್ತ ಮಡುವಿನಿಂದ ಕೂಡಿದ ರಣರಂಗದಲ್ಲಿ ಸತ್ತು ಬಿದ್ದು ಸುತ್ತಲೂ ಹರಡಿಕೊಂಡಿರುವ ಆನೆಗಳು ಕಂಡವೆಂದು ಕಲ್ಪಸಿ ಹೇಳಿದ್ದಾನೆ. ಹೀಗೆ ಕವಿ ಕಲಿತಜ್ಞಾನದಿಂದ ಹೇಳುವುದು ಉತ್ರೇಕ್ಷೆಯೆನಿಸುವುದು.

"ಉಪಮೇಯವಾದ ವಸ್ತುವನ್ನು ಅಥವಾ ಸನ್ನಿವೇಶವನ್ನು ಉಪಮಾನವಾದ ವಸ್ತುವನ್ನಾಗಿ ಅಥವಾ ಸನ್ನಿವೇಶವನ್ನಾಗಿ ಕಲ್ಪಿಸುವುದೇ ಉತ್ರೇಕ್ಷಾಲಂಕಾರ"

ಉದಾ:–

1) ಅಚ್ಛೋದ ಸರೋವರವು ತ್ರೈಲೋಕ್ಯ ಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.

ಅಲಂಕಾರ:– ಉತ್ರೇಕ್ಷಾಲಂಕಾರ

ಉಪಮೇಯ : ಅಚ್ಛೋದ ಸರೋವರ

ಉಪಮಾನ : ರನ್ನಗನ್ನಡಿ

ಸಮನ್ವಯ : ಉಪಮೇಯವಾದ ಅಚ್ಛೋದ ಸರೋವರವನ್ನು ಉಪಮಾನವಾದ ರನ್ನಗನ್ನಡ ಎಂಬುದಾಗಿ ಕಲ್ಪಿಸಿರುವುದರಿಂದ ಇದು ಉತ್ರೇಕ್ಷಾಲಂಕಾರ.

ಲಕ್ಷಣ :– ಉಪಮೇಯವಾದ ವಸ್ತುವನ್ನು ಉಪಮಾನವಾದ ವಸ್ತುವನ್ನಾಗಿ ಕಲ್ಪಿಸಲಾಗಿದೆ.

2. ಸೇನೆಯ ಕಾಲ್ತುಳಿತದಿಂದ ಎದ್ದ ಧೂಳು, ಮೈಗೆ ಮೆತ್ತಲಾಗಿ ಅಂಥ ಕೆಂಪು ಧೂಳಿನಿಂದ ಧೂಸರವಾದ ತನ್ನ ದೇಹವನ್ನು ತೊಳೆ ಯುದಕ್ಕೋಸುಗ ಪಶ್ಚಿಮ ಸಮುದ್ರವನ್ನು ಸೂರ್ಯನು ಹೊಕ್ಕನು.

3. ಹಾಲು ತುಂಬಿದ ಸಾಲು ಸಾಲಾಗಿ ಕಾಣುವ ಬತ್ತದ ತೆನೆಗಳು ತಮ್ಮನ್ನು ಗಿಳಿಗಳು ಬಂದು ಸೀಳು ಬಿಡುತ್ತವೆಂಬ ಭಯದಿಂದ ಭೂಮಿಗೆ ಇಳಿದು ಹೋದವೋ ಎಂಬಂತೆ ಗದ್ದೆಯ ನೀರಿನಲ್ಲಿ ಅವು ಪ್ರತಿಫಲಿಸಿ ಕಾಣುತ್ತಿದ್ದವು

4. ಸೀತೆಯ ಮುಖ ಕಮಲವೋ ಎಂಬಂತೆ ಅರಳಿತು

## ಅರ್ಥಾಂತರನ್ಯಾಸಾಲಂಕಾರ:

1. ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು: ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?

2. ಆತನು ಉಂಡಮನೆಗೆ ಕೇಡು ಬಗೆದನು; ಕೃತಘ್ನರು ಏನನ್ನು ತಾನೆ ಮಾಡುವುದಿಲ್ಲ?

ಇಲ್ಲಿ ಮೊದಲನೆಯ ವಾಕ್ಯದಲ್ಲಿ ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನಗಳಿಗೆ ಉತೀರ್ಣನಾದನು. ಎಂದು ವರ್ಣಿಸುವ ವಿಶೇಷ ವಾಕ್ಯವನ್ನು ಲೋಕದಲ್ಲಿ ಎಲ್ಲ ಬುದ್ಧಿವಂತ ಮಕ್ಕಳಿಗೂ ಅನ್ವಯವಾಗುವಂಥ ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೆ? ಎಂಬ ಸಾಮಾನ್ಯ ನುಡಿಯಿಂದ ಸಮರ್ಥನೆ ಮಾಡಿದೆ, ಎರಡನೆಯ ವಾಕ್ಯದಲ್ಲಿ ಉಂಡಮನೆಗೆ ಕೇಡು ಬಗೆದನು. ಎಂಬ ಈ ಉಪಮೇಯವಾದ

ಮಾತನ್ನು ಕೃತಘ್ನತಾ ಬುದ್ಧಿಯುಳ್ಳ ಜನರು ಏನನ್ನೂ ತಾನೆ ಮಾಡುವುದಿಲ್ಲ? ಎಂಬ ಮಾತಿನಿಂದ ಸಮರ್ಥನೆ ಮಾಡಿ ಹೇಳಲಾಗಿದೆ.

"ಒಂದು ವಿಶೇಷ ವಾಕ್ಯವನ್ನು ಸಾಮಾನ್ಯವಾಕ್ಯದಿಂದ ಅಥವಾ ಸಾಮಾನ್ಯ ವಾಕ್ಯವನ್ನು ವಿಶೇಷ ವಾಕ್ಯದಿಂದ ಸಮರ್ಥನೆ ಮಾಡುವುದೇ ಅರ್ಥಾಂತರನ್ಯಾಸಾಲಂಕಾರ" (ಇಲ್ಲಿ ಸಾಮಾನ್ಯ ವಾಕ್ಯ ವಿಶೇಷ ವಾಕ್ಯಗಳು ಎರಡೂ ಉಕ್ತವಾಗಿರಬೇಕು ಅಂದರೆ ಸಾಮಾನ್ಯವಾದ ಮಾತಾಗಿ ಲೋಕ ಪ್ರಸಿದ್ಧವಾಗಿರಬೇಕು).

ಉದಾ: ಜಲನಿಧಿ ಜಲಮಂ ಜಲಭೃ
ತ್ಕುಲಕ್ಕೆ ನಲದಿತ್ತದತ್ತುಮಿತ್ತನದೀನಿ
ರ್ಮಲ ಸಲಿಲಂದೊರೆದುದುಗಡ
ನೆಲದೊಳ್ ಕೊಟಂಗೆ ಬಡತನಂ ಬಂದವುದೇ.

ಉಪಮೇಯ : ಜಲನಿಧಿ ಜಲಮಂ ಜಲಭೃತ್ಕುಲಕ್ಕೆ ನಲಿದಿತ್ತುದು
(ವಿಶೇಷ ವಾಕ್ಯ) ಇತ್ತ ನದೀ ನಿರ್ಮಲ ಸಲಿಲಂದೊರೆದುದು. (ಸಮುದ್ರವು ನೀರನ್ನು ಮೋಡಗಳಿಗೆ ನೀಡಿತು. ಮೋಡದಿಂದ ಮಳೆ ಸುರಿದು ನದಿಗಳಲ್ಲಿ ತುಂಬಿ ಪುನಃ ಸಮುದ್ರಕ್ಕೆ ಹೋಯಿತು)

ಉಪಮಾನ : ನೆಲದೊಳ್ ಕೊಟಂಗೆ ಬಡತನಂ ಬಂದುಪುದೇ
(ಸಾಮಾನ್ಯ ವಾಕ್ಯ) (ಲೋಕದಲ್ಲಿ ಕೊಟ್ಟವನಿಗೆ ಬಡತನ ಬರುವುದಿಲ್ಲ)

ಸಮನ್ವಯ : ಇಲ್ಲಿ ಜಲ ನಿಧಿಜಲಮಂ ಜಲಭೃತ್ಕುಂಲಕ್ಕೆ ನಲಿದಿತ್ತುದೆ ಇತ್ತ ನದೀ ನಿರ್ಮಲ ಸಲಿಲಂ ದೊರೆದುದು ಎಂಬ ಉಪಮೇಯ ವಾಕ್ಯವನ್ನು ನೆಲದೊಳ್ ಕೊಟ್ಟಂಗೆ ಬಡತನಂ ಬಂದಪುದೇ ಎಂಬ ಉಪಮಾನ ವಾಕ್ಯದಿಂದ ಸಮರ್ಥನೆ ಮಾಡಿರುವುದರಿಂದ ಇದನ್ನು ಅರ್ಥಾಂತರನ್ಯಾಸಲಂಕಾರ ಎಂದು ಹೇಳಬಹುದು.

2. ನನಗೆ ಈ ಬ್ರಾಹ್ಮಣನು ಹಿತವನ್ನುಂಟು ಮಾಡಿದವನು ಎಂದು ಯೋಚಿಸದೆ ಆ ಬೇಡನು ಒಮ್ಮೆಲೆ ಅವನಿಗೆ ಕೇಡನ್ನು ಬಗೆದನು ಕೃತಘ್ನರಾದವರು ಏನನ್ನು ತಾನೆ ಮಾಡುವುದಿಲ್ಲ?
3. ಸರಿಸಮಾನರಾದವರಲ್ಲಿ ಯುದ್ಧ ಮಾಡಬೇಕು. ತನಗಿಂತಲೂ ಬಲಿಷ್ಠರಾದವರಲ್ಲಿ ಯುದ್ಧ ಮಾಡಿದರೆ ಸಾಯುವುದು ನಿಶ್ಚಯ ಮಹಾರಾಜನಾದ ಚಿಕ್ಕದೇವರಾಜ ಒಡೆಯನೊಡನೆ ಯುದ್ಧ ಮಾಡಿ ಕೆಳದಿಯವರೂ, ಮಧುರೆಯವರೂ, ಬೇಡರೂ, ಮರಾಟೆ ಯವರೂ ಸತ್ತರು

**ಶ್ಲೇಷಾಲಂಕಾರ :**

ಆ ವಿವಾಹ ಮಂಟಪವು ಪುರಂದರ ಪುರದಂತೆ ಸದಾರಂಭಾನ್ವಿತ ವಿಬುಧ ಮಿಳಿತವಾಗಿತ್ತು.

ವಿವಾಹ ಮಂಟಪವು ಪುರಂದರನ ಎಂದರೆ ದೇವೇಂದ್ರನ ಪಟ್ಟಣದ ಹಾಗೆ ಸದಾರಂಭಾನ್ವಿತವಾಗಿತ್ತು ಮತ್ತು ವಿಬುಧರಿಂದ ಮಿಳಿತವೂ ಆಗಿತ್ತು. ಇಲ್ಲಿ ರಂಭಾನ್ವಿತವಾಗಿತ್ತು ಎಂದರೆ ಬಾಳೆ ಗಿಡಗಳಿಂದ ಕೂಡಿತ್ತು. ಎಂದು ಅರ್ಥ ಮಾಡಬೇಕು. (ರಂಭಾ= ಬಾಳೆ) ವಿಬುಧಮಿಳಿತವಾಗಿತ್ತು ಎಂದರೆ ಬ್ರಾಹ್ಮಣರ ಸಮೂಹದಿಂದ ಕೂಡಿತ್ತು ಎಂದು ಅರ್ಥಮಾಡಿಕೊಳ್ಳಬೇಕು.

**(ವಿಬುಧ – ಬ್ರಾಹ್ಮಣ)**

ಅಮರಾವತಿಯು ರಂಭಾನ್ವಿತವಾಗಿತ್ತು ಎಂದರೆ ರಂಭೆಯೆಂಬ ಅಪ್ಸರ ಸ್ತ್ರೀಯಿಂದ ಕೂಡಿತ್ತು ಎಂದರ್ಥ ಮಾಡಬೇಕು. (ರಂಭಾ = ಅಪ್ಸರೆ) ವಿಬುಧ ಮಿಳಿತವಾಗಿತ್ತು ಎಂದರೆ ದೇವತೆಗಳಿಂದ ತುಂಬಿತ್ತು ಎಂದು ಅರ್ಥ ಮಾಡಬೇಕು. (ವಿಬುಧ=ದೇವತೆ) ಹೀಗೆ 'ರಂಭಾ' ಶಬ್ದವು ಬಾಳೆ–ಅಪ್ಸರ ಸ್ತ್ರೀಯೆಂದೂ 'ವಿಬುಧ' ಶಬ್ದವು ಬ್ರಾಹ್ಮಣ ಮತ್ತು ದೇವತೆಯೆಂದೂ ಎರಡರ್ಥಗಳಿಂದ ಕೂಡಿರುತ್ತದೆ. ಒಂದೆ ಶಬ್ದವು ವರ್ಣಿಸುವ ವಿವಾಹ ಮಂಟಪದ ಪರವಾಗಿಯೂ, ವರ್ಣಿಸುವ ವಿಷಯವಲ್ಲದ ದೇವೇಂದ್ರನ ಅಮರಾವತಿಯ ಪರವಾಗಿಯೂ ಎರಡು ಬೇರೆ ಬೇರೆ ಅರ್ಥ ಕೊಡುತ್ತದೆ. ಇಂಥ ಪದಗಳಿಗೆ 'ಶ್ಲೇಷ' ಎನ್ನುವರು.

“ಒಂದು ಪದವು ಒಂದಕ್ಕಿಂತ ಹೆಚ್ಚು ಅರ್ಥಕೊಡುವಂತಿದ್ದರೆ ಅಂತಹ ಪದಕ್ಕೆ ‘ಶ್ಲೇಷಪದ’ ಎಂದು ಹೆಸರು. ಇಂತಹ ಶ್ಲೇಷಾರ್ಥಗಳನ್ನು ನೀಡಬಲ್ಲ ಪದಗಳಿಗಿರುವ ಅಲಂಕಾರವನ್ನು ಶ್ಲೇಷಾಲಂಕಾರ ಎಂದು ಕರೆಯುತ್ತಾರೆ.

ಉದಾ: ಅತಿಶಯ ಪದಾರ್ಥ ನಿಕರ
ಪ್ರತೀತಿಯಂ ಪಡೆದ ಪಾದ ವಿನ್ಯಾಸಂ ಭೂ
ನುತಮಾಗದಲ್ತೆನಿರ್ದೂ
ಷತೆಯಿಂದಲ್ಲದೆ ಸಮಂತು ಕವಿಗಂ ರವಿಗಂ.

ಇಲ್ಲಿ ಕವಿ ಮತ್ತು ರವಿ ಒಂದೇ ಬಗೆಯ ಪದಗಳಿಂದ ವರ್ಣಿತರಾಗಿದ್ದಾರೆ. ಈ ವರ್ಣನೆಯಲ್ಲಿ ಪದಾರ್ಥ, ಪಾದ ನಿರ್ದೋಷತೆ ಎಂಬ ಪದಗಳು ಶ್ಲೇಷಾರ್ಥದಿಂದ ಕೂಡಿದೆ ಅದನ್ನು ಪರಿಶೀಲಿಸೋಣ

| ಪದ | ಕವಿಯ ಪರವಾಗಿ | ರವಿಯ ಪರವಾಗಿ |
|---|---|---|
| 1. ಪದಾರ್ಥ | ಶಬ್ದಾರ್ಥ | ವಸ್ತು |
| 2. ಪಾದ | ಪದ್ಯದಸಾಲು | ಕಿರಣ |
| 3. ನಿರ್ದೋಷತೆ | ದೋಷದಿಲ್ಲವಿರುವಿಕೆ | ಕತ್ತಲಲ್ಲಿರುವಿಕೆ |

# ಛಂದಸ್ಸು

ವ್ಯಾಕರಣ ಶಾಸ್ತ್ರವು ಗದ್ಯ ಪದ್ಯಗಳೆರಡಕ್ಕೂ ಸಂಬಂಧಿಸಿದ ಶಾಸ್ತ್ರವಾದರೆ, ಛಂದಸ್ಸು ಕೇವಲ ಪದ್ಯಗಳಿಗೆ ಮಾತ್ರ ಸಂಬಂಧಿಸಿದ ಶಾಸ್ತ್ರವಾಗಿದೆ. ನಾವು ಓದುವ ಪದ್ಯಗಳು ನಾನಾ ತರವಾಗಿವೆ ಕೆಲವು ಮೂರು ಸಾಲಿನವು, ಕೆಲವು ನಾಲ್ಕು ಸಾಲಿನವು, ಕೆಲವು ಆರು ಸಾಲಿನವು, ಕೆಲವು ಸಾಲುಗಳು ಉದ್ದ ಕೆಲವು ಚಿಕ್ಕವು, ಹೀಗೆ ನಾನಾ ಬಗೆಯು

ಪದ್ಯಗಳಲ್ಲಿ ಕಂಡು ಬರುತ್ತದೆ. ಅವುಗಳೆಲ್ಲವುಗಳ ಸ್ವರೂಪವನ್ನು ತಿಳಿಯದಿದ್ದರೂ ಮುಖ್ಯವಾದ ಕೆಲವು ಪದ್ಯಗಳ ರೀತಿ ನೀತಿಗಳನ್ನು ತಿಳಿಯ ಬೇಕು. ಕಾವ್ಯವನ್ನು ಗದ್ಯ ಪದ್ಯ ಮತ್ತು ಚಂಪೂ ಎಂದು ಮೂರು ವಿಭಾಗ ಮಾಡಲಾಗಿದೆ, ಚಂಪೂಕಾವ್ಯ ಗದ್ಯಪದ್ಯ ಮಿಶ್ರಿತ ಶೈಲಿಯಾಗಿರುವುದರಿಂದ ಪ್ರಧಾನವಾಗಿ ಪದ್ಯ ಮತ್ತು ಗದ್ಯ ಎಂಬೆರಡೇ ವಿಭಾಗಗಳೆಂದು ಹೇಳಬಹುದು.ಪದ್ಯಗಳನ್ನು ರಚಿಸುವಾಗ ನಿರ್ದಿಷ್ಟ ನಿಯಮಗಳನ್ನು ಅನುಸರಿಸಲಾಗುವುದು. ಅದೇ ಛಂದಸ್ಸು ಅಂದರೆ ಕಾವ್ಯ ರಚನೆಯ ನಿಯಮಗಳನ್ನು ತಿಳಿಸುವ ಒಂದು ಶಾಸ್ತ್ರವಾಗಿದೆ. ಛಂದಸ್ಸು ಕಾವ್ಯಕ್ಕೆ ಒಂದು ಬಂಧವನ್ನು ಒದಗಿಸುತ್ತದೆ. ಹಾಗೆಯೇ ಪದದಲ್ಲಿ ನಿರೂಪಿತವಾಗಿ ಬೇಕಾದ ಭಾವನೆಗೆ ಛಂದಸ್ಸು ಹೆಚ್ಚು ಬಳಕೆಯಾಗುತ್ತಿಲ್ಲ. ಆದರೆ ಕಾವ್ಯ ಪರಂಪರೆಯಲ್ಲಿ ಛಂದಸ್ಸಿಗೆ ವಿಶೇಷ ಮಹತ್ವವಿದೆ. ಇಲ್ಲಿ ಕೊಟ್ಟಿರುವ ಮೂರು ಕಾರಣಗಳಿಂದಾಗಿ ಛಂದಸ್ಸಿಗೆ ಗುರುತರವಾದ ಮಹತ್ವವಿದೆ.

* ಹಿಂದಿನ ಕಾವ್ಯಗಳ ಲಕ್ಷಣತಿಳಿದುಕೊಳ್ಳಲು
* ಛಂದಸ್ಸನ್ನು ಕಡೆಗನಿಸಿದ್ದರ ಔಚಿತ್ಯದ ಬಗ್ಗೆ ಮರು ಚಿಂತಿಸಲು.
* ಛಂದಸ್ಸಿನ ಹೊಸ ಬಗೆಯ ಪ್ರಯೋಗಗಳನ್ನು ಅರಿಯಲು.

## ಪದ್ಯ

ಒಂದು ಗೊತ್ತಾದ ಸಾಲುಗಳು (ಪಾದಗಳು) ನಿಯಮದಿಂದ ಬರೆದವುಗಳೇ ಪದ್ಯಗಳು. ಅಂದರೆ ಪದ್ಯಗಳು ಪಾದ (ಸಾಲು) ಗಳಿಂದಲೂ, ಪ್ರತಿಯೊಂದು ಪಾದವೂ ಪ್ರಾಸ, ಯತಿ, ಗಣಗಳ ನಿಯಮದಿಂದಲೂ ಕೂಡಿರುತ್ತದೆ.

**ಪಾದ:–** ಪದ್ಯದ ಒಂದು ಸಾಲಿಗೆ ಪದ ಅಥವಾ ಚರಣ ಎಂದು ಹೆಸರು.

ಎರಡು ಸಾಲುಗಳಿದ್ದರೆ ಅದು ದ್ವಿಪದಿ

ಮೂರು ಸಾಲುಗಳಿದ್ದರೆ ಅದು ತ್ರಿಪದಿ
ನಾಲ್ಕು ಸಾಲುಗಳಿದ್ದರೆ ಅದು ಚೌಪದಿ/ಕಂದ
ಆರು ಸಾಲುಗಳಿದ್ದರೆ ಅದು ಷಟ್ಪದಿ
ಎಂಟು ಸಾಲುಗಳಿದ್ದರೆ ಅದು ಅಷ್ಟಪದಿ
ಹದಿನಾಲ್ಕು ಸಾಲುಗಳ ಪದ್ಯವನ್ನು ಸುನೀತ (ಸಾನೆಟ್) ಎಂದು ಕರೆಯುವರು, ಹಾಗಾಗಿ ಪದ್ಯ ಎಂಬುದು ನಿರ್ದಿಷ್ಟ ಸಂಖ್ಯೆಯ ಪಾದಗಳಿಂದ ಕೂಡಿರಬೇಕು. ಪದ್ಯದ ಪ್ರತಿಯೊಂದು ಪ್ರಾಸ, ಯತಿ, ಮತ್ತು ಗಣಗಳ ನಿಯಮದಿಂದ ಕೂಡಿರುತ್ತದೆ. ಆದುದರಿಂದ ಪದ್ಯವನ್ನು ರಚಿಸಲು ಬೇಕಾದ ನಿರ್ದಿಷ್ಟ ಪಾದಗಳ ಬಗ್ಗೆ ಮತ್ತು ಪ್ರತಿ ಪಾದದಲ್ಲಿ ಇರಬೇಕಾದ ಪ್ರಾಸ, ಯತಿ, ಗಣಗಳ ಬಗ್ಗೆ ತಿಳಿಸುವ ಶಾಸ್ತ್ರವೇ ಛಂದಸ್ಸು.

## ಪ್ರಾಸ

ಗುರು ಹಿರಿಯರ ಅರಿಯದವನ ಅರಿವದೇತಕೆ
ಪರ ಹಿತಾರ್ಥಕಿಲ್ಲದವನ ಶರೀರ ವೇತಕೆ
ಹಿರಿಯ ಪೂಜೆ ಮಾಡದವನ ಜನುಮವೇತಕೆ
ಸೇರಿದವರ ಹೊರೆಯದಂಥ ದೊರೆಯು ಏತಕೆ.

ಈ ಮೇಲಿನ ಪದ್ಯವನ್ನು ಗಮನಿಸಿದಾಗ ಪ್ರತಿ ಸಾಲಿನ ಎರಡನೆಯ ಅಕ್ಷರದಲ್ಲಿರುವ ವ್ಯಂಜನಾಕ್ಷರ ಒಂದೇ ಆಗಿದೆ. ಅದೇ ರೀತಿ ಪ್ರತಿ ಸಾಲಿನ ಕೊನೆಯ ವ್ಯಂಜನವೂ ಒಂದೇ ಆಗಿದೆ

“ ಪದ್ಯಗಳ ಪ್ರತಿಯೊಂದು ಸಾಲಿನ ಒಂದನೆಯ ಮತ್ತು ಎರಡನೆಯ ಸ್ವರಗಳ ಮಧ್ಯದಲ್ಲಿ ಒಂದೇ ರೀತಿಯ ವ್ಯಂಜನಾಕ್ಷರಗಳು ಬರುವುದಕ್ಕೆ ಪ್ರಾಸ ಎನ್ನುತ್ತಾರೆ. ಈ ಪ್ರಾಸವನ್ನು ಕೆಲವರು ಸಾಲುಗಳ ಕೊನೆಯಲ್ಲೂ ಬರುವ ಹಾಗೆ ಪದ್ಯ ರಚಿಸುತ್ತಾರೆ. ಪಾದಾಂತ್ಯದಲ್ಲಿ ಬರುವ ಈ ಪ್ರಾಸದ ನಿಯಮವು ಕೇವಲ ರಗಳೆಗಳಲ್ಲಿ ಮಾತ್ರ ಕಂಡು ಬರುತ್ತದೆ. ಪದ್ಯದ ಪ್ರತಿ ಸಾಲಿನ ಆದಿಯಲ್ಲಿ ಒಂದು ಎರಡನೆಯ ಸ್ವರಗಳ ನಡುವೆ ಒಂದೇ ವಿಧವಾದ ವ್ಯಂಜನ ಇರುವುದು ಆದಿಪ್ರಾಸ.

ಉದಾ:– ಭಿನ್ನಹ ಗುರುವೆ ಧ್ಯಾನಕೆ ಬೇಸರವಾದಾಗ
ನಿನ್ನನಾದಿಯ ಮಾಡಿಕೊಂಡು
ಕನ್ನಡದೊಳಗೊಂದು ಕಥೆಯ ಪೇಳುವೆನದು
ನಿನ್ನಾಜ್ಞೆ ಕಂಡ ನನ್ನೊಡೆಯೂ

ಕಂದ ಪದ್ಯಗಳು ಸಾಮಾನ್ಯವಾಗಿ ಪ್ರತಿಪಾದವೂ ಆದಿ ಪ್ರಾಸದಿಂದ ಕೂಡಿರುತ್ತದೆ.
ಆದಿ ಪ್ರಾಸದಲ್ಲಿ ಆರು ವಿಧಗಳಿವೆ ಅವು ಯಾವುವೆಂದರೆ

**1. ಸಿಂಹ ಪ್ರಾಸ**
**2. ಗಜ ಪ್ರಾಸ**
**3. ವೃಷಭ ಪ್ರಾಸ**
**4. ಅಜ ಪ್ರಾಸ**
**5. ಶರಭ ಪ್ರಾಸ**
**6. ಹಯ ಪ್ರಾಸ**

ಉದಾ:– ಇನತನೂಜನ ಕೊಡೆ ಮೈದುನ
ತನದ ಸರಸವನೆಸಗಿ ರಥದೊಳು
ದನುಜರಿಪು ಬರಸೆಳೆದು ಕುಳ್ಳಿರಿಸಿದನು ಪೀಠದಲ್ಲಿ
ಎನಗೆ ನಿಮ್ಮಡಿಗಳಲಿ ಸಮಸೇ
ವನೆಯ ದೇವ ಮುರಾರಿಯಂಜುವೆ

ನೆನಲು ತೊಡೆ ಸೋಂಕಿನಲಿ ಸಾರಿದು ಶೌರಿಯಿಂತೆಂದ.

**ಗಜ ಪ್ರಾಸ:–** ಪದ್ಯದ ಪ್ರತಿಪಾದದ ಒಂದು ಎರಡನೆಯ ಸ್ವರಗಳ ನಡುವೆ ಒಂದೆ ವಿಧದ ವ್ಯಂಜನವು ಬಂದು ಹಿಂದಿನ ಸ್ವರವು ದೀರ್ಘವಾಗಿದ್ದರೆ ಅದು ಗಜಪ್ರಾಸ.

ಉದಾ:– ಭೇಧವಿಲೆಲೆ ಕರ್ಣ ನಿಮ್ಮೊಳು
ಯಾದವರು ಕೌರವರೊಳಗೆ ಸಂ
ವಾದಿ ಸುವಡನ್ವಯಕೆ ಮೊದಲೆರಡಿಲ್ಲ ನಿನ್ನಾಣೆ
ಮೇದಿನೀಪತಿ ನೀನು ಚಿತ್ತದೊ
ಳಾದುದರಿವಿಲ್ಲೆನುತ ದಾನವ
ಸೂದನನು ರವಿಸುತನ ಕಿವಿಯಲಿ ಭಿತ್ತಿದನುಭಯ.

**3. ವೃಷಭ ಪ್ರಾಸ:–** ಪದ್ಯದ ಪ್ರತಿಪಾದದ ಒಂದು ಎರಡನೆಯ ಸ್ವರಗಳ ನಡುವೆ ಒಂದೇ ವಿಧದ ವ್ಯಂಜನವು ವ್ಯಂಜನಗಳು ಬಂದು ಅದರ ಹಿಂದೆ ಅನುಸ್ವರ ವಿದ್ದರೆ ಅದು ವೃಷಭ ಪ್ರಾಸ.

ಉದಾ:– ಅಂಬುಜವೆಲ್ಲವು ರವಿಯ ನೋಳ್ಪಂತೆ ನೀ
ಲಾಂಬುಜ ನೋಳ್ಪಂತೆ ಶಶಿಯೂ
ತುಂಬಿದ ಸಭೆಯೆಲ್ಲ ನೃಪನ ನೊಡುವ ಮಿಕ್ಕ
ಹಂಬಲ ಮರೆದುದಲ್ಲಲ್ಲಿ

**4. ಅಜಪ್ರಾಸ:–** ಪದ್ಯದ ಪ್ರತಿಪಾದದ ಒಂದು ಎರಡನೆಯ ಸ್ವರಗಳ ನಡುವೆ ಒಂದೇ ವಿಧದ ವ್ಯಂಜನವು ಅಥವಾ ವ್ಯಂಜನಗಳು ಬಂದು ಅದರ ಹಿಂದೆ ವಿಸರ್ಗವಿದ್ದರೆ ಅದು ಅಜಪ್ರಾಸ

ಉದಾ:– ಅಃಪೊರೆವನಿವನೆ ಪರಮಯ
ಶಃಪಾತ್ರನೆನಲ್ಕೆ ಜನಮನಿನಿಸಲಸದೆಯುಂ
ಅಃಪೇಳಲದೇನಿವನಿಂ
ಸ್ವಂಪದ ವಾಚ್ಯಂ ಸಮಂತು ಮೆರೆವೀದೇಶಂ

**5. ಶರಭ ಪ್ರಾಸ:–** ಪದ್ಯದ ಪ್ರತಿಪಾದದ ಒಂದು ಎರಡನೆಯ ಸ್ವರಗಳ ನಡುವೆ ವಿಜಾತಿ ಸಂಯುಕ್ತಾಕ್ಷರಗಳು ಬಂದು ಅದರ ಹಿಂದೆ ಅನುಸ್ವರ ವಿಸರ್ಗಗಳು ಇಲ್ಲದಿರಲು ಅದು ಶರಭಪ್ರಾಸ

ಉದಾ : ಬಲ್ಗಯ್ಯ ನೃಪರಂಜಿ ತಡೆಯದೆ ರಘೂದ್ವಹನ
ಸೊಲ್ಗೇಳಿ ಸಮಿಸಲಿಳೆಯೊಳ್ ಚರಿಸುತಧ್ವರದ
ನಲ್ಗು ದುರೆ ಬಂದು ವಾಲ್ಮೀಕಿಯ ನಿಜಾಶ್ರಮದ ವಿನಿಯೋಗ ದುಪವನದೊಳು
ಪುಲ್ಗಳ ಪಸುರ್ಗೆಳಸಿ ಪೊಕ್ಕೊಡಾ ತೋಟಗಾ
ವಲ್ಗೆ ತನ್ನೊಡನಾಡಿಗಳ ಕೂಡಿ ಲೀಲೆಮಿಗೆ
ಬಿಲ್ಗೊಂಡು ನಡೆತಂದವಂ ಕಂಡನರ್ಚಿತ ಸುವಾಜಿಯಂ ವೀರಲವನು

**6. ಹಯ ಪ್ರಾಸ:–** ಪದ್ಯದ ಪ್ರತಿಪಾದದ ಒಂದು ಎರಡನೆಯ ಸ್ವರಗಳ ನಡುವೆ ಸಜಾತಿ ಸಂಯುಕ್ತಾಕ್ಷರಗಳು ಬಂದು ಅದರ ಹಿಂದೆ ಅನುಸ್ವರ ವಿಸರ್ಗಗಳು ಇಲ್ಲದಿರಲು ಅದು ಹಯಪ್ರಾಸ

ಉದಾ : ಎತ್ತಣ ತುರಂಗಮಿದು ಪೊಕ್ಕು ಪೊದೋಟಮಂ
ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ
ಪೊತ್ತುಮೂರ್ರೈವುದೆಂದೆನಗೆ ನೇಮಿಸಿ ಪೋದನಬ್ಬಿತಂ –ಕರೆಸಲಾಗಿ
ಮತ್ತೆ ವರುಣನ ಲೋಕದಿಂ ಬಂದು ಮುಳಿದಪನೆ
ನುತ್ತಹಯದೆಡೆಗೆ ನಡೆತಂದು ನೋಡಲ್ಕದರ
ನೆತ್ತಿಯೊಳ್ ಮೆರೆವ ಪಟ್ಟದ ಲಿಖಿತಮಂ ಕಂಡು –ಲವನೋಡಿಕೊಳುತಿರ್ದನು

* ಪ್ರತಿ ಸಾಲಿನ ಮಧ್ಯದಲ್ಲಿ ಬರುವ ಪ್ರಾಸವನ್ನು ಒಳಪ್ರಾಸ ಅಥವಾ ಮಧ್ಯಪ್ರಾಸ ಎಂದು ಕರೆಯುತ್ತಾರೆ.

* ಪದ್ಯದ ಪ್ರತಿಪಾದದ ಕೊನೆಯ ವ್ಯಂಜನದ ಮೇಲಿನ ಸ್ವರ ಒಂದೇಯಾಗಿ ಆ ವ್ಯಂಜನದ ಹಿಂದೆ ದೀರ್ಘ ಅಥವಾ ಹ್ರಸ್ವಗಳ ಸೌಮ್ಯವಿದ್ದರೆ ಅದು ಅಂತ್ಯ ಪ್ರಾಸ.

ಉದಾ: ಯುಗಯುಗಗಳ ಹಣೆ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

## ಯತಿ

ಯತಿ ಎಂದರೆ ಪದ್ಯಗಳನ್ನು ಓದುವಾಗ ನಿಲ್ಲಿಸುವ ಸ್ಥಳಗಳು. ಹೀಗೆ ನಿಲ್ಲಿಸುವುದಕ್ಕೆ ಗೊತ್ತಾದ ಸ್ಥಳಗಳಲ್ಲಿ ನಿಲ್ಲಿಸಿದರೆ ಅರ್ಥ ಕೆಡುವಂತಿರ ಬಾರದು. ಅಲ್ಲಿಗೆ ಪದ ಮುಗಿದಿರಬೇಕು. ಕನ್ನಡ ಕವಿಗಳು ಪ್ರಾಸಕ್ಕೆ ಪ್ರಧಾನ್ಯತೆ ಕೊಟ್ಟು, ಯತಿಯ ನಿಯಮವನ್ನು ಮಿಕ್ಕಿದ್ದಾರೆ. ಸಂಸ್ಕೃತ ಕಾವ್ಯಗಳಲ್ಲಿ ಯತಿ ಬಹಳಷ್ಟು ಇರುವುದನ್ನು ಗಮನಿಸಬಹುದು. ಕೇಶಿರಾಜ ತನ್ನ ಶಬ್ದಮಣಿದರ್ಪಣಂ ಕೃತಿಯಲ್ಲಿ 'ಯತಿವಿಲಂಘನದಿಂದರಿದಲ್ತೆ ಕನ್ನಡಂ' ಎಂದಿದ್ದಾರೆ. ಯತಿ ಎಂದರೆ ಪದ್ಯಗಳನ್ನು ಓದುವಾಗ ಅರ್ಥಕ್ಕೆ ಅಡ್ಡಿ ಯಾಗದಂತೆ ಉಸಿರು ತೆಗೆದು ಕೊಳ್ಳಲು ನಿಲ್ಲಿಸುವತಾಣ' ಎನ್ನ ಬಹುದು. ಯತಿ ಎಂಬುದು ಉಸಿರ್ವತಾಣ ಎಂದು ಕೇಶಿರಾಜನು ಹೇಳಿದ್ದಾನೆ.

## ಗಣಗಳು

ಗಣ ಎಂದರೆ 'ಗುಂಪು' ಸಮೂಹ ಎಂದು ಅರ್ಥ. ಛಂದಶ್ಯಾಸ್ತ್ರದಲ್ಲಿ ಗಣ ಎಂದರೆ ಪದ್ಯದ ಪ್ರತಿಯೊಂದು ಪಾದದಲ್ಲೂ ವಿಭಾಗಿಸುವ ಮಾತ್ರೆಗಳ ಅಥವಾ ಅಕ್ಷರಗಳ ಗುಂಪು ಮತ್ತು ಮತ್ತು ಅಂಶಗಳ ಗುಂಪು.

ಇದರಲ್ಲಿ 3 ವಿಧಗಳಿವೆ. ಅವು ಯಾವುವೆಂದರೆ

**1 ಅಕ್ಷರಗಣ:–** ಅಕ್ಷರಗಳ ಆಧಾರದ ಮೇಲೆ ಗಣ ವಿಭಾಗ ಮಾಡುವುದಕ್ಕೆ ಅಕ್ಷರಗಣಗಳು ಎನ್ನುತ್ತಾರೆ ಇಲ್ಲಿ ಮೂರು ಅಕ್ಷರಗಳಿಗೆ ಒಂದು ಗುಂಪು ಮಾಡಲಾಗುತ್ತದೆ.

**2. ಮಾತ್ರಗಣ:** ಮಾತ್ರೆಗಳ ಆಧಾರದ ಮೇಲೆ ಗಣ ವಿಭಾಗ ಮಾಡುವುದಕ್ಕೆ ಮಾತ್ರಗಣ ಎನ್ನುವರು. ಇಲ್ಲಿ ಮೂರು, ನಾಲ್ಕು, ಐದು, ಮಾತ್ರೆಗಳಿಗೆ ಒಂದೊಂದು ಗಣ ಮಾಡಲಾಗುವುದು.

**3. ಅಂಶಗಣ:** ಅಂಶಗಳ ಆಧಾರದಿಂದ ಗಣ ವಿಭಾಗ ಮಾಡುವುದಕ್ಕೆ 'ಅಂಶಗಣ' ಎನ್ನುವರು ಇಲ್ಲಿ ಮೊದಲ ಗುರು ಅಥವಾ ಮೊದಲ ಎರಡು ಲಘುಗಳಿಗೆ ಒಂದು ಅಂಶ ನಂತರ ಬರುವ ಒಂದು ಗುರು ಅಥವಾ ಒಂದು ಲಘು ಒಂದೊಂದು ಅಂಶಗಳಂತೆ ಪರಿಗಣಿಸ ಬೇಕು ಇದರಲ್ಲಿ ಬ್ರಹ್ಮಗಣ, ವಿಷ್ಣುಗಣ, ರುದ್ರಗಣ ಎಂಬ ಮೂರು ವಿಧದ ಗಣಗಳಿವೆ

## ಪ್ರಸ್ತಾರ

ಪ್ರಸ್ತಾರ ಎಂದರೆ ಪದ್ಯದ ಪ್ರತಿ ಪಾದದಲ್ಲಿರುವ ಅಕ್ಷರಗಳ ಮೇಲೆ ಗುರು ಲಘುಗಳ ಚಿಹ್ನೆಗಳನ್ನು ಹಾಕುವುದು 'ಲಘು' ಎಂದರೆ ಒಂದು ಮಾತ್ರಾಕಾಲದಲ್ಲಿ ಉಚ್ಚಾರ ಮಾಡಲಾಗುವ ಅಕ್ಷರಗಳು. ಈ ಲಘುವನ್ನು 'ᑌ' ಚಿಹ್ನೆಯ ಮೂಲಕ ಗುರುತಿಸುವುದು ವಾಡಿಕೆ 'ಗುರು' ಎಂದರೆ ಎರಡು ಮಾತ್ರೆಗಳ ಕಾಲದಲ್ಲಿ ಉಚರಿಸಲ್ಪಡುವ ಅಕ್ಷರಗಳು. ಇದನ್ನು '–' ಈ ಚಿಹ್ನೆಯಿಂದ ಗುರುತಿಸಲಾಗುವುದು. "ಮಾತ್ರೆ" ಯೆಂದರೆ ಅಕ್ಷರವನ್ನು ಉಚ್ಚಾರ ಮಾಡುವುದಕ್ಕೆ ಬೇಕಾಗುವ ಕಾಲವೇ ' ಮಾತ್ರಕಾಲ' ಎನ್ನುವರು

ಒಂದು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳು

**ಲಘು ಬರುವ ಸಂದರ್ಭಗಳು.**

1. ಹ್ರಸ್ವ ಸ್ವರಗಳಿಗೆ ಲಘುವನ್ನು ಹಾಕಬೇಕು

ᑌ ᑌ ᑌ ᑌ ᑌ ᑌ

ಉದಾ:– ಅ, ಇ, ಉ, ಋ, ಎ, ಒ

U U U U U U

ಕ, ಕಿ, ಕು, ಕೃ, ಕೆ, ಕೊ

2. ಹ್ರಸ್ವಸ್ವರಗಳಿಂದ ಕೂಡಿದ ಗುಣಿತಾಕ್ಷರಗಳೆಲ್ಲ ಲಘುಗಳು.

U U U U U U U U

ಕ್ಕ, ಕ್ಕೊ, ತ್ತ, ಟ್ಟ, ಬ್ಬ, ಸ್ದ್ರ, ಸ್ತ್ರ, ಯ್ಯ

**ಗುರು ಬರುವ ಸಂದರ್ಭಗಳು:**

1) ದೀರ್ಘ ಸ್ವರಾಕ್ಷರಗಳು ಗುರು –

– – – – – – – – U – U U – – – – – – –

ಆ, ಈ, ಊ, ೠ, ಏ, ಐ, ಔ, ಶಾ ಲೆ, ಕೀ ರು ತಿ, ಕಾ, ಕೀ, ಕೂ, ಕೇ, ಕೋ, ಕೌ, ಕೈ

2. ಒತ್ತಾಕ್ಷರದ ಹಿಂದಿನ ಅಕ್ಷರಗಳಿಗೆ ಗುರು:

– – U – U – UU – U – U

ಲ್ಲು, ಮಣ್ಣು, ನಿಲ್ಲು, ಮೆತ್ತಗೆ, ಅಕ್ಕ, ಪಕ್ಕ

3. ಅನುಸ್ವಾರ ವಿಸರ್ಗದಿಂದ ಕೂಡಿದ ಅಕ್ಷರಗಳಿಗೆ.

– – – – – UU – U

ಅಂ, ಆಂ, ತಂ, ತಃ, ಬಂದನು, ದುಃಖ

4. ವ್ಯಂಜನಾಕ್ಷರದಿಂದ ಕೂಡಿದ ಅಕ್ಷರಗಳಿಗೆ:

– – – – – – – U U –

ಕಲ್, ನಿಲ್, ಪಣ್, ತಿನ್, ಮೇಣ್, ಕಾಲ್, ಮೇಲ್, ಮನದೊಳ್

5. ಸಂಧ್ಯಾಕ್ಷರಗಳಿಗೆ (ಐ,ಔ)

– – U – U U –UU – – U

ಮೈಸೂರು, ಯೌವನ, ವೈಭವ, ಐಶ್ವರ್ಯ

6. ಷಟ್ಪದಿಯ ಪದ್ಯಗಳಲ್ಲಿ ಬರುವ ಮೂರನೆಯ ಮತ್ತು ಆರನೆಯ ಸಾಲಿನ ಕೊನೆಯ ಅಕ್ಷರ ಲಘುವಾಗಿದ್ದರೆ ಗುರು ಎಂದು ಹಾಕಬೇಕು.

### ಅಕ್ಷರ ಗಣಗಳು

ಅಕ್ಷರ ಗಣಗಳೆಂದರೆ ಮೂರು ಮೂರು ಅಕ್ಷರಗಳ ಗುಂಪುಗಳನ್ನು ಒಂದೊಂದು ಗಣವೆಂದು ತಿಳಿಯುವುದು. ಮೂರು ಮೂರು ಅಕ್ಷರಗಳ ಗುಂಪಿನಲ್ಲಿ ಮಾತ್ರೆಗಳು ಮೂರೆ ಇರಬಹುದು. ನಾಲ್ಕು ಐದು, ಆರು ಮಾತ್ರೆಗಳೂ ಬರಬಹುದು ಇಲ್ಲಿ ಮಾತ್ರೆಗಳು ಮುಖ್ಯವಲ್ಲ, ಮೂರು ಅಕ್ಷರಗಳು ಮುಖ್ಯ, ಹೀಗೆ ಮೂರು ಮೂರು ಅಕ್ಷರಗಳ ಲೆಕ್ಕದಿಂದ ಗಣಗಳನ್ನು ವಿಂಗಡಿಸುವುದು ವೃತ್ತ ಜಾತಿಯ ಛಂದಸ್ಸುಗಳಲ್ಲಿ ಮಾತ್ರ. ಕನ್ನಡದಲ್ಲಿ ಮುಖ್ಯವಾಗಿ ಆರು ವೃತ್ತಗಳು ಹೆಚ್ಚಾಗಿ ಕವಿಗಳು ತಮ್ಮ ಕಾವ್ಯಗಳಲ್ಲಿ ಬಳಸಿಕೊಂಡಿದ್ದಾರೆ ಅವುಗಳನ್ನು ಖ್ಯಾತ ಕರ್ಣಾಟಕಗಳು ಎಂದು ಕರೆಯಲಾಗಿದೆ. ಅವು ಯಾವುವೆಂದರೆ.

1.ಉತ್ಪಲಮಾಲ ವೃತ್ತ 2.ಶಾರ್ದೂಲವಿಕ್ರೀಡಿತ ವೃತ್ತ 3.ಚಂಪಕಮಾಲವೃತ್ತ
4.ಮತ್ತೇಭವಿಕ್ರೀಡಿತ ವೃತ್ತ 5.ಸ್ರಗ್ಧರಾ ವೃತ್ತ 6. ಮಹಾಸ್ರಗ್ಧರಾ ವೃತ್ತ.

ಅಕ್ಷರಗಣಗಳಲ್ಲಿ ಎಂಟು ಗಣಗಳು (ವಿಧಗಳು). ಇದನ್ನು ಹೇಳುವ ಸೂತ್ರ.

**“ಯಮತಾರಾಜಭಾನಸಲಗಂ”**

| | | | | |
|---|---|---|---|---|
| ಯಮಾತಾ | = | ᴗ – – | = | ‘0ಯ’ಗಣ |
| ಮಾತಾರಾ | = | – – – | = | ‘ಮ’ಗಣ |
| ತಾರಾಜ | = | – – ᴗ | = | ‘ತ’ಗಣ |
| ರಾಜಭಾ | = | – ᴗ – | = | ‘ರ’ಗಣ |
| ಜಭಾನ | = | ᴗ – ᴗ | = | ‘ಜ’ಗಣ |
| ಭಾನಸ | = | – ᴗᴗ | = | ‘ಭ’ಗಣ |
| ನಸಲ | = | ᴗ ᴗ ᴗ | = | ‘ನ’ಗಣ |
| ಸಲಗಂ | = | ᴗ ᴗ – | = | ‘ಸ’ ಗಣ |

ಸೂತ್ರವನ್ನು ಬಿಡಿಸಿದಾಗ ಎಂಟು ಗಣಗಳು ಬರುತ್ತದೆ.

ಅಕ್ಷರ ಗಣದಲ್ಲಿ ಬರುವ ಎಂಟು ಗಣಗಳನ್ನು ಗುರುತಿಸಲು ಈ ಕೆಳಗಿನ ಪದ್ಯವನ್ನು ಕಂಠ ಮಾಡಿದರೆ ಅನುಕೂಲ.

ಗುರು–ಲಘು ಮೂರಿಗೆ ಮ–ನ ಗಣ
ಗುರು – ಲಘು ಮೊದಲಲ್ಲಿ ಬರಲು ಭ–ಯ ಗಣವೆಂಬರ್
ಗುರು–ಲಘು ನಡುವಿರೆ ಜ–ರಗಣ
ಗುರು–ಲಘು ಕೊನೆಯಲ್ಲಿ ಬರಲು ಸ–ತಗಣಮಕ್ಕುಂ.

| | | |
|---|---|---|
| 1. ‘ಮ’ ಗಣ | – – – | ಬೇವೇಶಂ |
| 2. ‘ನ’ ಗಣ | ᴗ ᴗ ᴗ | ಸಹಿತ |
| 3. ‘ಭ’ ಗಣ | – ᴗ ᴗ | ಸಾಗರ |
| 4. ‘ಯ’ ಗಣ | ᴗ – – | ಮಹೇಶ |
| 5. ‘ಜ’ ಗಣ | ᴗ – ᴗ | ಮಹತ್ವ |
| 6. ‘ರ’ ಗಣ | – ᴗ – | ಸಜ್ಜನಂ |
| 7. ‘ಸ’ ಗಣ | ᴗ ᴗ – | ಸಹಿತಂ |
| 8. ‘ತ’ ಗಣ | – – ᴗ | ಸಾಹಿತ್ಯ |

ಇದನ್ನು ನೆನಪಿನಲ್ಲಿಟ್ಟುಕೊಳ್ಳಲು, **ಮನಕ್ಕೆ ಭಯವಾಗಿ ಜ್ವರಬಂದು ಸತ್ತು ಹೋಯಿತು.**

### ಖ್ಯಾತ ಕರ್ಣಾಟಕಗಳು

ಕನ್ನಡ ಸಾಹಿತ್ಯದಲ್ಲಿ ಬಳಕೆಯಾಗುವ ವೃತ್ತಗಳನ್ನು ಖ್ಯಾತ ಕರ್ಣಾಟಕಗಳೆಂದು’ ಕರೆಯುವರು. ಇದು ಅಕ್ಷರಗಣ ಛಂದಸ್ಸಿಗೆ ಸೇರಿದ ಪದ್ಯ ಪ್ರಕಾರಗಳು.

* ಪ್ರತೀ ವೃತ್ತವು ತನ್ನದೆ ಆದ ಗುಣ ಲಕ್ಷಣಗಳನ್ನು ಹೊಂದಿರುತ್ತದೆ. ಇದು ನಾಲ್ಕು ಸಾಲಿನ ಪದ್ಯಗಳಾಗಿದ್ದು, ನಾಲ್ಕು ಸಾಲುಗಳು ಸಹ ಸಮಾನವಾಗಿರುತ್ತದೆ. ‘ಸಮ’ ವೃತ್ತಗಳೆಂದು ಹೇಳಬಹುದು.

* ಖ್ಯಾತ ಕರ್ಣಾಟಕಗಳಲ್ಲಿ 6 ವಿಧಗಳಿರುವ ಪದ್ಯ

**1. ಉತ್ಪಲಮಾಲ ವೃತ್ತ :**

1. ನಾಲ್ಕು ಸಮಾನವಾದ ಸಾಲುಗಳಿರುವ ಪದ್ಯ
2. ಪ್ರತಿ ಸಾಲಿನಲ್ಲೂ 20 ಅಕ್ಷರಗಳು ಇರುತ್ತವೆ

3. ಪ್ರತಿ ಸಾಲಿನಲ್ಲಿ ಭಗಣ, ರಗಣ, ನಗಣ, ಭಗಣ, ರಗಣಗಳನ್ನು ಬಂದು ಕೊನೆಯಲ್ಲಿ ಒಂದು ಲಘು ಮತ್ತು ಒಂದು ಗುರು ಇರುತ್ತದೆ

4. ಸಾಮಾನ್ಯವಾಗಿ ಆದಿಪ್ರಾಸ ಬರುತ್ತದೆ.

ಭ ರ ಸ ಭ ಭ ರ ಲ ಗು

– ∪ ∪ | – ∪ ∪ | ∪ ∪ ∪ | – ∪ ∪ | – ∪ ∪ | – ∪– | ∪ –

ಸೂತ್ರ:– ಉತ್ಪಲ । ಮಾಲೆಯ । ಪುದುಭ । ರಂನಭ । ಭಂರಲ । ಗಂನೆಗ । ಳ್ದಿರಲ್

ಭ ರ ನ ಭ ಭ ರ ಲ ಗು

–∪∪ | – ∪∪ | ∪ ∪ ∪| – ∪∪ | – ∪ ∪ | – ∪ ∪ | ∪ –

ಉದಾ:– ಕಟ್ಟುಗೆ । ಕಟ್ಟದಿ । ರ್ಕೆಕಡ । ಲಂಕಪಿ । ಸಂತತಿ । ವಾಮನ । ಕ್ರಮಂ

– ∪ ∪ – ∪ – ∪ ∪ ∪ – ∪∪ – ∪ ∪ – ∪ – ∪ –

ಮುಟ್ಟಗೆ ಮಟ್ಟದಿರ್ಕೆ ಮುಗಿ । ಲಂ ಹರ । ನಂ ನರ । ನೊತ್ತಿ ಗಂ । ಟಲಂ

– ∪∪ – ∪ – – ∪∪ ∪– – ∪ ∪ – ∪ ∪ ∪ – ∪ – –

ಮೆಟ್ಟುಗೆ । ಮುಟ್ಟದಿ । ರ್ಕೆ ಕವಿ । ಗಳ್ ಕೃತಿ । ಬಂಧ ದೊ । ಳ ತ್ತಿ ಕಟ್ಟಿದರ್

– ∪ ∪ – ∪ ∪ ∪ – ∪ ∪ – ∪ ∪ – ∪ ∪ – ∪ – ∪ –

ಮುಟ್ಟಿದ ।ರೊ ತ್ತಿ ಮೆಟ್ಟಿ ದರ । ದೇ ನ ಳ । ವ ಳ್ಗೆ ಳ । ಮೋಕ ವೀಂ । ದ್ರ ರಾ ।

**2. ಚಂಪಕಮಾಲ ವೃತ್ತ**

1. ನಾಲ್ಕು ಸಮಾನವಾದ ಸಾಲುಗಳುಳ್ಳ ಪದ್ಯ

2. ಪ್ರತಿ ಸಾಲಿನಲ್ಲಿ 21 ಅಕ್ಷರಗಳು ಇರುತ್ತದೆ.

3. ಪ್ರತಿಪಾದವೂ ನ,ಜ,ಭ,ಜ,ಜ,ರ ಎಂಬ ಏಳು ಗಣಗಳಿಂದ ಕೂಡಿರುತ್ತದೆ (ನ,ಜ,ಭ,ಜ,ಜ,ಜ,ರ)

4. ಆದಿ ಪ್ರಾಸದಿಂದ ಕೂಡಿರುತ್ತದೆ.

ಸೂತ್ರ :– ನಜಭ । ಜಜಂಜ । ರಂಬಗೆ । ಗೊಳುತ್ತಿ । ರೆಚಂಪ । ಕಮಾಲೆ । ಯೆಂದಪರ್ ।

ಉದಾ:– ಕರುಕು । ಳನಂದ । ನಂಪವ । ನನಂದ । ನನೆಂಬ । ಮಧಾಂಧ । ಗಂಧಸಿಂ

∪ ∪ ∪ ∪ – ∪ – ∪ ∪ ∪ – – ∪ – ∪ ∪ – ∪ – ∪ ∪

ಧುರಮೆ । ಕರುತ್ತು । ಪಾಯಪ । ಡಲಿಟ್ಟೊ । ವೊಲಾದು । ದುಪುಣ್ಯ । ದೊಂದುಪೆ

∪ ∪ ∪ ∪ – ∪ – ∪ ∪ ∪ – ∪ ∪– ∪ ∪ – ∪ – ∪ –

ರ್ಮರನು । ಳಿವಂತೆ । ನೀನುಳಿ । ದೆಯಿನ್ನಿ । ರೆವನ್ನು । ರುಮಿಲ್ಲ । ಮುತ್ತರುಂ

∪ ∪ ∪ ∪ – ∪ – ∪ ∪ ∪ – ∪ ∪ – ∪ ∪ – ∪ – ∪ –

ಕುರುಡ । ರುಮೆನ್ನ । ದೆಮ್ಮನು । ಡಿಗೇಳ್ ಮ । ಗನೇ ಬ । ಗೆ ತಂದೆ । ಗಿಂಬುಕೆಯ್ ।

**3. ಮತ್ತೇಭ ವಿಕ್ರೀಡಿತ ವೃತ್ತ**

1. ನಾಲ್ಕು ಸಮಾನವಾದ ಸಾಲುಗಳುಳ್ಳ ಪದ್ಯವಾಗಿದೆ

2. ಪ್ರತಿ ಸಾಲಿನಲ್ಲೂ 20 ಅಕ್ಷರಗಳಿಂದ ಕೂಡಿರುತ್ತದೆ.

3. ಪ್ರತಿ ಪಾದವೂ ಸ,ಭ,ರ,ನ,ಮ,ಯ ಎಂಬ 6 ಗಣಗಳಿಂದಲೂ ಕೊನೆಯಲ್ಲಿ ಒಂದು ಲಘು ಮತ್ತು ಕೂಡಿರುತ್ತದೆ.

4. ಆದಿ ಪ್ರಾಸದಿಂದ ಕೂಡಿರುತ್ತದೆ.

∪ ∪ – – ∪ ∪ – ∪ – ∪ ∪ ∪ – – – ∪ – – ∪–

ಸೂತ್ರ:– “ಸಭರಂ ನಂಮಯ ಲಂಗಮುಂ ಬಗೆಗೊ ಳಲ್ ಮತ್ತೇ ಭವಿಕ್ರೀ ಡತಂ ತಾಳೆ ನೋಡುವುದು : ಈ ಸೂತ್ರಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿದಾಗಲೂ ಇದೇ ರೀತಿಯ ಗಣ ವಿನ್ಯಾಸ ಬರಬೇಕು.

ᴗ ᴗ – – ᴗ ᴗ – ᴗ – ᴗ ᴗ ᴗ – – – ᴗ – – ᴗ –

ಸಭರಂ । ನಂಮಯ । ಲಂಗಮುಂ । ಬಗೆಗೊ । ಳಲ್ ಮತ್ತೇ । ಭವಿಕ್ರೀ । ಡಿತಂ

ᴗ ᴗ – – ᴗ ᴗ – ᴗ – ᴗ ᴗ ᴗ – –– ᴗ –

ಕೆಲವಂ । ಬಲ್ಲವ । ರಿಂದಕ । ಲ್ತುಕೆಲ । ವಂ ಶಾಸ್ತ್ರಂ । ಗಳಂಕೇ । ಳುತಂ

ᴗ ᴗ – | – ᴗ ᴗ | – ᴗ – | ᴗ ᴗ ᴗ | – – – | ᴗ – – | ᴗ –

ಕೆಲವಂ । ಮಾಳವ । ರಿಂದಕಂ । ಡುಕೆಲ । ವಂಸುಜ್ಞಾ । ನದಿಂನೋ । ಡುತಂ

ᴗ ᴗ – | – ᴗᴗ | – ᴗ – | ᴗᴗᴗ | – –– ᴗ – – ᴗ –

ಕೆಲವಂ । ಸಜ್ಜನ । ಸಂಗದಿಂ । ದಲರಿ । ಯಲ್ ಸರ್ವ । ಜ್ಞನಪ್ಪಂ । ನರಂ

ᴗ ᴗ – | – ᴗᴗ – ᴗ – | ᴗᴗᴗ –– – | ᴗ – – | ᴗ –

ಪಲವುಂ । ಪಳ್ಳಸ । ಮುದ್ರವ್ಯೆ । ಹರಹ ರಾಶ್ರೀಚೆ । ನ್ನಸೋಮೇ । ಶ್ವರಾ

**4. ಶಾರ್ದೂಲ ವಿಕ್ರೀಡಿತ.**

1. ನಾಲ್ಕು ಸಮನವಾದ ಸಾಲುಗಳಿಂದ ಕೂಡಿರುವ ಪದ್ಯ
2. ಪ್ರತಿ ಸಾಲಿನಲ್ಲೂ 19 ಅಕ್ಷರಗಳಿಂದ ಕೂಡಿರುತ್ತದೆ.
3. ಪ್ರತಿ ಪಾದವೂ ಮ,ಸ,ಜ,ಸ,ತ,ತ, ಎಂಬ 6 ಗಣಗಳು ಮತ್ತು ಕೊನೆಯಲ್ಲಿ ಒಂದು ಗುರುವಿನಿಂದ ಕೂಡಿರುತ್ತದೆ.
4. ಆದಿ ಪ್ರಾಸದಿದ ಕೂಡಿರುತ್ತದೆ.
5. ಸೂತ್ರ:– ಕಣ್ಗೊಪ್ಪಲ್ ಮಸಜಂಸತಂತಗಮುಮಾ ಶಾರ್ದೂಲ ವಿಕ್ರೀಡತಂ

– – – | ᴗ ᴗ – | ᴗ – ᴗ | ᴗ ᴗ – | – – ᴗ | – – ᴗ –

ಕಣ್ಗೊಪ್ಪಲ್ । ಮಸಜಂ । ಸತಂತ । ಗಮುಮಾ । ಶಾರ್ದೂಲ । ವಿಕ್ರೀಡ ।ತಂ

– – – | ᴗ ᴗ – | ᴗ – ᴗ | ᴗ ᴗ – | – – ᴗ | – – ᴗ –

ಇಂತೀಕಾ । ವ್ಯಮನೋ । ಲ್ದುಕೇಳ್ದ । ವಿಭುದರ್ । ಮೈವೆರ್ಜಿ । ಕೊಂಡಾಡೆ ।ಪೇ

– – – | – ᴗ– | ᴗ – ᴗ | ᴗ ᴗ – | – – ᴗ | – – ᴗ –

ಳ್ದಂತಾವೊ । ರ್ವನೆಸಾಂ । ಬಶುಂಭು । ಕೃಪೆಯಿಂ । ದೇಕಾಬ್ದ ।ದೊಳ್ ಪೂರ್ಣ ।ಮ

– – –| – ᴗ– | ᴗ – ᴗ | ᴗ ᴗ– | – – ᴗ | – – ᴗ | –

ಪ್ಪಂತೋರಂ । ತೇಷಡ । ಕ್ಷರಾರ್ಯ । ನನಘಂ । ಸಾಹಿತ್ಯ । ಶಾಸ್ತ್ರಜ್ಞ ।ನ

– – – | ᴗ ᴗ– | ᴗ – ᴗ | ᴗᴗ – | – – ᴗ | – – ᴗ | –

ಶ್ರಾಂತಶ್ರೀ । ಶಿವಲಿಂ । ಗ ಸಂಗ । ತಮಹಾ । ಮಾಹೇಶ್ವ । ರಂಭಕ್ತಿ ।ಯಿಂ

**5. ಸ್ರಗ್ಧರಾ ವೃತ್ತ**

1.ನಾಲ್ಕು ಸಮಾನವಾದ ಸಾಲುಗಳಿಂದ ಕೂಡಿರುವ ವೃತ್ತಪದ
2. ಪ್ರತಿ ಸಾಲಿನಲ್ಲೂ 21 ಅಕ್ಷರಗಳಿಂದ ಕೂಡಿರುತ್ತದೆ.
3. ಪ್ರತಿ ಪ್ರಾಸವೂ ಮ,ರ,ಭ,ನ,ಯ,ಯ,ಯ, ಎಂಬ 7 ಗಣಗಳಿಂದ ಕೂಡಿರುತ್ತದೆ.
4. ಆದಿಪ್ರಾಸದಿಂದ ಕೂಡಿರುತ್ತದೆ.
5. ಸೂತ್ರ:– ತೋರಲ್ ಮಂರಂಭನಂ ಮೂಯಗಣಮುಮದೆತಾಂ ಸ್ರಗ್ಧರಾ ವೃತ್ತಮಕ್ಕುಂ”

– –    – | – ᴗ –  | – ᴗ ᴗ | ᴗ ᴗ ᴗ  | ᴗ – – | – –  | ᴗ – –

ತೋರಲ್ ಮಂ । ರಂಭನಂ । ಮಾಯಗ । ಣಮುಮ । ದೆತಾಂಸ್ರ । ಗ್ಧರಾವೃ । ತ್ತಮಕ್ಕುಂ

– – –   | – ᴗ ᴗ  | – ᴗ ᴗ | ᴗᴗᴗ | ᴗ – | – –  –  | ᴗ – –

ಕಾರುಣ್ಯಂ । ಗೆಯ್ದುಸ । ದ್ದಿಕ್ಷೆಯ । ನೆಸಗಿ । ಲಸಚ್ಚಿ । ತ್ರಿಯಾಮಾ । ರ್ಗಮೆಂಪೇ

– – –  | – ᴗ –  | – ᴗ ᴗ  |  ᴗᴗ ᴗ  |  ᴗ – – | ᴗ – –  | ᴗ – –

ಳ್ದಾರಾಜ । ತ್ತೂನುಗಾ । ಚಾರ್ಯತೆ । ಯನೊಸೆ । ದುತಾನಿ । ತ್ತುಮೀಶಾ । ಜ್ಞೆಯಿಂದಂ

– – – | – – –  | – ᴗ ᴗ | ᴗ ᴗ ᴗ | –  – – | ᴗ – –|  ᴗ ᴗ –

ತೀರಳ್ದೂ । ರ್ವತ್ಸರಂ । ಗಳ್ನೆರೆ । ಯೆಭರ । ದೋಳಾಕೊ । ಲ್ಲಿಪಾಕೀ । ಶನೊಳ್ದೊ

– –  –  | – ᴗ– | – ᴗ ᴗ | ᴗ ᴗᴗ | ᴗ – – | ᴗ – –|  –  ᴗ –

ಕ್ಕಾರಾಧ್ಯಂ । ಮುಕ್ತಿರಾ । ಮಾರಮ । ಣೆನೆಸಿ । ಸಿದಂರೇ । ಣುಕಾಚಾ । ರ್ಯವರ್ಯಂ

**6. ಮಹಾ ಸ್ರಗ್ಧರಾ ವೃತ್ತ:–**

1. ನಾಲ್ಕು ಸಮಾನವಾದ ಸಾಲುಗಳಿಂದ ಕೂಡಿರುವ ವೃತ್ತ ಪದ್ಯ
2. ಪ್ರತಿ ಸಾಲಿನಲ್ಲೂ 22 ಅಕ್ಷರಗಳಿಂದ ಕೂಡಿರುತ್ತದೆ.
3. ಪ್ರತಿ ಪಾದವೂ ಸ,ತ,ತ,ನ,ಸ,ರ,ರ, ಎಂಬ 7 ಗಣಗಳಿಂದ ಕೂಡಿದ್ದು, ಕೊನೆಯಲ್ಲಿ ಒಂದು ಗುರು ಬರುತ್ತದೆ.
4. ಆದಿ ಪ್ರಾಸದಿಂದ ಕೂಡಿರುತ್ತದೆ. ಸೂತ್ರ **"ಸತತಂ ನಂಸಂರರಂಗಂ ನೆರೆದೆಸೆಯ ಮಹಾಸ್ರಗ್ಧರಾ ವೃತ್ತಮಕ್ಕುಂ"**

ᴗ ᴗ – | – – ᴗ | – – ᴗ | ᴗᴗᴗ | ᴗ  ᴗ – | – – – | – ᴗ ᴗ | –

ಸತತಂ । ನಂಸಂರ । ರಂಗಂನೆ । ರೆದೆಸೆ । ಯ ಮಹಾ । ಸ್ರಗ್ಧರಾ । ವೃತ್ತಮ । ಕ್ಕುಂ

ᴗ ᴗ  –  | – – ᴗ | – – ᴗ | ᴗᴗᴗ | ᴗᴗ–  | – ᴗ – | – ᴗ – | –

ಮೊದಲೊಳ್ । ರಾಜ್ಯಾಭಿ । ಷೇಕಪ್ರ । ಬಲಜ । ಲಮೆಕ । ರ್ಚಿತ್ತುದಾ । ಕ್ಷಿಣ್ಯಮಂ । ಹೋ

ᴗ ᴗ –  | – – ᴗ |  –   – ᴗ | ᴗᴗᴗ  | ᴗᴗ –  | ᴗ – – | – ᴗ – | –

ಮದಧೂ । ಮಂಚಿತ್ತ । ದೊಳ್ ತೊಟ್ಟ । ನೆಮಲಿ । ನತೆಯಂ । ಪೊರ್ದಿಸಿ । ತ್ತೊಪ್ಪಿರಲ್ । ಕ

– ᴗ ᴗ | – – ᴗ | – – ᴗ | ᴗ ᴗ ᴗ | ᴗ ᴗ– | – ᴗ –  | – ᴗ ᴗ | –

ಟ್ಟಿದಪ । ಟಂಬರ್ಪ । ಮುಪ್ಪಂಮ । ರಿಯಿಸಿ । ತಧಿಕ । ಕ್ವಾಂತಿಯಂ । ವಿಪ್ರವ । ರ್ಗಾ

ᴗ ᴗᴗ | – – ᴗ | – – ᴗ | ᴗᴗᴗ | ᴗᴗ–  | – ᴗᴗ | –  –ᴗ ᴗ | –

ಸ್ಪದದ । ಭ್ರಾನೀಕ । ಸಮ್ಮಾರ್ಜ । ನಿಕಳೆ । ದುದೆನಲ್ । ದುಷ್ಪರ । ಪ್ಪರ್ ನೃಪಾ । ಲರ್

ಈ ಆರು ವೃತ್ತಗಳನ್ನು (ಖ್ಯಾತ ಕರ್ನಾಟಕಗಳನ್ನು) ಸುಲಭವಾಗಿ ಸ್ಥೂಲವಾಗಿ ಗುರುತಿಸುವುದಕ್ಕೆ ಒಂದು ಪದ್ಯವಿದೆ. ಅದನ್ನು ತಿಳಿದರೆ ಈ ಆರು ವೃತ್ತಗಳನ್ನು ಗುರುತಿಸಬಹುದು.

ಗುರುವೊಂದಾದಿಯೊಳು ತಲಂ ಗುರುಮೊದಲ್ ಮೂರಾಗೆ ಶಾರ್ದೂಲ ಮಾ ಗುರುನಾಲ್ಕಾಗಿರಲಂತು ಸ್ರಗ್ಧರೆ ಲಘು ದ್ವಂದ್ವಂ ಗುರುದ್ವಂದ್ವಂಮಾ

ಗಿರೆ ಮತ್ತೇಭ ಲಘುದ್ವಯ ತ್ರಿಗುರುವಿಂದಕ್ಕು ಮಹಾ ಸ್ರಗ್ಧರಾ ಹರಿಣಾಕ್ಷೀ, ಲಘು ನಾಲ್ಕು ಚಂಪಕಮಿವಾರುಂ ಖ್ಯಾತ ಕರ್ಣಾಟಕಂ.

1. ಗುರು ಒಂದು ಆದಿಯ ಲಿ = – ಉತ್ಪಲ
2. ಗುರುಮೊದಲು ಗುರು ಮೂರು ಬಂದರೆ = – – – ಶಾರ್ದೂಲ
3. ಲಘು ಎರಡು ಗುರು ಎರಡು ಬಂದರೆ = ᴗᴗ – – ಮತ್ತೇಭ
4. ಲಘು ಎರಡು ಮೂರು ಗುರು ಬಂದರೆ = ᴗᴗ– – – ಮಹಾ ಸ್ರಗ್ಧರೆ

5. ನಾಲ್ಕು ಗುರುಗಳು ಬಂದರೆ = – – – – ಸ್ರಗ್ಧರೆ

6. ನಾಲ್ಕು ಲಘುಗಳು ಬಂದರೆ = ∪∪∪∪ ಚಂಪಕ

| ವೃತ್ತ | ಅಕ್ಷರಗಳ ಸಂಖ್ಯೆ | ಗಣಗಳು |
|---|---|---|
| 1. ಉತ್ಪಲ ಮಾಲಾ ವೃತ್ತ | 20 | ಭ ರ ನ ಭ ಭ ರ – ಲಗು |
| 2. ಶಾರ್ದೂಲ ವಿಕ್ರೀಡಿತ ವೃತ್ತ | 19 | ಮ ಸ ಜ ಸ ತ ಅತ – ಗುರು |
| 3. ಸ್ರಗ್ಧರಾ ವೃತ್ತ | 21 | ಮ ರ ಭ ನ 0ು 0ು 0ು |
| 4. ಮತ್ತೇಭ ವಿಕ್ರೀಡಿತ ವೃತ್ತ | 20 | ಸ ಭ ರ ನ ಮ 0ು – ಗುರು |
| 5. ಮಹಾಸ್ರಗ್ಧರಾ ವೃತ್ತ | 22 | ಸ ತ ತ ನ ಸ ರ ರ – ಗುರು |
| 6. ಚಂಪಕ ಮಾಲ ವೃತ್ತ | 21 | ನ ಜ ಭ ಜ ಜ ರ |

**(ರ) 'ಳ' – ಕುಳ–ಕ್ಷಳ**

ಕನ್ನಡ ವರ್ಣಮಾಲೆಯಲ್ಲಿ ಹಿಂದೆ ಮೂರು ರೀತಿಯ 'ಳ' ಕಾರಗಳಿದ್ದುವು. ಅದೇ ವಿಳ–ಕುಳ–ಕ್ಷಳ

ಈ 'ಳ' ಕಾರವೇ ರಳ

ಕನ್ನಡ ದೇಸೀ ಶಬ್ದಗಳಲ್ಲಿ ಬಳಕೆಯಾಗುವ 'ಳ' ವನ್ನು ಕುಳ ಗಳೆಂದು ಕರೆಯುತ್ತಾರೆ.

ಸಂಸ್ಕೃತ ಶಬ್ದಗಳಲ್ಲಿ ಪ್ರಯೋಗವಾಗುವ 'ಲ' ಕ್ಕೆ ಪ್ರತಿಯಾಗಿ ಬಳಕೆಯಾಗುವ 'ಳ' ವನ್ನು 'ಕ್ಷಳ' ಗಳೆಂದು ಕರೆಯುತ್ತಾರೆ.

| ರಳ | ಕುಳ |
|---|---|
| ಹಳಗನ್ನಡ (ೞ) | ಹೊಸಗನ್ನಡ 'ಳ' |
| ಪೊೞ್ = ನದಿ | ಪೊಳೆ– ಪ್ರಕಾಶಿಸು |
| ಆೞ್= ಮುಳುಗು | ಆಳ್ ಸೇವಕ ಮನುಷ್ಯ |
| ಬಾೞ್ = ಜೀವನ | ಬಾಳ್ – ಕತ್ತಿ |
| ಬಾೞ್ = ಒಂದು ಜಾತಿಯ ಮೀನು | ಬಾಳೆ – ಒಂದು ಜಾತಿ0ು ಹಣ್ಣು |

ಕ್ಷಳಕ್ಕೆ ಉದಾ:– ಮಂಗಲ = ಮಂಗಳ

ಪಿಂಗಲ = ಪಿಂಗಳ

ಇದೇ ರೀತಿ 'ರ' ಕಾರದಲ್ಲಿಯೂ ಎರಡು ರೀತಿಯ 'ರ' ಕಾರಗಳು ಇದ್ದವು. ಅವುಗಳನ್ನು ರೇಫ ಮತ್ತು ಶಕಟರೇಪ ಎಂದು ಕರೆಯಲಾಗುತ್ತಿತ್ತು.

'ರ' ಅಕ್ಷರವೇ ರೇಫ ಮತ್ತು 'ಱ' ಅಕ್ಷರವೇ ಶಕರರೇಫ ಈ ಅಕ್ಷರಗಳಿಂದ ಕೂಡಿದ ಪದಗಳಿಗೆ ಅರ್ಥ ವ್ಯತ್ಯಾಸವಿತ್ತು.

ಉದಾ:– ಏರ್=ಹತ್ತು ಏಱ್– ಗಾ0ು

ನೆರೆ = ಸಮೀಪ, ಅಕ್ಕಪಕ್ಕ, ನೇವ್=ಪ್ರವಾಹ, ಮಹಾಪೂರ

ಮೊರೆ = ಪ್ರಾರ್ಥನೆ, ಮೊಱ್ = ಗೋಳಾಟ, ಗುಂಯ್ ಗುಡು

**ಶಿಥಿಲದ್ವಿತ್ವ**

ಹಳಗನ್ನಡದಲ್ಲಿ ಕೆಲವು ಕಡೆ ಕೆಲವು ತೇಲಿಸಿ, ಉಚ್ಚರಿಸುವುದು ಅಂದರೆ ಉಚ್ಚರಿಸುವುದು ದ್ವಿತ್ವಾಕ್ಷರಗಳನ್ನು ಶಿಥಿಲವಾಗಿ ಉಚ್ಚರಿಸಿದರೆ (ತೇಲಿಸಿ, ಎಚ್ಚರಿಸುವುದು ಅಂದರೆ ಎರಡು ಮಾತ್ರೆಯ ಕಾಲದ ಅಕ್ಷರವನ್ನು ಒಂದು ಮಾತ್ರೆಯಲ್ಲಿ ಉಚ್ಚರಣೆ ಮಾಡುವುದು) ಅಂಥಹವನ್ನು ಶಿಥಿಲದ್ವಿತ್ವ ಎಂದು ಕರೆಯುತ್ತಾರೆ ಹೀಗೆ ಶಿಥಿಲ ದ್ವಿತ್ವವಾಗಿ ಉಚ್ಚರಿಸಿದ ಸಂಯುಕ್ತಾಕ್ಷರದ ಹಿಂದಿನ ಅಕ್ಷರ ಗುರುವಾಗುವುದಿಲ್ಲ.

ಬರ್ದಿಲ, ಅಮರ್ದು, ಎರ್ದೆ, ಕರ್ದುಂಕು, ಬರ್ದುಂಕು, ಜಗಳ್ದಂ, ನಿಮಿರ್ವ, ತೊರ್ದರ್ಪಂ, ಅಮರ್ಗಂ, ನುಸುಳ್ಗೆ ಕುಳಿರ್ವ ಇವೆಲ್ಲವು ಶಿಥಿಲದ್ವಿತ್ವಗಳಾಗುತ್ತದೆ.

**ಮಾತ್ರಾಗಣಗಳು**

ಮಾತ್ರೆಗಳ ಆಧಾರದ ಮೇಲೆ ಗಣ ವಿಭಾಗಿಸುವುದು. ಅಂದರೆ ಪದ್ಯದ ಪಾದಗಳನ್ನು ಗುರು ಲಘುಗಳಿಂದ ಗುರುತಿಸಿದ ಮೇಲೆ ಮೂರು, ನಾಲ್ಕು, ಐದು, ಮಾತ್ರೆಗಳ ಗುಂಪುಗಳನ್ನು ಒಂದೊಂದು ಗಣವಾಗಿ ವಿಭಾಗಿಸುವುದು. ಮಾತ್ರಗಣಗಳಿಂದ ಕೂಡಿದ ಪದ್ಯಗಳು ಕಂದ, ಷಟ್ಪದಿ, ರಗಳೆ.

**ಕಂದ ಪದ್ಯ**

ಮಾತ್ರಗಣ ಆಧಾರಿತ ಛಂದಸ್ಸುಗಳಲ್ಲಿ ಕಂದ ಪದ್ಯವೂ ಕೂಡ ಒಂದು ಇದು ಚೌಪದಿಯಾಗಿರುತ್ತದೆ. ಕೊಟ್ಟಿರುವ ಪದ್ಯದ ಆಧಾರದಿಂದ ಇದರ ಲಕ್ಷಣಗಳನ್ನು ತಿಳಿದುಕೊಳ್ಳಬಹುದು.

– – | ∪ – ∪ | – –

ಕಾವೇ । ರಿಯಿಂದ । ಮಾಗೆ

– ∪ ∪ | ∪ ∪ – | ∪ – ∪ | – – | ∪ ∪ –

ದಾವರಿ । ವರಮಿ । ರ್ದನಾಡ । ದಾಕ । ನ್ನಡದೊಳ್

– ∪ ∪ | ∪∪∪∪ | – ∪ ∪

ಭಾವಿಸಿ । ದಜನಪ । ದಂ ವಸು

– ∪∪ | ∪∪ – | ∪ ∪∪∪ | ∪∪∪ ∪| – –

ಧಾವಳ । ಯವಿಲೀ । ನವಿಶದ । ವಿಷಯ ವಿ । ಶೇಷಂ

ಈ ಪದ್ಯದಲ್ಲಿ ನಾಲ್ಕು ಪಾದಗಳಿವೆ. ಒಂದು ಮತ್ತು ಮೂರನೆಯ ಪ್ರಾಸಗಳಲ್ಲಿ ತಲಾ ಹನ್ನೆರಡು ಮಾತ್ರೆಗಳಿವೆ. ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ ತಲಾ ಇಪ್ಪತ್ತು ಮಾತ್ರೆಗಳಿವೆ. ಒಂದು ಮತ್ತು ಮೂರನೆಯ ಪಾದಗಳು ಮಾತ್ರ ಸಂಖ್ಯೆಯಲ್ಲಿ ಪರಸ್ಪರ ಸಮವಾಗಿವೆ. ಹಾಗೆಯೇ ಎರಡು ಮತ್ತು ನಾಲ್ಕನೆಯ ಪಾದಗಳು ಪರಸ್ಪರ ಸಮವಾಗಿವೆ. ಹಾಗಾಗಿ ಮೊದಲೆರೆಡು ಪಾದಗಳನ್ನೂ ಪೂರ್ವಾರ್ಧ ಎಂತಲೂ ಮೂರು ಮತ್ತು ನಾಲ್ಕನೆಯ ಪಾದಗಳನ್ನು ಉತ್ತರಾರ್ಧವೆಂತಲೂ ಕರೆಯಬಹುದು. ಪ್ರತಿ ಪಾದವೂ ತಲಾ ನಾಲ್ಕು ಮಾತ್ರೆಗಳ ಗಣದಂತೆ ವಿಭಾಗಿಸಲ್ಪಟ್ಟಿವೆ.

**ಲಕ್ಷಣಗಳು:–**

1. ಇದು ನಾಲ್ಕು ಸಾಲಿನ ಪದ್ಯ
2. ಒಂದು ಮತ್ತು ಮೂರನೆಯ ಪಾದಗಳು ಪರಸ್ಪರ ಸಮವಾಗಿದ್ದು ನಾಲ್ಕು ಮಾತ್ರೆಯ ಮೂರು ಮೂರು ಗಣಗಳಿದ್ದು ಒಟ್ಟು 12 ಮಾತ್ರೆಗಳೀಂದ ಕೂಡಿರುತ್ತದೆ.
3. ಎರಡು ಮತ್ತು ನಾಲ್ಕನೆಯ ಪಾದಗಳು ಪರಸ್ಪರ ಸಮವಾಗಿದ್ದು ನಾಲ್ಕು ಮಾತ್ರೆಗಳ ತಲಾ ಐದೈದು ಗಣಗಳು ಬಂದು ಒಟ್ಟು 20 ಮಾತ್ರೆಗಳಿಂದ ಕೂಡಿರುತ್ತದೆ.
4. ಆರನೇ ಮತ್ತು ಹತ್ತನೆಯ ಗಣ ಜಗಣ ( – ) ವಾಗಿರಬೇಕು ಅಥವಾ ಸರ್ವ ಲಘು ಗಣವಾಗಿರಬೇಕು
5. ಪ್ರತಿ ಪಾದವೂ ಆದಿ ಪ್ರಾಸದಿಂದ ಕೂಡಿರುತ್ತದೆ.
6. ಕಂದ ಪದ್ಯದ ಒಟ್ಟು ಮಾತ್ರೆಗಳ ಸಂಖ್ಯೆ 64.

ಗಣವಿನ್ಯಾಸ :– 4+4+4 = 12

4+4+4+4+4 = 20

4+4+4 = 12

4+4+4+4+4 = 20

64 ಮಾತ್ರೆಗಳು

ಪರೀಕ್ಷೆ0ಯಲ್ಲಿ ಕಂದ ಪದ್ಯದ ನಾಲ್ಕು ಸಾಲುಗಳನ್ನು ನೀಡುವುದಿಲ್ಲ ಪದ್ಯದ ಮೊದಲೆರಡು ಸಾಲುಗಳಾದ ಪೂರ್ವಾರ್ಧವಾಗಲಿ ಮೂರು ಮತ್ತು ನಾಲ್ಕನೆ0ಯ ಸಾಲುಗಳಾದ ಉತ್ತರಾರ್ಧವಾಗಲಿ ನೀಡಿರುತ್ತಾರೆ. ಆ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ ನಂತರ ಛಂದಸ್ಸಿನ ಹೆಸರನ್ನು ಬರೆಯಬೇಕು.

U U U U | U U – | U U– |

ಉದಾ:– ಅತಿಕುಟಿ । ಲಮನಂ । ಧನಲು ।

U U – | – – | – – U | U U – | U U – |

ಬ್ಧತೆಯಿಂ । ದಂ ದು । ಷ್ಟಬುದ್ಧಿ । ನುಡಿದಂ । ಪುಸಿಯಂ ।

(ಇದು ಕಂದ ಪದ್ಯವಾಗಿದೆ.)

ಈ ಮೇಲಿನ ಪದ್ಯವು ಮಾತ್ರ ಗಣದ ಕಂದ ಪದ್ಯದಲ್ಲಿ ರಚಿತವಾಗಿದೆ

U U U – | U – U | – – |

2. ನಿಮಗೆ ಪೊ । ಡೆಮಟ್ಟು । ಪೋಪೀ ।

U U – | – – | U UUU | – – | U U – |

ಸಮಕ । ಟ್ಟೀಂ ಬಂ । ದೆನಹಿತ । ರೊಳ್ಸಂ । ಧಿಯನೇಂ ।

ಈ ಮೇಲಿನ ಪದ್ಯವು ಮಾತ್ರಗಣದ 'ಕಂದಪದ್ಯ'ದಲ್ಲಿ ರಚಿತವಾಗಿದೆ.

## ಷಟ್ಪದಿ

ಷಟ್ ಎಂದರೆ ಆರು 'ಪದಿ' ಎಂದರೆ ಸಾಲು

ಕನ್ನಡ ಕಾವ್ಯದಲ್ಲಿ ಷಟ್ಪದಿಗಳನ್ನು ಪ್ರಥಮವಾಗಿ ಬಳಕೆಗೆ ತಂದವನು ರಾಘವಾಂಕ ಕವಿ. ಇವರನ್ನು ಷಟ್ಪದಿಯಬ್ರಹ್ಮ ಎಂದು ಕರೆಯಲಾಗುತ್ತದೆ ಹಳಗನ್ನಡ, ಸಾಹಿತ್ಯದಲ್ಲಿ ಕಂದ, ಖ್ಯಾತ ಕರ್ನಾಟಕ ವೃತ್ತಗಳು ಹೇರಳವಾಗಿದ್ದರೆ ನಡುಗನ್ನಡ ಕಾಲದ ಸಾಹಿತ್ಯದಲ್ಲಿ ಷಟ್ಪದಿಗೆ ಮೊದಲ ಸ್ಥಾನ. ಗದುಗಿನ ಭಾರತ ವೆಂದೆ ಪ್ರಸಿದ್ಧವಾಗಿರುವ ಕುಮಾರವ್ಯಾಸನ 'ಕರ್ಣಾಟ ಭಾರತ ಕಥಾಮಂಜರಿ ಲಕ್ಷ್ಮೀಶ ಕವಿಯ' ಜೈ ಮಿನಿ ಭಾರತ, ಮುದ್ದಣನ'ಶ್ರೀರಾಮ ಪಟ್ಟಾಭಿಷೇಕ' ಕೃತಿಗಳು ಷಟ್ಪದಿಯಲ್ಲಿ ರಚನೆಯಾಗಿವೆ.

ಆರು ಸಾಲುಗಳುಳ್ಳ ಪದ್ಯವು ಷಟ್ಪದಿಯೆನಿಸುತ್ತದೆ. ಇದು ಮಾತ್ರಾಗಣ ಛಂದಸ್ಸಿಗೆ ಸೇರಿದೆ ಷಟ್ಪರಿ ಎಂಬುದುಛಂದಿಸ್ಸಿನ ಒಂದು ಪ್ರಕಾರವಾಗಿದು ಇದರ ಒಂದು , ಎರಡು ನಾಲ್ಕು ಮತ್ತು ಐದನೆಯ ಪ್ರಕಾರವಾಗಿದೆ ಮಾತ್ರ ಸಂಖ್ಯೆಯಲ್ಲಿ ಒಂದಕ್ಕೊಂದು ಸಮಾನ ವಾಗಿರುತ್ತದೆ. ಒಂದನೆಯ ಪಾದದಲ್ಲಿರುವ ಮಾತ್ರೆಗಳ ಒಂದೊವರೆಯಷ್ಟು ಮತ್ತು ಒಂದು ಗುರು. ಮೂರನೆಯ ಮತ್ತು ಆರನೆಯ ಪಾದಗಳಲ್ಲಿರುತ್ತವೆ. ದ್ವಿತೀಯಾಕ್ಷರವು ಪ್ರಾಸಾಕ್ಷರವಾಗಿರುತ್ತದೆ.

ಷಟ್ಪದಿಗಳಲ್ಲಿ ಆರು ವಿಧಗಳಿವೆ, ಅವು ಯಾವುವೆಂದರೆ

1. ಶರ ಷಟ್ಪದಿ
2. ಕುಸುಮ ಷಟ್ಪದಿ
3. ಭೋಗ ಷಟ್ಪದಿ
4. ಭಾಮಿನಿ ಷಟ್ಪದಿ
5. ಪರಿವರ್ಧಿನಿ ಷಟ್ಪದಿ
6. ವಾರ್ಧಕ ಷಟ್ಪ

## ಷಟ್ಪದಿಯ ಸಾಮಾನ್ಯ ಲಕ್ಷಣಗಳು.

1. ಆರು ಸಾಲುಗಳಿಂದ ಕೂಡಿರುತ್ತದೆ.

2. 1, 2, 4, ಮತ್ತು 5ನೆಯ ಸಾಲುಗಳು ಸಮವಾಗಿರುತ್ತವೆ.

3. 3 ಮತ್ತು 6ನೆಯ ಸಾಲುಗಳು ಸಮವಾಗಿದ್ದು, ಕೊನೆಯ ಅಕ್ಷರ ಲಘುವಾಗಿದ್ದರೂ ಗುರು ಎಂದೇ ಪರಿಗಣಿಸಬೇಕು

4. ಷಟ್ಪದಿಯ ಮೊದಲ ಮೂರು ಸಾಲುಗಳನ್ನು ಪೂರ್ವಾರ್ಧವೆಂದೂ ಕೊನೆಯ ಮೂರು ಸಾಲುಗಳನ್ನು ಉತ್ತರಾರ್ಧವೆಂದೂ ತಿಳಿಯ ಬೇಕು.

5. ಆದಿ ಪ್ರಾಸ ನಿಯತವಾಗಿರುತ್ತದೆ.

## ಭಾಮಿನಿ ಷಟ್ಪದಿ

UUU | – U U | – U | – UU

ಸುಲಿದ । ಬಾಳೆಯ । ಹಣ್ಣಿ । ನಂದದಿ

U UU | UUUU | – U | – UU

ಕಳಿದ । ಸಿಗುರಿನ । ಕಬ್ಬಿ । ನಂದದಿ

U UU | – UU | – U | – UU | UUU | – – | –

ಅಳಿದ । ಉಷ್ಣದ । ಹಾಲಿ । ನಂದದಿ । ಸುಲಭ । ವಾಗಿ । ರ್ಪ

U UU | UU – | U UU | U UUU

ಲಲಿತ । ವಹ ಕ । ನ್ನಡವ । ನುಡಿಯಲಿ

U UU | – U U | – U | – UU

ತಿಳಿದು । ತನ್ನೊಳು । ತನ್ನ । ಮೋಕ್ಷವ

### ಭಾಮಿನಿ ಷಟ್ಪದಿಯ ಲಕ್ಷಣಗಳು

* 3 ಮತ್ತು 4 ಮಾತ್ರೆಗಳಂತೆ ಗಣ ವಿಭಾಗಿಸಬೇಕು

* 1,2,4 ಮತ್ತು 5ನೆಯ ಶಬ್ಧಗಳಲ್ಲಿ ಮೂರು ಮಾತ್ರೆಗಳ ಗಣದ ಆನಂತರ ನಾಲ್ಕು ಮಾತ್ರೆಗಳ ಗಣಗಳು ಅನುಕ್ರಮವಾಗಿ ಎರಡೆರಡು ಗಣಗಳು ಬಂದು ಒಟ್ಟು 14 ಮಾತ್ರೆಗಳಿಂದ ಕೂಡಿರುತ್ತದೆ.

* 3. ಮತ್ತು 6ನೆಯ ಸಾಲುಗಳಲ್ಲಿ ಮೂರು ಮಾತ್ರೆಗಳ ಗಣದ ಆನಂತರ ನಾಲ್ಕು ಮಾತ್ರೆಗಳ ಗಣಗಳು ಅನುಕ್ರಮವಾಗಿ ಮೂರು ಮೂರು ಇದ್ದು ಕೊನೆಯಲ್ಲಿ ಒಂದು ಗುರುವಿನಿಂದ ಕೂಡಿದ್ದು ಒಟ್ಟು 23 ಮಾತ್ರೆಗಳಿಂದ ಕೂಡಿರುತ್ತದೆ.

* 4. ಭಾಮಿನಿ ಷಟ್ಪದಿಯಲ್ಲಿ ಬರುವ ಒಟ್ಟು ಮಾತ್ರೆಗಳ ಸಂಖ್ಯೆ 102

ಪರೀಕ್ಷೆಯಲ್ಲಿ ಷಟ್ಪದಿ ಪದ್ಯದ ಮೊದಲ ಮೂರು ಸಾಲುಗಳುಳ್ಳ ಪೂರ್ವಾರ್ಧವಾಗಲಿ, ಕೊನೆಯ ಮೂರು ಸಾಲುಗಳುಳ್ಳ ಪೂರ್ವಾರ್ಧವಾಗಲಿ, ಕೊನೆಯ ಮೂರು ಸಾಲುಗಳಾದ ಉತ್ತರಾರ್ಧವಾಗಲಿ ನೀಡುತ್ತಾರೆ. ಆಗ ಆ ಪದ್ಯ ಭಾಗಕ್ಕೆ, ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯ ಬೇಕು.

U UU | – U U | U – | U U U |

ಉದಾ:– ಇನತ । ನೂಜನ । ಕೊಡೆ । ಮೈದುನ ।

U UU | U UUU| UUU | UUUU |

ತನದ । ಸರಸವೆ । ನೆಸಗಿ । ರಥದೊಳು ।

UUU | UU UU | UUU | – UU | U UU | – UU | –

ದನುಜ । ರಿಪು ಬರ । ಸೆಳೆದು । ಕುಳ್ಳಿರಿ । ಸಿದನು । ಪೀಠದಾಲಿ

ಈ ಮೇಲಿನ ಪದ್ಯವು ಮಾತ್ರಾಗಣದ 'ಭಾಮಿನಿಷಟ್ಪದಿ' ಯಲ್ಲಿ ರಚಿತವಾಗಿದೆ.

– U - UU - U - U U

2) ಮಾರಿ । ಗೌತಣ । ವಾಯ್ತು । ನಾಳಿನ ।

- U UUUU - U UUUU

ಭಾರ । ತವು ಚತು । ರಂಗ । ಬಲದಲಿ

-U UU U U - U UUUU UUU - U U -

ಕೌರ । ವನ ಖಣ । ಹಿಂಗೆ । ರಣದಲಿ । ಸುಭಟ । ಕೋಟಿಯ । ನು

ಈ ಮೇಲಿನ ಪದ್ಯವು ಮಾತ್ರಗಣದ 'ಭಾಮಿನಿ ಷಟ್ಪದಿ' ಯಲ್ಲಿ ರಚಿತವಾಗಿದೆ.

## ವಾರ್ಧಕ ಷಟ್ಪದಿ

UUUUU - - U U U U U U - U -

ಬಡತನದ । ಹೊತ್ತಾನೆ । ದೊರಕಿ ಫಲ । ವೇನು ನೀ।

U-UU - - U UUU U U - U U U

ರಡಾಸಿರ್ದ । ಹೊತ್ತಾಜ್ಯ । ದೊರಕಿ ಫಲ । ವೇನು ರುಜೆ।

UUUUU UU - U - UUU - - U UU-U - U - -

ಯಡಸಿ ಕೆಡ । ದಿಹ ಹೊತ್ತು । ರಂಭೆದೊರೆ । ಕೊಂಡಲ್ಲಿ । ಫಲವೇನು । ಸಾವಹೊ । ತ್ತು

U UUUU UUUUU UU-U UUUUU

ಪೊಡವಿಯೊಡ । ತನ ದೊರಕಿ । ಫಲವೇನು । ಕಡುವಿಸಿಲು

UUU - - U - U UU - UUU UU

ಹೊಡೆದು ಬೆಂ। ಡಾಗಿ ಬೀ । ಳ್ವೆಮಗೆ ನೀ। ನೊಲಿದು ಮಣಿ

UUUUU -U UU - U - - U - UUU- - - U -

ದೊಡಿಗೆಗಳ । ನಿತ್ತು ಫಲ । ವೇನು ಭೂ । ಪಾಲ ಹೇ । ಳುನುತ ಮ । ತ್ತಿಂತೆಂದ । ರು

## ವಾರ್ಧಕ ಷಟ್ಪದಿಯ ಲಕ್ಷಣಗಳು

1. 5 ಮಾತ್ರೆಗಳಂತೆ ಗಣ ವಿಭಾಗ ಮಾಡಬೇಕು.

2. 1,2,4 ಮತ್ತು 5ನೆಯ ಸಾಲುಗಳಲ್ಲಿ 5 ಮಾತ್ರೆಯ 4 ಗಣಗಳು ಬಂದು ಒಟ್ಟು 20 ಮಾತ್ರೆಗಳಿಂದ ಕೂಡಿರುತ್ತದೆ.

3. 3 ಮತ್ತು 6ನೆಯ ಸಾಲುಗಳಲ್ಲಿ 5 ಮಾತ್ರೆಯ 6 ಗಣಗಳು ಬಂದು ಒಟ್ಟು 32 ಮಾತ್ರೆಗಳೀಂದ ಕೂಡಿರುತ್ತದೆ.

4. ವಾರ್ಧಕ ಷಟದಿಯ ಒಟ್ಟು ಮಾತ್ರೆಗಳ ಸಂಖ್ಯೆ 144.

– ᴗ – | – – ᴗ | ᴗ ᴗᴗ ᴗᴗ | – – ᴗ |

ಉದಾ:– ಊರ್ವಿಯೊಳ್ । ಕೌಸಲ್ಯೆ । ಪಡೆದ ಕುವ । ರಂ ರಾಮ । = 20

– ᴗ – | – ᴗ – | ᴗᴗ – ᴗ | ᴗ ᴗ ᴗᴗᴗ

ನೋರ್ವನೇ । ವೀರನಾ । ತನ ಯಜ್ಞ ।ತುರಗಮಿದು = 20

– ᴗᴗᴗ | – ᴗ –– | – ᴗ – | ᴗᴗᴗᴗ– | – ᴗ – | ᴗᴗᴗ – | –

ನಿರ್ವಹಿಸ । ಲಾರ್ಪರಾ । ರಾದೊಡಂ । ತಡೆಯಲೆಂ । ದಿರ್ದ ಲೇ । ಖನವನೋ । ದಿ = 32

**ಈ ಮೇಲಿನ ಪದ್ಯವು ಮಾತ್ರಗಣದ 'ವಾರ್ಧಕ ಷಟ್ಪದಿ' ಯಲ್ಲಿ ರಚಿತವಾಗಿದೆ.**

ᴗ ᴗ– ᴗ | – ᴗ – | ᴗ ᴗᴗ ᴗ ᴗ | ᴗ ᴗ ᴗᴗᴗ

ತೆಗೆದುತ್ತ । ರೀಯಮಂ । ಮುರಿದು ಕುದು । ರೆಯ ಗಳಕೆ । = 20

ᴗᴗᴗ ᴗᴗ | – ᴗ ᴗᴗ | – – ᴗ | ᴗ ᴗᴗᴗ–

ಬಿಗಿದು ಕದ । ಳೀದ್ರುವಕೆ । ಕಟ್ಟಲ್ಕೆ । ಮುನಿಸುತರ್ । =20

ᴗ ᴗ ᴗᴗᴗ | – ᴗ – ᴗ ᴗ ᴗᴗᴗ | – ᴗ – | ᴗᴗ ᴗᴗᴗ | – ᴗ ᴗᴗ | ᴗ

ಮಿಗೆ ನಡುಗಿ । ಬೇಡ ಬೇ । ಡರಸುಗಳ । ವಾಜಿಯಂ । ಬಿಡು ಬಡಿವ । ರೆಮ್ಮ ನೆನ । ಲು = 32

**ಈ ಮೇಲಿನ ಪದ್ಯವು ಮಾತ್ರಗಣದ 'ವಾರ್ಧಕ ಷಟ್ಪದಿ' ಯಲ್ಲಿ ರಚಿತವಾಗಿದೆ.**

5+5+5+5 = 20

5+5+5+5 = 20

5+5+5+5+5+5 = ಗುರು = 32

5+5+5+5 = 20

5+5+5+5 = 20

5+5+5+5+5+5 = ಗುರು = 32

## ಶರ ಷಟ್ಪದಿ

– ᴗ ᴗ | ᴗᴗ ᴗ ᴗ |

ಈಶನ । ಕರುಣೆಯ ।

– ᴗ ᴗ | ᴗ ᴗ ᴗ ᴗ |

ನಾಶಿಸು । ವಿನಯದಿ ।

– ᴗ ᴗ | – ᴗ ᴗ | – ᴗ ᴗ | –

ದಾಸನ । ಹಾಗೆಯೆ । ನೀ ಮನ । ವೇ

– ᴗ ᴗ | ᴗᴗ ᴗᴗ |

ಕ್ಲೇಶದ । ವಿಧ ವಿಧ ।

– ᴗ ᴗ | ᴗ ᴗᴗᴗ |

ಪಾಶವ । ಹರಿದುವಿ ।

– ᴗ ᴗ | – ᴗᴗ | ᴗᴗᴗᴗ | –

ಲಾಸದಿ । ಸತ್ಯವ । ತಿಳಿಮನ । ವೇ

**ಶರ ಷಟ್ಪದಿಯ ಲಕ್ಷಣಗಳು**

* 4 ಮಾತ್ರೆಗಳಂತೆ ಗಣ ವಿಭಾಗಿಸ ಬೇಕು.
* 1,2,4 ಮತ್ತು 5ನೆಯ ಸಾಲುಗಳಲ್ಲಿ 4 ಮಾತ್ರೆಯ 2ಗಣಗಳು ಬಂದು ಒಟ್ಟು 8 ಮಾತ್ರೆಗಳಿಂದ ಕೂಡಿದೆ
* 3 ಮತ್ತು 6ನೆಯ ಸಾಲುಗಳಲ್ಲಿ 4 ಮಾತ್ರೆಯ 3 ಗಣಗಳು ಬಂದು ಕೊನೆಯಲ್ಲಿ ಒಂದು ಗುರು ಉಳಿದು ಒಟ್ಟು 14 ಮಾತ್ರೆಗಳಿಂದ ಕೂಡಿರುತ್ತದೆ.
* ಶರ ಷಟ್ಪದಿಯಲ್ಲಿ ಬರುವ ಒಟ್ಟು ಮಾತ್ರೆಗಳು 60

4+4 = 8

4+4 = 8

4+4+4+1 ಗುರು = 14

4+4 = 8

4+4 = 8

## ಕುಸುಮ ಷಟ್ಪದಿ

– ᴗ ᴗᴗ | ᴗᴗᴗ –

ಸಂತತಿಯ । ಪಡೆಯಭೂ ।

– ᴗ ᴗᴗ | ᴗ ᴗ ᴗ –

ಕಾಂತನನು । ದಿನಮುವಿಂ ।

– ᴗ – | ᴗ ᴗᴗᴗᴗᴗ | – ᴗ – | ᴗ

ತಿಂತುನಂ । ದಿನಿಯನುಪ । ಚಾರದಿಂ । ದ

– ᴗ ᴗ ᴗ | – ᴗ –

ಸಂತಮಿಪ । ನೋಂಪಿಯಂ ।

– – ᴗ | – ᴗ ᴗ ᴗ

ನೋಂತೇಕ । ವಿಂಶತಿದಿ

– – ᴗ | ᴗ ᴗ ᴗ ᴗᴗ | – – ᴗ | –

ನಂತನ್ನ । ಸತಿಯೊಡನೆ । ಸೇವೆಗೈ । ದಂ

**ಕುಸುಮ ಷಟ್ಪದಿಯ ಲಕ್ಷಣಗಳು.**

* 5 ಮಾತ್ರೆಗಳಂತೆ ಗಣ ವಿಭಾಗ ಮಾಡಬೇಕು

* 1, 2, 4, ಗಣಗಳು ಬಂದು ಒಟ್ಟು 10 ಮಾತ್ರೆಗಳಿಂದ ಕೂಡಿರುತ್ತದೆ.

* 3 ಮತ್ತು 6ನೆಯ ಸಾಲುಗಳಲ್ಲಿ 5 ಮಾತ್ರೆಯ 3 ಗಣಗಳು ಬಂದು ಕೊನೆಯಲ್ಲಿ ಒಂದು ಗುರು ಉಳಿದು ಒಟ್ಟು 17 ಮಾತ್ರೆಗಳಿಂದ ಕೂಡಿರುತ್ತದೆ.

* ಕುಸುಮ ಷಟ್ಪದಿಯ ಒಟ್ಟು ಮಾತ್ರೆಗಳ ಸಂಖ್ಯೆ 74

5+5 = 10

5+5 10

5+5+5+ 1 ಗುರು = 17

5+5 = 10

5+5 10

5+5+5+ 1 ಗುರು = 17

## ಭೋಗ ಷಟ್ಪದಿ

ᑌ ᑌ ᑌ | – ᑌ | – ᑌ | – ᑌ |

ಮೆರೆಯು । ತಿದ್ದ । ಭಾಗ್ಯ । ವೆಲ್ಲ ।

ᑌ ᑌ ᑌ | – ᑌ | ᑌ ᑌ ᑌ | ᑌ ᑌ ᑌ

ಹರಿದು । ಹೋಯಿ । ತೆನುತ । ತಿರುಕ ।

ᑌ ᑌ ᑌ | – ᑌ | – ᑌ | –ᑌ | ᑌ ᑌ ᑌ | – ᑌ | ᑌ

ಮರಳಿ । ನಾಚಿ । ಪೋಗು ।ತಿದ್ದ । ಮರುಳ । ನಂತೆ । ಯ

ᑌ ᑌ ᑌ | – ᑌ | – ᑌ | – ᑌ

ಧರೆಯ । ಭೋಗ । ವನ್ನು । ಮೆಚ್ಚಿ ।

ᑌ ᑌᑌ | ᑌᑌ ᑌ | ᑌ ᑌ ᑌ | – ᑌ |

ಪರವ । ಮರೆತು । ಕೆಡಲು । ಬೇಡ ।

ᑌ ᑌ ᑌ | – ᑌ | ᑌᑌᑌ | – ᑌ | – ᑌ | – ᑌ | –

ಧರೆಯ । ಭೋಗ । ಕನಸಿ । ನಂತೆ । ಕೇಲು । ಮಾನ । ವಾ

**ಭೋಗ ಷಟ್ಪದಿಯ ಲಕ್ಷಣಗಳು:–**

* ಮೂರು ಮಾತ್ರೆಗಳಂತೆ ಗಣ ವಿಭಾಗ ಮಾಡಬೇಕು.

* 1,2,4, ಮತ್ತು 5ನೆಯ ಸಾಲುಗಳಲ್ಲಿ 3 ಮಾತ್ರೆಯ 4 ಗಣಗಳು ಬಂದು ಒಟ್ಟು 12 ಮಾತ್ರೆಗಳಿಂದ ಕೂಡಿರುತ್ತದೆ

* 3 ಮತ್ತು 6ನೆಯ ಸಾಲುಗಳಲ್ಲಿ 3 ಮಾತ್ರೆಯ 6 ಗಣಗಳು ಬಂದು ಕೊನೆಯಲ್ಲಿ ಒಂದು ಗುರು ಒಟ್ಟು 20 ಮಾತ್ರೆಗಳಿಂದ ಕೂಡಿರುತ್ತದೆ.

* ಭೋಗ ಷಟ್ಪದಿಯಲ್ಲಿ ಬರುವ ಒಟ್ಟು ಮಾತ್ರೆಗಳ ಸಂಖ್ಯೆ 88

3+3+3+3 = 12

3+3+3+3 = 12

3+3+3+3+3+3+1 ಗುರು = 20

U U U U | – U U | U – U U | – U U

ದುರಿತವ । ನಂಬೆಳೆ । ವುದಕ್ಕೆಪೊ । ಲಂತೊಲೆ

UU U U | UU UU | – UU | –U –

ಪರಿಕಲಿ । ಸಿದನವ । ದೇಹಳ । ಮನ್ನೃತಂ ।

U U – | U U UU | U UUU | – – | – – | U U– | U

ಪರಿಕಾ । ಲುದಕಮ । ದಕೆಕಳ । ವನ್ಯ । ಸ್ತ್ರೀ ಸಂ। ಗಮಗೆ । ಯ್ಮ

U U– | U UUU | – UU | U UUU |

ಪರಿರ । ಕ್ಷಣೆಯತಿ । ಕಾಂಕ್ಷೆಯ । ದರಿನವು ।

U U – | – U U | – U | – U U

ನಿರುತಂ । ಪೊರ್ದದೊ । ಡಿಲ್ಲಂ । ಸಂಸ್ಕೃತಿ ।

U U U – | – U – | U UU U | – U U | – U U | – U | –

ಯುರುಕಿ । ಲ್ಬಿಷಮೆ । ಲ್ಲಿಯದುವಿ । ಚಾರಿಸೆ । ಭವ್ಯಜ । ನೊತ್ತಂ । ಸಾ

**ಪರಿವರ್ಧಿನಿ ಷಟ್ಪದಿಯ ಲಕ್ಷಣಗಳು:–**

1. ನಾಲ್ಕು ಮಾತ್ರೆಗಳಂತೆ ಗಣ ವಿಭಾಗ ಮಾಡಬೇಕು.
2. 1,2,4 ಮತ್ತು 5 ನೆಯ ಸಾಲುಗಳಲ್ಲಿ 4 ಮಾತ್ರೆಗಳಿಂದ ಕೂಡಿರುತ್ತದೆ
3. 3 ಮತ್ತು 6ನೆಯ ಸಾಲುಗಳಲ್ಲಿ 4 ಮಾತ್ರೆಯ 6 ಗಣಗಳು ಒಂದು ಕೊನೆಯ ಒಂದು ಗುರು ಒಟ್ಟು 26 ಮಾತ್ರೆಗಳಿಂದ ಕೂಡಿರುತ್ತದೆ.
4. ಪರಿವರ್ಧಿನಿ ಷಟ್ಪದಿಯ ಒಟ್ಟು ಮಾತ್ರೆಗಳ ಸಂಖ್ಯೆ 116.

4+4+4+4 = 16

4+4+4+4 = 16

4+4+4+4+4+4+1 ಗುರು = 26

4+4+4+4 = 16

4+4+4+4 = 16

4+4+4+4+4+4+1 ಗುರು = 26

## ರಗಳೆ

'ರಗಳೆ' ಎಂಬುದು 'ರಘಟಾ' ಎಂಬ ಸಂಸ್ಕೃತ ಶಬ್ದದ ತದ್ಭವ ರೂಪ. ಇದುವರೆಗೆ ಹೇಳಿದ ನಾಲ್ಕು ಅಥವಾ ಆರು ಸಾಲುಗಳ ಪದ್ಯಗಳಂತೆ, ಇಷ್ಟೇ ಸಾಲುಗಳಿರಬೇಕೆಂಬ ನಿಯಮವೇ ಇಲ್ಲ. ಎಷ್ಟು ಬೇಕಾದರೂ ಸಾಲುಗಳು ಹಾಗೆಯೇ ಬೆಳೆಯುತ್ತ ಹೋಗಬಹುದು. ಆದರೆ ಎಲ್ಲ ಸಾಲುಗಳೂ ಸಮಾನವಾದ ಮಾತ್ರಗಣಗಳಿಂದ ಕೂಡಿರುತ್ತವೆ. ರಗಳೆ ನಡುಗನ್ನಡ ಕಾವ್ಯದ ಛಂಧಸ್ಸಿನ, ದೇಸಿಯ ಕಾವ್ಯ ಪದ್ಧತಿಯ ಬಹುಮುಖ್ಯ ಪ್ರಕಾರವಾಗಿದೆ. ಕನ್ನಡದಲ್ಲಿ ರಗಳೆಗಳನ್ನು ಹೆಚ್ಚಾಗಿ ಬಳಸಿಕೊಂಡು ಕಾವ್ಯರಚನೆ ಮಾಡಿರುವ 'ಹರಿಹರ' ಕವಿಯನ್ನು ರಗಳೆ ಕವಿ ಎಂಬ ಬಿರುದಿನಿಂದ ಕರೆಯುತ್ತಾರೆ.

**ಲಕ್ಷಣಗಳು**

1. ಇದು ಬಹುಪಾದಗಳುಳ್ಳ ಪದ್ಯವಾಗಿದೆ.
2. ಪ್ರತಿ ಪಾದದಲ್ಲೂ ಮಾತ್ರೆಗಳು ಸಮಾನವಾಗಿರುತ್ತವೆ
3. ಎರಡೆರಡು ಪಾದಗಳ ಅಂತ್ಯದಲ್ಲ ಪ್ರಾಸಕ್ಷರವಿರುತ್ತದೆ.
4. ಆದಿಪ್ರಾಸ ಸಾಮಾನ್ಯವಾಗಿದ್ದು, ಅಂತ್ಯಪ್ರಾಸವೂ ಕೆಲವು ಕಡೆ ಇರುತ್ತದೆ.

ನಾಲ್ಕು ಅಥವಾ ಅದಕ್ಕಿಂತ ಹೆಚ್ಚು ಸಂಖ್ಯೆಯ ಅನಿಯಮಿತ ಪಾದ ಸಂಖ್ಯೆಗಳೂ ಆದಿ ಅಥವಾ ಅಂತ್ಯ ಪ್ರಾಸಗಳು ಎಲ್ಲಾ ರಗಳೆಗಳಿಗೂ ಸಾಮಾನ್ಯ ಅಂಶಗಳು ರಗಳೆಗಳಲ್ಲಿ ಮೂರು ಮುಖ್ಯ ವಿಧಗಳಿವೆ. ಅವು

1. ಉತ್ಸಾಹ ರಗಳೆ
2. ಮಂದಾನಿಲ ರಗಳೆ
3. ಲಲಿತ ರಗಳೆ

## ಉತ್ಸಾಹರಗಳೆ

* ಇದರಲ್ಲಿ ಮುಖ್ಯವಾಗಿ ಮೂರು ಮಾತ್ರೆಗಳಂತೆ ಗಣ ವಿಂಗಡಣೆಯಾಗುತ್ತದೆ
* ಇದರಲ್ಲಿ ಎರಡು ವಿಧಗಳಿವೆ
* ಒಂದು ಪ್ರಕಾರದಲ್ಲಿ 3+3+3+3 ಮಾತ್ರೆಗಳಂತೆ ಗಣ ವಿಭಾಗ ಮಾಡಲಾಗುತ್ತದೆ.
* ಇನ್ನೊಂದು ಪ್ರಕಾರದಲ್ಲಿ 3+3+3+1 ಗುರು ಮಾತ್ರೆಗಳಂತೆ ಗಣ ವಿಭಾಗ ಮಾಡಲಾಗುತ್ತದೆ.

ಈ ಎರಡೂ ಪ್ರಕಾರಗಳೂ ಹಿಂದಿನ ಕವಿಗಳಿಂದ ಪ್ರಯೋಗಿಸಲ್ಪಟ್ಟಿದೆ.

* ಸಾಮನ್ಯ ನಿಯಮದಂತೆ ಯಾವಗಣವೂ ಮೊದಲಲ್ಲಿ ಲಘು ಹಾಗೂ ಆನಂತರ ಗುರು ಇರುವ (–) ವಿನ್ಯಾಸ ಹೊಂದಿರುವುದಿಲ್ಲ.
* ಪ್ರತಿ ಎರಡು ಪಾದಗಳಲ್ಲಿ ಅಂತ್ಯಪ್ರಾಸಗಳಿರುತ್ತವೆ.

ᴗ – ᴗ | ᴗ ᴗ | – ᴗ |–ᴗ

ಉದಾ:– 1) ಕುಳಿರ್ವ । ಪೊಗೊ । ಳಂಗ । ಳಲ್ಲಿ 3+3+3+3

ᴗ ᴗᴗ | – ᴗ | – ᴗ | – ᴗ

ತಳಿರ । ಕಾವ । ಣಂಗ । ಳಲ್ಲಿ 3+3+3+3

– ᴗ | ᴗ ᴗ ᴗ | – ᴗ | –

2.) ಮೂವಿ । ನಡೆಯೊ । ಳಾದು । ತುಂ 3+3+3+1 ಗುರು

– ᴗ | – ᴗ | – ᴗ | –

ಪಾಡ । ನೆಯ್ದ । ಕೇಳು । ತಂ 3+3+3+1 ಗುರು

## ಮುಂದಾನಿಲ ರಗಳೆ

* ಇದರಲ್ಲಿಯೂ ಮುಖ್ಯವಾಗಿ ಎರಡೂ ಬಗೆಗಳಿವೆ.
* ಮೊದಲನೆಯ ಪ್ರಕಾರದಲ್ಲಿ ಪ್ರತಿಪಾದದಲ್ಲೂ ನಾಲ್ಕು ಮಾತ್ರೆಯ ನಾಲ್ಕು ಗಣಗಳಿರುತ್ತವೆ. 4+4+4+4 ಎಂಬ ವಿನ್ಯಾಸ ವಿರುತ್ತದೆ.
* ಇನ್ನೊಂದು ಪ್ರಕಾರದಲ್ಲಿ ಮೂರು ಮಾತ್ರೆಗಳ ಆನಂತರ ಐದು ಮಾತ್ರೆಗಳ ಎರಡೆರಡು ಗಣಗಳಿರುತ್ತದೆ.3+5+3+5+ ವಿನ್ಯಾಸವಿರುತ್ತದೆ.
* ಇದರಲ್ಲಿಯೂ ಮೊದಲು ಲಘು ಆನಂತರ ಗುರು (ಗ–) ಗಣ ವಿನ್ಯಾಸ ಬರಬಾರದು.
* ಈ ಎರಡೂ ಪ್ರಕಾರಗಳೂ ಹಿಂದಿನ ಕವಿಗಳಿಂದ ಪ್ರಯೋಗಿಸಲ್ಪಟ್ಟಿದೆ.
* ಪ್ರತಿ ಎರಡು ಪಾದಗಳಲ್ಲೂ ಅಂತ್ಯಪ್ರಾಸಗಳಿರುತ್ತವೆ.

– ᴗ ᴗ | – ᴗᴗ | – ᴗᴗ | ᴗᴗ –

ಉದಾ:– ಪಂಕಜ । ದಂತಿರೆ । ಪುಟ್ಟಿದ । ಟೊಲವಿಂ

– ᴗᴗ | – – | – ᴗ ᴗ | ᴗᴗ–

ಪಂಕವ । ನೆಂದುಂ । ಪೊರ್ದದೆ । ನೆಲವಿಂ

4+4+4+4

4+4+4+4

-U - UUU UUU - U -

2. ಸುತ್ತ । ಲುಂ ಪರಿವ । ಜರಿವು । ನಲ್ಗಳಿಂ

- U - UUU UUU -U-

ಎತ್ತ । ಲುಂನಲಿವ । ಪೊಸನ । ವಿಲ್ಗಳಿಂ

3+5+3+5

3+5+3+5

## ಲಲಿತ ರಗಳೆ

* ಇದರಲ್ಲಿಯೂ ಬೇರೆ ಬೇರೆ ವಿಧಗಳಿದ್ದರೂ ಮುಖ್ಯವಾಗಿ ಪ್ರತಿ ಪಾದದಲ್ಲಿಯೂ ಐದು ಮಾತ್ರೆಗಳ ನಾಲ್ಕು ಗಣಗಳು ಇರುತ್ತವೆ.

* ಪ್ರತಿ ಎರಡು ಪಾದಗಳಲ್ಲಿ ಅಂತ್ಯ ಪ್ರಾಸಗಳಿರುತ್ತವೆ

– ᑌ – | – ᑌ ᑌ ᑌ | – ᑌ ᑌ ᑌ | – – ᑌ

ಉದಾ:– ಸೊಂಪಿನಿಂ । ಕಂಪಿಡುವ । ಸಂಪಗೆಗ । ಳಂಕೊಂಡು

– ᑌᑌᑌ | – – ᑌ | ᑌ ᑌ ᑌ ᑌ | – – ᑌ

ಹೊಂಪೆಸೆವ । ಹೊಂಗೇದ । ಗೆಯಹೊಗ । ಳಂಕೊಂಡು

5+5+5+5

5+5+5+5

# ಪ್ರಬಂಧ ರಚನೆ

ಯಾವುದಾದರೊಂದು ಸೂಕ್ತ ವಿಷಯವನ್ನು ಆರಿಸಿಕೊಂಡು ಅದಕ್ಕೆ ಸಂಬಂಧಿಸಿದಂತೆ ವಿವೇಚಿಸುತ್ತ ಹತ್ತಾರು ವಾಕ್ಯವೃಂದಗಳನ್ನು ಬರೆಯಬಹುದು. ಇಂತಹ ಬರಹವು ಅಖಂಡವಾಗಿ, ಕಲಾತ್ಮಕವಾಗಿ, ಅನುಭವಪೂರ್ವಕವೆಂಬಂತೆ ಸುಂದರವಾಗಿ ರೂಪಿತಗೊಳ್ಳುವುದನ್ನು ಪ್ರಬಂಧ ಎನ್ನುವರು. ಆಯ್ಕೆ ಮಾಡಿದ ವಿಷಯದ ಬಗ್ಗೆ ತೂಕವಾಗಿ ಅಥವಾ ಲಘುವಾಗಿ ಬರೆಯಬಹುದು. ಅವರವರ ಮನೋಧರ್ಮ, ಅನುಭವ, ಸಂಪನ್ಮೂಲಗಳ ಸಂಗ್ರಹಣೆ, ಸಂಸ್ಕಾರಗಳ ಮೇಲೆ ಅನ್ವಯಿಸುತ್ತದೆ.

ಪ್ರಬಂಧ ರಚನೆಗೆ ಸೂಕ್ತ ವಿಷಯವನ್ನು ಮೊದಲು ಆಯ್ಕೆ ಮಾಡಿಕೊಳ್ಳಬೇಕು. ಬಳಿಕ ಪೀಠಿಕೆ, ವಿಷಯ ನಿರೂಪಣೆ, ಉಪಸಂಹಾರ ಎಂಬ ಮೂರು ವಿಭಾಗಗಳಲ್ಲಿ ಬರವಣಿಗೆ ಸಾಗಬೇಕು. ಹೀಗೆ ಬರವಣಿಗೆ ಸಾಗುತ್ತಿರುವಾಗ ಪ್ರಬಂಧದ ಅಖಂಡತೆಗೆ ತೊಡಕಾಗಬಾರದು. ಭಾವನೆಗಳು ಕಲಸುಮೇಲೋಗರವಾಗಬಾರದು. ಅಂತೆಯೇ ಭಾಷೆಯೂ ಸ್ಪಷ್ಟ ಹಾಗೂ ಶುದ್ಧವಾಗಿರಬೇಕು. ವಿಷಯ ನಿರೂಪಣಾ ವಿಧಾನ ಗಂಭೀರವಾಗಿಯೂ ಇರಬೇಕು. ಸನ್ನಿವೇಶ ವಿಚಾರ ವೈವಿಧ್ಯಕ್ಕೆ ತಕ್ಕಂತೆ ರಸಭಾವನೆಗಳಿರಬೇಕು. ವಿಷಯ ಸಂಗ್ರಹ ವಿಷಯ ವಿಸ್ತಾರ, ಸರಳ ಶೈಲಿ ಸಂಕ್ಷಿಪ್ತತೆ ಸುಸಂಬದ್ಧತೆ, ವಿಷಯದ ತಾರ್ಕಿಕ ಜೋಡಣೆ ಮುಂತಾದ ಅಂಶಗಳು ಸತ್ಯಪೂರ್ಣವಾಗಿದ್ದಾಗ ಉತ್ತಮ ಪ್ರಬಂಧ ಮೂಡಿಬರುತ್ತದೆ.

ಪ್ರಬಂಧ ಬರೆಯುವಾಗ ಗಮನಿಸಬೇಕಾದ ಅಂಶಗಳು

1. ಪ್ರಬಂಧದ ಹಂತಗಳನ್ನು ಕಡ್ಡಾಯವಾಗಿ ಅನುಸರಿಸಬೇಕು.
2. ಬರವಣಿಗೆ ಶುದ್ಧವಾಗಿಯೂ ಸರಳವಾಗಿ ಅರ್ಥವಾಗುವಂತೆ ಇರಬೇಕು.
3. ಲೇಖನ ಚಿಹ್ನೆಗಳ ಬಳಕೆ ಸುಸಂಬದ್ಧವಾಗಿರಬೇಕು.
4. ವಿಷಯ ನಿರೂಪಣೆಯಲ್ಲಿ ಸೂಕ್ತವಾಗಬಹುದಾದ ಸೂಕ್ತಿ, ಉಕ್ತಿ, ಗಾದೆ, ನಾಣ್ಣುಡಿ, ವ್ಯಾಖ್ಯೆ, ಅಂಕಿಅಂಶ, ಉಪಮೆ, ರೂಪಕ, ಉದಾಹರಣೆಗಳನ್ನು ಬರೆಯುವುದರ ಜೊತೆಗೆ ಅವುಗಳ ಕೆಳಗೆ ಅಡ್ಡಗೆರೆ ಎಳೆಯಬೇಕು.
5. ಪ್ರಬಂಧ ದೀರ್ಘವಾಗಿದ್ದರೆ ಅದನ್ನು ಚಿಕ್ಕ ವಾಕ್ಯವೃಂದಗಳಲ್ಲಿ ನಿರೂಪಿಸಬೇಕು. ವಿಷಯಯವನ್ನು ಸಂಕ್ಷಿಪ್ತವಾಗಿ ಬರೆದರೂ ಮುಖ್ಯವಾದ ಎಲ್ಲಾ ಅಂಶಗಳನ್ನು ಪರಿಚಯಿಸುವಂತಿರಬೇಕು.
6. ಮುಖ್ಯಾಂಶಗಳನ್ನು ಬರೆಯುವಾಗ ಶೀರ್ಷಿಕೆ, ಉಪಶೀರ್ಷಿಕೆ ಬರೆಯಬೇಕು.
7. ವಿಷಯ ವಿವರಣೆಯಲ್ಲಿ ತುಂಬಾ ಅಂಶಗಳಿದ್ದರೆ ಅದನ್ನು ಧೀರ್ಘವಾಗಿ ಬರೆಯದೆ *(ಸ್ಟಾರ್) ಚಿಹ್ನೆ ಹಾಕಿ ಒಂದರ ಕೆಳಗೆ ಒಂದನ್ನು ಬರೆಯಬೇಕು. ಉದಾಹರಣೆಗೆ ಲಕ್ಷಣಗಳು, ಮಹತ್ವ, ಸಾಧನೆಗಳು ಇತ್ಯಾದಿ.
8. ಪೀಠಿಕೆ ಹಾಗೂ ಉಪಸಂಹಾರ ವಿಷಯದ ಪ್ರವೇಶ ಹಾಗೂ ಮುಕ್ತಾಯದ ಹಂತಗಳಾದ ಕಾರಣ ಎರಡೂ ಸಂಕ್ಷಿಪ್ತವಾಗಿದ್ದರೂ ಪ್ರಬಂಧದ ಆಕರ್ಷಣೆ ಹೆಚ್ಚಿಸುವಂತಿರಬೇಕು.
9. ಭಾಷಾ ಶೈಲಿ ಪ್ರಬಂಧ ಓದುವವರ ಮನಸ್ಸನ್ನು ಸೆಳೆಯುವಂತಿರಬೇಕು.
10. ಶುದ್ಧವಾದ ಬರವಣಿಗೆ ಇಲ್ಲದಿದ್ದರೆ ವಿಷಯ ನಿರೂಪಣೆ ಎಷ್ಟೇ ಉತ್ತಮವಾಗಿದ್ದರೂ ಉಪಯೋಗವಿಲ್ಲ. ಆದ್ದರಿಂದ ಅಕ್ಷರಗಳನ್ನು ಸ್ಪಷ್ಟವಾಗಿ, ದುಂಡಾಗಿ, ದೋಷವಿಲ್ಲದಂತೆ ಬರೆಯಬೇಕು.

**ಪೀಠಿಕೆ:–** ಇಲ್ಲಿ ಆಯ್ದುಕೊಂಡ ವಿಷಯದ ಸಾರವನ್ನು ಪರಿಚಯಿಸಬೇಕು. ಪೀಠಿಕೆಯು ವಿಷಯ ಪ್ರವೇಶದ ಮುನ್ನುಡಿಯಂತಿರಬೇಕು. ಪ್ರಬಂಧದ ಗುರಿ ಮತ್ತು ಖಚಿತತೆಯನ್ನು ಸ್ಪಷ್ಟಪಡಿಸಬೇಕು. ಪ್ರಬಂಧದ ಒಟ್ಟು ಸ್ವರೂಪದ ಆಶಯವನ್ನು ಇದು ಒಳಗೊಂಡಿರುತ್ತದೆ.

**ವಿಷಯ ವಿವರಣೆ ಅಥವಾ ನಿರೂಪಣೆ:–** ಇದು ಪ್ರಬಂಧದ ಹೃದಯಭಾಗ ಇಲ್ಲಿ ಆಯ್ದುಕೊಂಡ ವಿಷಯವನ್ನು ವಿವರಿಸಬೇಕು. ವಿಷಯದ ಪ್ರಸ್ತುತತೆ, ಮಹತ್ವ, ಲಕ್ಷಣ, ವಿಧಗಳು, ಹಂತಗಳು, ಅಂಕಿ ಅಂಶಗಳನ್ನು ನಿರೂಪಿಸುತ್ತಾ ಸಾಗಬೇಕು. ಈ ಹಂತದಲ್ಲಿ ಕೆಲವು ಸೂಕ್ತವೆನಿಸುವ ಸೂಕ್ತಿ, ವ್ಯಾಖ್ಯೆ, ಉದಾಹರಣೆ, ರೂಪಕ, ದೃಷ್ಟಾಂತ,

ಉಪಮೆಗಳನ್ನು ಬಳಸುವುದು ಪ್ರಬಂಧದ ಮೌಲ್ಯವನ್ನು ಹೆಚ್ಚಿಸುತ್ತದೆ. ಮುಖ್ಯವೆನಿಸುವ ವಿಷಯದ ಕೆಳಗೆ ಗೆರೆಯನ್ನು ಎಳೆದು ಮೌಲ್ಯಮಾಪಕರ ಗಮನ ಸೆಳೆಯುವುದಲ್ಲದೆ ಪ್ರಬಂಧವನ್ನು ಆಕರ್ಷಿತಗೊಳಿಸಬೇಕು.

**ಉಪಸಂಹಾರ:–** ಇನ್ನು ಮೂರನೇ ಹಂತ ಉಪಸಂಹಾರ. ಇದು ಪ್ರಬಂಧವನ್ನು ಮುಕ್ತಾಯಗೊಳಿಸುವ ಹಂತ. ಇಲ್ಲಿ ವಿಷಯವನ್ನು ಕುರಿತು ತಾರ್ಕಿಕ ತೀರ್ಮಾನವನ್ನು ನೀಡಿ ವಿಷಯವನ್ನು ಸಮಾರೋಪಗೊಳಿಸಬೇಕು.

## ಪ್ರಬಂಧ ಬರವಣಿಗೆಯ ಮೌಲ್ಯಮಾಪನ

| | |
|---|---|
| ಪೀಠಿಕೆ/ಪ್ರಸ್ತಾವನೆ/ವಿಷಯ ಪ್ರವೇಶ | 1 ಅಂಕ |
| ವಿಷಯ ವಿವರಣೆ/ಒಡಲು | 2 ಅಂಕಗಳು |
| ಉಪಸಂಹಾರ/ಮುಕ್ತಾಯ/ವಿಷಯ ಸಮಾಪ್ತಿ | 1 ಅಂಕ |
| ಭಾಷಾಶೈಲಿ, ಪದಬಂಧ | 1 ಅಂಕ |
| ಒಟ್ಟು | 5 ಅಂಕಗಳು |

## 1. ಜನಸಂಖ್ಯೆ ಸ್ಫೋಟ

**ಪೀಠಿಕೆ :–** ಇಂದು ವಿಶ್ವದಲ್ಲಿ ತಲೆದೋರಿರುವ ಅನೇಕ ಜಟಿಲ ಸಮಸ್ಯೆಗಳಲ್ಲಿ ಮಿತಿಮೀರಿ ಬೆಳೆಯುತ್ತಿರುವ ಜನಸಂಖ್ಯೆಯೂ ಒಂದು ಪ್ರಮುಖ ಸಮಸ್ಯೆಯಾಗಿದೆ. ಒಂದು ದೇಶದ ಮಿತಿಮೀರಿದ ಜನಸಂಖ್ಯಾ ಬೆಳವಣಿಗೆಯನ್ನು ಜನಸಂಖ್ಯಾ ಸ್ಫೋಟ ಎನ್ನುವರು. ಜನಸಂಖ್ಯೆಯು ಜನರ ಬದುಕಿನಮೇಲೆ ದುಷ್ಪರಿಣಾಮವನ್ನು ಬೀರುತ್ತದೆ. ದೇಶದ ಪ್ರಗತಿಗೆ ಮಾರಕವಾಗುತ್ತದೆ. ಭಾರತ ದೇಶದಲ್ಲಂತೂ ಜನಸಂಖ್ಯೆ ಮಿತಿಮೀರಿ ಬೆಳೆದು ದೇಶದ ಅಭಿವೃದ್ಧಿಯು ಕುಂಠಿತವಾಗಿದೆ.

**ವಿಷಯ ನಿರೂಪಣೆ :–** ಜನಸಂಖ್ಯಾ ಬೆಳವಣಿಗೆಗೆ ಕಾರಣವೇನೆಂದರೆ ಹವಾಮಾನ, ಭೌಗೋಳಿಕ ಪರಿಸರ, ಅಜ್ಞಾನ, ಬಡತನ ಅನಕ್ಷರತೆ ವೈದ್ಯಕೀಯ ಕ್ಷೇತ್ರದ ಪ್ರಗತಿಯಿಂದ ಜನನದಲ್ಲಿ ಏರಿಕೆ – ಮರಣ ಪ್ರಮಾಣದಲ್ಲಿ ಇಳಿಕೆ ಅವಿಭಕ್ತ ಕುಟುಂಬ ಪದ್ದತಿ, ಬಾಲ್ಯವಿವಾಹ, ವಲಸೆ. ಗಂಡು ಮಗುವಿನ ವ್ಯಾಮೋಹ, ಮೂಢನಂಬಿಕೆ, ಕುಟುಂಬ ಯೋಜನೆಯ ವಿಫಲತೆ ಇತ್ಯಾದಿ. ಮಿತಿಮೀರಿದ ಜನಸಂಖ್ಯಾ ಬೆಳವಣಿಗೆಯಿಂದ ದೇಶದಲ್ಲಿ ಅನಾರೋಗ್ಯ ಸಮಸ್ಯೆ, ನಿರುದ್ಯೋಗ ಸಮಸ್ಯೆ, ಆಹಾರ ಸಮಸ್ಯೆ, ವಸತಿ ಸಮಸ್ಯೆ, ಶೈಕ್ಷಣಿಕ ಸಮಸ್ಯೆ ಉಂಟಾಗುತ್ತದೆ. ಈ ಸಮಸ್ಯೆಯನ್ನು ನಾವು ತಡೆಗಟ್ಟಬೇಕು ಇಲ್ಲದೇ ಹೋದರೆ ದೇಶದ ಪ್ರಗತಿಗೆ ಮಾರಕವಾಗಿ ಪರಿಣಮಿಸುತ್ತದೆ.ಮನುಷ್ಯನಲ್ಲಿ ಚಿಕ್ಕ ಸಂಸಾರ ಚೊಕ್ಕ ಸಂಸಾರ ಅನ್ನೊ ಕಲ್ಪನೆ ಬರಬೇಕಿದೆ. ಮಾನವ ಸಂಪತ್ತು ದೇಶದ ಆಸ್ತಿ ಆದರೆ ಇದೆ ಮಾನವ ಸಂಪತ್ತು ರಾಷ್ಟ್ರದ ಅಭಿವೃದ್ಧಿಗೆ ಅಡ್ಡಿಪಡಿಸುತ್ತಿದೆ.

**ಉಪಸಂಹಾರ :–** ಭಾರತ ದೇಶದ ಬೆಳವಣಿಗೆಗೆ ಮಾರಕವಾದ ಈ ಜನಸಂಖ್ಯೆಯು ದಿನದಿಂದ ದಿನಕ್ಕೆ ಬೆಳೆಯುವ ಪರಿ ನೋಡಿದರೆ ಇದು ಎಲ್ಲಿಗೆ ಹೋಗಿ ನಿಲ್ಲುತ್ತದೆ. ಎಂಬುದೆ ಯಕ್ಷ ಪ್ರಶ್ನೆ. ಇರುವ ಮಾನವ ಸಂಪನ್ಮೂಲಕ್ಕೆ ಕೆಲಸ ಕೊಟ್ಟರೆ ಅಷ್ಟು ಸಮಸ್ಯೆಯಾಗುವುದಿಲ್ಲ. ಪ್ರತಿಯೊಬ್ಬ ನಾಗರಿಕನು ಶಿಕ್ಷಣವಂತನಾದರೆ ಈ ಜನಸಂಖ್ಯಾ ಸಮಸ್ಯೆಗೆ ಒಂದು ಸೂಕ್ತ ಪರಿಹಾರ ದೊರಕಬಹುದು ಎಂಬುದೆ ನನ್ನ ಅಭಿಪ್ರಾಯ.

## 2. ರಾಷ್ಟ್ರೀಯ ಹಬ್ಬಗಳ ಮಹತ್ವ

**ಪೀಠಿಕೆ :–** ಹಬ್ಬಗಳು ಸಡಗರ, ಸಂಭ್ರಮ ಸಂತೋಷದ ಸಂಕೇತಗಳಾಗಿವೆ. ಸಾಂಪ್ರದಾಯಿಕ ಹಬ್ಬಗಳು ರಾಷ್ಟ್ರೀಯ ಹಬ್ಬಗಳೆಂಬ ಎರಡು ವಿಧಗಳಿವೆ. ಒಂದು ಸೀಮಿತ ಪ್ರದೇಶದಲ್ಲಿ ಮಾತ್ರ ಆಚರಿಸುವ ಹಬ್ಬಗಳಿಗೆ ಸಂಪ್ರದಾಯಿಕ ಹಬ್ಬಗಳು. ದೇಶಾದ್ಯಂತ ಏಕ ಕಾಲದಲ್ಲಿ ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು. ಭಾರತವು ವಿವಿಧ ಧರ್ಮಗಳ ನೆಲೆ ಬೀಡಾಗಿದೆ. ವೈವಿಧ್ಯಮಯ ಸಂಸ್ಕೃತಿ, ವಿವಿಧ ಧರ್ಮಗಳ ಹಲವು ಹಬ್ಬ–ಹರಿದಿನಗಳನ್ನು ಭಾರತದಲ್ಲಿ ಆಚರಿಸಲಾಗುತ್ತಿದೆ. ಸ್ವಾತಂತ್ರ್ಯ ದಿನಾಚರಣೆ. ಗಣರಾಜ್ಯೋತ್ಸವ, ಗಾಂಧಿಜಯಂತಿ, ಮಕ್ಕಳ ದಿನಾಚರಣೆ ಮುಂತಾದ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು.

**ವಿಷಯ ನಿರೂಪಣೆ :–** ನಮ್ಮ ಭಾರತ ದೇಶದಲ್ಲಿ ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನಾಚರಣೆ, ಜನವರಿ 26ರಂದು ಗಣರಾಜ್ಯೋತ್ಸವ, ಅಕ್ಟೋಬರ್ 2 ರಂದು ಮಹಾತ್ಮ ಗಾಂಧಿ ಜಯಂತಿ, ನವಂಬರ್ 14 ರಂದು ಜವಹರ್‌ಲಾಲ್ ನೆಹರು ಅವರ ಜಯಂತಿ ,ಸೆಪ್ಟಂಬರ್ 5 ರಂದು ಶಿಕ್ಷಕರ ದಿನಾಚರಣೆ, ಏಪ್ರಿಲ್ 14 ರಂದು ಡಾ! ಬಿ ಆರ್ ಅಂಬೇಡ್ಕರ್ ಜಯಂತಿ ಮೊದಲಾದ ದಿನಗಳನ್ನು ರಾಷ್ಟ್ರೀಯ ಹಬ್ಬಗಳೆಂದು ಆಚರಿಸಲಾಗುತ್ತಿದೆ. ದೇಶದಾದ್ಯಂತ ಏಕಕಾಲದಲ್ಲಿ ನಾವೆಲ್ಲರೂ ಒಂದೆ ಎಂಬ ಭಾವನೆಯಿಂದ ಆಚರಿಸುವ ಹಬ್ಬಗಳಿವು. ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದವರನ್ನು ಸ್ಮರಿಸುವ ಸುದಿನಗಳಿವು. ದೇಶದ ರಕ್ಷಣೆಗಾಗಿ ಏಳಿಗೆಗಾಗಿ ದುಡಿದು ಮಡಿದ ಮಹನೀಯ ರನ್ನು ಸ್ಮರಿಸಲು, ಹಿರಿಯರ ತ್ಯಾಗ ಬಲಿದಾನಗಳನ್ನು, ನೋವು ಅವಮಾನಗಳನ್ನು ತಿಳಿಸುವ ದಿನ. ಈ ಹಬ್ಬಗಳಲ್ಲಿ ಭಾಗವಹಿಸುವುದರಿಂದ ಮಕ್ಕಳಲ್ಲಿ ಬೇಧಭಾವನೆ ಮರೆಯಾಗಿ ನಾವೆಲ್ಲ ಒಂದೆ ಎಂಬ ಭಾವನೆ ಮೂಡಲು ಸಹಾಯಕವಾಗುತ್ತದೆ. ದೇಶ ಪ್ರೇಮ, ದೇಶಾಭಿಮಾನ ಬೆಳೆಸಲು ಸಹಕಾರಿ. ದೇಶದ ಹಿರಿಮೆ ಗರಿಮೆ ತಿಳಿದು ಗೌರಂವ ಮೂಡುವಂತೆ ಮಾಡಲು ಸಹಕಾರಿ. ರಾಷ್ಟ್ರೀಯ ಹಬ್ಬಗಳು ಕೇವಲ ಶಾಲಾ ಕಾಲೇಜಿನಲ್ಲಿ, ಸರ್ಕಾರಿ ಕಛೇರಿಗಳಲ್ಲಿ ಆಚರಿಸುವ ಹಬ್ಬಗಳಾಗದೆ, ಪ್ರತಿ ಮನೆ, ಗ್ರಾಮ, ನಗರಗಳಲ್ಲಿ ಜಾತಿ, ಮತ, ಧರ್ಮ, ಪಂಥಗಳನ್ನು ಮರೆತು ಆಚರಿಸಬೇಕು. ಆಗ ಮಾತ್ರವೇ ನಾವೆಲ್ಲರೂ ಒಂದೇ ಎಂಬ ಭಾವನೆ ಮೂಡಲು ಸಾಧ್ಯವಾಗುತ್ತದೆ.

**ಉಪಸಂಹಾರ ;–** ಒಂದೆಡೆ ಸೇರಿ ಈ ಹಬ್ಬಗಳನ್ನು ಆಚರಿಸಬೇಕು. ಕಾಲು ಎರಡು ತುಳಿಯುವ ದಾರಿಯೊಂದು ಎಂಬಂತೆ ಕೂಡಿ ಬಾಳಿದರೆ ಸ್ವರ್ಗ ಸುಖವೆಂಬಂತೆ. ಪ್ರತಿ ಮನೆಮನೆಗಳಲ್ಲೂ ಹಬ್ಬದ ಸಂಭ್ರಮವಿರಬೇಕು. ನಾವು ಆಚರಿಸುವ ದಿನಗಳ ಮಹತ್ವ ತಿಳಿಯಬೇಕು. ರಾಷ್ಟ್ರಿಯ ಹಬ್ಬಗಳ ದಿನ ರಜಾ ಸರ್ಕಾರಿ ರಜಾ ದಿನಾ ಎಂಬ ಭಾವನೆ ಮನಸ್ಸಿಂದ ದೂರ ಮಾಡಬೇಕು. ಭಕ್ತಿ ಭಾವದಿಂದ ಈ ಹಬ್ಬಗಳ ಆಚರಣೆಯಲ್ಲಿ ತೊಡಗಬೇಕು. ನಾವೆಲ್ಲರೂ ಒಂದೇ ನನ್ನ ದೇಶ ಭಾರತ. ನನ್ನ ತಾಯಿ ಭಾರತಾಂಬೆ ನಾವೆಲ್ಲರೂ ಒಂದೇ ತಾಯ ಮಕ್ಕಳು ಎಂಬ ವಿಶಾಲ ಭಾವನೆ ಈ ಹಬ್ಬಗಳಿಂದ ಮೂಡುತ್ತದೆ ಎಂಬ ಅಭಿಪ್ರಾಯ ನನ್ನದು.

## 3. ನಿರುದ್ಯೋಗ

**ಪೀಠಿಕೆ :–** ನಿರುದ್ಯೋಗ ಆಧುನಿಕ ಸಮಾಜಕ್ಕಂಟಿದ ಶಾಪವಾಗಿದೆ. ಈ ನಿರುದ್ಯೋಗದಿಂದ ಹಸಿವು, ಬಡತನ ದಾರಿದ್ರ್ಯ, ಅನಾಚಾರಗಳು, ಅಪರಾಧ, ಶೋಷಣೆ ಸುಲಿಗೆಗಳಂತಹ ಕೃತ್ಯಗಳು ಜನ್ಮತಾಳುತ್ತವೆ. ಮನಷ್ಯನು ತನ್ನ ಜವಬ್ದಾರಿಗಳನ್ನು ನಿಭಾಯಿಸಲಾಗದೆ ಅವಮಾನಿತನಾಗುತ್ತಾನೆ. ಅಸಹಾಯಕ ಸ್ಥಿತಿ ಅವನನ್ನು ಕಾಡುತ್ತದೆ. ದಿನದಿಂದ ದಿನಕ್ಕೆ ಅವನ ಬದುಕು ನರಕವಾಗಿ ಹೋಗುತ್ತದೆ. ಈ ಸಮಸ್ಯೆ ಇಂದು ನಿನ್ನೆಯದಲ್ಲ, ತಲತಲಾಂತರದಿಂದ ಸಮಾಜಕ್ಕೆ ಕಂಟಕವಾಗಿದೆ. ಇಂದಿನ ಎಲ್ಲಾ ಸಮಾಜಗಳು, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಎದುರಿಸುತ್ತಿರುವ ಭೀಕರ ಸಮಸ್ಯೆಯಾಗಿದೆ.

**ವಿಷಯ ನಿರೂಪಣೆ :–** ಮನುಷ್ಯನಿಗೆ ಕೆಲಸ ಮಾಡಲು ಶಕ್ತಿ ಸಾಮರ್ಥ್ಯಗಳಿದ್ದು ಮತ್ತು ಇಚ್ಛಾ ಶಕ್ತಿಗಳಿದ್ದು, ಕೆಲಸ ಮಾಡಲು ಯಾವುದೇ ಅವಕಾಶ ಸಿಗದಿರುವ ಸ್ಥಿತಿಗೆ ನಾವು ನಿರುದ್ಯೋಗ ಎನ್ನಬಹುದು. ದಿನವಿಡೀ ದುಡಿದರೂ ಹೊಟ್ಟೆ ಬಟ್ಟೆಗೆ ಸಾಲದೆ ರಸ್ತೆ, ಮೋರಿ, ಪೈಪುಗಳ ಸಂದುಗೊಂದುಗಳಲ್ಲಿ, ಕೊಳೆಗೇರಿಗಳಲ್ಲಿ ಜೀವನ ತಳ್ಳುವ ಜನರು ಒಂದು ಕಡೆ. ಪದವಿ ಡಬ್ಬಲ್ ಡಿಗ್ರಿಗಳನ್ನು ಪಡೆದು, ಕೆಲಸಕ್ಕಾಗಿ ಬೀದಿ ಬೀದಿ ಅಲೆಯುವ ಯುವ ಶಕ್ತಿ ಒಂದು ಕಡೆ. ಇವರಿಗೆ ಕೆಲಸ ಮಾಡುವ ಸಾಮರ್ಥ್ಯ, ಇಚ್ಛೆ, ನಿರಂತರ ಪ್ರಯತ್ನಗಳಿದ್ದರು ಸಹ ಕೆಲಸ ಸಿಗುವುದಿಲ್ಲ. ದೇಶದಲ್ಲಿ ಶಕ್ತಿ ಸಾಮರ್ಥ್ಯ ಮತ್ತು ಅರ್ಹತೆಗೆ ತಕ್ಕಂತೆ ಬೇಗನೆ ಕೆಲಸ ಸಿಗುವ ವಾತಾವರಣ ನಿರ್ಮಾಣವಾಗಬೇಕು. ಜನತೆಗೆ ವಿದ್ಯಾಭ್ಯಾಸ ಮುಗಿದ ತಕ್ಷಣವೇ ಕೆಲಸ ಸಿಗುತ್ತದೆ ಎಂಬ ಭರವಸೆ ಮೂಡಿಸಬೇಕು. ಹೆಚ್ಚು ಹೆಚ್ಚು

ಉದ್ಯೋಗಾವಕಾಶಗಳನ್ನು ಸೃಷ್ಠಿ ಮಾಡಬೇಕು. ಕೆಲಸಕ್ಕೆ ಸರಿಸಮಾನವಾದ ವೇತನ ಸಿಗುವಂತಾಗಬೇಕು. ಇಂತಹ ಸಮಾಜವನ್ನು ನಿರುದ್ಯೋಗ ರಹಿತ ಸಮಾಜವೆನ್ನಬಹುದು. ನಿರುದ್ಯೋಗಿಯ ಮನಸ್ಸು ದೆವ್ವಗಳು ವಾಸಿಸುವ ಸ್ಮಶಾನವಾಗಿರುತ್ತದೆ. ಇಂತಹ ಮನಸ್ಥಿತಿಯಿಂದ ಸಮಾಜ ಬಾಹಿರ ಚಟುವಟಿಕೆಗಳು ಜರುಗುವುದೇ ಹೆಚ್ಚು. ದೇಶದ್ರೋಹಿ ಕೆಲಸ, ಭಯೋತ್ಪಾದನಾ ಕೃತ್ಯಗಳು, ಕೊಲೆ, ಸುಲಿಗೆ ಅಪರಾಧಗಳಂತಹ ಅಕ್ರಮ ಚಟುವಟಿಕೆಗಳಿಂದ ಸಮಾಜ ತಲೆತಗ್ಗಿಸಬೇಕಾಗುತ್ತದೆ. ಇದು ವ್ಯಕ್ತಿ, ಕುಟುಂಬ ಮತ್ತು ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತದೆ. ನಿರುದ್ಯೋಗದಿಂದ ಮನುಷ್ಯನು ಅವಮಾನ, ನೋವು, ನಿಂದನೆ, ಆತ್ಮನಿಂದನೆ ಮಾನಸಿಕ ಹಿಂಸೆಗಳನ್ನು ಅನುಭವಿಸುತ್ತಾನೆ. ದೇಶದ ಅಭಿವೃದ್ಧಿಗೆ ಮಾರಕವಾಗಿ ಪರಿಣಮಿಸುತ್ತದೆ. ಈ ನಿರುದ್ಯೋಗಕ್ಕೆ ಕಾರಣಗಳನ್ನು ಗುರುತಿಸಿ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳಬೇಕು.

**ಉಪಸಂಹಾರ :–** ಮನುಷ್ಯನು ಯಾವುದೇ ಕೆಲಸ ಮಾಡಿದರು ಅವಮಾನವಿಲ್ಲ, ತನ್ನ ಸಾಮರ್ಥ್ಯ ಅರ್ಹತೆಗೆ ತಕ್ಕ ಉದ್ಯೋಗ ಸಿಗಬೇಕು ಎಂದು ಕಾಯುತ್ತಾ ಕುಳಿತುಕೊಳ್ಳಬಾರದು. ಸಿಕ್ಕ ಕೆಲಸದಲ್ಲೇ ತೃಪ್ತಿ ಪಡಬೇಕು. ನಿರಂತರ ಹೆಚ್ಚುತ್ತಿರುವ ಜನಸಂಖ್ಯೆ, ದೋಷಪೂರಿತ ಶಿಕ್ಷಣ ವ್ಯವಸ್ಥೆ, ತಾಂತ್ರಿಕ ಕೊರತೆ, ಅವಶ್ಯಕತೆಗಿಂತ ಕಡಿಮೆ ಉದ್ಯೋಗ ಸೃಷ್ಠಿ ಮುಂತಾದ ಕಾರಣಗಳು ನಿರುದ್ಯೋಗ ಸಮಸ್ಯೆಗೆ ಕಾರಣವಾಗುತ್ತವೆ.

## 4. ರಾಷ್ಟ್ರೀಯ ಭಾವೈಕ್ಯತೆ

**ಪೀಠಿಕೆ :–** ನಮ್ಮ ದೇಶ ಭಾರತವು ಬಹು ಭಾಷೆ, ಸಂಸ್ಕೃತಿ, ವೇಷಭೂಷಣ ಸಂಪ್ರದಾಯ ಆಚಾರ ವಿಚಾರಗಳಿಂದ ಕೂಡಿದ ದೇಶ. ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ ದೇಶ ಇಡೀ ವಿಶ್ವವೇ ಒಂದು
ಕುಟುಂಬ. ಜಾತಿ, ಜನಾಂಗ, ಪಂಗಡಗಳು, ಭಾಷೆ, ಸಂಸ್ಕೃತಿ, ಧರ್ಮದ ಜನರು ತಮ್ಮ ವಿವಿಧತೆಯನ್ನು ಮರೆತು ನಾವೆಲ್ಲರೂ ಭಾರತೀಯರು ಎಂಬ ರಾಷ್ಟ್ರೀಯ ಮನೋಭಾವನೆಯನ್ನು ಹೊಂದಿದೆ. ಪ್ರತಿಯೊಂದು ಧರ್ಮೀಯರು ತಮ್ಮ ಸಂಪ್ರದಾಯ, ಪದ್ಧತಿಗಳನ್ನು ಅಚರಿಸಲು ಅವಕಾಶವಿದೆ.

**ವಿಷಯ ನಿರೂಪಣೆ:–** ಭಾರತವು ವಿವಿಧ ಧರ್ಮ, ಭಾಷೆ , ಜನಾಂಗಗಳನ್ನು ಒಳಗೊಂಡ ರಾಷ್ಟ್ರವಾಗಿದ್ದು ಯಾವುದೇ ಮೂಲೆಗೆ ಹೋದರು ಅಲ್ಲಿ ವೈವಿದ್ಯತೆಯನ್ನು ಕಾಣುತ್ತೇವೆ. ಏಕೆಂದರೆ ಭಾರತೀಯ ನಾಗರಿಕತೆಯು ಧಾರ್ಮಿಕ ಹಾಗೂ ನೈತಿಕತೆಯ ತಳಹದಿಯ ಮೇಲೆ ನಿಂತಿರುತ್ತದೆ. ದೇಶದ ಎಲ್ಲಾ ಭಾಗಗಳಲ್ಲೂ ಸಾಂಸ್ಕೃತಿಕ, ಧರ್ಮ, ನಂಬಿಕೆ ರೀತಿ ನೀತಿಗಳಲ್ಲಿ ಅಚರಣೆಗಳಲ್ಲಿ ವಿಶಾಲ ವೈವಿದ್ಯತೆಯನ್ನು ಹೊಂದಿದೆ. ಆದರೂ ನಮ್ಮಲ್ಲಿ ನಾನು ಭಾರತೀಯ ಎಂಬ ನಂಬಿಕೆ ಬಲವಾಗಿ ಬೇರೂರಿದೆ. ನಮ್ಮ ದೇಶದ ರಾಷ್ಟ್ರಗೀತೆ, ರಾಷ್ಟ್ರಲಾಂಚನ ,ಧ್ವಜ ಇವು ನಮ್ಮ ಏಕತೆಯ ಸಂಕೇತಗಳಾಗಿವೆ. ಅಲ್ಲದೇ ವಂದೇ ಮಾತರಂ ,ಸಾರೇ ಜಹಾಸೇ ಅಚ್ಛಾ ,ಜನ ಗಣ ಮನ ಅಧಿನಾಯಕ ಜಯ ಹೇ ಅಂತಹ ದೇಶಭಕ್ತಿ ಗೀತೆಗಳು ದೇಶಾಭಿಮಾನವನ್ನು ಹುಟ್ಟಿಸುತ್ತವೆ. ವೈವಿಧ್ಯತೆಯಲ್ಲಿ ಏಕತೆ ಸಾರಿದ ನಮ್ಮ ದೇಶ ವಿಶ್ವಕ್ಕೆ ಮಾದರಿಯಾಗಿದೆ. ರಾಷ್ಟ್ರೀಯ ಭಾವೈಕ್ಯತೆಯಿಂದ ನಾವೆಲ್ಲರೂ ಒಂದೇ ತಾಯ ಮಕ್ಕಳೆಂಬ ಭಾವನೆಯು ತುಂಬಿ, ಸಹೋದರರು ಎಂಬ ಮನೋಭಾವನೆ ಮೂಡುತ್ತದೆ. ಇದರಿಂದ ದೇಶಾಭಿಮಾನ, ದೇಶಭಕ್ತಿ ಬೆಳೆಯುತ್ತದೆ. ಒಬ್ಬರನ್ನು ಒಬ್ಬರು ಗೌರವದಿಂದ ಕಾಣಲು ಸಹಕಾರಿಯಾಗುತ್ತದೆ. ಹಿಂದೂ, ಮುಸ್ಲಿಂ ಬೇಧಭಾವನೆ ತೊಲಗುತ್ತದೆ. ಎಲ್ಲೇ ಇರಲಿ ಹೇಗೆ ಇರಲಿ ನಾವು ಭಾರತೀಯರು ಎಂದು ಒಗ್ಗಟ್ಟಿನಿಂದ ಹೇಳುತ್ತೇವೆ.

**ಉಪಸಂಹಾರ;–** ಕಣ್ಣು ಬೇರೆ ನೋಟ ಒಂದೇ ನಾವು ಭಾರತೀಯರು ಎಂಬ ಕವಿವಾಣಿಯಂತೆ ನಾವು ಮಾತ್ರ ಒಂದಾಗಿರದೆ ನಮ್ಮ ನೆರೆಹೊರೆಯ ರಾಷ್ಟ್ರಗಳೊಂದಿಗೂ ಪ್ರೀತಿ ವಿಶ್ವಾಸ ಸೌಹಾರ್ದತೆಯಿಂದ ನಡೆದುಕೊಳ್ಳುತ್ತಾ ನಮ್ಮ ದೇಶದ ಏಕತೆಯನ್ನು ಎತ್ತಿ ಹಿಡಿದಿದ್ದೇವೆ. ಭಾರತ ದೇಶವು ಪವಿತ್ರವಾದ ದೇಶ ಇಲ್ಲಿ ಜನ್ಮತಾಳಲು ಏಳೇಳು ಜನ್ಮದಲ್ಲಿ ತಪಸ್ಸು ಮಾಡಿರಬೇಕು. ಯಾವ ತಪಸ್ಸಿನ ಫಲವೋ ನಾವು ಈ ಮಣ್ಣಿನಲ್ಲಿ ಜನಿಸಿದ್ದೇವೆ. ಎಲ್ಲಾ ಬೇಧಭಾವನೆಗಳನ್ನು ಮರೆತು ಮನುಷ್ಯರಂತೆ ಬದುಕೋಣ. ನಾವು ಮಾಡಿಕೊಂಡಿರುವ ನಿಯಮಗಳೇ ನಮಗೆ ಶತ್ರುವಾಗುವುದು ಬೇಡ. ನಾವು ಭಾರತೀಯರಷ್ಟೇ ಎಲ್ಲಾ ಮರೆತು ಒಂದಾಗಿ ಬಾಳೋಣ.

## 5. ಸಾವಯವ ಕೃಷಿ

**ಪೀಠಿಕೆ :–** ಇಂದು ಕೃಷಿ ಕ್ಷೇತ್ರದಲ್ಲಿ ಅನೇಕ ರೀತಿಯ ಸಂಶೋಧನೆಗಳು ನಡೆಯುತ್ತಿವೆ. ಪಾರಂಪರಿಕ ಪದ್ದತಿ ಹಾಗೂ ವೈಜ್ಞಾನಿಕ ಕೃಷಿ ಪದ್ದತಿಗಳ ಸಾಧಕ ಭಾದಕಗಳ ಬಗ್ಗೆ ಕೃಷಿ ವಲಯದಲ್ಲಿ ಸಾಕಷ್ಟು ಚರ್ಚೆ ನಡೆಸುತ್ತಿದ್ದಾರೆ, ಹೊಸಹೊಸ ಪ್ರಯೋಗಗಳು ನಡೆಯುತ್ತಿವೆ. ಇದರ ಫಲಸ್ವರೂಪವೆ ಸಾವಯವ ಕೃಷಿಪದ್ದತಿ.

**ವಿಷಯ ನಿರೂಪಣೆ :–** ಬೆಳೆ ಆವರ್ತನೆ, ಹಸಿರು ಗೊಬ್ಬರ, ಮಿಶ್ರಗೊಬ್ಬರ, ಜೈವಿಕವಾಗಿ ಕೀಟಗಳ ನಿಯಂತ್ರಣಗಳನ್ನು ಅವಲಂಬಿತಗೊಂಡಿರುವುದೇ ಸಾವಯವ ಕೃಷಿ. ಹಲವು ರಾಷ್ಟ್ರಗಳಲ್ಲಿ ಸಾವಯವ ಬೇಸಾಯ ಪದ್ಧತಿಗಳನ್ನು ಅಂತಾರಾಷ್ಟ್ರೀಯವಾಗಿ ನಿಯಮಗಳಿಗೊಳಪಡಿಸಲಾಗಿದೆ. ಸಾವಯವ ಚಳುವಳಿ 1930–1940 ರ ದಶಕದಲ್ಲಿ ಬೇಸಾಯ ಕ್ಷೇತ್ರವನ್ನು ಕೃತಕ ಗೊಬ್ಬರಗಳ ಮೇಲೆ ಹೆಚ್ಚು ಅವಲಂಭಿಸುವುದನ್ನು ಹಿಮ್ಮೆಟ್ಟಿಸುವ ಸಲುವಾಗಿ ಪ್ರಾರಂಭವಾಯಿತು, ಸಾವಯವ ಕೃಷಿ ಪದ್ಧತಿಯ ಪಿತಾಮಹನೆಂದು ಸರ್.ಆಲ್ಬರ್ಟ ಹೊವಾರ್ಡೆ ಅವರನ್ನು ವಿಶೇಷವಾಗಿ ಗುರುತಿಸಲಾಗಿದೆ. ವಿಶ್ವದ ಒಟ್ಟು ಕೃಷಿ ಉತ್ಪನ್ನದ ಪ್ರಮಾಣವನ್ನು ಪರಿಗಣಿಸಿದಾಗ ಸಾವಯುವ ಉತ್ಪನ್ನ ಸಣ್ಣ ಪ್ರಮಾಣವೆನಿಸಿದರೂ ಅದು ಅನೇಕ ದೇಶಗಳಲ್ಲಿ ವೇಗವಾಗಿ ಬೆಳೆಯುತ್ತಿದೆ. ಸಾವಯವ ವ್ಯವಸಾಯವು ಅರ್ಥಪೂರ್ಣವಾದ ಸಾಮಾಜಿಕ ಆರ್ಥಿಕ ಮತ್ತು ಪರಿಸರ ವಿಜ್ಞಾನದ ಸಮರ್ಥನೀಯ ಬೆಳವಣಿಗೆಗಾಗಿ, ವಿಶೇಷವಾಗಿ ಬಡ ರಾಷ್ಟ್ರಗಳ ಬೆಳೆವಣಿಗೆಗೆ ಮಹತ್ವಪೂರ್ಣ ಕೊಡುಗೆ ನೀಡುತ್ತದೆ. ಕರ್ನಾಟಕದಲ್ಲಿ ಸಾವಯವ ಕೃಷಿಯನ್ನು ಪ್ರೋತ್ಸಾಹಿಸಲೆಂದು ಸಾವಯವ ಕೃಷಿ ಮಿಶನ್ ರಚಿಸಲಾಗಿದೆ.

**ಉಪಸಂಹಾರ :–** ಸಾವಯವ ಕೃಷಿ ಪದ್ಧತಿಯು ಒಂದು ಉತ್ತಮ ವಿಧಾನವಾಗಿದ್ದು, ಜ್ಞಾನಯುಕ್ತ ಕೇಂದ್ರಿಕೃತ ಉತ್ಪಾದನೆಯ ವ್ಯವಸ್ಥೆಯಾಗಿದೆ. ಇಷ್ಟಲ್ಲದೆ ಹೆಚ್ಚು ಇಳುವರಿ ನೀಡುವ ಬೇಸಾಯ ವ್ಯವಸ್ಥೆಗಳಿಗಿಂತ ಹೆಚ್ಚು ಪರಿಸರ ಸ್ನೇಹಿಯಾಗಿದೆ. ಆದ್ದರಿಂದ ಇದನ್ನು ರೈತರು ಆಳವಡಿಸಿಕೊಳ್ಳುವ ಮೂಲಕ ತಮ್ಮ ಬದುಕನ್ನು ಉತ್ತಮ ಪಡಿಸಿಕೊಳ್ಳಬಹುದೆಂಬುದು ನನ್ನ ಅಭಿಪ್ರಾಯವಾಗಿದೆ.

## 6. ಮಳೆ ನೀರು ಕೊಯ್ಲು

**ಪೀಠಿಕೆ :–** ಮಳೆ ನೀರು ಕೊಯ್ಲು ಎಂಬುದು ಮಳೆನೀರನ್ನು ಸಂಗ್ರಹಿಸುವ ವಿಧಾನಕ್ಕಿರುವ ಹೆಸರು ಭೂಮಿಗೆ ಬಿದ್ದಂತಹ ನೀರನ್ನು ವಿವಿಧ ಅವಶ್ಯತೆಗಳಿಗೆ ಸದಾ ಉಪಯೋಗಿಸಲು ಅನುಕೂಲವಾಗುವಂತೆ ಶೇಖರಿಸುವ ವಿಧಾನವೇ ಮಳೆ ನೀರು ಕೊಯ್ಲು. ಕೃಷಿ ಮತ್ತು ಕೃಷಿಯೇತರ ಪ್ರದೇಶಗಳಲ್ಲಿ ನೀರನ್ನು ಹೆಚ್ಚಿನ ಮಟ್ಟದಲ್ಲಿ ಸಂಗ್ರಹಣೆ ಮಾಡಬೇಕು. ಇದರಿಂದ ತುಂಬಾ ಅನುಕೂಲಗಳಿವೆ.

**ವಿಷಯ ನಿರೂಪಣೆ :–** ಮಳೆ ಬಂದು ನೀರು ವ್ಯರ್ಥವಾಗಿ ಹೋಗುವ ಬದಲು ಮಳೆ ನೀರನ್ನು ಸಂಗ್ರಹಿಸುವ ಕಲೆ ಬೇಕು, ಹರಿದು ಹೋಗುವ ನೀರನ್ನು ತಡೆಗಟ್ಟಿ ಭೂಮಿಯಲ್ಲಿ ಇಂಗುವಂತೆ ಮಾಡಿದರೆ, ಅಂತರ್ಜಲ ಹೆಚ್ಚುತ್ತದೆ. ಹಳ್ಳಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಈ ಕೆಲಸವಾದರೆ ದನಕರುಗಳಿಗೆ,ಕುರಿ ಮೇಕೆಗಳಿಗೆ ಪ್ರಾಣಿ ಪಕ್ಷಿಗಳಿಗೆ ಕುಡಿಯುವುದಕ್ಕೆ ಅನುಕೂಲಕರವಾಗಿರುತ್ತದೆ. ನಮ್ಮ ರೈತರು ಉತ್ತಮವಾದ ಬೇಸಾಯದ ಕ್ರಮಗಳನ್ನು ಅನುಸರಿಸಬೇಕು. ಮಳೆಯ ನೀರು ಬಿದ್ದಲ್ಲಿಯೇ ಸಂರಕ್ಷಿಸುವ ಬೇಸಾಯವನ್ನು ಮಾಡಬೇಕು. ಮಿಶ್ರ ಬೆಳೆಗಳನ್ನು ಬೆಳೆಯುವುದರಿಂದ, ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡುವುದರಿಂದ ನೀರು ಮಣ್ಣಿನಲ್ಲಿ ಹೆಚ್ಚು ಇಂಗಲು ಅವಕಾಶವಾಗುತ್ತದೆ. ಹೊಲದ ಎರಡು ಬದಿಗಳಮಧ್ಯದ ಜಾಗದಲ್ಲಿ ಸಣ್ಣ ತಗ್ಗುಗಳನ್ನು ನಿರ್ಮಿಸುವುದರಿಂದ ನೀರು ಸಂಗ್ರಹಣೆ ಮಾಡಬಹುದು. ಮಳೆಗಾಲದ ಪ್ರಾರಂಭದ ದಿನಗಳಲ್ಲಿ ರೈತರು ತಮ್ಮ ಹೊಲವನ್ನು ಇಳಿಜಾರಿಗೆ ಅಡ್ಡವಾಗಿ ಉಳುಮೆ ಮಾಡಿದರೆ ಮಳೆ ನೀರು ಹೆಚ್ಚು ಭೂಮಿಯಲ್ಲಿ ಇಂಗಲು ಸಹಾಯವಾಗುತ್ತದೆ. ಈ ಮಳೆ ನೀರು ಕೊಯ್ಲು ಕೇವಲ ಕೃಷಿ ಭೂಮಿಯಲ್ಲಿ ಮಾತ್ರವಲ್ಲದೆ. ಕೃಷಿಯೇತರ ಪ್ರದೇಶಗಳಲ್ಲೂ ಮಾಡಬಹುದು. ಮನೆಯ ಮೇಲ್ಛಾವಣಿ ಮಳೆ ನೀರು ಕೊಯ್ಲು ಎಂಬ ವಿಧಾನದ ಮೂಲಕ ಮಾಡಬಹುದು.

**ಉಪಸಂಹಾರ :–** ಮಳೆ ನೀರು ಸಂರಕ್ಷಣೆ ಮಾಡುವುದರಿಂದ ಮನುಷ್ಯನಿಗೆ ದಿನನಿತ್ಯ ಬಳಸಲು ನೀರು ಸಮೃದ್ಧವಾಗಿ ಸಿಗುತ್ತದೆ. ಬೆಳೆಗಳಿಗೆ, ಸಸ್ಯಗಳಿಗೆ ,ಧನಕರುಗಳಿಗೆ ಪ್ರಾಣಿ ಪಕ್ಷಿಗಳಿಗೆ ಕುಡಿಯಲು ನೀರು ಸಿಗುತ್ತದೆ.ಇಷ್ಟೇ ಅಲ್ಲದೇ ನಮ್ಮ ರೈತರು ನೀರಾವರಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಬಳಕೆ ಮಾಡಿಕೊಂಡು ಅವರ ಕೃಷಿ ಉತ್ಪಾದನೆ ಹೆಚ್ಚಿಸಲು ನೆರವಾಗುತ್ತದೆ. ನೀರು ಅಮೂಲ್ಯವಾದದ್ದು, ಅದನ್ನು ಉಳಿಸುವ ಹೊಣೆ ಪ್ರತಿಯೊಬ್ಬರ ಜವಬ್ದಾರಿ ನಾಗರಿಕರಾದವರ ಆದ್ಯ ಕರ್ತವ್ಯವಾಗಬೇಕು. ನಾವು ನಾವೆಲ್ಲರು ಮಳೆ ನೀರನ್ನು ಸಂರಕ್ಷಣೆ ಮಾಡಲು ಕಂಕಣ ಬದ್ಧರಾಗಬೇಕು. ಇಲ್ಲದೇ ಹೋದರೆ ಮುಂದೊಂದು ದಿನ ನೀರು ಸಿಗದೇ ಸಾಯುವ ಸ್ಥಿತಿ ಬಂದರು ಬರಬಹುದು.

## 7. ಗ್ರಂಥಾಲಯಗಳ ಮಹತ್ವ ಅಥವಾ ಶಾಲಾ ಗ್ರಂಥಾಲಯಗಳ ಸದ್ಬಳಕೆ

**ಪೀಠಿಕೆ :** " ಗ್ರಂಥಗಳಿಲ್ಲದ ಕೋಣೆ ಆತ್ಮವಿಲ್ಲದ ದೇಹವಿದ್ದಂತೆ" ಎಂಬ ನಾಣ್ಣುಡಿಯಂತೆ ಪ್ರತಿಯೊಬ್ಬರು ಗ್ರಂಥಗಳನ್ನು ಹೊಂದಿ ತಮ್ಮಲ್ಲಿ ಆತ್ಮವನ್ನು ಇಟ್ಟುಕೊಳ್ಳಬೇಕು. ಇಂದಿನ ಯುಗದಲ್ಲಿ ಜ್ಞಾನವೃದ್ಧಿಗೆ ಮತ್ತು ಅಮೂಲ್ಯವಾದ ಸಮಯ ಸದುಪಯೋಗಕ್ಕೆ ಗ್ರಂಥಾಲಯಗಳು ಬಹಳ ಮುಖ್ಯ ಎನಿಸುತ್ತವೆ. ಜ್ಞಾನಾರ್ಜನೆಗೆ ಅಗತ್ಯವಾದ ಗ್ರಂಥಗಳಿರುವ ಆಲಯವೇ ಗ್ರಂಥಾಲಯ. ಅದಕ್ಕೆಂದೆ ಶಾಲಾ – ಕಾಲೇಜುಗಳಲ್ಲಿ ಮತ್ತು ಸಾರ್ವಜನಿಕ ಗ್ರಂಥಾಲಯಗಳು ತೆರೆಯಲ್ಪಟ್ಟಿವೆ.

**ವಿಷಯ ವಿವರಣೆ :** ಮಾನವನ ಜೀವನದಲ್ಲಿ ಪುಸ್ತಕಗಳು ಪ್ರಮುಖ ಪಾತ್ರವಹಿಸುತ್ತವೆ, ಮನುಷ್ಯನ ದೇಹಕ್ಕೆ ಅನ್ನ,ನೀರು,ಗಾಳಿ ಹೇಗೆ ಮುಖ್ಯವೋ ಹಾಗೆ ಮಾನವನ ಮನಸ್ಸಿನ ವಿಕಾಸಕ್ಕೆ ಪುಸ್ತಕಗಳು ಅವಶ್ಯಕವಾಗಿರುತ್ತವೆ. ಪುಸ್ತಕಗಳು ಆತ್ಮೀಯ ಮಿತ್ರರಿದ್ದಂತೆ ಸದಾ ಒಳ್ಳೆಯ ಯೋಚನೆಗಳಿಗೆ ದಾರಿ ಮಾಡಿಕೊಡುತ್ತವೆ. ಜ್ಞಾನವಿಕಾಸಕ್ಕಾಗಿಯೇ ಸಾರ್ವಜನಿಕವಾಗಿಯು ಮತ್ತು ಶಾಲಾ ಕಾಲೇಜುಗಳಲ್ಲಿ ಗ್ರಂಥಾಲಯಗಳನ್ನು ತೆರೆಯಲಾಗಿದೆ. ಇಲ್ಲಿ ಪ್ರತಿಯೊಂದು ವಿಷಯಗಳು ಅಂದರೆ ಸಾಹಿತ್ಯ, ಇತಿಹಾಸ, ಪುರಾಣ, ವಿಜ್ಞಾನ, ತಂತ್ರಜ್ಞಾನ,ಮಕ್ಕಳ ಸಾಹಿತ್ಯ ಮೊದಲಾದ ವಿಷಯಗಳ ಗ್ರಂಥಗಳನ್ನು ಇಟ್ಟಿರುತ್ತಾರೆ. ಹಲವಾರು ಭಾಷೆಯ ಪುಸ್ತಕಗಳು ಸಹ ಇರುತ್ತವೆ. ಗ್ರಂಥಾಲಯಗಳು ಜ್ಞಾನದ ನಿಧಿಗಳಿದ್ದಂತೆ ಅಂತಹ ಜ್ಞಾನ ನಿಧಿಗೆ ಕೈಹಾಕಿ ನಮ್ಮ ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಬೇಕು. ಗ್ರಂಥಾಲಯಗಳು ಜ್ಞಾನಾರ್ಜನೆಯ ಮೆಟ್ಟಿಲುಗಳು ಅವುಗಳಲ್ಲಿಗೆ ಹೋಗಿ ನಮ್ಮ ಜ್ಞಾನದಹಾದಿ ತುಳಿಯಬೇಕು. ಪುಸ್ತಕಗಳಿಲ್ಲದ ಮನೆ ,ಗ್ರಂಥ ಭಂಡಾರವಿಲ್ಲದ ಶಾಲಾ ಕಾಲೇಜುಗಳು ದೇವರಿಲ್ಲದ ಗುಡಿಯಂತೆ, ಆದ್ದರಿಂದ ದೇವಾಲಯಗಳಂತೆ ಇರಲಿ ಎಂದು ನಮ್ಮ ಶಾಲಾ–ಕಾಲೇಜುಗಳಲ್ಲಿ ಗ್ರಂಥಾಲಯಗಳನ್ನು ಮೊದಲಿನಿಂದಲೂ ತೆರೆಯಲಾಗಿದೆ. ಓದುವ ಹವ್ಯಾಸವುಳ್ಳವರು ಗ್ರಂಥಾಲಗಳನ್ನು ದೇವಾಲಯದಂತೆ ಕಾಣುತ್ತಾರೆ. ಉನ್ನತ ವಿದ್ಯಾಭ್ಯಾಸವನ್ನು ಮಾಡುವ ವಿದ್ಯಾರ್ಥಿಗಳಿಗಂತೂ ಜ್ಞಾನದಾಸೋಹದ ಮನೆಗಳಿದ್ದಂತೆ. ಅಲ್ಲಿ ಜ್ಞಾನವೆಂಬ ಆಹಾರ ಸೇವಿಸುವವರಿಗೆ ಅದರ ರುಚಿ ಅರಿವಾಗುತ್ತದೆ. ಇಂದಿನ ತಂತ್ರಜ್ಞಾನ ಯುಗದಲ್ಲಿ ಅಂತರ್ಜಾಲದ ಮೂಲಕ ಜ್ಞಾನವನ್ನು ಗಳಿಸಿಕೊಳ್ಳಲುಬಹುದು ಅದಕ್ಕೆಂದೆ ಇ–library (ಈ–ಗ್ರಂಥಾಲಯ) ಗಳನ್ನು ತೆರೆಯಲಾಗಿದೆ. ಎಲ್ಲ ಪುಸ್ತಕಗಳನ್ನು ಅಂತರ್ಜಾಲಕ್ಕೆ ಸೇರಿಸಲಾಗುತ್ತಿದೆ.

**ಉಪಸಂಹಾರ :** ಒಟ್ಟಾರೆಯಾಗಿ ಶಾಲಾ–ಕಾಲೇಜುಗಳಲ್ಲಿನ ಮತ್ತು ಸಾರ್ವಜನಿಕ ಗ್ರಂಥಾಲಯಗಳು ನಮ್ಮ ಜ್ಞಾನವಿಕಾಸಕ್ಕೆ ಅವಶ್ಯವಾದ ಮಾಹಿತಿಯನ್ನು ಒದಗಿಸಿ ಜ್ಞಾನವಂತರಾಗಲು ಸಹಾಯವಾಗುತ್ತವೆ. ಸಜ್ಜನರ ಸಂಘ ಮಾಡಿದಂತೆ, ಸಭ್ಯಗ್ರಂಥಗಳ ಅಧ್ಯಯನಮಾಡಿ ಜ್ಞಾನಸಾಗರವನ್ನು ಈಜಿ ದಡ ಸೇರಬಹುದು. ಗ್ರಂಥಾಲಯಗಳು ಜ್ಞಾನವಿಕಾಸದ ಗುರುವಿದ್ದಂತೆ ಎಂದು ಗುರುವಿನ ಬಳಿ ತೆರಳಿ ಅಭ್ಯಾಸ ಮಾಡುವ ಹವ್ಯಾಸ ನಮ್ಮದಾಗಬೇಕು.

## 8. ಸಾಮಾಜಿಕ ಪಿಡುಗುಗಳು

**ಪೀಠಿಕೆ :** ಸಮಾಜದ ಅಭಿವೃದ್ಧಿಗೆ ತೊಡಕನ್ನುಂಟುಮಾಡುವ ಕೆಲವು ಪದ್ಧತಿಗಳನ್ನು ಸಾಮಾಜಿಕ ಪಿಡುಗುಗಳು ಎಂದು ಗುರುತಿಸಲಾಗಿದೆ. ಇಂತಹ ಪದ್ಧತಿಗಳು ನಮ್ಮ ದೇಶವನ್ನು ಅಭಿವೃದ್ಧಿಪಥದತ್ತ ಕೊಂಡೊಯ್ಯಲು ಕಂಟಕವಾಗಿವೆ. ಇವುಗಳನ್ನು ನಿವಾರಿಸಿಕೊಂಡಾಗ ಮಾತ್ರ ಸಮಾಜ ಸ್ವಾಸ್ಥ್ಯವಾಗಿರಬಲ್ಲದು.

**ವಿಷಯ ವಿವರಣೆ :** ಪ್ರಾಚೀನ ಕಾಲದಿಂದಲೂ ನಮ್ಮ ಸಮಾಜಕ್ಕೆ ಅಂಟಿಕೊಂಡು ಬಂದಿರುವ, ಸಮಾಜದ ಅಭಿವೃದ್ಧಿಗೆ ಕಂಟಕವಾಗಿರುವ ಬಡತನ, ಅನಕ್ಷರತೆ, ಬಾಲ್ಯವಿವಾಹ, ವರದಕ್ಷಿಣೆ, ಸ್ತ್ರೀಶೋಷಣೆ, ಭಿಕ್ಷಾಟನೆ, ಜಾತೀಯತೆ, ಅಸ್ಪೃಶ್ಯತೆ, ಸತಿಪದ್ಧತಿ, ದೇವದಾಸಿ ಪದ್ಧತಿ, ಜೀತಪದ್ಧತಿ, ಪರದಾ ಪದ್ಧತಿಯಂತಹ ಸಾಮಾಜಿಕ ಪಿಡುಗುಗಳು ನಮ್ಮನ್ನು ಇಂದಿಗೂ ಕಾಡುತ್ತಿವೆ. ಇಂತಹ ಅನಿಷ್ಟಗಳನ್ನು ಹೋಗಲಾಡಿಸಿದಾಗ ಮಾತ್ರ ನಮ್ಮ ಸಮಾಜದ ಏಳಿಗೆಯಾಗಲು ಸಾಧ್ಯವಿದೆ. ಇಲ್ಲವಾದರೆ ಸಮಾಜ ಅಭಿವೃದ್ಧಿ ಕುಂಠಿತಗೊಂಡು ದಾಸ್ಯದಲ್ಲಿರಬೇಕಾಗುತ್ತದೆ. ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಲು ಸಾಕಷ್ಟು ಕಾನೂನುಗಳಿದ್ದರೂ ಪ್ರಯೋಜನವಾಗಿಲ್ಲ. ಇವುಗಳು ಹೀಗೆ ಮುಂದುವರಿದಿರಲು ಅನಕ್ಷರತೆಯೆ ಕಾರಣ ಎಂದು ಹೇಳಬಹುದು. ಅಕ್ಷರಸ್ಥರ ಸಂಖ್ಯೆ ಹೆಚ್ಚಿದಂತೆ ಕೆಲವು ಪಿಡುಗುಗಳು ದೂರವಾಗುತ್ತಿವೆ.

ಅನಕ್ಷರತೆ ಎಲ್ಲಿ ತಾಂಡವವಾಡುತ್ತಿ ದಿಯೋ ಅಲ್ಲಿ ಇಂತಹ ಪಿಡುಗುಗಳು ಜೀವಂತವಾಗಿವೆ. ಸಾಮಾಜಿಕ ಪಿಡುಗುಗಳು ಸಮಾಜಕ್ಕೆ ಹಿಡಿದ ಗೆದ್ದಲಿನಂತೆ ಸಮಾಜವನ್ನು ವಿನಾಶದತ್ತ ಕೊಂಡೊಯ್ಯುತ್ತವೆ. ಆದ್ದರಿಂದ ನಮ್ಮ ಸರ್ಕಾರಗಳು ಇನ್ನೂ ಕಠಿಣ ಕಾನೂನುಗಳನ್ನು ಜಾರಿಗೆ ತಂದು , ಅದಕ್ಕೆ ಪೂರಕವಾದ ಅರಿವು ಮೂಡಿಸಬೇಕು. ಪ್ರತಿಯೊಬ್ಬರಲ್ಲಿ ವೈಜ್ಞಾನಿಕ ಮನೋಭಾವವನ್ನು ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು. ಸಾಮಾಜಿಕ ಪಿಡುಗುಗಳಿಂದ ಆಗುವ ಅನಾಹುತಗಳನ್ನು ತಿಳಿಸಬೇಕು.ಅಂದಾಗ ಮಾತ್ರ ನಿವಾರಣೆಯಾಗಬಲ್ಲವು.

**ಉಪಸಂಹಾರ :** ಉತ್ತಮ ಸಮಾಜ ನಿರ್ಮಾಣ ಮಾಡಲು ಸಾಮಾಜಿಕ ಪಿಡುಗುಗಳನ್ನು ಬೇರುಸಹಿತ ಕಿತ್ತೊಗೆಯಬೇಕು. ವಿದ್ಯಾವಂತರು ಮುಂದೆ ಬಂದು ಅನಕ್ಷರಸ್ಥರಲ್ಲಿ ಅರಿವು ಮೂಡಿಸಿ ಆ ಮೂಲಕ ಸಾಮಾಜಿಕ ಪಿಡುಗುಗಳನ್ನು ನಿವಾರಿಸಿ ಸಮಾಜ ಸ್ವಾಸ್ಥ್ಯವಾಗಿರಿಸಲು ಶ್ರಮಿಸಬೇಕು. ಆಗ ಮಾತ್ರ ನಮ್ಮ ದೇಶ ಅಭಿವೃದ್ಧಿಪಥದತ್ತ ಸಾಗಲು ಸಾಧ್ಯವೆಂದು ಹೇಳಬಹುದು.

## 9. ವರದಕ್ಷಿಣೆ ಒಂದು ಸಾಮಾಜಿಕ ಪಿಡುಗು

**ಪೀಠಿಕೆ :** ವಿವಾಹದ ಸಂದರ್ಭದಲ್ಲಿ ಅಥವಾ ಮುಂಚಿತವಾಗಿ ವಧುವಿನ ಕಡೆಯವರು ವರನಿಗೆ ನೀಡುವ ಹಣ, ಬಂಗಾರ,ವಸ್ತ್ರಗಳು, ನಿವೇಶನ , ವಾಹನ, ಉದ್ಯೋಗ ಕೊಡಿಸುವ ಭರವಸೆ ಮುಂತಾದ ಉಡುಗೊರೆಗಳನ್ನು ವರದಕ್ಷಿಣೆ ಎನ್ನುವರು. ಈಗಿನ ಸಮಾಜದಲ್ಲಿ ಇದೊಂದು ಪ್ಯಾಶನ್ ಪಿಡುಗು ಎಂದೇ ಹೇಳಬಹುದು. ಇದೊಂದು ಸಾಮಾಜಿಕ ಪಿಡುಗಾಗಿದ್ದು, ಸಮಾಜದಲ್ಲಿ ಹೆಣ್ಣು ಹೆತ್ತ ಬಡವರು ತಮ್ಮ ಮಗಳ ಮದುವೆ ಮಾಡಲು ಕಣ್ಣೀರು ಸುರಿಸುವುದರೊಂದಿಗೆ ಯಮಪಾಶವಾಗಿದೆ.

**ವಿಷಯ ವಿವರಣೆ :** ಮಾನವನ ಭೋಗ ಲಾಲಸೆಗೆ ಎಷ್ಟಿದ್ದರೂ ಸಾಲದು .ಅದು ಮದುವೆಯಾಗುವಾಗ ವಧುವಿನ ಕಡೆಯವರನ್ನು ವರದಕ್ಷಿಣೆಗಾಗಿ ಪೀಡಿಸುವುದು ಸಾಮಾನ್ಯವಾಗಿ ಬಿಟ್ಟಿದೆ. ಪೋಷಕರು ಮಗಳು ಸುಖವಾಗಿರಲೆಂದು ವರದಕ್ಷಿಣೆ ನೀಡುವುದು ಅಷ್ಟೇ ಸಾಮಾನ್ಯವಾಗಿದೆ. ಇದರಿಂದ ಹೆಣ್ಣು ಮಕ್ಕಳು ಹುಟ್ಟುವುದೇ ಬೇಡವೆಂಬ ಮನೋಭಾವ ಬಡವರಲ್ಲಿ ಹುಟ್ಟುವಂತೆ ಮಾಡಿದೆ. ಕಾನೂನಿನ ಪ್ರಕಾರ ವರದಕ್ಷಿಣೆ ಕೊಡುವುದು ಮತ್ತು ತೆಗೆದುಕೊಳ್ಳುವುದು ಅಪರಾಧ. 1961ರಲ್ಲಿಯೇ ವರದಕ್ಷಿಣೆ ವಿರೋಧಿ ಕಾನೂನನ್ನು ಜಾರಿಗೆ ತಂದಿದ್ದರೂ ಅದನ್ನು ಸರಿಯಾಗಿ ಬಳಸಲು ಕನ್ಯಾಪಿತೃಗಳು ಮುಂದೆ ಬರುತ್ತಿಲ್ಲ. ಏಕೆಂದರೆ ತಮ್ಮ ಮಗಳ ಮುಂದಿನ ಜೀವನ ನಡೆಯುವುದು ಕಷ್ಟವಾಗುತ್ತದೆ ಎಂದು ಹೆದರುತ್ತಾರೆ. ದಿನನಿತ್ಯ ಸಮೂಹ ಮಾಧ್ಯಮಗಳಲ್ಲಿ ವರದಕ್ಷಿಣೆಯ ಕಿರುಕುಳದ ಆರೋಪಗಳು ಬರುತ್ತಿರುತ್ತವೆ. ಕೆಲವರಿಗೆ ಶಿಕ್ಷೆಯಾದ ಬಗ್ಗೆ ಪ್ರಕರಣಗಳು ಇವೆ, ಆದರೂ ಈ ಪಿಡುಗನ್ನು ಸಂಪೂರ್ಣವಾಗಿ ನಿವಾರಣೆ ಮಾಡುವುದು ಸಾಧ್ಯವಾಗುತ್ತಿಲ್ಲ. ಇದನ್ನು ನಿವಾರಿಸಬೇಕಾದರೆ ಇಂದಿನ ಹೆಣ್ಣು ಮಕ್ಕಳು ಸ್ವಾವಲಂಬನೆ ಹಾದಿಯನ್ನು ತುಳಿಯಲು ಸಿದ್ಧರಾಗಬೇಕು, ಸಮಾನತೆಗಾಗಿ ಹೋರಾಡುವ ಸ್ತ್ರೀಸಂಘಗಳು ವರದಕ್ಷಣೆ ಕೊಡುವ ವಿಚಾರಗಳನ್ನು ಮುಂದಿಟ್ಟುಕೊಂಡು ಹೋರಾಡಿ ಹೋಗಲಾಡಿಸಬೇಕು. ಹೆಣ್ಣು ಅಬಲೆಯಲ್ಲ ಸಬಲೆ ಎಂಬ ಧೈರ್ಯ ಹೆಣ್ಣು ಮಕ್ಕಳಲ್ಲಿ ಮೂಡುವುದು ಅನಿವಾರ್ಯವಾಗಿದೆ. ಒಟ್ಟಿನಲ್ಲಿ ಹೆಣ್ಣು ಮಕ್ಕಳು ವಿದ್ಯಾವಂತರಾಗಿ, ತಾವು ದುಡಿಮೆ ಮಾಡಲು ಕಲಿತರೆ ಯಾವುದೇ ಸ್ವಾಯತ್ತ ಜೀವನ ನಡೆಸಬಹುದಾಗಿದೆ. ಹೆಣ್ಣು ಮಕ್ಕಳು ತನ್ನ ಕಾಲ ಮೇಲೆ ತಾನು ನಿಲ್ಲುವಷ್ಟು ಆರ್ಥಿಕ ಸ್ವಾವಲಂಬನೆ ಪಡೆದರೆ ವರದಕ್ಷಿಣೆ ಪಿಡುಗು ತನ್ನಿಂತಾನೇ ನಿರ್ಮೂಲನೆ ಹೊಂದುತ್ತದೆ. ಅದಕ್ಕಿಂತ ಹೆಚ್ಚಿನದಾಗಿ ವಿದ್ಯಾವಂತ ಯುವಕರು ವರದಕ್ಷಿಣೆ ಪಡೆಯುವುದನ್ನು ತ್ಯಜಿಸಿ ಸಮಾಜಕ್ಕೆ ಮಾದರಿಯಾಗಬೇಕು. ಮತ್ತುಸರ್ಕಾರಗಳು ಪ್ರಬಲ ಕಾನೂನು ಜಾರಿಗೊಳಿಸಬೇಕು

**ಉಪಸಂಹಾರ :** ಒಟ್ಟಿನಲ್ಲಿ ಸಮಾಜಕ್ಕೆ ಅಂಟಿಕೊಂಡಿರುವ ವರದಕ್ಷಿಣೆ ಪಿಡುಗನ್ನು ಸಮಾಜದಿಂದ ಕಿತ್ತು ಹಾಕಬೇಕು. ಪರಿವರ್ತನೆಯೇ ಜಗದ ನಿಯಮ ಎನ್ನುವಂತೆ ಸುಸಂಸ್ಕೃತ ಭಾರತದ ನಾಗರಿಕರಾದ ನಾವು ನಮ್ಮ ಮನಸ್ಸನ್ನು ಬದಲಾಯಿಸಿಕೊಂಡು ವರದಕ್ಷಿಣೆ ಪಡೆಯುವುದು ಮತ್ತು ಕೊಡುವುದನ್ನು ತಿರಸ್ಕರಿಸಿ ಪ್ರಜ್ಞಾವಂತರಾಗಿ ಬಾಳಬೇಕು. ಕಾನೂನಿನ ಅರಿವು ಮೂಡಿಸಿ ಸಮಾಜದ ಜನರನ್ನು ಎಚ್ಚರಗೊಳಿಸಿ, ಸ್ತ್ರೀ– ಪುರುಷರಲ್ಲಿ ಅಭೇಧತೆಯನ್ನು ಮೂಡಿಸಿ ಸತಿಪತಿಗಳೊಂದಾಗಿ ಬಾಳುವಂತೆ,ಸಂಸಾರಗಳು ಗಟ್ಟಿಗೊಳ್ಳುವಂತೆ ಮಾಡಬೇಕು ಎನ್ನುವುದು ಎಲ್ಲರ ಆಶಯವಾಗಬೇಕು.

## 10. ಸ್ವಚ್ಛ ಭಾರತ್ ಆಭಿಯಾನ

**ಪೀಠಿಕೆ:** ಸ್ವಚ್ಛ ಎಂದರೆ ನಿರ್ಮಲವಾದದ್ದು, ಪರಿಶುದ್ಧವಾದದ್ದು ಎಂದರ್ಥ.ಸ್ವಚ್ಚಭಾರತ ಎಂದರೆ ಭಾರತ ದೇಶದ ಕಲುಷಿತ ಸ್ಥಳಗಳನ್ನು ನಿರ್ಮಲಗೊಳಿಸುವುದು ಎಂದರ್ಥ.ಸ್ವಚ್ಛ ಭಾರತ್ ಅಭಿಯಾನವು ಭಾರತ ದೇಶದ ಒಂದು ಅತ್ಯುತ್ತಮ ನೈರ್ಮಲ್ಯ ಯೋಜನೆಯಾಗಿದೆ. ಪ್ರಸ್ತುತ ಕೇಂದ್ರ ಸರ್ಕಾರದ ಮಹತ್ವಕಾಂಕ್ಷೆಯ ಯೋಜನೆಯಾಗಿದ್ದು, ಭಾರತ ದೇಶವನ್ನು ಸ್ವಚ್ಛಗೊಳಿಸುವ ನಿಟ್ಟಿನಲ್ಲಿ ಅತ್ಯಂತ ಮಹತ್ವಪೂರ್ಣ ಅಭಿಯಾನವಾಗಲಿದೆ.

**ವಿಷಯ ನಿರೂಪಣೆ:** 'ಆರೋಗ್ಯವೇ ಮಹಾಭಾಗ್ಯ' 'ಎಲ್ಲಿದೆಯೋ ಸ್ವಚ್ಚತೆ ಅಲ್ಲಿದೆ ಆರೋಗ್ಯ' ಎಂಬ ಹಿತ ನುಡಿಗಳಂತೆ ನಮ್ಮ ಸುತ್ತಮುತ್ತಲಿನ ಪ್ರದೇಶಗಳು ಸ್ವಚ್ಛವಾಗಿದ್ದರೆ ಅದು ನಮಗೆ ಆರೋಗ್ಯ ಭಾಗ್ಯವನ್ನು ತಂದು ಕೊಡುತ್ತದೆ. ಇಲ್ಲವಾದರೆ ಅನಾರೋಗ್ಯ ಉಂಟಾಗಿ ಕಾಯಿಲೆಗಳು ಉಲ್ಬಣಿಸಬಹುದು. ಆದ್ದರಿಂದ ನಾವು ನಮ್ಮ ಸುತ್ತಮುತ್ತಲಿನ ಪ್ರದೇಶಗಳನ್ನು ನೈರ್ಮಲ್ಯದಿಂದ ಇರುವಂತೆ ನೋಡಿಕೊಳ್ಳಬೇಕು. ಭಾರತ ದೇಶವನ್ನು ಸ್ವಚ್ಛವಾಗಿಟ್ಟುಕೊಳ್ಳುವ ಉದ್ದೇಶದಿಂದ ದಿನಾಂಕ: 02.10.2014 ರಂದು ನಮ್ಮ ದೇಶದ ಪ್ರಧಾನ ಮಂತ್ರಿಯಾದ ಶ್ರೀನರೇಂದ್ರಮೋದಿಯವರು ಸ್ವತಃ ತಾವೇ ಭಾಗವಹಿಸುವುದರ ಮೂಲಕ ಸ್ವಚ್ಛ ಭಾರತ ಆಭಿಯಾನಕ್ಕೆ ಚಾಲನೆ ನೀಡಿದರು. ಮಹಾತ್ಮಗಾಂಧೀಜಿಯವರ ಹುಟ್ಟಿದ ದಿನ( ಅಕ್ಟೋಬರ್-2) ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದು ಗಾಂಧೀಜಿಯವರ ನಿರ್ಮಲ ಭಾರತ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಅತ್ಯುತ್ತಮ ಅಭಿಯಾನವಾಗಿದೆ. ಕೇಂದ್ರ,ರಾಜ್ಯ ಸರ್ಕಾರಿ ನೌಕರರು, ಶಾಲಾ-ಕಾಲೇಜು ವಿದ್ಯಾರ್ಥಿಗಳು, ರಾಜಕೀಯ ಮುಖಂಡರು, ಇತ್ಯಾದಿ ಭಾರತದ ನಾಗರಿಕರು ಪ್ರತಿಜ್ಞೆ ಕೈಗೊಳ್ಳುವ ಮೂಲಕ ಈ ಅಭಿಯಾನಕ್ಕೆ ಕೈಜೋಡಿಸಿದ್ದಾರೆ. 'ಸ್ವಚ್ಛತೆ ಉತ್ತಮ ಆರೋಗ್ಯದ ತಳಹದಿ' ಆದ್ದರಿಂದ ಸ್ವಚ್ಛತೆಯಿಂದ ಕೂಡಿದ ಸ್ಥಳ ನೋಡಲು ಸುಂದರವಾಗಿರುವಂತೆ ರೋಗಮುಕ್ತವು ಆಗಿರುತ್ತದೆ. ಆದ್ದರಿಂದ ನಾವು ಮೊದಲು ನಮ್ಮ ಮನೆ, ಬೀದಿ, ಗ್ರಾಮ, ಶಾಲಾ-ಕಾಲೇಜುಗಳನ್ನು ಸ್ವಚ್ಛವಾಗಿಟ್ಟುಕೊಂಡರೆ ಈ ಅಭಿಯಾನಕ್ಕೆ ಪ್ರೋತ್ಸಾಹ ನೀಡಿದಂತೆ ಆಗುತ್ತದೆ. ನಾವುಗಳು ಪ್ರತಿನಿತ್ಯ ಸ್ವಲ್ಪ ಸಮಯವನ್ನಾದರೂ ಸ್ವಚ್ಛತೆಗೆ ಮೀಸಲಿಟ್ಟು, ಸ್ವಚ್ಛತಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಆರೋಗ್ಯದಿಂದ ಇರೋಣ.

**ಉಪಸಂಹಾರ :** " ಏಕ್ ಕದಂ ಸ್ವಚ್ಛತಾ ಕಿ ಔರ್ " ಎಂಬ ಧ್ಯೇಯ ವಾಕ್ಯವನ್ನಿಟ್ಟುಕೊಂಡು ನಾವೆಲ್ಲರೂ ನಿರ್ಮಲ ಮನಸ್ಸಿನಿಂದ ನಮ್ಮ ದೇಶವನ್ನು ನೈರ್ಮಲ್ಯಗೊಳಿಸಿಕೊಳ್ಳಬೇಕು. ಈ ಅಭಿಯಾನದಲ್ಲಿ ಭಾಗವಹಿಸಿ, ಪ್ರೋತ್ಸಾಹಿಸಿ ಸ್ವಚ್ಛ,ಸುಂದರ ಪರಿಸರದಿಂದ ಕೂಡಿದ ಭಾರತವನ್ನು ನಿರ್ಮಿಸಿ ಗಾಂಧೀಜಿಯವರ ಕನಸನ್ನು ನನಸು ಮಾಡೋಣ ಎಂಬ ಆಶಯ ನಮ್ಮದಾಗಿರಲಿ.

## 11. ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ

ಪೀಠಿಕೆ : ಪ್ರಾಚೀನ ಸ್ಮಾರಕಗಳು ರಾಷ್ಟ್ರ ಪರಂಪರೆಯ ಹೆಗ್ಗುರುತುಗಳು. ನಮ್ಮ ಭವ್ಯ ಪರಂಪರೆಯ ಪ್ರತೀಕಗಳಾಗಿವೆ. ಗತಕಾಲದ ವೈಭವಗಳನ್ನು ಅರಿಯಲು ಆಧಾರವಾಗಿರುವಂತಹ ಅಮೂಲ್ಯವಾದ ಸಂಪತ್ತು ಎಂದೇ ಹೇಳಬಹುದು.

**ವಿಷಯ ನಿರೂಪಣೆ :** ಪ್ರಾಚ್ಯ ಎಂದರೆ ಪ್ರಾಚೀನವಾದದ್ದು ಎಂದರ್ಥ. ಪ್ರಾಚೀನ ಕಾಲದಲ್ಲಿ ನಮ್ಮ ಹಿರಿಯರು ವಿಜಯದ ನೆನಪಿಗಾಗಿ ವಿಜಯ ಸ್ಮಾರಕಗಳು, ಅಥವಾ ಇನ್ನಾವುದಾದರೂ ಸ್ಮರಣೆಗೋಸ್ಕರ ದೇವಾಲಯಗಳು, ಸ್ತಂಭಗಳು, ಶಾಸನಗಳು, ಬಸದಿಗಳು, ಮಸೀದಿಗಳು, ಮಹಲ್ಗಳು, ಮೂರ್ತಿಗಳು, ಅರಮನೆಗಳು, ಕೋಟೆಕೊತ್ತಲುಗಳನ್ನು ನಿರ್ಮಿಸಿದ್ದಾರೆ. ಇವೇ ನಮ್ಮ ಪ್ರಾಚ್ಯ ಸ್ಮಾರಕಗಳು. ಅವುಗಳನ್ನು ಸಂರಕ್ಷಣೆ ಮಾಡಿಕೊಂಡು ಹೋಗುವುದು ನಮ್ಮ ಹೆಗ್ಗಳಿಗೆ. ಯಾಕೆಂದರೆ ನಮ್ಮ ಪ್ರಾಚೀನರ ಜೀವನ ವ್ಯವಸ್ಥೆಗಳನ್ನು, ಇತಿಹಾಸ ಪರಂಪರೆಯನ್ನು ಅರಿಯಲು ಮೂಲಭೂತವಾದ ಆಕರವಾಗಿರುವಂತವು. ಭಾರತೀಯರು ಕಲೆವಾಸ್ತುಶಿಲ್ಪಗಳಿಗೆ ಹೆಸರುವಾಸಿಯಾಗಿರುವಂತವರು. ಪ್ರಾಚೀನ ಭಾರತೀಯರು ಕಠಿಣ ಶ್ರಮವಹಿಸಿ ಭಾರತದ ಪ್ರಾಚೀನ ವಾಸ್ತುಶಿಲ್ಪಗಳನ್ನು ನಿರ್ಮಿಸಿದರು. ಆದರೆ ವಿದೇಶಿಯರು ಒಂದು ಕ್ಷಣಮಾತ್ರದಲ್ಲಿ ವಾಸ್ತುಶಿಲ್ಪಗಳನ್ನು ಕೆಡವಿ ಹಾಕಿದರು. ಮತ್ತೆ ಹಾಗಾಗಬಾರದು. ನಮ್ಮ ಗತಕಾಲದ ಜೀವನದ ಮೇಲೆ ಮುಂದಿನ ಜೀವನ ನಿಂತಿರುತ್ತದೆ. ಪ್ರಾಚೀನ ಸ್ಮಾರಕಗಳ ಆಧಾರದ ಮೇಲೆ ಅಂದಿನ ಜನರ ವೈಭವದ ಜೀವನ, ರಾಜಕೀಯ, ಸಾಂಸ್ಕೃತಿಕ, ಐತಿಹಾಸಿಕ ಅಂಶಗಳನ್ನು ತಿಳಿಯಬಹುದು.ಆದ್ದರಿಂದ ಅವುಗಳನ್ನು ರಕ್ಷಿಸಬೇಕು. ಕನ್ನಡ ನಾಡಿನಲ್ಲಿ ಹಂಪೆ, ಬಾದಾಮಿ, ಐಹೊಳೆ, ಪಟ್ಟದಕಲ್ಲು,

ತಲಕಾಡು, ಶ್ರವಣಬೆಳಗೋಳ, ಮೈಸೂರು,ಬೀದರ್,ಬಿಜಾಪುರ ಮುಂತಾದ ಕಡೆ ಪ್ರಾಚ್ಯ ಸ್ಮಾರಕಗಳನ್ನು ನೋಡಿದಾಗ ಅಂದಿನ ರಾಜಮಹಾರಾಜರ ಇತಿಹಾಸ ಮತ್ತು ಕಲೆ,ಸಂಸ್ಕೃತಿಯನ್ನು ತಿಳಿಯಬಹುದು.

**ಉಪಸಂಹಾರ :** ಭಾರತೀಯರ ಸಂಸ್ಕೃತಿಯ ದ್ಯೂತಕವಾಗಿರುವ ,ಐತಿಹಾಸಿಕ ಮಹತ್ವವನ್ನು ತಿಳಿಸುವ ಪ್ರಾಚೀನ ಕಾಲದ ಸ್ಮಾರಕಗಳನ್ನು ಸಂರಕ್ಷಿಸಿಕೊಂಡು ಹೋಗಬೇಕಾದದ್ದು ನಮ್ಮ ನಿಮ್ಮೆಲ್ಲರ ಜವಬ್ದಾರಿಯಾಗಿದೆ.

## 12. ಗ್ರಾಮಸ್ವರಾಜ್ಯ

**ಪೀಠಿಕೆ :** 'ಸ್ವರಾಜ್ಯ' ಅಂದರೆ ಸ್ವತಂತ್ರ ರಾಜ್ಯ. ಗ್ರಾಮ ಸ್ವರಾಜ್ಯ ಎಂದರೆ ಸ್ವತಂತ್ರ ರಾಜ್ಯಗಳ ರೀತಿಯಲ್ಲಿ ಸ್ವತಂತ್ರ ಗ್ರಾಮಗಳಾಗುವುದು ಎಂದರ್ಥ. ಪ್ರತಿಯೊಂದು ಗ್ರಾಮಗಳು ಸ್ವತಂತ್ರವಾಗಿ ಸ್ವಯಂ ಆಗಿ ಆಡಳಿತದ ಕೇಂದ್ರಗಳಾಗಿ, ತಮ್ಮ ಗ್ರಾಮದ ಸಮಗ್ರ ಅಭಿವೃದ್ಧಿ ಮತ್ತು ಸುಭಿಕ್ಷತೆಗೆ ಅವಕಾಶ ಮಾಡಿಕೊಳ್ಳುವುದು ಇದರ ಪರಿಕಲ್ಪನೆಯಾಗಿದೆ.

**ವಿಷಯ ನಿರೂಪಣೆ :** ಭಾರತ ಗ್ರಾಮಗಳ ದೇಶ. ಗ್ರಾಮಗಳು ಅಭಿವೃದ್ಧಿಯಾದರೆ ದೇಶ ಅಭಿವೃದ್ಧಿಯಾ ದೀತು. ಆದ್ದರಿಂದ ಗ್ರಾಮಗಳ ಅಭಿವೃದ್ಧಿಗೆ ಅವಶ್ಯವಾದ ಸಂಪನ್ಮೂಲಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒದಗಿಸಿಕೊಡಬೇಕು. ಹಾಗೆಯೇ ತಮ್ಮ ತಮ್ಮ ಗ್ರಾಮಗಳ ಅಭಿವೃದ್ಧಿಗೆ ಅವಶ್ಯವಾದ ಯೋಜನೆಗಳನ್ನು ಆಯಾಯ ಗ್ರಾಮಗಳೆ ರೂಪಿಸಿಕೊಳ್ಳುವುದು ಉತ್ತಮ. ಇದಕ್ಕಾಗಿ ಸ್ಥಳಿಯವಾಗಿ ಗ್ರಾಮ ಪಂಚಾಯತಿಗಳು ಇರುವುದನ್ನು ಮನಗಾಣಬಹುದು. ಪ್ರಾಚೀನ ಕಾಲದಿಂದಲೂ ಗ್ರಾಮದ ಮುಖಂಡರು ಸೇರಿ ತಮ್ಮ ಗ್ರಾಮದ ಸಮಸ್ಯೆಗಳನ್ನು ತಾವೇ ಬಗೆಹರಿಸಿಕೊಳ್ಳುತ್ತಿದ್ದನ್ನು ಇತಿಹಾಸದಲ್ಲಿ ನೋಡಬಹುದು. ಪ್ರತಿಯೊಂದು ಗ್ರಾಮಗಳು ಬೇರೆಯ ಆಡಳಿತ ಕೇಂದ್ರಗಳ ಮೇಲೆ ಅವಲಂಭಿತವಾಗದೆ ಸ್ವಾವಲಂಬನೆಯಿಂದ ತಮ್ಮ ಗ್ರಾಮಗಳನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಪರಿಶ್ರಮಿಸಬೇಕು. ಗ್ರಾಮದ ಜನರೆಲ್ಲ ಆಡಳಿತದಲ್ಲಿ ಪಾಲ್ಗೊಳ್ಳಬೇಕು. ಸಲಹೆ, ಸಹಕಾರ, ಸಂಪನ್ಮೂಲಗಳನ್ನು ನೀಡಬೇಕು ಮತ್ತು ಆಡಳಿತದ ಮುಖ್ಯಸ್ಥರು ಪಡೆದು ಸದುಪಯೋಗ ಮಾಡಬೇಕು ಅಂದಾಗ ಮಾತ್ರ ಗ್ರಾಮಸ್ವರಾಜ್ಯದ ಪರಿಕಲ್ಪನೆ ಅರ್ಥಪೂರ್ಣವಾಗುತ್ತದೆ. ಮಹಾತ್ಮ ಗಾಂಧೀಜಿಯವರು ಗ್ರಾಮಸ್ವರಾಜ್ಯ ಪರಿಕಲ್ಪನೆಗೆ ಬಹು ಆದ್ಯತೆ ನೀಡಿದ್ದರು. ತಮ್ಮ ತಮ್ಮ ಗ್ರಾಮದ ಸ್ವಚ್ಚತೆ, ನೀರಿನ ಸೌಕರ್ಯ, ಶಿಕ್ಷಣದ ವ್ಯವಸ್ಥೆ, ಆರೋಗ್ಯ ವ್ಯವಸ್ಥೆ, ರಸ್ತೆಗಳ ನಿರ್ಮಾಣ ಮುಂತಾದ ವ್ಯವಸ್ಥೆಗಳನ್ನು ಗ್ರಾಮದವರೆಲ್ಲ ಒಟ್ಟಾಗಿ ಮಾಡಿಕೊಂಡರೆ ಗ್ರಾಮಗಳ ಅಭಿವೃದ್ಧಿ ಸಾಧ್ಯವೆಂದು ಹೇಳಬಹುದು. ಅಲ್ಲದೆ ಸರ್ಕಾರಗಳು ಕೂಡ ಗ್ರಾಮಾಭಿವೃದ್ಧಿ ಯೋಜನೆಗಳನ್ನು ಹಾಕಿಕೊಂಡು ಸಮಗ್ರವಾಗಿ ಗ್ರಾಮಾಭಿವೃದ್ಧಿಗೆ ಸಹಾಯ ಮಾಡುವುದರಿಂದ ದೇಶದ ಅಭಿವೃದ್ಧಿ ಸಾಧ್ಯವಾಗುತ್ತದೆ.

**ಉಪಸಂಹಾರ :** ಗ್ರಾಮಗಳ ದೇಶವಾದ ಭಾರತವು ಅಭಿವೃದ್ಧಿ ಹೊಂದಿದೆ ಎಂದು ಹೇಳಬೇಕಾದರೆ ಮೊದಲು ಗ್ರಾಮಗಳು ಅಭಿವೃದ್ಧಿ ಹೊಂದಬೇಕು. ಅದಕ್ಕೆ ಗ್ರಾಮಗಳೆಲ್ಲವೂ ಸ್ವರಾಜ್ಯವಾಗಿ ಕಾರ್ಯನಿರ್ವಹಿಸಬೇಕು. ಇದಕ್ಕೆ ಗ್ರಾಮವಾಸಿಗಳ ಸಹಕಾರ ದಿಂದ ಗಾಂಧೀಜಿಯವರ ಗ್ರಾಮಸ್ವರಾಜ್ಯದ ಕನಸನ್ನು ನನಸು ಮಾಡಬಹುದೆಂದು ಹೇಳಬಹುದು.

## 13. ತ್ಯಾಜ್ಯವಸ್ತು ನಿರ್ವಹಣೆ

**ಪೀಠಿಕೆ :** ತ್ಯಾಜ್ಯವಸ್ತು ಎಂದರೆ ತ್ಯಜಿಸಿದ ವಸ್ತು ಎಂದು ಅರ್ಥೈಸಬಹುದು. ಮಾನವ ಬಳಸಿಬಿಟ್ಟ ಅನುಪಯುಕ್ತ ವಸ್ತುಗಳು ತ್ಯಾಜ್ಯವಸ್ತುಗಳಲ್ಲಿ ಸೇರ್ಪಡೆಗೊಳ್ಳುತ್ತವೆ. ಇವುಗಳನ್ನು ಸರಿಯಾದ ರೀತಿಯಲ್ಲಿ ವಿಲೇವಾರಿ ಅಥವಾ ಮರುಬಳಕೆ ಮಾಡುವುದನ್ನು ನಿರ್ವಹಣೆ ಎಂದು ಹೇಳಬಹುದು. ತ್ಯಾಜ್ಯ ವಸ್ತುಗಳು ಕೆಲವೊಂದು ಸಾರಿ ಪರಿಸರವನ್ನು ಕಲುಷಿತಗೊಳಿಸುವುದರೊಂದಿಗೆ ಮಾನವ ಸೇರಿದಂತೆ ಇತರೆ ಜೀವಿಗಳ ಅನಾರೋಗ್ಯಕ್ಕೆ ಕಾರಣವಾಗುತ್ತವೆ. ಆದ್ದರಿಂದ ಅವುಗಳ ಸರಿಯಾದ ನಿರ್ವಹಣೆ ಮಾಡುವುದು ಅತಿ ಅವಶ್ಯವಾದದ್ದು ಎಂದು ಹೇಳಬಹುದು.

**ವಿಷಯ ನಿರೂಪಣೆ :** ಆರೋಗ್ಯಕರ ವಾತಾವರಣಕ್ಕೆ ತ್ಯಾಜ್ಯವಸ್ತುಗಳ ನಿರ್ವಹಣೆ ಬಹಳ ಮುಖ್ಯವಾಗಿರುತ್ತದೆ. ತ್ಯಾಜ್ಯವಸ್ತುಗಳು ಕೆಲವೊಂದು ಸಾರಿ ಮರುಬಳಕೆಗೆ ಯೋಗ್ಯವಾಗಿರುತ್ತವೆ. ಅಂತಹ ವಸ್ತುಗಳನ್ನು ಮರುಬಳಕೆ ಮಾಡಿಕೊಳ್ಳಬೇಕು. ಸರ್ಕಾರಗಳು, ಸ್ಥಳೀಯ ಸಂಸ್ಥೆಗಳು ಹಾಗೂ ತ್ಯಾಜ್ಯವಸ್ತು ಉತ್ಪಾದಿಸುವ ಖಾಸಗಿ ಸಂಸ್ಥೆಗಳು, ಕೈಗಾರಿಕೆಗಳು ತ್ಯಾಜ್ಯವಸ್ತು ನಿರ್ವಹಣಾ ಘಟಕಗಳನ್ನು ಸ್ಥಾಪಿಸಿ ಸೂಕ್ತವಾಗಿ ನಿರ್ವಹಣೆ ಮಾಡಬೇಕು.

ತ್ಯಾಜ್ಯವಸ್ತುಗಳನ್ನು ಘನ ಮತ್ತು ದ್ರವ ತ್ಯಾಜ್ಯವಸ್ತುಗಳನ್ನಾಗಿ ಸೂಕ್ತ ರೀತಿಯಲ್ಲಿ ಬೇರ್ಪಡಿಸಿ ವಿಲೇವಾರಿ ಮಾಡಬೇಕು. ಸಾಧ್ಯವಾದಲ್ಲಿ ಮರುಬಳಕೆಗೆ ಮೊದಲ ಆದ್ಯತೆ ನೀಡಬೇಕು. ದೊಡ್ಡ ದೊಡ್ಡ ನಗರಗಳಲ್ಲಿ ಕಸದ ಸಮಸ್ಯೆ ದೊಡ್ಡದೆ ಆಗಿದೆ. ಪ್ಲಾಸ್ಟಿಕ್, ಫೈಬರ್, ರಬ್ಬರ್, ಗಾಜು, ಕಬ್ಬಿಣ ಮತ್ತು ಇತರ ಲೋಹದ ತ್ಯಾಜ್ಯವಸ್ತುಗಳನ್ನು ಮರುಬಳಕೆ ಮಾಡಿಕೊಂಡಲ್ಲಿ ಕಸದ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ದೂರಮಾಡಬಹುದು. ತ್ಯಾಜ್ಯವಸ್ತುಗಳನ್ನು ಬಳಸಿಕೊಂಡು ಅಲಂಕಾರಿಕ ವಸ್ತುಗಳು, ಇತರೆ ಗೃಹಬಳಕೆಯ ವಸ್ತುಗಳನ್ನು ತಯಾರಿಸಬಹುದು. ಕೆಲವೊಂದು ತ್ಯಾಜ್ಯವಸ್ತುಗಳನ್ನು ಸುಡುವುದರಿಂದ , ಊತು ಹಾಕುವುದರಿಂದ ಕೆಲವು ವಿಷಕಾರಿ ರಾಸಾಯನಿಕ ಅನಿಲಗಳು ಬಿಡುಗಡೆಯಾಗಿ ಪರಿಸರ ಮಾಲಿನ್ಯ ಉಂಟಾಗಿ ಜೀವಿಗಳ ಆರೋಗ್ಯದ ಮೇಲೆ ವ್ಯತೀರಿಕ್ತ ಪರಿಣಾಮ ಬೀರುತ್ತವೆ. ಆದ್ದರಿಂದ ಹಾನಿಕಾರಕ ತ್ಯಾಜ್ಯವಸ್ತುಗಳನ್ನು ವೈಜ್ಞಾನಿಕ ರೀತಿಯಲ್ಲಿ ಪರಿಸರಕ್ಕೆ ಮತ್ತು ಜೀವಿಗಳಿಗೆ ಹಾನಿ ಮಾಡದಂತೆ ನಿರ್ವಹಣೆ ಮಾಡಿದರೆ ಒಳಿತು.

**ಉಪಸಂಹಾರ :** ಪ್ರತಿಯೊಬ್ಬರಲ್ಲಿ ತ್ಯಾಜ್ಯವಸ್ತುಗಳ ನಿರ್ವಹಣೆ ಹೇಗೆ ಮಾಡಬೇಕು ಎಂಬುದರ ಬಗ್ಗೆ ಅರಿವು ಮೂಡಿಸಬೇಕು ಅಂದಾಗ ಮಾತ್ರ ನಿರ್ವಹಣೆ ಸುಲಭವಾಗುತ್ತದೆ. ನಮ್ಮ ಆರೋಗ್ಯ ನಮ್ಮ ಕೈಯಲ್ಲಿ ಆದ್ದರಿಂದ ನಮ್ಮಿಂದ ಉಂಟಾಗುವ ತ್ಯಾಜ್ಯವಸ್ತುಗಳನ್ನು ಸೂಕ್ತ ರೀತಿಯಲ್ಲಿ ಮರುಬಳಕೆ ಮತ್ತು ವಿಲೇವಾರಿ ಮಾಡಿದ್ದಲ್ಲಿ ಪರಿಸರ ಸಂರಕ್ಷಣೆ ನಮ್ಮ ನಮ್ಮ ಆರೋಗ್ಯ ರಕ್ಷಣೆ ಎಂದು ಹೇಳಬಹುದು.

## 14. ಮಹಿಳಾ ಸಬಲೀಕರಣ

**ಪೀಠಿಕೆ :** ಮಹಿಳೆಯರಲ್ಲಿ ಮಾನಸಿಕವಾಗಿ , ಬೌದ್ಧಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಸಬಲತೆಯನ್ನು ಹೆಚ್ಚಿಸಿ ಅವರು ಆತ್ಮ ವಿಶ್ವಾಸವನ್ನು ಹೊಂದುವಂತೆ ಮಾಡುವುದೇ ಮಹಿಳಾ ಸಬಲೀಕರಣ ಎಂದು ಹೇಳಬಹುದು. ಇಂದು ಪುರುಷರಷ್ಟೆ ಮಹಿಳೆಯರು ಸಮಾನರಾಗಿದ್ದು ಪ್ರತಿಯೊಂದು ಕ್ಷೇತ್ರಗಳಲ್ಲಿ ಪುರುಷರಷ್ಟೆ ಸಾಧನೆಯನ್ನು ಮಾಡುವ ಸಾಮರ್ಥ್ಯ ಹೊಂ ದಿದ್ದಾರೆ. ಸಮಾನತೆ ಎನ್ನುವುದು ಮಹಿಳೆಯರಿಗೂ ಅನ್ವಯಿಸುತ್ತದೆ.

**ವಿಷಯ ನಿರೂಪಣೆ :** ಯಾವುದೇ ರೀತಿಯ ಶೋಷಣೆ , ಅಸಮಾನತೆಗೆ ಒಳಗಾಗದೆ ಶಿಕ್ಷಣ, ಉದ್ಯೋಗ, ವಿವಾಹ ಜೀವನ, ಸಾಮಾಜಿಕ, ರಾಜಕೀಯ ಮತ್ತು ಆಡಳಿತದಲ್ಲಿ ಪಾಲ್ಗೊಂಡು ಆತ್ಮ ವಿಶ್ವಾಸದಿಂದ ಬಾಳುವ ಶಕ್ತಿಯೇ ಮಹಿಳಾ ಸಬಲತೆ. ನಾಲ್ಕು ಗೋಡೆಗಳ ಮಧ್ಯೆ ಬಿಟ್ಟು ಎಲ್ಲರ ಜೊತೆಯಾಗಿ ಬೆರೆತು ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಇಂದಿನ ಮಹಿಳೆಯರು ಹೊಂದಿರುವುದು ಮಹಿಳಾ ಸಬಲೀಕರಣವನ್ನು ಎತ್ತಿ ತೋರಿಸುತ್ತದೆ. ಮೊದಲು ಮಹಿಳೆಯರು ಶೈಕ್ಷಣಿಕವಾಗಿ ಸಬಲರಾಗಬೇಕು. ಈ ಉದ್ದೇಶದಿಂದ ಉಚಿತ ಶಿಕ್ಷಣವನ್ನು ನೀಡಲಾಗುತ್ತಿದೆ. ಮಹಿಳೆಯರ ಶಿಕ್ಷಣಕ್ಕಾಗಿ ಆದ್ಯತೆ ನೀಡಲಾಗಿದೆ. ಮಹಿಳೆಯರ ವಿಕಾಸವಾದಲ್ಲಿ ಮನೆಯಲ್ಲಿನ ಮಕ್ಕಳು ಸಂಶಿಕ್ಷಿತರಾಗಿ ಸಂಸ್ಕಾರವಂತರಾಗಲು ಸಾಧ್ಯವಿದೆ. ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಸ್ಥಾಪಿತ ಸರ್ಕಾರಗಳು ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿರುವುದನ್ನು ನೋಡಬಹುದು. ಸ್ತ್ರೀಶಕ್ತಿ ಯೋಜನೆ, ಮಹಿಳಾ ಸ್ವಸಹಾಯ ಸಂಘಗಳು ಇವೆ. ಮಹಿಳೆಯರಿಗಾಗಿ ಸೂಕ್ತವಾದ ಮತ್ತು ಮಾನವೀಯತೆಯಿಂದ ಕೂಡಿದ ಕೆಲಸದ ವಾತಾವರಣವನ್ನು ಮತ್ತು ಮಾತೃತ್ವದ ಸವಲತ್ತುಗಳನ್ನು ನೀಡುವಂತಹ ಅವಕಾಶಗಳನ್ನು ಕಲ್ಪಿಸಲಾಗಿದೆ. ಸಾಮಾಜಿಕವಾಗಿ ಮುಂದುವರಿಯಲು ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಅವಕಾಶ ನೀಡಲಾಗಿದೆ. ಸಮಾಜದ ಅರಿವು ಅವರಿಗಾಗಿ ಎಲ್ಲ ಕಾರ್ಯಗಳಲ್ಲಿ ತೊಡಗುವಂತಾಗಬೇಕು. ಲಿಂಗ ತಾರತಮ್ಯವನ್ನು ಹೋಗಲಾಡಿಸಿ ಪ್ರತಿಯೊಂದು ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಅವಕಾಶ ನೀಡಲಾಗಿದೆ. ಕೆಲವೊಂದು ಸಾಂಪ್ರದಾಯಿಕ ಕಾರಣಗಳಿಂದ ಮಹಿಳೆಯರು ಹಿಂದುಳಿ ದಿದ್ದಾರೆ ಎನ್ನುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಆದ್ದರಿಂದ ಅನವಶ್ಯಕವೆನಿಸಿದ ಸಾಂಪ್ರದಾಯಕ ಚೌಕಟ್ಟನ್ನು ಮೀರಿ ಇಂದಿನ ಮಹಿಳೆಯರು ಸಬಲರಾಗಬೇಕಾಗುತ್ತದೆ. ಮಹಿಳೆಯರ ಪರವಾಗಿ ಕಾಯಿದೆ–ಕಾನೂನುಗಳು ರೂಪುಗೊಂಡಿವೆ. ಮಹಿಳೆಯರ ಸ್ವಾವಲಂಬನೆ ಮತ್ತು ಕಲ್ಯಾಣಕ್ಕಾಗಿ ಇಲಾಖೆಯೇ ಇದೆ. ಮಹಿಳೆಯರ ರಕ್ಷಣೆಗಾಗಿ 'ಬೇಟಿ ಬಚಾವೋ ,ಬೇಟಿಪಡಾವೋ'ದಂತಹ ಯೋಜನೆಗಳನ್ನು ಜಾರಿ ತಂದಿರುವುದನ್ನು ನೋಡಬಹುದು. ಮಹಿಳೆಯರು ಕೂಡ ಸ್ವಉದ್ಯೋಗ ಮಾಡಲು ಅವಕಾಶ ನೀಡಿ ಸ್ವಾವಲಂಬಿಯಾಗಿ ಬದುಕಲು ಅವಕಾಶ ನೀಡಬೇಕು. ಮಹಿಳೆಯ ಸಬಲೀಕರಣಕ್ಕಾಗಿ ರಾಜಕೀಯವಾಗಿ, ಔದ್ಯೋಗಿಕವಾಗಿ, ಶೈಕ್ಷಣಿವಾಗಿ ಮಹಿಳಾ ಮೀಸಲಾತಿಯನ್ನು ಕೂಡ

ನೀಡಲಾಗಿದೆ. ತೊಟ್ಟಿಲನ್ನು ತೂಗುವ ಕೈ ಜಗತ್ತನ್ನೇ ಆಳಬಲ್ಲದು. ಆದ್ದರಿಂದ ಮಹಿಳೆಯರ ಸಬಲೀಕರಣವಾದರೆ ಜಗತ್ತು ಉದ್ಧಾರವಾದೀತು.

**ಉಪಸಂಹಾರ :** ಮಹಿಳೆಯರ ಸಶಕ್ತರಾದರೆ ದೇಶವೂ ಸಶಕ್ತವಾಗುತ್ತದೆ. ಆದ್ದರಿಂದ ಮಹಿಳೆಯರಿಗೆ ಸಬಲರಾಗಲೂ ಅವಕಾಶ ನೀಡಬೇಕು. ಒಬ್ಬ ಮಹಿಳೆಯು ಶಕ್ತಿವಂತಳಾಗಿ, ಸ್ವತಂತ್ರವಾಗಿ ತನ್ನ ಇಚ್ಚೆಯಂತೆ ಸ್ವಾವಲಂಬಿಯಾಗಿ ಬಾಳುವ ಸ್ಥಿತಿಯನ್ನು ಅವರಿಗೆ ನೀಡಿದಾಗ ಮಹಿಳಾ ಸಬಲೀಕರಣ ಸಾಧ್ಯವೆಂದು ಹೇಳಬಹುದು.

## 15. ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯಗಳ ಸಾಮಾಜಿಕ ಮಹತ್ವ

**ಪೀಠಿಕೆ :** ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸು ಇರುತ್ತದೆ ಎನ್ನುವ ಹಾಗೆ ಶಾಲಾ ಮಕ್ಕಳು ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಸದೃಢ ರಾಗಲು ಅಕ್ಷರದಾಸೋಹ ಮತ್ತು ಕ್ಷೀರಭಾಗ್ಯಗಳಂತಹ ಯೋಜನೆಗಳನ್ನು ಕೇಂದ್ರ ಮತ್ತು ರಾಜ್ಯಸರ್ಕಾರಗಳು ಜಾರಿಗೊಳಿಸಿವೆ. ಇದರಿಂದ ಶಿಕ್ಷಣ ಪಡೆಯುವ ಮಕ್ಕಳ ಆಸಕ್ತಿಗೆ ಪ್ರೇರಣೆಯಾಗಬಲ್ಲವು.

**ವಿಷಯ ನಿರೂಪಣೆ :** ಅಕ್ಷರ ದಾಸೋಹ ಎಂಬುದು ಶಾಲಾ ಮಕ್ಕಳಿಗೆ ಮಧ್ಯಾಹ್ನ ಬಿಸಿಯೂಟ ನೀಡುವ ಯೋಜನೆಯಾಗಿದೆ. ಅದೇ ರೀತಿ ಕ್ಷೀರಭಾಗ್ಯ ಎಂಬುದು ಹಾಲು ನೀಡುವ ಯೋಜನೆಯಾಗಿದೆ. ಶಿಶುವಿಹಾರದಿಂದ ಹತ್ತನೆಯ ತರಗತಿವರೆಗೆ ಓದುತ್ತಿರುವ ಸರ್ಕಾರಿ/ಅನುದಾನಿತ ಶಾಲಾ ವಿದ್ಯಾರ್ಥಿಗಳಿಗೆ ಈ ಯೋಜನೆಗಳು ಅತ್ಯಂತ ಉಪಯುಕ್ತವಾಗಿವೆ. ಗ್ರಾಮೀಣ ಭಾಗದಿಂದ ಬರುವಂತಹ ವಿದ್ಯಾರ್ಥಿಗಳು ಹೆಚ್ಚಿನದಾಗಿ ಬಡತನದಿಂದ ಬಂದವರಾಗಿರುತ್ತಾರೆ. ಅಂತಹ ಮಕ್ಕಳಿಗೆ ಮಧ್ಯಾಹ್ನ ಬಿಸಿಯೂಟ ನೀಡುವುದರಿಂದ ಅವರ ವಿದ್ಯಾಭ್ಯಾಸಕ್ಕೆ ಸಹಕಾರಿಯಾಗುತ್ತದೆ. ದೂರದ ಹಳ್ಳಿಗಳಿಂದ ಶಾಲೆಗೆ ಬರುವ ಪ್ರತಿಯೊಂದು ಮಗು ಉಪವಾಸವಿರಬಾರದು, ಅಪೌಷ್ಠಿಕತೆಯಿಂದ ಬಳಲಬಾರದು ಎಂಬುದು ಸರ್ಕಾರಗಳ ಅಭಿಲಾಷೆಯಾಗಿದೆ. ಈ ನಿಟ್ಟಿನಲ್ಲಿ ಇಂತಹ ಯೋಜನೆಗಳು ಸಹಕಾರಿಯಾಗಬಲ್ಲವು. ಶಾಲೆಯಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಚಟುವಟಿಕೆಯಿಂದ ಇರಲು ಮತ್ತು ಕಲಿಕೆಯಲ್ಲಿ ಆಸಕ್ತಿ ಹೊಂದಲು, ಪ್ರತಿನಿತ್ಯ ಶಾಲೆಗೆ ಹಾಜರಾಗುವಂತೆ ಮಾಡಲು ಉಪಯುಕ್ತ ಯೋಜನೆಗಳಾಗಿವೆ. ಮಕ್ಕಳು ಹಾಲನ್ನು ಕುಡಿಯುವದರಿಂದ ಹಲ್ಲುಗಳು, ಮೂಳೆಗಳು ಗಟ್ಟಿಯಾಗಿ ಸದೃಢದೇಹ ಹೊಂದುತ್ತಾರೆ. ಇದರ ಜೊತೆಗೆ ಮಾನಸಿಕವಾಗಿ, ಭೌದ್ಧಿಕವಾಗಿ ಬೆಳವಣಿಗೆ ಹೊಂದಲು ಸಹಕಾರಿಯಾಗುತ್ತದೆ. ಈ ಯೋಜನೆಗಳು ಬಂದ ನಂತರ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಪ್ರಮಾಣ ಹೆಚ್ಚಾಗಿ ಶಿಕ್ಷಣದ ಗುಣಮಟ್ಟ ಸುಧಾರಣೆ ಕಂಡುಬರುತ್ತಿದೆ.

**ಉಪಸಂಹಾರ :** ಆರೋಗ್ಯವಂತ ಮಕ್ಕಳು ದೇಶದ ಸಂಪತ್ತು, ಇಂತಹ ಮಕ್ಕಳು ದೇಶದ ಸಂಪತ್ತು ಆಗಬೇಕಾದರೆ ಅವರಲ್ಲಿ ಶಿಕ್ಷಣ ವೃದ್ಧಿಯಾಗಬೇಕು. ಶಿಕ್ಷಣದಲ್ಲಿ ಆಸಕ್ತಿಯಾಗಬೇಕಾದರೆ ಮಾನಸಿಕವಾಗಿ ಸದೃಢವಾಗಬೇಕು, ಮಾನಸಿಕವಾಗಿ ಸದೃಢವಾಗಬೇಕಾದರೆ ಪೌಷ್ಠಿಕತೆ ಅವಶ್ಯಕ ಅಂತಹ ಪೌಷ್ಠಿಕತೆ ದೊರೆಯಬೇಕಾದರೆ ಇಂತಹ ಯೋಜನೆಗಳು ಸಹಕಾರಿಯಾಗಿವೆ ಎಂದು ಹೇಳಬಹುದಾಗಿದೆ

## 16. ರೈತರ ಆತ್ಮಹತ್ಯೆಗೆ ಕಾರಣಗಳು ಮತ್ತು ಪರಿಹಾರೋಪಾಯಗಳು

**ಪೀಠಿಕೆ :** ರೈತ ದೇಶದ ಬೆನ್ನೆಲುಬು.ಅವನಿಲ್ಲದೆ ಯಾರೊಬ್ಬರಿಗೂ ಅನ್ನವಿಲ್ಲ.ಅವನ ದುಡಿಮೆಯೇ ನಮಗೆ ಸಹಕಾರ.ಇಂತಹ ರೈತನ ಬಾಳು ಇಂದಿನ ಕಾಲದಲ್ಲಿ ಗೋಳಾಗಿದೆ.ಇದರಿಂದ ರೈತರು ಆತ್ಮಹತ್ಯೆಯ ದಾರಿ ಹಿಡಿದಿದ್ದಾರೆ.ಇದಕ್ಕೆ ಅವಕಾಶ ಕೊಡದೆ ಅವರಲ್ಲಿ ಧೈರ್ಯವನ್ನು ತುಂಬುವಂತ ಕೆಲಸ ಮಾಡಬೇಕು.ಇಲ್ಲವಾದರೆ ನಮ್ಮ ಅನ್ನಕ್ಕೆ ಕುತ್ತು ಬಂದು ಅವರ ದಾರಿಯನ್ನು ನಾವು ಹಿಡಿಬೇಕಾದಿತು.

**ವಿಷಯ ವಿವರಣೆ :** ದೇಶದ ಗಡಿಯನ್ನು ರಕ್ಷಿಸುವವನು ಯೋಧ. ಹಾಗೆಯೇ ದೇಶಕ್ಕೆ ಅನ್ನವನ್ನು ನೀಡುವವನು ರೈತ. ಇವರಿಬ್ಬರು ದೇಶದ ಎರಡು ಕಣ್ಣುಗಳಿದ್ದಂತೆ, ಅವರಿಂದಲೇ ನಾವು ಇಂದು ದೇಶದೊಳಗೆ ಸುಖ, ಸಂತೋಷದಿಂದ ಬಾಳುತಿದ್ದೇವೆ. ಇಂತಹ ರೈತನ ಇಂದಿನ ಜೀವನ ಬಹಳ ದುಸ್ತರವಾಗಿಬಿಟ್ಟಿದೆ. ರೈತರಿಗೆ ಅವಶ್ಯವಾದ ಮಳೆ ಸರಿಯಾದ ಸಮಯಕ್ಕೆ ಬಾರದೆ ಗೋಳಾಡಿಸುತ್ತಿದೆ. ಇನ್ನೊಂದು ಕಡೆ ಬಿತ್ತಲು ಬೀಜ, ಗೊಬ್ಬರವಿಲ್ಲದೆ ಪರದಾಟ, ಮತ್ತೊಂದೆಡೆ ಇದಕ್ಕೋಸ್ಕರ ಸಾಲಮಾಡಿ ತೀರಿಸಲಾಗದೆ ನರಕಯಾತನೆ ಅನುಭವಿಸುತ್ತಿದ್ದಾರೆ. ಮತ್ತೊಂದು ಸಲ

ಮಳೆಬಂದರು ಸರಿಯಾದ ಬೆಳೆ ಬರುವುದಿಲ್ಲ, ಬೆಳೆ ಇದ್ದರೂ ಅದಕ್ಕೆ ಸರಿಯಾದ ಬೆಲೆ ದೊರೆಯದೆ ಇರುವುದು. ಮತ್ತೊಂದೆಡೆ ಬೆಳೆಗಳು ಕೀಟಬಾದೆಯಿಂದ ನಾಶವಾಗುವುದು. ಒಂದು ಸಲ ಬರಗಾಲ, ಇನ್ನೊಂದು ಸಲ ಪ್ರವಾಹ ಇದರಿಂದ ಬೆಳೆಗಳಿಲ್ಲದೆ ಅನ್ನಕ್ಕೆ ಕುತ್ತು ಬಂದಿದೆ. ಹೀಗೆ ನಾನಾ ಕಾರಣಗಳಿಂದ ಇಂದು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಇಂತಹ ರೈತರಿಗೆ ಮೊದಲು ನಾವು ಧೈರ್ಯತುಂಬಬೇಕು. ಸಹಾಯ, ಸಹಕಾರ ನೀಡಬೇಕು. ಸ್ಥಾಪಿತ ಸರ್ಕಾರಗಳು ರೈತರಿಗೆ ಅವಶ್ಯವಾದ ಯೋಜನೆಗಳನ್ನು ಜಾರಿಗೊಳಿಸಬೇಕು. ಬೆಳೆವಿಮೆಯನ್ನು ಸರಿಯಾದ ರೀತಿಯಲ್ಲಿ ಹಂಚಬೇಕು. ಸಾಲವಸೂಲಾತಿಯನ್ನು ಮುಂದೂಡಬೇಕು.ರೈತರಿಗೆ ಅವಶ್ಯವಾದ ಬೀಜಗೊಬ್ಬರ, ಔಷಧ, ಕೃಷಿಸಂಬಂಧಿತ ಸಲಕರಣೆಗಳನ್ನು ಯೋಗ್ಯಬೆಲೆಯಲ್ಲಿ ಸಿಗುವಂತೆ ಮಾಡಬೇಕು.ಬೆಳೆಗಳಿಗೆ ಸರಿಯಾದ ಮಾರುಕಟ್ಟೆ,ಬೆಲೆಯನ್ನು ಒದಗಿಸಬೇಕು. ವೈಜ್ಞಾನಿಕವಾಗಿ ಕೃಷಿಚಟುವಟಿಕೆಗಳನ್ನು ಕೈಗೊಳ್ಳುವ ತರಬೇತಿ ನೀಡಬೇಕು. ಹೀಗಾದಲ್ಲಿ ನಾವು ರೈತರ ಆತ್ಮಹತ್ಯೆಗಳನ್ನು ತಡೆಗಟ್ಟಬಹುದು.

**ಉಪಸಂಹಾರ :** ಭಾರತದಂತಹ ಕೃಷಿ ಪ್ರಧಾನವಾದ ರಾಷ್ಟ್ರದಲ್ಲಿ ಇಂದಿನ ರೈತರ ಜೀವನ ಅಯೋಮಯವಾಗಿಬಿಟ್ಟಿದೆ. ನಾನಾ ಕೃಷಿ ಸಂಬಂಧಿತ ಕಾರಣಗಳಿಂದ ತನ್ನ ಜೀವವನ್ನೆ ತ್ಯಾಗಮಾಡುತ್ತಿದ್ದಾನೆ. ನಮ್ಮ ದೇಶದ ಬಲಗಳಲ್ಲಿ ಒಂದಾದ ರೈತ ಬಲವನ್ನು ಹೆಚ್ಚಿಸಬೇಕಾಗಿದೆ. ಅವನ ಜೀವನವನ್ನು ಸುಧಾರಿಸಬೇಕಾಗಿದೆ. ದೇಶದ ನಿಜವಾದ ಶಕ್ತಿ ರೈತರ ಕೈಯಲ್ಲಿದೆ ಎಂಬುದನ್ನು ಮರೆಯಬಾರದು. ಸರ್ಕಾರಗಳು ಅವರನ್ನು ಉತ್ತಮ ರೀತಿಯಲ್ಲಿ ಕಾಣಬೇಕು ಹಾಗೆಯೇ ರೈತರು ಏನೇ ಕಷ್ಟ ಬಂದರೂ ಎದೆಗುಂದದೆ ಜೀವನವನ್ನು ಸಾಗಿಸಬೇಕೆಂದು ನಮ್ಮೆಲ್ಲರ ಆಶಯವಾಗಬೇಕು.

## 17. ರಾಷ್ಟ್ರೀಯ ಹಬ್ಬಗಳ ಆಚರಣೆ ಮತ್ತು ಮಹತ್ವ ಅಥವಾ ಭಾವೈಕ್ಯತೆಯನ್ನು ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳ ಪಾತ್ರ

**ಪೀಠಿಕೆ :** ಒಂದು ದೇಶದ ಐಕ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ರಾಷ್ಟ್ರೀಯ ಹಬ್ಬಗಳು ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ. ಭಾರತದಂತಹ ವೈವಿಧ್ಯತೆಯುಳ್ಳ ರಾಷ್ಟ್ರಗಳಲ್ಲಿ ಏಕತೆಯನ್ನು ತರುವುದು ಇಂತಹ ರಾಷ್ಟ್ರೀಯ ಹಬ್ಬಗಳ ಮೂಲಕ ಸಾಧ್ಯವಿದೆ. ಇಡಿ ರಾಷ್ಟ್ರದ ಜನರೆಲ್ಲರೂ ಯಾವುದೇ ಭೇಧಭಾವವಿಲ್ಲದೆ, ಜಾತಿ, ಧರ್ಮ, ಪ್ರಾದೇಶಿಕ ಭಿನ್ನತೆಯನ್ನು ತೊರೆದು ಒಟ್ಟಾಗಿ ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು ಎಂದು ಕರೆಯಬಹುದು. ನಮ್ಮ ದೇಶದಲ್ಲಿ ಮೂರು ರಾಷ್ಟ್ರೀಯ ಹಬ್ಬಗಳೆಂದು ಘೋಷಿಸಲಾಗಿದೆ. ಅವುಗಳೆಂದರೆ

1) ಸ್ವಾತಂತ್ರ್ಯ ದಿನಾಚರಣೆ

2) ಗಣರಾಜ್ಯೋತ್ಸವ

3) ಗಾಂಧಿ ಜಯಂತಿ.

**ವಿಷಯ ವಿವರಣೆ :**

**1) ಸ್ವಾತಂತ್ರ್ಯ ದಿನಾಚರಣೆ:** ಭಾರತ ಸುಮಾರು ಎರಡು ನೂರು ವರ್ಷಗಳ ಕಾಲ ಬ್ರಿಟೀಷರ ಆಳ್ವಿಕೆಗೆ ಒಳಪಟ್ಟಿತ್ತು.ವ್ಯಾಪಾರದ ಉದ್ದೇಶದಿಂದ ಬಂದ ಬ್ರಿಟೀಷರು ಭಾರತೀಯ ಅರಸರುಗಳು ದೌರ್ಬಲ್ಯಗಳನ್ನು ಉಪಯೋಗಿಸಿಕೊಂಡು ಭಾರತ ದೇಶದ ಆಡಳಿತ ಚುಕ್ಕಾಣಿ ಹಿಡಿದಿದ್ದರು. ಭಾರತೀಯರಿಗೆ ಸ್ವಾತಂತ್ರ್ಯ ಎನ್ನುವುದೇ ಇರಲಿಲ್ಲ. ಹಾಗಾಗಿ ಭಾರತೀಯರೆಲ್ಲರೂ ಒಟ್ಟಾಗಿ ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯ ಹೋರಾಟದ ರಣಕಹಳೆಯನ್ನು ಊದಿ ಕೊನೆಗೆ 1947 ನೇ ಆಗಸ್ಟ್ 15 ರಂದು ಸ್ವಾತಂತ್ರ್ಯವನ್ನು ಪಡೆದರು.ಆ ದಿನವನ್ನು ಪ್ರತಿವರ್ಷ ಭಾರತೀಯರೆಲ್ಲರೂ ಒಟ್ಟಾಗಿ ರಾಷ್ಟ್ರೀಯ ಹಬ್ಬವನ್ನಾಗಿ ಆಚರಿಸಿ ರಾಷ್ಟ್ರೀಯ ಐಕ್ಯತೆಯನ್ನು ಮೆರೆಯುತ್ತಾರೆ. ಅಂದು ಶಾಲಾ–ಕಾಲೇಜು–ಕಛೇರಿಗಳಲ್ಲಿ ರಾಷ್ಟ್ರೀಯ ಧ್ವಜವನ್ನು ಹಾರಿಸಿ ದೇಶಭಕ್ತಿ ಸಾರುವ ಕಾರ್ಯಕ್ರಮಗಳನ್ನು ಆಚರಿಸಿ ಒಗ್ಗಟ್ಟನ್ನು ಪ್ರದರ್ಶಿಸುತ್ತಾರೆ.

**2) ಗಣರಾಜ್ಯೋತ್ಸವ :** ಭಾರತದೇಶವು ಸ್ವಾತಂತ್ರ್ಯವನ್ನು ಪಡೆದ ನಂತರ ಆಡಳಿತದ ರೂಪುರೇಷಗಳನ್ನು ಸಿದ್ಧಪಡಿಸಲಾಗುತ್ತದೆ. ಆ ರೂಪುರೇಷಗಳನ್ನು ಒಳಗೊಂಡಿರುವುದೇ ನಮ್ಮ ಸಂವಿಧಾನ. ಎಲ್ಲ ರಾಜ್ಯಗಳನ್ನು ಗಣಗಳನ್ನಾಗಿ ಮಾಡಿ (ಒಟ್ಟುಗೂಡಿಸಿ) ಉತ್ತಮವಾದ ಆಡಳಿತ ನಡೆಸಲು ಕಾನೂನುರೂಪ ಪಡೆದ ಸಂವಿಧಾನವನ್ನು

ಜಾರಿಗೆ ತಂದ ದಿನವೇ ಗಣರಾಜ್ಯ ದಿನ. ಇದನ್ನು ಕೂಡ ನಮ್ಮ ದೇಶದ ಪ್ರಜೆಗಳೆಲ್ಲರೂ ಒಟ್ಟಾಗಿ ಸೇರಿ ಆಚರಿಸುತ್ತಾರೆ.ಈ ದಿನದಲ್ಲಿ ರಾಷ್ಟ್ರಧ್ವಜವನ್ನು ಆರಿಸಿ ಸಂವಿಧಾನದ ನಿರ್ಮಾತೃಗಳು ಹಾಗೂ ತತ್ವಗಳನ್ನು ಸ್ಮರಿಸಿಕೊಳ್ಳುತ್ತಾರೆ. ಪ್ರತಿಯೊಬ್ಬರು ಸಂವಿಧಾನ ಪಾಲಿಸುವ ಮನೋಧರ್ಮವನ್ನು ಬೆಳೆಸಿಕೊಳ್ಳುವ ಆಶಯವನ್ನು ಪಡೆಯುತ್ತಾರೆ. ಹಾಗೆಯೇ ದೇಶಭಕ್ತಿ ಸಾರುವ ಕಾರ್ಯಕ್ರಮಗಳನ್ನು ಆಚರಿಸಿ ಒಗ್ಗಟ್ಟನ್ನು ಪ್ರದರ್ಶಿಸುತ್ತಾರೆ.

**3) ಗಾಂಧಿ ಜಯಂತಿ :** ಯಾವುದೇ ಒಂದು ದೇಶದ ಜನರೆಲ್ಲರೂ ಒಟ್ಟಾಗಿ ಸೇರಲು ನಾಯಕತ್ವ ಬೇಕು. "ನಾಯಕರಿಲ್ಲದ ನಾವೆ ದಡಸೇರಲಾರದು" ಅಂತೆಯೇ ನಮ್ಮ ದೇಶದ ಸ್ವಾತಂತ್ರ್ಯ ಪಡೆಯಲು ಬಹುಮುಖ್ಯ ನಾಯಕತ್ವವಹಿಕೊಂಡವರು ನಮ್ಮ ದೇಶದ ರಾಷ್ಟ್ರಪಿತ ಎನಿಸಿಕೊಂಡ ಮಹಾತ್ಮ ಗಾಂಧೀಜಿಯವರು. ಅವರು ಹುಟ್ಟಿದ ದಿನವೇ ಅಕ್ಟೋಬರ್ 2. ಆ ದಿನವನ್ನು ಗಾಂಧಿಜಯಂತಿಯೆಂದು ರಾಷ್ಟ್ರೀಯ ಹಬ್ಬವನ್ನಾಗಿ ಆಚರಿಸಲಾಗುತ್ತದೆ. ಏಕೆಂದರೆ ಗಾಂಧೀಜಿಯವರು ಸ್ವಾತಂತ್ರ್ಯ ಚಳುವಳಿಯ ಮುಂದಾಳತ್ವವನ್ನು ವಹಿಸಿಕೊಂಡು ಸ್ವಾತಂತ್ರ್ಯವನ್ನು ತಂದುಕೊಡುವಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡರು. ಆದ್ದರಿಂದ ಅವರ ಆದರ್ಶಗಳನ್ನು ನೆನೆಯುತ್ತ, ಅವರನ್ನು ಸ್ಮರಿಸುತ್ತಾ ಸ್ವಾತಂತ್ರ್ಯದ ಮಹತ್ವದಬಗ್ಗೆ ಕೊಂಡಾಡುವ ದಿನವಾಗಿದೆ.

**ಉಪಸಂಹಾರ :** ಭಾರತದಲ್ಲಿ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವುದರಿಂದ ಪ್ರತಿಯೊಬ್ಬ ನಾಗರಿಕರಲ್ಲಿ ಏಕತೆ. ದೇಶಭಕ್ತಿ, ಸಂವಿಧಾನದ ಮಹತ್ವ, ನಾಯಕತ್ವದ ಮಹತ್ವ ಮುಂತಾದ ವಿಚಾರಗಳನ್ನು ತಿಳಿಯಲು ಮತ್ತು ನಾವು ಅದೇ ರೀತಿ ನಡೆದುಕೊಳ್ಳಲು ನೆರವಾಗುತ್ತದೆ ಎಂಬ ಆಶಯವನ್ನು ಇಟ್ಟುಕೊಳ್ಳೋಣ.

## 18. ರಾಷ್ಟ್ರೀಯ ಭಾವೈಕ್ಯತೆ

**ಪೀಠಿಕೆ:** ಜನರು ವಾಸಮಾಡುತ್ತಿರುವ ಒಂದು ನಿರ್ಧಿಷ್ಟವಾದ ಭೌಗೋಳಿಕ ಪ್ರದೇಶವನ್ನು ದೇಶ ಎಂದು ಕರೆಯಬಹುದು. ಎಲ್ಲ ಜನರು ತಾವೆಲ್ಲ ಒಂದೇ ಎಂಬ ಭಾವನೆಗಳನ್ನು ಹೊಂದುವುದು ಐಕ್ಯತೆ. ಅದೇ ರೀತಿ ದೇಶದಲ್ಲಿ ವಾಸಿಸುತ್ತಿರುವ ಜನರೆಲ್ಲರು ತಮ್ಮ ಧರ್ಮ, ಜಾತಿ, ಕುಲ, ಭಾಷೆಗಳನ್ನು ಬದಿಗೊತ್ತಿ ಒಂದೇ ಕುಟುಂಬದ ಸದಸ್ಯರಂತೆ ವಾಸಮಾಡುವುದನ್ನು ರಾಷ್ಟ್ರೀಯ ಭಾವೈಕ್ಯತೆ ಎಂದು ಕರೆಯಬಹುದು. ಭಾರತದಂತಹ ವೈವಿಧ್ಯತೆಗಳಿಂದ ಕೂಡಿರುವ ರಾಷ್ಟ್ರದಲ್ಲಿ ಏಕತೆಯನ್ನು ಸಾಧಿಸುವುದು ಬಹಳ ಮುಖ್ಯವೆನಿಸುತ್ತದೆ.

**ವಿಷಯ ವಿವರಣೆ:** "ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರಿಯಸಿ" ಎಂಬ ಮಾತಿನಂತೆ ಹೆತ್ತತಾಯಿ ಹೊತ್ತಭೂಮಿಯು ಸ್ವರ್ಗವಿದ್ದಂತೆ.ಇಂತಹ ಹೊತ್ತ ಭೂಮಿಯಲ್ಲಿ ವಾಸಿಸುವ ನಾವೆಲ್ಲರೂ ಒಂದೇ ತಾಯಿಯ ಮಕ್ಕಳಂತೆ ಇದ್ದೇವೆ. ರಾಷ್ಟ್ರದ ಐಕ್ಯತೆಗೆ ರಾಷ್ಟ್ರೀಯ ಭಾವನೆಯೂ ಅಗತ್ಯವಾದದು. ಭಾರತ ಸರ್ವಧರ್ಮಗಳ ನೆಲೆಬೀಡು, ಇಲ್ಲಿ ವಿವಿಧ ಜಾತಿ, ಮತ, ಪಂಥ, ಭಾಷೆ, ಸಂಸ್ಕೃತಿಯ ಜನರು ಇದ್ದಾರೆ. ಇಂತಹ ವೈವಿಧ್ಯತೆಯಿಂದ ಕೂಡಿರುವ ಜನರಲ್ಲಿ ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳು, ರಾಷ್ಟ್ರಧ್ವಜ, ರಾಷ್ಟ್ರಲಾಂಛನ, ರಾಷ್ಟ್ರಗೀತೆಗಳು ಪ್ರಮುಖಪಾತ್ರವನ್ನು ವಹಿಸುತ್ತವೆ, ಭಾರತದ ಪ್ರತಿಯೊಬ್ಬ ಪ್ರಜೆಯು ತನ್ನ ಸಂಕೀರ್ಣತೆಯನ್ನು ತೊರೆದು ಆಚರಿಸುವ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಗಾಂಧಿಜಯಂತಿಗಳನ್ನು ಸಾಮೂಹಿಕವಾಗಿ ಆಚರಿಸಿದಾಗ ಐಕ್ಯತೆಯನ್ನು ಸಾಧಿಸಬಹುದು. ರಾಷ್ಟ್ರಗೀತೆ, ರಾಷ್ಟ್ರಧ್ವಜಕ್ಕೆ ಗೌರವವನ್ನು ನೀಡುವುದು, ರಾಷ್ಟ್ರನಾಯಕರ ಉತ್ತಮ ಆದರ್ಶಗಳನ್ನು ಬೆಳೆಸಿಕೊಳ್ಳುವುದು, ರಾಷ್ಟ್ರಕ್ಕೆ ಧಕ್ಕೆಯುಂಟಾದಾಗ ದೇಶದ ಎಲ್ಲ ಪ್ರಜೆಗಳು ಪರಸ್ಪರ ಸಹಾಯ ಸಹಕಾರದಿಂದ

ನಡೆದುಕೊಂಡರೆ ರಾಷ್ಟ್ರೀಯ ಭಾವೈಕ್ಯತೆಯನ್ನು ಸಾರಬಹುದಾಗಿದೆ. ಅಲ್ಲದೆ ರಾಷ್ಟ್ರಮಟ್ಟದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಕೂಡ ರಾಷ್ಟ್ರೀಯ ಭಾವೈಕ್ಯತೆಯನ್ನು ತರಬಲ್ಲವು.

**ಉಪಸಂಹಾರ:** ಎಲ್ಲರೂ ಎಲ್ಲರಿಗಾಗಿ ಎಂಬ ಮಂತ್ರ ದಿಂದ, ಕಣ್ಣು ಬೇರೆಯಾದರೂ ನೋಟ ಒಂದೇ, ಭಾಷೆ ಬೇರೆಯಾದರೂ ಭಾವ ಒಂದೇ ಜಾತಿ.ಕುಲ. ಮತ, ಧರ್ಮ ಬೇರೆ ಬೇರೆಯಾದರೂ ಬಾಳುವ ದೇಶ ಒಂದೆಯಾಗಿದೆ ಎಂದ ಮೇಲೆ ನಾವೆಲ್ಲಾ ಒಂದೆ ತೊಟ್ಟಿಲಲ್ಲಿ ಬೆಳೆವ ಜನರು ನಾವು ಭಾರತೀಯರು ಐಕ್ಯತೆಯ ಮಂತ್ರ ಪಠಿಸುವವರಾಗಬೇಂಬುದು ನಮ್ಮ ನಿಮ್ಮೆಲ್ಲರ ಆಶಯವಾಗಬೇಕಿದೆ.

## 19. ಸಮೂಹ ಮಾಧ್ಯಮಗಳು

**ಪೀಠಿಕೆ:** ಆಧುನಿಕ ಯುಗದಲ್ಲಿ ಸಮೂಹ ಮಾಧ್ಯಮಗಳು ಬಹಳ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಒಂದು ಸ್ಥಳದಲ್ಲಿಯ ವಿಚಾರಗಳನ್ನು ಮತ್ತೊಂದು ಸ್ಥಳದ ಜನರಿಗೆ ತಿಳಿಸುವ ಮಾಧ್ಯಮಗಳು ಸಮೂಹ ಮಾಧ್ಯಮಗಳು. ಸಮೂಹ ಮಾಧ್ಯಮಗಳು ಇಡೀ ವಿಶ್ವವನ್ನು ಒಂದುಗೂಡಿಸಿವೆ. ಪ್ರಪಂಪದ ಯಾವುದೇ ಮೂಲೆಯಲ್ಲಿ ಏನೇ ಘಟನೆ ನಡೆದರೂ ತತಕ್ಷಣವಾಗಿ ಇಡೀ ವಿಶ್ವದ ಜನರಿಗೆ ಮುಟ್ಟಿಸುವಷ್ಟು ಸಾಮರ್ಥವನ್ನು ಇಂದಿನ ಸಮೂಹ ಮಾಧ್ಯಮಗಳು ಬೆಳೆಸಿಕೊಂಡಿವೆ.

**ವಿಷಯ ವಿವರಣೆ:** ಸಾಮಾನ್ಯವಾಗಿ ಒಂದು ವಿಷಯವನ್ನು ಜನರಿಗೆ ತಲುಪಿಸುವ ದೂರದರ್ಶನ, ರೇಡಿಯೋ, ವೃತ್ತಪತ್ರಿಕೆಗಳು, ಅಂತರ್ಜಾಲದಂತಹ ಮೊದಲಾದ ಸಂಪರ್ಕ ಸಾಧನಗಳನ್ನು ಸಮೂಹ ಮಾಧ್ಯಮಗಳು ಎಂದು ಕರೆಯಲಾಗುತ್ತದೆ. ಸುದ್ಧಿ ಮಾಹಿತಿಯ ವರ್ಗಾವಣೆ ಅವಶ್ಯತೆ ಇದ್ದೇ ಇದೆ. ಒಬ್ಬರಿಗೆ ತಿಳಿದಿರುವ ಮಾಹಿತಿ ಘಟನೆಯ ಬಗ್ಗೆ ತಿಳುವಳಿಕೆ, ಚಿಂತನ-ಸುದ್ಧಿ-ಸಮಾಚಾರವಾರ್ತೆವರಧಿ ಮುಂತಾದವುಗಳನ್ನು ಸಮೂಹ ಮಾಧ್ಯಮಗಳಲ್ಲಿ ನೋಡಬಹುದು. ಸಮೂಹ ಮಾಧ್ಯಮಗಳನ್ನು ಪ್ರಜಾಪ್ರಭುತ್ವದ ನಾಲ್ಕನೆಯ ಅಂಗವೆಂದು ಕರೆಯಲಾಗುತ್ತದೆ. ನಮ್ಮ ಜನರಿಗೆ ಅವಶ್ಯವಾದ ವಿಷಯಗಳನ್ನು ಮುಟ್ಟಿಸುವಲ್ಲಿ ಹಾಗೂ ಸಮಾಜವನ್ನು ಸರಿದಾರಿಗೆ ತರುವಲ್ಲಿ ಶ್ರಮಿಸುತ್ತಿವೆ. ಇಂದಿನ ಮಾಧ್ಯಮಗಳು ಮನೋರಂಜನೆಯ ಜೊತೆಗೆ ಕ್ರೀಡೆ, ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿ ಮುಂತಾದ ವಿಷಯಗಳನ್ನು , ವಿಶ್ವದ ಇತರ ಸುದ್ಧಿಸಮಾಚಾರಗಳನ್ನು ತಿಳಿಸುತ್ತಿವೆ. ಶೈಕ್ಷಣಿಕ ಕ್ಷೇತ್ರದಲ್ಲಿ ಸಮೂಹ ಮಾಧ್ಯಮಗಳು ಜ್ಞಾನವಿಕಾಸಕ್ಕೂ ಕೂಡ ಸಹಕಾರಿ ಆಗಿವೆ. ಹಾಗೆಯೇ ಸಮೂಹ ಮಾಧ್ಯಮಗಳಿಂದ ಸಾಕಷ್ಟು ದುಷ್ಪರಿಣಾಮಗಳು ಇವೆ. ಎಂಬುದನ್ನು ವಿದ್ಯಾರ್ಥಿಗಳು ತಿಳಿಯಬೇಕಾಗಿದೆ. ವಿದ್ಯಾರ್ಥಿಗಳು ಅವಶ್ಯವಾದ ವಿಚಾರಗಳನ್ನು ಮಾತ್ರ ಆಯ್ದು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದು. ವಿಜ್ಞಾನದ ಆವಿಷ್ಕಾರದಿಂದ ಮೊಬೈಲ್ (ವಾಟ್ಸಪ್, ಈಮೇಲ್, ಹೈಕ್ ಗ್ರೂಪ್) ನಂತಹ ಮತ್ತೊಷ್ಟು ಸಮೂಹ ಮಾಧ್ಯಮಗಳು ಹುಟ್ಟಿಕೊಂಡು ವಿಚಾರ ವಿನಮಯಕ್ಕೆ ಸಹಕಾರಿಯಾಗಿವೆ.

**ಉಪಸಂಹಾರ:** ಒಟ್ಟಾರೆಯಾಗಿ ಸಮೂಹ ಮಾಧ್ಯಮಗಳಿಂದ ಇಡೀ ವಿಶ್ವವೇ ಸಾಕಷ್ಟು ವಿಚಾರಗಳನ್ನು ಕ್ಷಣಮಾತ್ರದಲ್ಲಿ ನೋಡಬಹುದಾಗಿದೆ. ಪ್ರತಿಯೊಂದು ಮಾಧ್ಯಮಗಳು ಸಮಾಜವನ್ನು ಸರಿದಾರಿಗೆ ತರುವ ಸುಖಿ ಸಮಾಜ ನಿರ್ಮಾಣ ಕಾರ್ಯದಲ್ಲಿ ತೊಡಗಬೇಕೆಂಬುದೇ ಎಲ್ಲರ ಆಶಯವಾಗಿದೆ.

## 20. ಮೂಢನಂಬಿಕೆಗಳು

**ಪೀಠಿಕೆ:** ಮಾನವ ಸಂಘ ಜೀವಿ, ಅವನು ಸಮಾಜದಲ್ಲಿ ವಾಸಿಸುವಾಗ ಕೆಲವು ನಂಬಿಕೆಗಳನ್ನು ಇಟ್ಟುಕೊಂಡಿರುತ್ತಾನೆ. ಅದೇ ರೀತಿ ಕೆಲವು ಮೂಢನಂಬಿಕೆಗಳನ್ನು ಅನುಸರಿಸುತ್ತಾನೆ. ಮೂಢನಂಬಿಕೆಗಳನ್ನು ಎಲ್ಲಾ ದೇಶದ ಎಲ್ಲಾ ಜನಾಂಗದವರಲ್ಲಿ ಕೂಡ ಕಾಣಬಹುದು. ಮೂಢನಂಬಿಕೆಗಳಿಂದ ನಮ್ಮ ಸಮಾಜಕ್ಕೆ ಯಾವುದೇ ಪ್ರಯೋಜನವಿಲ್ಲ. ಹಾನಿಕಾರವೇ ಹೆಚ್ಚು.

**ವಿಷಯ ವಿವರಣೆ:** ವೈಜ್ಞಾನಿಕವಲ್ಲದ ಕೇವಲ ನಂಬಿಕೆ ಮಾತ್ರದಿಂದಲೇ ಅನುಸರಿಸುವ ಅಸಂಪ್ರದಾಯಕ ಆಚರಣೆಗಳನ್ನು ಮೂಢನಂಬಿಕೆಗಳೆಂದು ಕರೆಯಲಾಗಿದೆ. ಅಂದರೆ ಯಾವ ನಂಬಿಕೆಗಳಲ್ಲಿ ಮೌಢ್ಯತೆ ತುಂಬಿರುತ್ತದೆಯೋ ಅವೇ ಮೂಢನಂಬಿಕೆಗಳು ಎನಿಸಿಕೊಳ್ಳುತ್ತವೆ, ಗ್ರಹಣ ನಂಬುವುದು, ವಿಧವೆತನ, ದೃಷ್ಟಿತೆಗೆಯುವುದು, ನಿವಾಳಿಯೆತ್ತುವುದು, ಬಲಿದಾನ, ಹರಕೆ, ದೇವದಾಸಿ ಪದ್ಧತಿ, ಭೂತಬಿಡಿಸುವುದು, ಭೂತರಾಧನೆ, ಬೆಕ್ಕು ಅಡ್ಡಹೋದರೆ ಕೆಟ್ಟದ್ದು ಎಂದು ನಂಬುವುದು, ಮಾಟಮಂತ್ರಗಳು, ವಶೀಕರಣ ಮುಂತಾದ ಅವೈಜ್ಞಾನಿಕ ನಂಬಿಕೆಗಳು ಹರಡಿಕೊಂಡಿವೆ. ಕೆಲವೊಂದು ಅತ್ಯಂತ ಅಮಾನವೀಯವಾದ ಪದ್ಧತಿಗಳು ಕೂಡ ಇವೆ. ಅನಕ್ಷರಸ್ಥರು ಇಂತಹ ಮೂಢನಂಬಿಕೆಗಳನ್ನು ನಂಬುವುದು ಹೆಚ್ಚು. ಎಚ್. ನರಸಿಂಹಯ್ಯನವರು ಹೇಳುವಂತೆ "ಮೂಢನಂಬಿಕೆಗಳನ್ನು ನಂಬುವ ಅವಿದ್ಯಾವಂತನಿಗಿಂತ ಮೂಢನಂಬಿಕೆಗಳನ್ನು ಪ್ರತಿಪಾದಿಸುವ ವಿದ್ಯಾವಂತನು ಸಮಾಜಕ್ಕೆ ಬಹಳ ಅಪಾಯಕಾರಿ. ಶಿಕ್ಷಣವೆತ್ತರು ಮೂಢನಂಬಿಕೆಗಳ ಬಗ್ಗೆ ತಳೆಯುವ ನಿಷ್ಕ್ರಿಯತೆ ತುಂಬಾ ಹಾನಿಯುಂಟುಮಾಡುತ್ತದೆ. ಭಯ, ಅಜ್ಞಾನಗಳಿಂದ ತುಂಬಿರುವ ಮೂಢನಂಬಿಕೆಗಳು ಆತ್ಮವಿಶ್ವಾಸವನ್ನು, ಸ್ವತಂತ್ರ ಆಲೋಚನೆಗಳನ್ನು ಮೊಟಕುಗೊಳಿಸುತ್ತವೆ. ಇವುಗಳು ದೇಶದ ಪ್ರಗತಿಗೆ ವಿರೋಧವಾಗಿದ್ದು ಸಮಾಜಕ್ಕೆ

ಅಘಾತವನ್ನುಂಟು ಮಾಡುತ್ತವೆ." ಆದ್ದರಿಂದ ಪ್ರತಿಯೊಬ್ಬರು ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಂಡು ಮೂಢನಂಬಿಕೆಗಳ ಹಾನಿಯ ಬಗ್ಗೆ ತಿಳಿಯಬೇಕು ಮತ್ತು ತಿಳಿಸಬೇಕು.

**ಉಪಸಂಹಾರ :** ವಿಜ್ಞಾನ ಮತ್ತು ಅದರ ಸಂಶೋಧನೆಯಿಂದ ಮೂಢನಂಬಿಕೆಗಳ ಬಗ್ಗೆ ಸಮಾಜಕ್ಕೆ ಸಾಕಷ್ಟು ಅರಿವು ಮೂಡಿಸುವುದರ ಮೂಲಕ, ವಿವಿಧ ಸಭೆ , ಸಮ್ಮೇಳನಗಳಲ್ಲಿ ಪ್ರಚಾರಗೊಳಿಸುವ ಮೂಲಕ ಮತ್ತು ಚರ್ಚಿಸುವುದರ ಮೂಲಕ ತಡೆಗಟ್ಟಬಹುದಾಗಿದೆ. ಸಮಾಜದಲ್ಲಿ ಬೇರೂರಿರುವ ಪ್ರತಿಯೊಂದು ಮೂಢನಂಬಿಕೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಅದರಿಂದ ಆಗುವ ಅನಾಹುತ, ನಷ್ಟವನ್ನು ತಪ್ಪಿಸಿಕೊಳ್ಳುವ ಮನೋಭಾವವನ್ನು ಎಲ್ಲರೂ ಬೆಳೆಸಿಕೊಳ್ಳಬೇಕೆಂಬುದೆ ನಮ್ಮ ಆಶಯವಾಗಬೇಕು.

## 21. ಭಯೋತ್ಪಾದನೆ

**ಪೀಠಿಕೆ :** 21 ನೇ ಶತಮಾನದ ಜಗತ್ತು ಎದುರಿಸುತ್ತಿರುವ ಅತ್ಯಂತ ಪ್ರಮುಖ ಸಮಸ್ಯೆಗಳಲ್ಲಿ ಭಯೋತ್ಪಾದನೆ ಎನ್ನುವಂತಹದ್ದು ಒಂದು. ಆಧುನಿಕ ಜಗತ್ತಿಗೆ ಅಂಟಿಕೊಂಡಿರುವ ಒಂದು ಶಾಪವಾಗಿದೆ. ವಿಶ್ವಶಾಂತಿಗೆ ಧಕ್ಕೆಯನ್ನುಂಟು ಮಾಡುವ ಹೇಯ ಕೃತ್ಯವಾಗಿದೆ. ವಿಷಯ

**ವಿಷಯ ವಿವರಣೆ :** Terrorism(ಟೆರರಿಸಂ) ಎನ್ನವ ಪದ ಲ್ಯಾಟಿನ್ ಭಾಷೆಯ Terre(ಟೆರ್ರೆ)ಎಂಬ ಪದದಿಂದ ಹುಟ್ಟಿದ್ದು ಭಯಪಡಿಸು, ನಡುಗಿಸು ಎಂದರ್ಥ. ಅಂದರೆ ಭಯವನ್ನು ಹುಟ್ಟಿಸುವುದು. ಭಯೋತ್ಪಾದನೆ ಎಂದರೆ ಹಿಂಸಾತ್ಮಕ ಕೃತ್ಯಗಳ ಮೂಲಕ ಜನರಲ್ಲಿ ಭಯವನ್ನು ಉತ್ಪಾದನೆ ಮಾಡುವುದು. ಕೆಲವು ವ್ಯಕ್ತಿಗಳು ಅಥವಾ ಗುಂಪುಗಳು ಜನರಲ್ಲಿ ಹಿಂಸಾತ್ಮಕ ತಂತ್ರ ಮತ್ತು ನಿರಂತರ ದಾಳಿಯ ಮೂಲಕ ಜನರನ್ನು ಬೆದರಿಸುವುದು, ಭಯಪಡಿಸುವುದಾಗಿದೆ. 17ನೇ ಶತಮಾನದ ಪ್ರಾನ್ಸ ಕ್ರಾಂತಿಯ ಸಂದರ್ಭದಲ್ಲಿ ಜಾಕೋಬಿನ ಆಡಳಿತದ ಅವಧಿಯಲ್ಲಿ ಸುಮಾರು 40 ಸಾವಿರ ಜನರನ್ನು ಕೊಲ್ಲಲಾಗಿತ್ತು. ಆ ಸಂದರ್ಭದಲ್ಲಿಯೆ ಭಯೋತ್ಪಾದನೆ ಎಂಬ ಶಬ್ದ ಚಾಲ್ತಿಗೆ ಬಂದಿತು. ಇಂದು ವಿಶ್ವದಾದ್ಯಂತ ತನ್ನ ಕರಬಂಧ ಬಾಹುಗಳನ್ನು ಚಾಚುತ್ತಿದೆ. ಭಯೋತ್ಪಾದನೆಗೆ ಅನೇಕ ಕಾರಣಗಳಿವೆ. ಹೆಚು ್ಚತ್ತಿರುವ ಜನಸಂಖ್ಯೆ, ಬಡತನ, ಜನಾಂಗೀಯ ಸಂಘರ್ಷ, ಧರ್ಮಗಳ ಪ್ರತಿಷ್ಠೆ, ಮೂಲಭೂತವಾದ ಗುಂಪುಗಳ ಸಂಘರ್ಷ, ಪ್ರಾದೇಶಿಕ ಅಸಮತೋಲನ, ಯುದ್ಧ ಸಂಘರ್ಷಗಳು, ನಿರುದ್ಯೋಗ, ಇತ್ಯಾದಿ ಹೆಸರಿಸಬಹುದು. ಐಸಿಸ್, ಮುಜಾಹಿದ್ದಿನ್, ಎಲ್‌ಟಿಟಿಇ, ತಾಲಿಬಾನ್ ನಂತಹ ಸಂಘಟನೆಗಳು ಭಯೋತ್ಪಾದನೆ ಯಲ್ಲಿ ತೊಡಗಿಕೊಂಡಿವೆ. ಅಮೇರಿಕಾ, ಭಾರತ. ಪ್ರಾನ್ಸ್, ಪಾಕಿಸ್ತಾನ, ಅಫ್ಘಾನಿಸ್ತಾನ, ಇಂಗ್ಲೆಂಡ್, ರಷ್ಯಾ ಮುಂತಾದ ದೇಶಗಳು ಭಯೋತ್ಪಾದನಾ ಪಿಡುಗಿಗೆ ಸಿಲುಕಿಕೊಂಡ ಪ್ರಮುಖ ರಾಷ್ಟ್ರಗಳಾಗಿವೆ.

**ಉಪಸಂಹಾರ:** ಆಧುನಿಕ ಜಗತ್ತಿಗೆ ಅಂಟಿಕೊಂಡಿರುವ ಭಯೋತ್ಪಾದನೆಯಂತಹ ಶಾಪವನ್ನು ತೊಡೆದು ಹಾಕಲು ಇಡೀ ವಿಶ್ವ ಸಮುದಾಯವೇ ಒಂದಾಗಬೇಕು. ಇಲ್ಲವಾದರೆ ವಿಶ್ವಶಾಂತಿಗೆ ಧಕ್ಕೆಯನ್ನುಂಟು ಮಾಡಿ, ಸಮಾಜದ ನೀತಿನಿಯಮಗನ್ನು ಧಿಕ್ಕರಿಸಿ ವ್ಯವಸ್ಥೆಯನ್ನೆ ಬುಡಮೇಲು ಮಾಡಬಹುದು. ಪ್ರತಿಯೊಬ್ಬರಲ್ಲಿಯೂ ಅದರಿಂದಾಗುವ ಹಾನಿಯ ಬಗ್ಗೆ ತಿಳಿಸಿ ಅದನ್ನು ಮಟ್ಟ ಹಾಕಲೂ ಶ್ರಮಿಸಬೇಕು.

## 22. ಪತ್ರಿಕೆಗಳ ಮಹತ್ವ

**ಪೀಠಿಕೆ :** ದೈನಂದಿನ ಆಗು–ಹೋಗುಗಳನ್ನು,ಸುದ್ಧಿ–ಸಮಾಚಾರಗಳನ್ನು ತಿಳಿಸುವ ಮಾಧ್ಯಮವೇ ಪತ್ರಿಕೆ. ಸಮೂಹ ಮಾಧ್ಯಮಗಳಲ್ಲಿ ಅತ್ಯಂತ ಹಳೆಯ ಸಮೂಹ ಮಾಧ್ಯಮವೆಂದರೆ ಅದು ಪತ್ರಿಕೆ ಎಂದು ಹೇಳಬಹುದು. ವಿದ್ಯುನ್ಮಾನ ಕಾಲದಲ್ಲಿಯೂ ಪತ್ರಿಕೆಗಳಿಗೆ ಮಹತ್ವದ ಸ್ಥಾನವಿದೆ.

**ವಿಷಯ ವಿವರಣೆ :** ಪತ್ರಿಕೆಗಳು ಸುದ್ಧಿ–ಸಮಾಚಾರಗಳ ಮೂಲ ಪ್ರತಿಬಿಂಬಗಳಾಗಿವೆ. ದೇಶ–ವಿದೇಶಗಳ ಸುದ್ಧಿಯನ್ನು ದಿನನಿತ್ಯ ಕೊಡುವುದರ ಜೊತೆಗೆ ಕತೆ–ಕವನ–ಕಾದಂಬರಿಗಳು, ಇತಿಹಾಸ, ಕ್ರೀಡೆ, ಮನೋರಂಜನೆ, ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ಇತ್ಯಾದಿ ವಿಚಾರಗಳು ಪತ್ರಿಕೆಗಳಲ್ಲಿ ಬರುವುದರಿಂದ ಪ್ರತಿಯೊಬ್ಬರೂ ಕೂಡ ಜ್ಞಾನ ಪಡೆದುಕೊಳ್ಳಬಹುದು. ಓದುವ ಆಸಕ್ತಿ ಇರುವವರಿಗೆ ಮೂಲ ಅವಶ್ಯಕತೆಗಳಲ್ಲಿ ಪತ್ರಿಕೆಯೂ ಒಂದಾಗಿ ಪರಿಣಮಿಸಿದೆ. ಒಂದು ದಿನ ಪತ್ರಿಕೆ ಬರದೆ ಇದ್ದರೆ ಕಸಿವಿಸಿಯಾಗುತ್ತಾರೆ. ಪ್ರತಿನಿತ್ಯ ಪತ್ರಿಕೆಗಳನ್ನು ಓದುವುದರಿಂದ

ವಿಚಾರವಂತರಾಗಬಹುದು. ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ, ವಾರ್ಷಿಕಪತ್ರಿಕೆಗಳು ಪ್ರಸಾರವಾಗುತ್ತಿವೆ. ಕನ್ನಡದಲ್ಲಿ ಪ್ರಜಾವಾಣಿ, ವಿಜಯವಾಣಿ, ಕನ್ನಡಪ್ರಭ, ವಿಜಯಕರ್ನಾಟಕ ಮುಂತಾದ ಪತ್ರಿಕೆಗಳನ್ನು ಓದಬಹುದು. ಭಾರತದ ಮೊದಲಪತ್ರಿಕೆ 'ದಿ ಬೆಂಗಾಲ್ ಗೆಜೆಟ್' ಮೊದಮೊದಲು ಸರ್ಕಾರದ ಸುದ್ದಿ ಪ್ರಸಾರಕ್ಕೆ ಸೀಮಿತವಾಗಿತ್ತು. ನಂತರ ಬೇರೆ ಬೇರೆ ಭಾಷೆಗಳಲ್ಲಿ ಖಾಸಗಿಯಾಗಿ ಪತ್ರಿಕೆಗಳು ಆರಂಭವಾಗಿ ಸಮಗ್ರ ವಿಷಯಗಳ ಪ್ರಸಾರಕ್ಕೆ ನಾಂದಿಯಾದವು. ಆದ್ದರಿಂದ ವೃತ್ತಪತ್ರಿಕೆಗಳನ್ನು ಓದುವುದರಿಂದ ಸಾಕಷ್ಟುವಿಚಾರಗಳು ಲಭಿಸುತ್ತವೆ.

**ಉಪಸಂಹಾರ :** ಪತ್ರಿಕೆಗಳು ವಿಚಾರ ಶಕ್ತಿಯ ಆಕರಗಳು, ಜ್ಞಾನಾರ್ಜನೆಯ ಪ್ರಭಲ ಮಾಧ್ಯಮಗಳು ಆದ್ದರಿಂದ ವಿದ್ಯಾರ್ಥಿಗಳು, ಸಾರ್ವಜನಿಕರು ದಿನನಿತ್ಯ ಬೇರೆಬೇರೆ ಭಾಷೆಯ ಬೇರೆಬೇರೆ ಪತ್ರಿಕೆಗಳನ್ನು ಓದಿ ವಿಚಾರವಂತರಾಗಬೇಕೆಂಬುದು ನಮ್ಮೆಲ್ಲರ ಆಶಯವಾಗಬೇಕು.

## 23. ಕಂಪ್ಯೂಟರ್ ಶಿಕ್ಷಣ

**ಪೀಠಿಕೆ :** ಆಧುನಿಕ ವಿಜ್ಞಾನದ ಮಹತ್ವದ ಆವಿಷ್ಕಾರಗಳಲ್ಲಿ ಕಂಪ್ಯೂಟರ್ ಸಹ ಒಂದಾಗಿದೆ. ಕಂಪ್ಯೂಟರ್ ಇಂದು ಜಗತ್ತಿಗೆ ಒಂದು ವರವಾಗಿದೆ ಎಂದೇ ಹೇಳಬಹುದು. ಇಂದಿನ ದಿನಗಳಲ್ಲಿ ಯಾವುದೇ ಕಛೇರಿಗಳಿಗೆ ಹೋದರು ಕಂಪ್ಯೂಟರ್‌ನಲ್ಲಿ ಕೆಲಸ ಮಾಡುವುದನ್ನು ನೋಡಬಹುದು. ಎಲ್ಲಾ ಕಡತಗಳನ್ನು ಕೂಡ ಗಣಕೀಕರಣ ಮಾಡಲಾಗುತ್ತಿದೆ. ಯಾವುದೇ ಉದ್ಯೋಗ ಹುಡುಕಿಕೊಂಡು ಹೋದರೂ ಕಂಪ್ಯೂಟರ್ ಶಿಕ್ಷಣವನ್ನು ಬಯಸುತ್ತಾರೆ. ಆದ್ದರಿಂದ ಕಂಪ್ಯೂಟರ್ ಶಿಕ್ಷಣ ಅಗತ್ಯವಾಗಿದೆ.

**ವಿಷಯ ವಿವರಣೆ :** ಕಂಪ್ಯೂಟರ್ ತಂತ್ರಜ್ಞಾನದ ಶಿಕ್ಷಣ ಎಲ್ಲರಿಗೂ ಬೇಕಾಗಿದೆ. ಇಂದಿನ ದಿನಗಳಲ್ಲಿ ಕಂಪ್ಯೂಟರ್‌ಗಳ ಬಳಕೆ ಶಿಕ್ಷಣ ಕ್ಷೇತ್ರದಿಂದ ಹಿಡಿದು ಬ್ಯಾಂಕಿಂಗ್, ವೈಜ್ಞಾನಿಕ ಸಂಶೋಧನೆ, ಹಣಕಾಸು ವ್ಯವಹಾರ, ಕೃತಕ ಉಪಗ್ರಹದ ಉಡಾವಣೆ ಮತ್ತು ನಿರ್ವಹಣೆಯವರೆಗೆ ತನ್ನ ವ್ಯಾಪ್ತಿಯನ್ನು ಹೊಂದಿದೆ. ಆದ್ದರಿಂದ ಕಂಪ್ಯೂಟರ್ ಶಿಕ್ಷಣವನ್ನು ಪ್ರತಿಯೊಬ್ಬರು ಪಡೆಯಲೇಬೇಕಾಗಿದೆ. ನಮ್ಮ ಸರ್ಕಾರಗಳು ಶಾಲಾ-ಕಾಲೇಜುಗಳಲ್ಲಿ ಕಂಪ್ಯೂಟರ್ ಶಿಕ್ಷಣ ನೀಡಲು ಸಾಕಷ್ಟು ಯೋಜನೆಗಳನ್ನು ಹಾಕಿಕೊಂಡಿವೆ.ಅದರಂತೆ ಎಲ್ಲಾ ವಿದ್ಯಾರ್ಥಿಗಳು ಕಂಪ್ಯೂಟರ್ ಶಿಕ್ಷಣವನ್ನು ಪಡೆಯಬಹುದಾಗಿದೆ. ಇಂದು ನಾವು ಯಾವುದೇ ಕಚೇರಿ, ಬಸ್ಸು ನಿಲ್ದಾಣ, ರೈಲ್ವೆ ಸ್ಟೇಷನ್‌ಗೆ ಹೋದರೂ ಕಂಪ್ಯೂಟರ್ ಸ್ಥಾಪಿಸಿರುವುದು ಕಂಡು ಬರುತ್ತದೆ. ಹಿಂದೆ ಓದು ಬರಹ ಬಾರದ ವ್ಯಕ್ತಿ ಮಾತ್ರ ಅನಕ್ಷರಸ್ಥನಾಗಿರುತ್ತಿದ್ದನು. ಇಂದಿನ ಜಗತ್ತಿನಲ್ಲಿ ಕಂಪ್ಯೂಟರ್ ಶಿಕ್ಷಣ ಗೊತ್ತಿಲ್ಲದವರೂ ಅನಕ್ಷರರೇ ಆದಂತೆ ಆಗಿದೆ. ಆದ್ದರಿಂದ ಇಂದು ಇತರ ಶೈಕ್ಷಣಿಕ ವಿಷಯದಂತೆ ಕಂಪ್ಯೂಟರ್ ಶಿಕ್ಷಣವೂ ಅತಿ ಅಗತ್ಯ ವಿಷಯವಾಗಿದೆ. ಕಂಪ್ಯೂಟರ್ ಶಿಕ್ಷಣ ಹೊಂದಿದವರು ಸ್ವಉದ್ಯೋಗಗಳನ್ನು ಪ್ರಾರಂಭಿಸಬಹುದಾಗಿದೆ. ಡಿ.ಟಿ.ಪಿ. ಇಂಟರ್ನೆಟ್ ಬ್ರೌಸಿಂಗ್ ಸೆಂಟರ್, ಕಂಪ್ಯೂಟರ್ ಗೇಮ್ ಸೆಂಟರ್ ಫ್ಯಾಕ್ಸ್, ಡಾಟಾ ಎಂಟ್ರಿ ಮುಂತಾದ ಕೆಲಸಗಳನ್ನು ಮಾಡುವ ಮೂಲಕ ಸಂಪಾದನೆ ಮಾಡಬಹುದಾಗಿದೆ. ಇನ್ನೂ ಹೆಚ್ಚಿನ ಕಂಪ್ಯೂಟರ್ ಶಿಕ್ಷಣ ಪಡೆದವರು ಅನೇಕ ಖಾಸಗಿ ಕಚೇರಿಗಳಲ್ಲಿ ಉದ್ಯೋಗ ಪಡೆಯಬಹುದಾಗಿದೆ. ಅವರು ಕೂಡ ಕಂಪ್ಯೂಟರ್ ಶಿಕ್ಷಣ ಕೇಂದ್ರಗಳನ್ನು ತೆರೆದು ಇತರರಿಗೆ ಶಿಕ್ಷಣವನ್ನು ನೀಡಬಹುದಾಗಿದೆ.

**ಉಪಸಂಹಾರ:** ಒಟ್ಟಿನಲ್ಲಿ ಇಂದಿನ ಜಗತ್ತಿನಲ್ಲಿ ಕಂಪ್ಯೂಟರ್ ಶಿಕ್ಷಣವೂ ಒಂದು ಮೂಲಭೂತ ಅಗತ್ಯಗಳಲ್ಲಿ ಒಂದಾಗಿದೆ. ಹಾಗಾಗಿ ಪ್ರತಿಯೊಬ್ಬರು ಕಂಪ್ಯೂಟರ್ ಶಿಕ್ಷಣವನ್ನು ಪಡೆದು ಆಧುನಿಕ ಜಗತ್ತಿಗೆ ಕಾಲಿಡಬೇಕಾಗಿದೆ. ಕಂಪ್ಯೂಟರ್ ಶಿಕ್ಷಣ ಪಡೆದು ಸ್ವಉದ್ಯೋಗಳನ್ನು ಮಾಡುವುದರಿಂದ ನಿರುದ್ಯೋಗ ಸಮಸ್ಯೆಯನ್ನು ಸ್ವಲ್ಪ ದೂರ ಮಾಡಬಹುದಾಗಿದೆ ಎಂದು ಹೇಳ ಬಯಸುತ್ತೇನೆ.

## 24. ಕ್ರೀಡೆಗಳ ಮಹತ್ವ

**ಪೀಠಿಕೆ:** " ಸದೃಢ ದೇಹದಲ್ಲಿ ಸದೃಢ ಮನಸ್ಸು ಇರುತ್ತದೆ " ಎಂಬುದು ದೇಹ ಮತ್ತು ಮನಸ್ಸಿಗೆ ಸಂಬಂಧಿಸಿದ ಮಾತಾಗಿದೆ. ಪ್ರತಿಯೊಬ್ಬರು ತಮ್ಮ ತಮ್ಮ ಕೆಲಸಗಳನ್ನು ಸರಾಗವಾಗಿ ಮಾಡಿಕೊಂಡು ಹೋಗಲು ಆರೋಗ್ಯವಾಗಿರಬೇಕು. ಅದರ ಜೊತೆಗೆ ಮಾನಸಿಕವಾಗಿಯೂ ಸದೃಢವಾಗಿರಬೇಕು. ಇವೆರಡನ್ನು ಸರಿಯಾಗಿ ಇಟ್ಟುಕೊಳ್ಳಬೇಕಾದರೆ ವ್ಯಾಯಾಮ, ಯೋಗ, ಧ್ಯಾನ ,ಕ್ರೀಡೆಗಳು ಸಹಕಾರಿಯಾಗಬಲ್ಲವು.

**ವಿಷಯ ವಿವರಣೆ:** "ಬಾಲಸ್ಥಾವ ಕ್ರೀಡಾಸಕ್ತ" ಎಂಬ ಮಾತಿನಂತೆ ಸಹಜವಾಗಿ ಎಲ್ಲರೂ ಬಾಲಕರಾಗಿದ್ದಾಗ ಕ್ರೀಡೆಗಳಲ್ಲಿ ಆಸಕ್ತರಾಗಿರುತ್ತಾರೆ. ಬಾಲ್ಯದಲ್ಲಿಯೇ ಸದೃಢದೇಹವನ್ನು ಬೆಳೆಸಿಕೊಳ್ಳಲು ಕ್ರೀಡೆಗಳು ಅತ್ಯಂತ ಸಹಕಾರಿಯಾಗುತ್ತವೆ. ಆದ್ದರಿಂದಲೆ ಶಾಲಾ-ಕಾಲೇಜುಗಳಲ್ಲಿ ಕ್ರೀಡೆಗಳನ್ನು ಆಡಿಸುತ್ತಾರೆ.ಕ್ರೀಡೆಗಳಿಂದ ಪ್ರತಿಯೊಬ್ಬರು ದೈಹಿಕವಾಗಿಯೂ ಮತ್ತು ಮಾನಸಿಕವಾಗಿಯೂ ಸಬಲರಾಗಬಹುದು. ಕ್ರೀಡೆಗಳಿಂದ ನಾಯಕತ್ವ ಗುಣ, ಧೈರ್ಯ, ಪ್ರಾಮಾಣಿಕತೆ, ಹೊಂದಾಣಿಕೆ,ಸಹಕಾರ, ಶಿಸ್ತು, ಸಂಯಮ, ಮನಸ್ಸಿನ ಸ್ಥಿರತೆ,ದೈಹಿಕ ಶಕ್ತಿ,ರೋಗನಿರೋಧಕ ಗುಣ,ಉತ್ತಮ ಆರೋಗ್ಯ ಇತ್ಯಾದಿ ಅವಶ್ಯಕ ಗುಣಾಂಶಗಳನ್ನು ಪಡೆಯಬಹುದು. ಕಬಡ್ಡಿ, ಖೋಖೋ, ವಾಲಿಬಾಲ್,ಕುಸ್ತಿ, ಓಟಗಳಂತಹ ಆಟಗಳು ಪ್ರತಿಯೊಬ್ಬರನ್ನು ದೈಹಿಕವಾಗಿ ಬೆಳೆಸಿದರೆ, ಚೆಸ್, ಕೇರಂ, ಹಾವು-ಏಣಿ ಆಟ, ಪಗಡೆ ಆಟ ಇತ್ಯಾದಿ ಆಟಗಳು ನಮ್ಮನ್ನು ಮಾನಸಿಕವಾಗಿ ಬೆಳೆಸುತ್ತವೆ. ನಮ್ಮ ದೇಶದಲ್ಲಿ ಕ್ರೀಡೆಗಳಿಗೆ ಹೆಚ್ಚಿನ ಮಹತ್ವ ಸಿಗದಿರುವುದು ವಿಷಾದಕರವಾಗಿದೆ. ಶಾಲಾ-ಕಾಲೇಜುಗಳಲ್ಲಿ ಇತರೆ ವಿಷಯಗಳಂತೆ ಕ್ರೀಡೆಗಳಿಗೂ ಮಹತ್ವ ನೀಡಬೇಕು. ಕ್ರೀಡಾಶಾಲೆಗಳನ್ನು ಪ್ರತ್ಯೇಕವಾಗಿ ತೆರೆದು ತರಬೇತಿಯನ್ನು ನೀಡಬೇಕು. ಪ್ರತಿಯೊಬ್ಬರಿಗೂ ಕ್ರೀಡೆಗಳ ಮಹತ್ವವನ್ನು ತಿಳಿಸಿ ಆರೋಗ್ಯವಂತರನ್ನಾಗಿ ಮಾಡಬೇಕು.

**ಉಪಸಂಹಾರ:** ಸಮಾಜ ಸ್ವಾಸ್ಥ್ಯವಾಗಿರಬೇಕಾದರೆ ಪ್ರತಿಯೊಬ್ಬರ ದೇಹ ಮತ್ತು ಮನಸ್ಸು ಸ್ವಾಸ್ಥ್ಯವಾಗಿರಬೇಕು ಇಂತಹ ಸ್ವಾಸ್ಥ್ಯ ದೇಹ ಮತ್ತು ಮನಸ್ಸನ್ನು ಹೊಂದಲು ಕ್ರೀಡೆಗಳು ಸಹಾಯವಾಗುತ್ತವೆ. ಪ್ರತಿಯೊಬ್ಬರು ಕ್ರೀಡೆಗಳ ಬಗ್ಗೆ ಆಸಕ್ತಿ ,ಅಭಿರುಚಿಯನ್ನು ಬೆಳೆಸಿಕೊಂಡು ದೈಹಿಕ ಮತ್ತು ಮಾನಸಿಕವಾಗಿ ಆರೋಗ್ಯವಂತರಾಗಲು ಪ್ರಯತ್ನಿಸಬೇಕು.

## 25. ಪರಿಸರ ಸಂರಕ್ಷಣೆ

**ಪೀಠಿಕೆ :** ನಾವು ಮತ್ತು ನಮ್ಮ ಸುತ್ತ ಮುತ್ತಲಿನ ಬೆಟ್ಟ,ಗುಡ್ಡ, ಕಲ್ಲು,ಮಣ್ಣು, ಮರ-ಗಿಡ,ನೀರು ವಾಯು, ಪ್ರಾಣಿ-ಪಕ್ಷಿ ಚರಾಚರ ವಸ್ತುಗಳನ್ನು ಪರಿಸರ ಎಂದು ಕರೆಯಬಹುದು. ಇವುಗಳನ್ನು ಯಥಾರೀತಿಯಾಗಿ ಉಳಿಸಿ ಬೆಳೆಸಿಕೊಂಡು ಹೋಗುವುದೇ ಪರಿಸರ ಸಂರಕ್ಷಣೆಯಾಗಿದೆ. ಇಂತಹ ಪರಿಸರಸೃಷ್ಠಿ ನಮಗೆ ವರವಾಗಿದೆ ಎಂದು ಹೇಳಬಹುದು. ಪರಿಸರವನ್ನು ನಾವು ಸಂರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸಬಲ್ಲದು. ಇಲ್ಲವಾದರೆ ಪರಿಸರ ನಾಶ ಮಾಡಿದರೆ ನಾವು ನಾಶವಾಗುವುದರಲ್ಲಿ ಎರಡು ಮಾತಿಲ್ಲ.

**ವಿಷಯ ವಿವರಣೆ:** "ಪರಿಸರ ಉಳಿದರೆ ನಾಡು ಉಳಿದೀತು ; ಪರಿಸರ ಅಳಿದರೆ ನಾಡು ಕಳೆದೀತು" ಎಂಬ ನಾಣ್ಣುಡಿಯಂತೆ ನಾಡನ್ನು ರಕ್ಷಿಸಿಕೊಳ್ಳಬೇಕಾದರೆ ಪರಿಸರ ಸಂರಕ್ಷಣೆ ಮಾಡಬೇಕಾದದ್ದು ನಮ್ಮ ಜವಬ್ದಾರಿಯಾಗಿದೆ. .ಯಾಕೆಂದರೆ ನಾವು ಪರಿಸರದಿಂದ ಸಾಕಷ್ಟು ಅನುಕೂಲತೆಗಳನ್ನು ಪಡೆಯುತ್ತಿದ್ದೇವೆ. 'ಹಸಿರೇ ನಾಡಿನ ಉಸಿರು' ಆದ್ದರಿಂದ ಹಸಿರು ಇಲ್ಲದಿದ್ದರೇ ಉಸಿರು ಉಳಿದೀತು ಹೇಗೆ ? ಇತ್ತೀಚಿನ ದಿನಗಳಲ್ಲಿ ಪರಿಸರ ಮಾಲಿನ್ಯ ವಿಶ್ವದ ತುಂಬೆಲ್ಲ ಹರಡಿಕೊಂಡು ಬಿಟ್ಟಿದೆ. ಪರಿಸರ ಮಾಲಿನ್ಯದಿಂದ ನಮ್ಮ ನಮ್ಮ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಹಾಗಾಗಿ ನಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ವಿದ್ಯಾರ್ಥಿಗಳಾದ ನಾವು ಮೊದಲು ನಮ್ಮ ಶಾಲಾ-ಕಾಲೇಜುಗಳಲ್ಲಿ ನಮ್ಮ ಮನೆ ಯ ಸುತ್ತ-ಮುತ್ತ ಹೆಚ್ಚು ಹೆಚ್ಚು ಗಿಡಮರಗಳನ್ನು ನೆಟ್ಟು ಪರಿಸರ ಸಂರಕ್ಷಿಸಬೇಕು. ಇತರರಿಗೂ ಪ್ರೇರೇಪಿಸಬೇಕು. ವನಮಹೋತ್ಸವ, ಸಸಿನೆಡುವ ಕಾರ್ಯಕ್ರಮಗಳನ್ನು ಪ್ರತಿನಿತ್ಯ ಮಾಡುತ್ತ ಪ್ರತಿದಿನ ಪರಿಸರ ದಿನ ಆಚರಿಸಬೇಕು. ಸಾಲುಮರದ ತಿಮ್ಮಕ್ಕನಂತವರನ್ನು ಆದರ್ಶವಾಗಿಟ್ಟುಕೊಳ್ಳಬೇಕು. ಪರಿಸರ ಸಂರಕ್ಷಣೆಯ ಬಗ್ಗೆ ಪ್ರತಿಯೊಬ್ಬರಲ್ಲಿಯೂ ಜಾಗೃತಿಯನ್ನು ಮೂಡಿಸಬೇಕು. ಪರಿಸರ ನಾಶದಿಂದಾಗುವ ಅನಾಹುತಗಳನ್ನು ತಿಳಿಸಬೇಕು.

**ಉಪಸಂಹಾರ:** " ಕಾಡಿದ್ದರೆ ನಾಡು –ನಾಡಿದ್ದರೆ ನಾವು ಕಾಡಿಲ್ಲದಿದ್ದರೆ ಸುಡುಗಾಡು" ಎನ್ನುವಂತೆ ಕಾಡನ್ನು ನಾಡನ್ನು ಉಳಿಸುವುದು ನಮ್ಮ ನಿಮ್ಮೆಲ್ಲರ ಹೊಣೆಯಾಗಬೇಕು. ದೈವದತ್ತವಾದ ಪರಿಸರವನ್ನು ನಾಶಮಾಡದೆ, ಉಳಿಸಿ, ಬೆಳೆಸಿ ಮುಂದಿನ ಜನಾಂಗಕ್ಕೆ ಬಳುವಳಿಯಾಗಿ ನೀಡಬೇಕೆಂಬುದು ಎಲ್ಲರ ಆಶಯವಾಗಬೇಕು. " ವೃಕ್ಷೋ ರಕ್ಷತಿ ರಕ್ಷಿತಃ "

## 26. ದೂರದರ್ಶನ ಅಥವಾ ದೂರದರ್ಶನದ ಒಳಿತು–ಕೆಡುಕುಗಳು

**ಪೀಠಿಕೆ :** ಆಧುನಿಕ ವೈಜ್ಞಾನಿಕ ಆವಿಷ್ಕಾರಗಳಲ್ಲಿ ಅದ್ಭುತವಾದದ್ದು ದೂರದರ್ಶನವಾಗಿದೆ. ಪ್ರಸ್ತುತ ದಿನಮಾನಗಳಲ್ಲಿ ಅತ್ಯಂತ ಆಕರ್ಷಣೀಯ ಸಮೂಹ ಮಾಧ್ಯಮವೆಂದರೆ ಅದು ದೂರದರ್ಶನವೇ ಆಗಿದೆ. ಇದು ದೃಶ್ಯಮಾಧ್ಯಮವಾಗಿದ್ದು ಇದರಲ್ಲಿ ವೀಕ್ಷಿಸುವ ಮತ್ತು ಆಲಿಸುವ ಸೌಲಭ್ಯ ಇರುವುದರಿಂದ ಅಬಾಲವೃದ್ಧರಿಗೂ ಆಸಕ್ತಿದಾಯಕವಾಗಿದೆ. ವಿಚಾರಗಳನ್ನು ಅತ್ಯಂತ ಶೀಘ್ರವಾಗಿ ತಲುಪಿಸುವಲ್ಲಿ ದೂರದರ್ಶನ ಪ್ರಮುಖಪಾತ್ರವಹಿಸುತ್ತವೆ.

**ವಿಷಯ ವಿವರಣೆ :** ದೂರದರ್ಶನ ಅತ್ಯಂತ ಜನಪ್ರಿಯ ಮಾಧ್ಯಮವಾಗಿದ್ದು, ಇದರಿಂದ ಸಾಕಷ್ಟು ಅನೂಕೂಲಗಳಿವೆ. ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ವೈಜ್ಞಾನಿಕ, ಮನೋರಂಜನಾತ್ಮಕ, ಸಾಂಸ್ಕೃತಿಕ, ವೈದ್ಯಕೀಯ, ಕ್ರೀಡೆ, ಮುಂತಾದ ವಿಚಾರಗಳು ಪ್ರಸಾರವಾಗುವುದರಿಂದ ಸಮಗ್ರಜ್ಞಾನವನ್ನು ಪಡೆಯಬಹುದು. ವಾರ್ತೆಗಳು, ಧಾರವಾಹಿಗಳು, ಚಲನಚಿತ್ರಗಳು, ನಾಟಕಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಹಾಸ್ಯಕಾರ್ಯಕ್ರಮಗಳು, ನೃತ್ಯಗಳು, ಅಡುಗೆಕಾರ್ಯಕ್ರಮಗಳು ಹೀಗೆ ವೈವಿಧ್ಯಮಯ ಕಾರ್ಯಕ್ರಮಗಳು ಪ್ರಸಾರವಾಗುವುದರಿಂದ ಪ್ರತಿಯೊಬ್ಬರು ದೂರದರ್ಶನವನ್ನು ವೀಕ್ಷಿಸುತ್ತಾರೆ. ಅನಕ್ಷರಸ್ಥರು ಕೂಡ ಸಾಕಷ್ಟು ವಿಚಾರಗಳನ್ನು ತಿಳಿದುಕೊಳ್ಳಬಹುದು. ಪ್ರತಿಯೊಂದು ಭಾಷೆಯಲ್ಲಿಯೂ ದೂರದರ್ಶನಗಳು ತೆರೆಯಲ್ಪಟ್ಟಿವೆ. ಹಾಗಾಗಿ ಇಡಿ ವಿಶ್ವವೇ ದೂರದರ್ಶನಕ್ಕೆ ಮನಸೋತಿದೆ ಎಂದು ಹೇಳಬಹುದು. ದೂರದರ್ಶನದಿಂದ ದುಷ್ಪರಿಣಾಮಗಳು ಸಹ ಇವೆ. ವಿದ್ಯಾರ್ಥಿಗಳಾದವರು ಸದಾಕಾಲ ದೂರದರ್ಶನದ ಮುಂದೆ ಕುಳಿತು ತಮ್ಮ ಓದಿನಲ್ಲಿ ಆಸಕ್ತಿಯನ್ನು ಕಳೆದುಕೊಳ್ಳಬಹುದು. ಆದ್ದರಿಂದ ತಮ್ಮ ಜ್ಞಾನಕ್ಕೆ ಅವಶ್ಯವಾದ ಕಾರ್ಯಕ್ರಮಗಳನ್ನು ಮಾತ್ರ ವೀಕ್ಷಿಸಬೇಕು. ಚಿಕ್ಕಮಕ್ಕಳನ್ನು ಅತಿನೋಡಲು ಬಿಡಬಾರದು.

**ಉಪಸಂಹಾರ :** ದೂರದರ್ಶನವನ್ನು ಮೂರ್ಖರ ಪೆಟ್ಟಿಗೆ ಎಂದು ಕರೆಯಲಾಗಿದೆ. ಆದರೂ ಇದರಿಂದ ಸಾಕಷ್ಟು ಒಳಿತುಗಳಿವೆ. ಅಷ್ಟೇ ದುಷ್ಪರಿಣಾಮಗಳಿವೆ ಎಂಬುದನ್ನು ಮರೆಯಬಾರದು. ಅತಿಯಾದರೆ ಅಮೃತವೂ ವಿಷವಾಗುತ್ತದೆ .ದೂರದರ್ಶನವನ್ನು ಅದರಲ್ಲೂ ವಿದ್ಯಾರ್ಥಿಗಳು ಜ್ಞಾನವಿಕಾಸಕ್ಕೆ ಸಂಬಂಧಿಸಿದ ವಿಚಾರಗಳಿಗೆ ಮಾತ್ರ ಆಕರ್ಷಿತರಾಗುವುದು ಒಳಿತು ಎಂದು ಹೇಳಬಹುದು.

## 27. ಆರೋಗ್ಯ ಮತ್ತು ನೈರ್ಮಲ್ಯ

**ಪೀಠಿಕೆ:** 'ಆರೋಗ್ಯವೇ ಮಹಾಭಾಗ್ಯ' ಎಂಬಂತೆ ಮನುಷ್ಯರು ಸುಖ–ಸಂತೋಷದಿಂದ ಜೀವಿಸಬೇಕಾದರೆ ಆರೋಗ್ಯ ಬಹಳ ಮುಖ್ಯವೆನಿಸುತ್ತದೆ. ಅದು ದೈಹಿಕವಾಗಿರಬಹುದು ಅಥವಾ ಮಾನಸಿಕವಾಗಿರದಬಹುದು. ಅಂತಹ ಉತ್ತಮ ಆರೋಗ್ಯ ನೈರ್ಮಲ್ಯದಿಂದ ಬರುತ್ತದೆ. ಆದ್ದರಿಂದ ಆರೋಗ್ಯ ಮತ್ತು ನೈರ್ಮಲೀಕರಣ ಪರಸ್ಪರ ಪೂರಕವಾದವುಗಳು.

**ವಿಷಯ ವಿವರಣೆ :** ನೈರ್ಮಲ್ಯ ಎಂದರೆ ಪರಿಶುದ್ಧತೆ ಎಂದರ್ಥ. ನೈರ್ಮಲೀಕರಣ ಎಲ್ಲಿದಿಯೋ ಅಲ್ಲಿದೆ ಆರೋಗ್ಯ. ನೈರ್ಮಲೀಕರಣ ಉತ್ತಮ ಆರೋಗ್ಯದ ತಳಹದಿ. ಆರೋಗ್ಯವನ್ನು ಕಾಪಾಡಿಕೊಳ್ಳಬೇಕಾದರೆ ಹಿತಮಿತವಾದ ಉತ್ತಮ ಆಹಾರ , ಶುದ್ಧನೀರು, ವಾಯು ,ಸುತ್ತಮುತ್ತಲಿನ ಸ್ವಚ್ಛಪರಿಸರ ಜೊತೆಗೆ ನಿಯಮಿತ ವ್ಯಾಯಾಮ, ಯೋಗ, ಧ್ಯಾನ, ಮಾನಸಿಕ ನೆಮ್ಮದಿ ಇತ್ಯಾದಿಗಳು ಅವಶ್ಯಕವಾಗಿರುತ್ತವೆ. ಊಟಬಲ್ಲವನಿಗೆ ರೋಗವಿಲ್ಲ ಎನ್ನುವ ಹಾಗೆ ಹಿತಮಿತವಾದ ಸಮಯಕ್ಕೆ ಸರಿಯಾಗಿ ಆಹಾರ ಸೇವನೆಯಿಂದ ರೋಗಮುಕ್ತರಾಗಬಹುದು. ಅದೇ ರೀತಿಯಾಗಿ ಮಾನಸಿಕ ಆರೋಗ್ಯವು ಅತ್ಯವಶ್ಯಕ. 'ಆರೋಗ್ಯ ಸಂಪತ್ತು ಇರುವ ದೇಹದಲ್ಲಿ ಆರೋಗ್ಯಪೂರ್ಣ ಮನಸ್ಸು' ಇರುತ್ತದೆ. ಆದ್ದರಿಂದ ಪ್ರತಿನಿತ್ಯ ದೇಹದ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು. ರೋಗಗಳು ಬಂದ ಮೇಲೆ ಪರದಾಡುವುದಕ್ಕಿಂತ ಮೊದಲೆ ರೋಗಬರದಂತೆ ತಡೆಗಟ್ಟುವುದು ನೈರ್ಮಲೀಕರಣದಿಂದ ಸಾಧ್ಯವಿದೆ. ಆದ್ದರಿಂದ ನಾವು ನಮ್ಮ ದೇಹ ಮತ್ತು

ಮನಸ್ಸನ್ನು ನಿರ್ಮಲವಾಗಿಟ್ಟು ಕೊಳ್ಳಬೇಕು.ಇದಕ್ಕಾಗಿ ನಮ್ಮ ಸರ್ಕಾರಗಳು ಸಾಕಷ್ಟು ಮುಂಜಾಗ್ರತ ಕ್ರಮಗಳನ್ನು ತೆಗೆದುಕೊಳ್ಳುವುದನ್ನು ಸದುಪಯೋಗಪಟಿಸಿಕೊಳ್ಳಬೇಕು.

**ಉಪಸಂಹಾರ :** " Health is wealth " ಆದ್ದರಿಂದ ನಮ್ಮ ಆರೋಗ್ಯವನ್ನು ಕಾಪಾಡಿಕೊಂಡು ಮಹಾಭಾಗ್ಯವನ್ನು ತಂದು ಕೊಳ್ಳಬೇಕು. ಪ್ರತಿಯೊಬ್ಬರು ಸುಖವಾಗಿರಲು ಬಯಸುತ್ತಾರೆ.ಸುಖದ ಗುಟ್ಟು ಆರೋಗ್ಯದಲ್ಲಿದೆ, ಎಷ್ಟು ಸಂಪತ್ತು ಇದ್ದರೇನು? ಆರೋಗ್ಯ ಸರಿ ಇಲ್ಲದ ಮೇಲೆ. ಆ ಸಂಪತ್ತನ್ನು ಅನುಭವಿಸಬೇಕಾದರೆ ಆರೋಗ್ಯ ಬಹಳ ಮುಖ್ಯ. ಯಾರು ಉತ್ತಮ ಆರೋಗ್ಯವಂತರೋ ಅವರೇ ಸಿರಿವಂತರು. ಒಟ್ಟಿನಲ್ಲಿ ಆರೋಗ್ಯ ಮತ್ತು ನೈರ್ಮಲ್ಯ ಪ್ರತಿಯೊಬ್ಬರಲ್ಲಿ ಇರಬೇಕು.

## 28. ಬಾಲ್ಯ ವಿವಾಹ ಒಂದು ಸಾಮಾಜಿಕ ಪಿಡುಗು

**ಪೀಠಿಕೆ:** ಸಮಾಜದ ಅಭಿವೃದ್ಧಿಗೆ ತೊಡಕನ್ನುಂಟುಮಾಡುವ ಕೆಲವು ಪದ್ಧತಿಗಳನ್ನು ಸಾಮಾಜಿಕ ಪಿಡುಗುಗಳು ಎಂದು ಗುರುತಿಸಲಾಗಿದೆ. ಅಂತಹ ಸಾಮಾಜಿಕ ಪಿಡುಗುಗಳಲ್ಲಿ ಬಾಲ್ಯವಿವಾಹವು ಒಂದಾಗಿದೆ. ಬಾಲ್ಯವಿವಾಹಗಳಿಂದ ದೇಶದ ಜನಸಂಖ್ಯೆಯು ಹೆಚ್ಚಾಗಿ ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಆದ್ದರಿಂದ 'ಬಾಲ್ಯ ವಿವಾಹ ತಡೆಗಟ್ಟಿ ಮಕ್ಕಳ ಬಾಳು ಬೆಳಗಿಸಿ' ದೇಶದ ಪ್ರಗತಿಗೆ ಎಲ್ಲರೂ ಪಣತೊಡಬೇಕು.

**ವಿಷಯ ವಿವರಣೆ :** 21 ವರ್ಷದ ಒಳಗಿನ ಹುಡುಗ ಹಾಗೂ 18 ವರ್ಷದೊಳಗಿನ ಹುಡುಗಿಯರ ನಡುವೆ ಅಥವಾ ಇಬ್ಬರಲ್ಲಿ ಒಬ್ಬರು ನಿಗದಿತ ವಯಸ್ಸಿನೊಳಗಿದ್ದು ಮದುವೆಯಾದರೆ ಇಂತಹ ಮದುವೆಗೆ ಬಾಲ್ಯ ವಿವಾಹ ಎಂದು ಕರೆಯುತ್ತಾರೆ. ಇದು ಕಾನೂನಿಗೆ ವಿರುದ್ಧವಾದದ್ದು. ಅನಕ್ಷರತೆ, ಬಡತನ, ಮೂಢನಂಬಿಕೆ ಸಾಂಪ್ರದಾಯಕ ಕಟ್ಟುಪಾಡುಗಳು ಮುಂತಾದವುಗಳು ಬಾಲ್ಯವಿವಾಹಕ್ಕೆ ಕಾರಣಗಳಾಗಿವೆ. ಚಿಕ್ಕ ವಯಸ್ಸಿನಲ್ಲಿ ತಾಯಿಯಾಗುವ ಈ ಹೆಣ್ಣುಮಕ್ಕಳು ಮುಂದೆ ಹೆಚ್ಚಿನ ತೊಂದರೆ ಅನುಭವಿಸುತ್ತಾರೆ. ಅನಾರೋಗ್ಯಕ್ಕೆ ತುತ್ತಾಗುವ ಸಾಧ್ಯತೆಗಳಿವೆ. ಹುಟ್ಟುವ ಮಕ್ಕಳು ಸದೃಢರಾಗದೆ ವಿಕಲಾಂಗ ಮಕ್ಕಳು ಜನಿಸಿ ಅನಾರೋಗ್ಯ ಉಂಟಾಗಬಹುದು.ಸಂಸಾರಗಳು ಮುರಿದುಬೀಳಲು ಕಾರಣವಾಗಬಹುದು. ಬಾಲ್ಯವಿವಾಹಗಳನ್ನು ಮಾಡುವುದರಿಂದ ಜನಸಂಖ್ಯೆ ಹೆಚ್ಚಳವಾಗುತ್ತದೆ. ಮತ್ತೆ ಇದರಿಂದ ಅನೇಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಶಾಲೆ ಬಿಡುವ ಮಕ್ಕಳ ಸಂಖ್ಯೆ ಹೆಚ್ಚಾಗಿ ಅನಕ್ಷರತೆ ಹೆಚ್ಚಾಗುವುದು. ವಯಸ್ಸಿಗೆ ಮೀರಿದ ಜವಬ್ದಾರಿ ಹೊರಿಸುವುದರಿಂದ ಮಕ್ಕಳು ಮಾನಸಿಕ ದೌರ್ಬಲ್ಯತೆಗೆ ಒಳಗಾಗಿನ ಖಿನ್ನತೆಯನ್ನು ಅನುಭವಿಸುತ್ತಾರೆ. ಭಾರತದಲ್ಲಿ ಬಾಲ್ಯವಿವಾಹ ನಿಷೇಧ ಕಾನೂನು ಜಾರಿಯಲ್ಲಿದ್ದರೂ ಕೆಲವು ಬಾಲ್ಯ ವಿವಾಹಗಳು ಜರುಗುತ್ತಿವೆ. ಬಾಲ್ಯವಿವಾಹಗಳಿಂದಾಗುವ ಅನಾಹುತಗಳ ಬಗ್ಗೆ ಪೋಷಕರಲ್ಲಿ ಜಾಗ್ರತಿ ಮೂಡಿಸಬೇಕು. ಶಾಲೆಯೊಂದೇ ಹೆಣ್ಣು ಮಕ್ಕಳಿಗೆ ಸರಿಯಾದ ರಕ್ಷಣಾ ಕೇಂದ್ರವಾಗಿದೆ. ಆದ್ದರಿಂದ ನಮ್ಮ ಸರ್ಕಾರಗಳು ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಪ್ರೋತ್ಸಾಹಿಸುತ್ತಿವೆ. ಉತ್ತಮ ಶಿಕ್ಷಣದಿಂದ ಬಾಲ್ಯವಿವಾಹವನ್ನು ತಪ್ಪಿಸಬಹುದು. ಬಾಲ್ಯವಿವಾಹ ನಿಷೇಧ ಕಾನೂನನ್ನು ಕಟ್ಟು ನಿಟ್ಟಾಗಿ ಜಾರಿಗೆ ತರಬೇಕು. ಬಾಲ್ಯವಿವಾಹವನ್ನು ತಡೆಗಟ್ಟಲು ಇತ್ತೀಚಿಗೆ ವಿವಾಹ ನೋಂದಣಿ ಕಡ್ಡಾಯವಾಗಿ ಮಾಡಿಸಲು ಆದೇಶಿಸಲಾಗಿದೆ. ಸಂಘ–ಸಂಸ್ಥೆಗಳು ಬಾಲ್ಯವಿವಾಹಗಳನ್ನು ತಡೆಗಟ್ಟಲು ಪ್ರಯತ್ನಿಸಬೇಕು.

**ಉಪಸಂಹಾರ :** 'ಮದುವೆಗಿಂತ ಮಕ್ಕಳ ಭವಿಷ್ಯ ಮುಖ್ಯ.' ಆದ್ದರಿಂದ ವಿದ್ಯಾರ್ಥಿಗಳಾದ ನಾವು ಬಾಲ್ಯವಿವಾಹದಿಂದಾಗುವ ದುಷ್ಪರಿಣಾಮಗಳ ಬಗ್ಗೆ ತಿಳಿದುಕೊಂಡು, ನಮ್ಮ ಪೋಷಕರಿಗೂ ಹಾಗೂ ಸಮಾಜಕ್ಕೂ ಇದರ ಬಗ್ಗೆ ಅರಿವು ಮೂಡಿಸಿ ಬಾಲ್ಯವಿವಾಹಗಳನ್ನು ತಡೆಗಟ್ಟಬೇಕು. ಅಂದಾಗ ಮಾತ್ರ ಈ ಪಿಡುಗು ತೊಲಗಿ ಸಮಾಜ ಸ್ವಾಸ್ಥ್ಯವಾಗಿರಲು ಸಾಧ್ಯವಾಗುತ್ತದೆ. ಮತ್ತು ಸಮಾಜ ಒಳ್ಳೆಯ ರೀತಿಯಲ್ಲಿ ಮುಂದುವರಿಯತ್ತದೆ. ಇದಕ್ಕೆ ಪ್ರತಿಯೊಬ್ಬರೂ ಕೈ ಜೋಡಿಸಿ ಸ್ವಾಸ್ಥ್ಯವಾಗಿರಿಸೋಣ. 'ಬಾಲ್ಯವಿವಾಹ ನಿಲ್ಲಿಸಿ ಮಕ್ಕಳ ಹಕ್ಕುಗಳನ್ನು ರಕ್ಷಿಸೋಣ' ಎಂಬ ಭರವಸೆ ಎಲ್ಲರಲ್ಲಿ ಮೂಡಲಿ ಎನ್ನುವುದು ನಮ್ಮೆಲ್ಲರ ಆಶಯವಾಗಬೇಕಿದೆ.

## 29. ಮೇಕ್ ಇನ್ ಇಂಡಿಯಾ

**ಪೀಠಿಕೆ :** ಭಾರತ ದೇಶವನ್ನು ಒಂದು ಉತ್ಪಾದನಾ ವಲಯದ ಕೇಂದ್ರ ಸ್ಥಾನವನ್ನಾಗಿ ಬೆಳೆಸಬೇಕೆಂಬ ಉದ್ದೇಶದಿಂದ ಭಾರತ ಸರ್ಕಾರ ಜಾರಿಗೆ ತಂದಿರುವ ಅತ್ಯಂತ ಮಹತ್ವಪೂರ್ಣ ಯೋಜನೆಯೇ "ಮೇಕ್ ಇನ್ ಇಂಡಿಯಾ" ಅಂದರೆ ಭಾರತದಲ್ಲಿ ಉತ್ಪಾದಿಸುವುದು ಎಂದರ್ಥ. ಭಾರತ ದೇಶವು ಉತ್ಪಾದನಾ ವಲಯದಲ್ಲಿ ಸ್ವಾವಲಂಬನೆ ಸಾಧಿಸಲು ಬಹಳ ಉಪಯುಕ್ತ ಯೋಜನೆ ಇದಾಗಿದೆ.

**ವಿಷಯ ನಿರೂಪಣೆ :** ನಮ್ಮ ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಕನಸಿನ ಕೂಸಾದ ಈ ಯೋಜನೆ ಸೆಪ್ಟಂಬರ್ 25ರ 2014 ರಂದು ಅವರಿಂದಲೆ ಉದ್ಘಾಟನೆಯಾಯಿತು. ಉತ್ಪಾದನಾ ವಲಯದಲ್ಲಿ ಬೇರೆ ರಾಷ್ಟ್ರಗಳ ಸರಕುಗಳಿಗೆ ಅವಲಂಬಿಸಿರುವುದಕ್ಕಿಂತ ನಮ್ಮ ದೇಶದಲ್ಲಿಯೇ ತಯಾರಿಸಿ ಸ್ವಾವಲಂಬನೆ ಪಡೆಯುವುದಾಗಿದೆ. ಉತ್ಪಾದನಾ ವಲಯದಲ್ಲಿ ಭಾರತ ದೇಶವು ಒಂದು ಸೂಪರ್ ಪವರ್ ರಾಷ್ಟ್ರ ಎನಿಸಿಕೊಳ್ಳಬೇಕಾದರೆ ನಮ್ಮ ದೇಶದ ಉದ್ಯಮಿಗಳು ಮತ್ತು ಅನ್ಯದೇಶದ ಉದ್ಯಮಿಗಳು ನಮ್ಮ ದೇಶದಲ್ಲಿ ಬಂಡವಾಳ ಹೂಡುವಂತೆ ಮಾಡಿ ನಮ್ಮ ದೇಶದ ಕೈಗಾರಿಕೆಗಳನ್ನು ಬಲಪಡಿಸುವುದು .ಆ ಮೂಲಕ ಜನರ ಅವಶ್ಯಕ ವಸ್ತುಗಳನ್ನು ತಯಾರಿಸುವುದು. ಇದರಿಂದ ಆಮದು ಕಡಮೆಯಾಗಿ ರಫ್ತು ಪ್ರಮಾಣ ಹೆಚ್ಚಳವಾಗಬೇಕು. ಹಾಗಾದರೆ ನಮ್ಮ ದೇಶದ ಜನರಿಗೆ ಕಡಿಮೆ ಬೆಲೆಯಲ್ಲಿ ವಸ್ತುಗಳು ದೊರಕಬಹುದು. ಇದರಿಂದ ನಾಗರಿಕರಿಗೆ ಪ್ರಯೋಜನವಾಗಲಿದೆ. ಐಟಿ–ಬಿಟಿ, ರೈಲ್ವೆ, ಆಟೋಮೊಬೈಲ್, ನಾಗರಿಕ ವಿಮಾನಯಾನ, ರಕ್ಷಣಾ ಸಾಮಾಗ್ರಿ, ರಸ್ತೆಗಳ ನವೀಕರಣ, ಆಹಾರ ಉತ್ಪಾದನೆ, ಮುಂತಾದ ವಲಯಗಳಲ್ಲಿ ಹೂಡಿಕೆ ಮಾಡಿ ಸ್ವಾವಲಂಬನೆ ಸಾಧಿಸುವಂತೆ ಮಾಡಬಹುದು.

**ಉಪಸಂಹಾರ :** ಒಟ್ಟಿನಲ್ಲಿ "ಸ್ವಾವಲಂಬನೆಯೇ ಸಾಧನೆಯ ಹಾದಿ" ಎಂಬಂತೆ "ಮೇಕ್ ಇನ್ ಇಂಡಿಯಾ" ಯೋಜನೆಯು ಭಾರತದ ಅಭಿವೃದ್ಧಿ ಮತ್ತು ಉತ್ಪಾದನಾ ವಲಯದಲ್ಲಿ ಸ್ವಾವಲಂಬನೆ ಸಾಧಿಸಲು ಹೊಸ ಭರವಸೆಯನ್ನು ಮೂಡಿಸಿದೆ. ಪ್ರಪಂಚದ ಇತರೆ ದೇಶಗಳು ಭಾರತದತ್ತ ಕಣ್ಣು ಹಾಯಿಸುವಂತೆ ಮಾಡಿದೆ. ಈ ಕಾರ್ಯಕ್ರಮ ಯಶಸ್ವಿಯಾದರೆ ಭಾರತ ಒಂದು ಶಕ್ತಿಶಾಲಿ ರಾಷ್ಟ್ರ ಎನಿಸಿಕೊಳ್ಳುವುದರಲ್ಲಿ ಎರಡು ಮಾತಿಲ್ಲ.

## 30. ಇಂದಿನ ಶಿಕ್ಷಣದಲ್ಲಿ ಚಟುವಟಿಕೆಗಳ ಪಾತ

**ಪೀಠಿಕೆ:** ವಿದ್ಯಾರ್ಥಿಗಳು ನಿರಂತರವಾಗಿ ಮತ್ತು ಸಮಗ್ರವಾಗಿ ಸದಾ ಕಾರ್ಯಪ್ರವೃತ್ತರಾಗಿರಲು ಶಿಕ್ಷಣದಲ್ಲಿ ಚಟುವಟಿಕೆಗಳು ಪ್ರಮುಖ ಪಾತ್ರವಹಿಸುತ್ತವೆ. ವಿದ್ಯಾರ್ಥಿಗಳು ತಮ್ಮಲ್ಲಿ ಇರುವ ಪೂರ್ವಜ್ಞಾನದಿಂದ ಚಟುವಟಿಕೆಗಳ ಮೂಲಕ ಜ್ಞಾನವನ್ನು ವಿಸ್ತರಿಸಿಕೊಳ್ಳಲು ಸಾಧ್ಯವಾಗುತ್ತದೆ. ಅಲ್ಲದೆ ವಿದ್ಯಾರ್ಥಿಗಳು ತಮ್ಮಲ್ಲಿರುವ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಚಟುವಟಿಕೆಗಳ ಮೂಲಕ ಜ್ಞಾನವನ್ನು ಕಟ್ಟಿಕೊಳ್ಳಬಹುದು.

**ವಿಷಯ ವಿವರಣೆ :** ಪಠ್ಯಕ್ಕೆ ಸಂಬಂಧಿಸಿದ ಅಥವಾ ಪಠ್ಯಕ್ಕೆ ಪೂರಕವಾದ ವಿಷಯಗಳನ್ನು ಆಧರಿಸಿ ವಿದ್ಯಾರ್ಥಿಗಳಿಗೆ ಚಟುವಟಿಕೆಗಳನ್ನು ನೀಡಬಹುದು. ಉದಾಹರಣೆ ರಸಪ್ರಶ್ನೆ ಕಾರ್ಯಕ್ರಮ, ಏಕಾಭಿನಯ, ನಾಟಕಾಭಿನಯ, ಆಶುಭಾಷಣ, ಸಂವಾದ, ಚರ್ಚಾಸ್ಪರ್ಧೆ, ಮಾದರಿಗಳ ತಯಾರಿಕೆ, ಪ್ರಯೋಗಗಳು, ಚಿತ್ರಕಲೆ, ಚಿತ್ರಸಂಪುಟ ತಯಾರಿಕೆ , ಭಾಷಣ , ಸ್ವಾತಂತ್ರ್ಯ ಹೋರಾಟಗಾರರು, ವಿಜ್ಞಾನಿಗಳು, ಕವಿಗಳು, ಇತರೆ ವ್ಯಕ್ತಿಗಳ ಬಗ್ಗೆ ಮಾಹಿತಿ ಸಂಗ್ರಹ ಪ್ರಾಣಿಗಳು, ಪಕ್ಷಿಗಳ ಜೀವನ ಅಧ್ಯಯನ ಹೀಗೆ ನಾನಾ ತರಹದ ಚಟುವಟಿಕೆಗಳನ್ನು ನೀಡಬಹುದು. ಇದರಿಂದ ಪಠ್ಯದ ಜೊತೆಗೆ ಇತರೆ ವಿಷಯಗಳ ಬಗ್ಗೆ ಜ್ಞಾನವು ಲಭಿಸುತ್ತದೆ. ವಿದ್ಯಾರ್ಥಿಗಳಲ್ಲಿ ಆಸಕ್ತಿ , ಕುತೂಹಲ ಮೂಡಲು ಸಾಧ್ಯವಾಗುತ್ತದೆ. ಚರ್ಚಾಸ್ಪರ್ಧೆ, ಭಾಷಣದಂತಹ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಮಾತನಾಡುವ ಕೌಶಲ್ಯವನ್ನು, ಧೈರ್ಯವನ್ನು ತಂದುಕೊಡಬಲ್ಲವು. ಇನ್ನೂ ಕೆಲವೊಂದು ಗುಂಪಿನಲ್ಲಿ ನೀಡುವುದರಿಂದ ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ, ಸಹಕಾರ ತತ್ವ, ಹೊಂದಾಣಿಕೆ ಗುಣ ಮುಂತಾದವುಗಳನ್ನು ಬೆಳೆಸಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ಸ್ವತಃ ತಾವೇ ಪ್ರಯೋಗಳನ್ನು ಮಾಡಿ ವಿಜ್ಞಾನದ ಸತ್ಯಗಳನ್ನು ತಿಳಿಯಬಹುದು. ಹೆಚ್ಚಿನ ಓದಿಗೆ ಆಸಕ್ತಿ ಬೆಳೆಯುತ್ತದೆ. ಚಟುವಟಿಕೆಗಳಿಂದ ಕಲಿಕೆಯಲ್ಲಿ ವೈವಿಧ್ಯತೆಯನ್ನು ಕಾಣಬಹುದು. ಪ್ರೇಕ್ಷಣಿಯ , ಐತಿಹಾಸಿಕ ಸ್ಥಳಗಳಿಗೆ ಬೇಟಿನೀಡಿ ಮಾಹಿತಿಯನ್ನು ಕಲೆಹಾಕುವುದರೊಂದಿಗೆ ಅಲ್ಲಿನ ಕಲಾ ಸೌಂದರ್ಯವನ್ನು ನೇರವಾಗಿ ಆಸ್ವಾದಿಸಲು ನೆರವಾಗುತ್ತವೆ.

ಅಲ್ಲದೆ ಹೆಚ್ಚಿನದಾಗಿ ಪಠ್ಯವಿಷಯಗಳನ್ನೆ ಚಟುವಟಿಕೆಯಾಗಿ ರೂಪಿಸುವುದರಿಂದ ಉತ್ತಮ ಫಲಿತಾಂಶ ಪಡೆಯಲು ಕಾರಣವಾಗುತ್ತದೆ.

**ಉಪಸಂಹಾರ :** ಒಟ್ಟಿನಲ್ಲಿ **'ಮಾಡಿ ಕಲಿ ನೋಡಿ ಕಲಿ'** ಎನ್ನುವಂತೆ ವಿದ್ಯಾರ್ಥಿಗಳು ಯಾವಾಗಲೂ ಚಟುವಟಿಕೆ ಯಿಂದಿರಲು ಚಟುವಟಿಕೆಗಳು ಸಹಕಾರಿಯಾಗಬಲ್ಲವು. ಕಲಿಕೆ ಆಸಕ್ತಿದಾಯವಾಗಬಲ್ಲದು. ಹಾಗೇಯೆ ಕಲಿಕೆ ನಿರಂತರವಾಗಿ ಮತ್ತು ಸಮಗ್ರವಾಗಿರಲು ಸಾಧ್ಯವಾಗುತ್ತದೆ ಎಂದು ಹೇಳಬಹುದು.

## 31. ಪರಿಸರ ಮಾಲಿನ್ಯ

**ಪೀಠಿಕೆ :** ನಾವು ಮತ್ತು ನಮ್ಮ ಸುತ್ತ ಮುತ್ತಲಿನ ಬೆಟ್ಟ–ಗುಡ್ಡ, ಕಲ್ಲು–ಮಣ್ಣು, ಮರ–ಗಿಡ, ನೀರು ವಾಯು, ಪ್ರಾಣಿ–ಪಕ್ಷಿ ಚರಾಚರ ವಸ್ತುಗಳನ್ನು ಪರಿಸರ ಎಂದು ಕರೆಯಬಹುದು. ಇಂತಹ ಪರಿಸರ ಮಲಿನವಾಗುವುದು ಪರಿಸರ ಮಾಲಿನ್ಯ ಎಂದು ಕರೆಯಲಾಗಿದೆ. ಪರಿಸರ ಮಾಲಿನ್ಯವಾಗುವುದರಿಂದ ಭೂಮಿಯ ಮೇಲಿನ ಪ್ರತಿಯೊಂದು ಜೀವಿಗೆ ಹಾನಿಕಾರಕವಾಗುತ್ತದೆ.

**ವಿಷಯ ವಿವರಣೆ :** ಹೆಚ್ಚುತ್ತಿರುವ ಜನಸಂಖ್ಯೆ , ಪರಿಸರ ಮತ್ತು ಸ್ವಚ್ಛತೆ ಮಹತ್ವದ ಅರಿವಿಲ್ಲದಿರುವುದು, ಅಜ್ಞಾನ, ಮೂಢನಂಬಿಕೆಗಳು, ವಸ್ತುಗಳ ಮರುಬಳಕೆಯಲ್ಲಿ ಅಸಡ್ಡೆ, ಅತಿ ವಾಹನಗಳ ಬಳಕೆ, ಕಾರ್ಖಾನೆಗಳ ಅಸುರಕ್ಷಿತ ಕಾರ್ಯಗಳು, ಕಾಡುಗಳ ನಾಶ, ನಗರ ನಿರ್ಮಾಣ ಇತ್ಯಾದಿ ಕಾರ್ಯಗಳು ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿವೆ. ಇಂದಿನ ದಿನಮಾನಗಳಲ್ಲಿ ಪರಿಸರ ಮಾಲಿನ್ಯ ಅತಿಯಾಗಿದ್ದು ಜಾಗತಿಕ ತಾಪಮಾನ ಏರುಪೇರಾಗುತ್ತಿದೆ. ಸರಿಯಾದ ಮಳೆ–ಬೆಳೆ ಬರಲು ಸಾಧ್ಯವಾಗುತ್ತಿಲ್ಲ. ಜಲಮಾಲಿನ್ಯ, ವಾಯುಮಾಲಿನ್ಯ, ಭೂಮಾಲಿನ್ಯ, ಶಬ್ಧಮಾಲಿನ್ಯಗಳು ಉಂಟಾಗುವುದರಿಂದ ಜನರ ಆರೋಗ್ಯದ ಮೇಲು ಪರಿಣಾಮ ಉಂಟಾಗಿ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಇದರಿಂದ ಮಾನವ ಜನಾಂಗವೇ ಭೂಮಿಯ ಮೇಲೆ ವಾಸ ಮಾಡುವುದು ದುಸ್ತರವಾಗುವ ಕಾಲ ಸಮೀಪಿಸಿ ಬಿಟ್ಟಿದೆ ಎಂದು ಹೇಳಬಹುದು. ಆದ್ದರಿಂದ ಪರಿಸರ ಮಾಲಿನ್ಯವನ್ನು ತಡೆಗಟ್ಟಿ ಮಾನವ ಕುಲದ ಒಳಿತಿಗೆ ಎಲ್ಲರೂ ಪರಿಶ್ರಮಿಸಬೇಕಾಗಿದೆ. ಪರಿಸರ ಸಂರಕ್ಷಣೆ ಮಾಡುವುದು ಎಲ್ಲರ ಕರ್ತವ್ಯವಾಗಬೇಕು. ಪ್ರತಿಯೊಬ್ಬರಲ್ಲೂ ಪರಿಸರದ ಕಾಳಜಿಯ ಬಗ್ಗೆ ಅರಿವು ಮೂಡಿಸುವ ಯೋಜನೆ ಆಗಬೇಕು. ಕಾಡುಗಳನ್ನು ನಾಶಮಾಡಬಾರದು, ಬೆಳೆಸಬೇಕು. ಕಾಡುಗಳಿಂದ ನಾಡು ಸುರಕ್ಷತವಾಗಿರಲು ಸಾಧ್ಯ. ಹೆಚ್ಚು ಹೆಚ್ಚು ಗಿಡಗಳನ್ನು ಬೆಳೆಸಬೇಕು. ನೀರಿನ ಮಿತಬಳಕೆ, ವಾಹನಗಳ ಮಿತಬಳಕೆ , ಕಾರ್ಖಾನೆಗಳಿಂದ ಮಾಲಿನ್ಯವಾಗದಂತೆ ಪರ್ಯಾಯ ವ್ಯವಸ್ಥೆಗಳನ್ನು ಕೈಗೊಳ್ಳುವುದು. ನೀರು, ಪ್ಲಾಸ್ಟಿಕ್, ಕಬ್ಬಿಣದಂತಹ ವಸ್ತುಗಳನ್ನು ಮರುಬಳಕೆಮಾಡುವ ವ್ಯವಸ್ಥೆಯನ್ನು ರೂಪಿಸುವುದು.

ಉಪಸಂಹಾರ : **'ಕಾಡಿದ್ದರೆ ನಾಡು–ನಾಡಿದ್ದರೆ ನಾವು'**. ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ. ವಿದ್ಯಾರ್ಥಿಗಳಾದ ನಾವು ಪರಿಸರ ಸಂರಕ್ಷಣೆ ಅರಿವನ್ನು ಮೂಡಿಸಿಕೊಂಡು ಪ್ರತಿಯೊಬ್ಬರಲ್ಲೂ ಜಾಗೃತಿಯನ್ನು ತರಬೇಕು. ಮೊದಲು ನಮ್ಮಸುತ್ತ–ಮುತ್ತ.ಮನೆ ,ಶಾಲಾ–ಕಾಲೇಜು, ಗ್ರಾಮಗಳಲ್ಲಿ ಹೆಚ್ಚಿನ ಗಿಡಗಳನ್ನು ನೆಟ್ಟು ಬೆಳೆಸಬೇಕು. ಇತರರಿಗೂ ಬೆಳೆಸಲೂ ಪ್ರೇರಕರಾಗಬೇಕು. ಅಂದಾಗ ಪರಿಸರ ಉಳಿಯಲು, ಬೆಳೆಯಲು ಸಾಧ್ಯವಾಗುತ್ತದೆ. ಎಂಬುದೆ ನಮ್ಮೆಲ್ಲರ ಆಶಯವಾಗಬೇಕಿದೆ. **'ಮನೆಗೊಂದು ಮಗು ಮಗುವಿಗೊಂದು ಮರ'**

# ಗಾದೆ ಮಾತುಗಳ ವಿಸ್ತರಣೆ

ಗಾದೆಗಳು ಜನಜನಿತವಾದ ಅನುಭವಿಗಳಿಂದ ನುಡಿಯಲ್ಪಟ್ಟ ಸತ್ಯ ವಾಕ್ಯಗಳು. ನಮ್ಮ ಜನಪದರು ಅನುಭವಿಸಿದ ಕಷ್ಟಗಳು, ಅವರ ಸುಖಗಳು, ಅವರು ಕಂಡುಕೊಂಡ ನೀತಿಪಾಠಗಳು ಇವೆಲ್ಲವನ್ನು ಒಂದೇ ವಾಕ್ಯದಲ್ಲಿ ಮನಸ್ಸಿಗೆ ತಟ್ಟುವಂತೆ ಅತ್ಯಂತ ಆಳವಾಗಿ ಈ ಜೀವನದ ಪಾಠವನ್ನು ಹೇಳಿ ಕೊಡುತ್ತವೆ. ಗಾದೆಗಳನ್ನು ವೇದಗಳಿಗೆ ಹೋಲಿಸಿಲಾಗಿದೆ. ಗಾದೆಗಳು ವೇದಗಳಿಗೆ ಸಮ, ವೇದ ಸುಳ್ಳಾದರು ಗಾದೆ ಸುಳ್ಳಾಗದು ಎಂಬುದು ಗಾದೆಯ ಮಹತ್ವವನ್ನು ಸಾರಿ ಹೇಳುತ್ತದೆ. ಇವು ನಮ್ಮ ಜನಪದರ ಅನುಭವದ ನುಡಿಮುತ್ತುಗಳಾಗಿವೆ. ಈ ಗಾದೆಗಳು ಹಿರಿಯರು ಹೇಳಿದ ಜೀವನಾನುಭವದಲ್ಲಿರುವ ಇವು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತಿರುತ್ತದೆ.

ಇಂಗ್ಲೀಷಿನ proverb ಎಂಬ ಶಬ್ಧಕ್ಕೆ ಸಂವಾದಿಯಾಗಿ ಗಾದೆ ಎಂಬ ಶಬ್ಧವನ್ನು ಬಳಸುತ್ತಿದೆ. ಜನಪದ ಗಾದೆಗಳು ಮೂಲತಃ ಜನಪದ ಕಾವ್ಯಾಂಶಗಳೇ. ಗಾದೆಯನ್ನು ಜನಪದರ ಹಿತನುಡಿ ಎನ್ನಬಹುದು. ಗಾದೆಗಳಲ್ಲಿ ಜನರ ಮನಸ್ಸಿನ ಮೌಲ್ಯಗಳ ಹಲವು ಬಣ್ಣಗಳನ್ನು ಕಾಣಬಹುದು. ಸಂಸ್ಕೃತದ ಗಾಥಾ ಶಬ್ದದ ತದ್ಭವವೇ ಗಾದೆಯಾಗಿದೆ.

ಮೊಗೆದಷ್ಟು ದೊರಕುವ ಕನ್ನಡದ ಗಣಿ ಈ ಗಾದೆ ಮಾತುಗಳ ಖನಿ. ಅವುಗಳಲ್ಲಿ ಕೆಲವು ಗಾದೆ ಮಾತುಗಳನ್ನು ನೋಡೋಣ.

**1. ಮಿಂಚಿಹೋದ ಕಾಲಕ್ಕೆ ಚಿಂತಿಸಿ ಫಲವೇನು :-**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ.ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ 'ಮಿಂಚಿಹೋದ ಕಾಲಕ್ಕೆ ಚಿಂತಿಸಿ ಫಲವೇನು' ಎಂಬ ಗಾದೆಯೂ ಒಂದಾಗಿದೆ. ಕೆಲವು ಸಲ ಅನಿರೀಕ್ಷಿತವಾಗಿ ಆಗ ಬೇಕಾದ ಕೆಲಸಕ್ಕೆ ಬದಲಾಗಿ ಇನ್ನೇನೋ ಆಗುವ ಸಂಭವವಿರುತ್ತದೆ.ಹಾಗಾದಾಗ ಅದಕ್ಕಾಗಿ ಯೋಚಿಸಿದರೆ ತಲೆಕೆಡಿಸಿಕೊಂಡರೆ ಉಪಯೋಗವಿಲ್ಲವೆಂದು ಈ ಗಾದೆ ತಿಳಿಸುತ್ತದೆ. ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸದೇ ಮುಂದಿನ ಕಾರ್ಯದ ಬಗ್ಗೆ ಚಿಂತನೆ ಮಾಡುವುದು ಬುದ್ಧಿವಂತರ ಲಕ್ಷಣ. ಕೆಲವೊಮ್ಮೆ ನಮ್ಮ ತಪ್ಪಿನಿಂದ ಅಥವಾ ಪ್ರಕೃತಿಯ ವಿಕೋಪದಿಂದ ಆಗಬಾರದ್ದು ಆಗಿಬಿಡುತ್ತದೆ. ಅದಕ್ಕಾಗಿ ಚಿಂತಿಸುವುದರಿಂದ ಯಾವುದೇ ಪ್ರಯೋಜನವಿಲ್ಲ. ಅಂತಹ ಸಂದರ್ಭದಲ್ಲಿ ಅದನ್ನು ಧೈರ್ಯದಿಂದ ಎದುರಿಸಬೇಕು ಎಂಬುದು ಈ ಗಾದೆಯ ಮಾತಿನ ಅರ್ಥವಾಗಿದೆ.

**2. 'ಇರುಳು ಕಂಡ ಬಾವಿಗೆ ಹಗಲು ಬೀಳಬಾರದು' :-**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ.ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದುಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ 'ಇರುಳು ಕಂಡ ಬಾವಿಗೆ ಹಗಲುಬೀಳಬಾರದು' ಎಂಬ ಗಾದೆಯೂ ಒಂದಾಗಿದೆ. ಕಗ್ಗತ್ತಲೆಯ ರಾತ್ರಿಯಲ್ಲಿ ಕಾಣದೆ ಬಾವಿಗೆ ಬೀಳುವುದು ಸಹಜವೇ. ಆದರೆ ರಾತ್ರಿಯ ವೇಳೆಯಲ್ಲಿ ನೋಡಿ ಬಂದ ಬಾವಿಗೆ ಹಗಲಿನಲ್ಲಿ ಬೀಳುವುದು ಅಸಹಜವಲ್ಲವೇ? ನಾವು ಕೆಟ್ಟ ಹಾದಿಯನ್ನು ಹಿಡಿದಿದ್ದೇವೆ, ತಪ್ಪು ಮಾಡುತ್ತಿದ್ದೇವೆ ಎಂದು ತಿಳಿದು ಸಹ ಅನೇಕ ಜನ ಸರಿದಾರಿಗೆ ಹೋಗದೆ ಮತ್ತೇ ಮತ್ತೇ ತಪ್ಪನ್ನೇ ಮಾಡುತ್ತಾರೆ. ಕುಡಿತದ ಅಭ್ಯಾಸವಿರುವವರು ಕುಡಿದಾಗ ಮಾಡಬಾರದ ಕೆಲಸ ಮಾಡುತ್ತಾರೆ. ನಶೆ ಇಳಿದ ಮೇಲೆ ಪಶ್ಚಾತ್ತಾಪ ಪಡುತ್ತಾರೆ. ಇನ್ನು ಕುಡಿಯುವುದಿಲ್ಲವೆಂದು ಸಂಕಲ್ಪ ಮಾಡುತ್ತಾರೆ. ಆದರೆ ಕುಡಿಯುವ ಸಮಯ ಬಂದೊಡನೆ ಅವರ ನಡೆ ಮದ್ಯದ ಅಂಗಡಿಯ ಕಡೆ ಇರುತ್ತದೆ. ಎಚ್ಚೆತ್ತು ನಡೆಯಬೇಕು. ತಿಳಿದು ಅಪಾಯಕ್ಕೆ ಒಳಗಾಗಬಾರದು ಎಂಬುದು ಈ ಗಾದೆಯ ಮಾತಿನ ಅರ್ಥವಾಗಿದೆ.

**3. ಬೆಳ್ಳಗಿರುವುದೆಲ್ಲಾ ಹಾಲಲ್ಲ :-**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ.ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದುಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ 'ಬೆಳ್ಳಗಿರುವುದೆಲ್ಲಾ ಹಾಲಲ್ಲ' ಎಂಬ ಗಾದೆಯೂ ಒಂದಾಗಿದೆ. ಆಕಾರದಲ್ಲಿ ಹೋಲಿಕೆ ಇದ್ದ ಮಾತ್ರಕ್ಕೆ ಗುಣದಲ್ಲಿ ಸಾಮ್ಯತೆ ಇರಬೇಕೆಂದೇನೂ ಇಲ್ಲ. ಎಂಬ ಅರ್ಥದಲ್ಲಿ ಈ ಗಾದೆ ಮಾತನ್ನು ಹೇಳಲಾಗಿದೆ. ಹಾಲು ಒಂದು ದ್ರವ. ತನ್ನ ಗುಣಗಳಿಂದ ಎಲ್ಲಲ್ಲೂ ಶ್ರೇಷ್ಠವಾದ ಆಹಾರವಾಗಿದೆಯೆಂದು ಪರಿಗಣಿಸಲಾಗಿದೆ. ಆದದರಿಂದಲೇ ಹಾಲನ್ನು ಅಮೃತಕ್ಕೆ ಹೋಲಿಸಿದ್ದಾರೆ. ಆದರೆ ಸುಣ್ಣದ ನೀರು ಬಿಳಿ ಬಣ್ಣವನ್ನೇ ಹೊಂದಿರುತ್ತದೆ. ಅಂದ ಮಾತ್ರಕ್ಕೆ ಅದು ಹಾಲಾಗಲು ಸಾಧ್ಯವಿಲ್ಲ. ಹೀಗೆ ಮೇಲ್ನೋಟಕ್ಕೆ ಶ್ರೇಷ್ಠವಾಗಿ ಕಂಡರೂ ಶ್ರೇಷ್ಠವಾಗಲು ಸಾಧ್ಯವಿಲ್ಲ. ವಜ್ರ ವಜ್ರವೇ ಹೊರತು. ಗಾಜಾಗಲು ಸಾಧ್ಯವಿಲ್ಲ. ಗುಣದಲ್ಲಿ ಶ್ರೇಷ್ಠವಾಗಿರಬೇಕೆ ಹೊರತು ಲಕ್ಷಣದಿಂದಲ್ಲ ಎಂಬುದನ್ನು ಈ ಗಾದೆ ಮಾತು ಸೂಚಿಸುತ್ತದೆ.

**4. ತುಂಬಿದ ಕೊಡ ತುಳುಕುವುದಿಲ್ಲ:-**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ.ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದುಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ತುಂಬಿದ ಕೊಡ ತುಳುಕುವುದಿಲ್ಲ' ಎಂಬ ಗಾದೆಯೂ ಒಂದಾಗಿದೆ.

ಒಂದು ಕೊಡದ ತುಂಬ ನೀರನ್ನು ತುಂಬಿ ಹೊತ್ತೊಯ್ದರೆ ನೀರಿನ ಸ್ವಲ್ಪ ಭಾಗವೂ ಚೆಲ್ಲುವುದಿಲ್ಲ. ಶಬ್ದವನ್ನುಂಟು ಮಾಡುವುದಿಲ್ಲ. ಅದೇ ಕೊಡದಲ್ಲಿ ಅರ್ಧದಷ್ಟು ಮಾತ್ರ ನೀರನ್ನು ತುಂಬಿ, ಹೊತ್ತೊಯ್ದರೆ ಗುಳುಗುಳು ಶಬ್ದವನ್ನು ಮಾಡುತ್ತಾ, ನೀರನ್ನು ಚೆಲ್ಲುತ್ತಾ ನಮ್ಮನ್ನು ಒದ್ದೆ ಮಾಡುತ್ತದೆ. ಇದು ಕೊಡದಲ್ಲಿ ನೀರಿಲ್ಲ ಎಂಬುದನ್ನು ಸಹ ಸೂಚಿಸುತ್ತದೆ. ಹಾಗೆಯೇ ನಿಜವಾದ ವಿದ್ಯಾವಂತರಾದವರು; ನೀತಿವಂತವರಾದವರು ಹೆಚ್ಚು ಮಾತನಾಡುವುದಿಲ್ಲ; ಆಟಾಟೋಪ ತೋರುವುದಿಲ್ಲ. ಆದರೆ ಪ್ರಯೋಜನಕಾರಿಗಳಾಗಿರುತ್ತಾರೆ. 'ಅಲ್ಪವಿದ್ಯಾ ಮಹಾಗರ್ವಿ' ಎಂಬ ಗಾದೆಯೇ ಇದೆ. ಅಲ್ಪ ವಿದ್ಯಾವಂತರು ಹೆಚ್ಚು ಹಾಗೂ ಅನಾವಶ್ಯಕ ಮಾತನಾಡಿ , ತಮ್ಮ ಟೊಳ್ಳುತನವನ್ನು ಪ್ರದರ್ಶಿಸುತ್ತಾರೆ. ಗೊನೆ ತುಂಬಿದ ಬಾಳೆಯ ಗಿಡದಂತೆ ಬಾಗಿ, ವಿನಯದಿಂದ ಇದ್ದು; ಅಗತ್ಯ ಸಮಯದಲ್ಲಿ ತಮ್ಮ ವಿದ್ಯೆಯನ್ನು, ಮಾತನ್ನು ಪ್ರದರ್ಶಿಸಬೇಕು ಎಂಬುದು ಈ ಗಾದೆಯ ಒಳಾರ್ಥವಾಗಿದೆ.

**5. ಹಿತ್ತಲಗಿಡ ಮದ್ದಲ್ಲ :-**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ.ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದುಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ 'ಹಿತ್ತಲಗಿಡ ಮದ್ದಲ್ಲ' ಎಂಬ ಗಾದೆಯೂ ಒಂದಾಗಿದೆ. ಯಾವುದು ನಮ್ಮ ಸನಿಹದಲ್ಲಿ ಇರುತ್ತದಯೋ ಅದರ ಮೌಲ್ಯ ನಮಗೆತಿಳಿಯುವುದಿಲ್ಲ ಎಂಬುದನ್ನು ಈ ಗಾದೆ ತಿಳಿಸುತ್ತದೆ. ನಮ್ಮ ರೋಗವನ್ನು ವಾಸಿ ಮಾಡಿಕೊಳ್ಳುವ ಮದ್ದಿನ ಗಿಡ ನಮ್ಮ ಮನೆಯ ಹಿತ್ತಲಿನಲ್ಲೇ ಇದ್ದರೂ, ನಾವು ಅದನ್ನು ಬಳಸದೇ ಬೇರೆ ಕಡೆ ಹೋಗಿ ಮದ್ದನ್ನು ತರುತ್ತವೆ. ಅದೇ ರೀತಿಯಲ್ಲಿ ನಮ್ಮ ಸಮಸ್ಯೆಗಳಿಗೆ, ಕಷ್ಟಗಿಗೆ ನಮ್ಮ ಮನೆಯಲ್ಲಿ ಇರುವವರೇ ಅಥವಾ ಹತ್ತಿರದವರೇ ಪರಿಹಾರಗಳನ್ನು ನೀಡಲು ಸಮರ್ಥರಿದ್ದರೂ ಅವರನ್ನು ಕಡೆಗಣಿಸಿ, ನಾವು ನಂಬದೇ ಬೇರೆಯವರ ಬಳಿಯಲ್ಲಿ ಪರಿಹಾರಕ್ಕಾಗಿ ಹಾತೊರೆಯುತ್ತೇವೆ. ಅಂದರೆ ನಮ್ಮ ಹತ್ತಿರದವರ ಮೇಲೆಯೇ ನಮಗೆ ನಂಬಿಕೆ ಇಲ್ಲ ಅಥವಾ ನಮ್ಮವರನ್ನೇ ನಾವು ನಂಬುವುದಿಲ್ಲ. ಎಂಬುದು ಈ ಗಾದೆಯ ಒಳಾರ್ಥವಾಗಿದೆ.

**6. ಆರೋಗ್ಯವೇ ಭಾಗ್ಯ :–**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ.ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದುಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ 'ಆರೋಗ್ಯವೇ ಭಾಗ್ಯ' ಎಂಬ ಗಾದೆಯೂ ಒಂದಾಗಿದೆ. ಮನುಷ್ಯ ನೆಮ್ಮದಿಯಿಂದ ಬಾಳಬೇಕು. ಆನಂದದಿಂದ ಬದುಕಬೇಕು. ಅವನಿಗೆ ಅಂತಹ ನೆಮ್ಮದಿ–ಆನಂದಗಳನ್ನು ಉತ್ತಮ ಆರೋಗ್ಯವು ಮಾತ್ರ ನೀಡುತ್ತದೆ. ಆರೋಗ್ಯವೆಂದರೆ ರೋಗರುಜಿನಗಳಿಂದ ಮುಕ್ತವಾಗಿರುವ ದೇಹ. ನಮ್ಮ ದೇಹವನ್ನೂ ಸಹ ಪ್ರತಿದಿನವೂ ಶುದ್ಧಗೊಳಿಸಬೇಕು. ಶುದ್ಧವಾದ ನೀರನ್ನು ಕುಡಿಯಬೇಕು. ಬೀದಿಯಲ್ಲಿ ಮಾರುವ ಆಹಾರ ಪದಾರ್ಥವನ್ನು ತಿನ್ನಬಾರದು. ಸಮತೋಲನ ಆಹಾರವನ್ನು ಸೇವಿಸಬೇಕು. ನಾವು ವಾಸಿಸುವ ಸ್ಥಳ ಗಾಳಿ ಸಂಚಾರಕ್ಕೆ ಯೋಗ್ಯವಾಗಿರಬೇಕು. ಕಟ್ಟಡಗಳೊಳಗೆ ಸೂರ್ಯನ ಬೆಳಕು ಬೀಳುವಂತಿರಬೇಕು.

**7. ಕೊಟ್ಟಿದ್ದು ತನಗೆ; ಬಚ್ಚಿಟ್ಟಿದ್ದು ಪರರಿಗೆ :–**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ.ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದುಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ 'ಕೊಟ್ಟಿದ್ದು ತನಗೆ; ಬಚ್ಚಿಟ್ಟಿದ್ದು ಪರರಿಗೆ' ಎಂಬ ಗಾದೆಯೂ ಒಂದಾಗಿದೆ. ತಾನು ಮಾಡಿದ ದಾನ ಯಾವತ್ತಿದ್ದರೂ ತನ್ನನ್ನು ಕಾಯುತ್ತದೆ. ತನಗೆ ಕಷ್ಟ ಬಂದಾಗ ಬೇರೆಯವರು ನನಗೂ ಸಹಾಯ ಮಾಡಡುತ್ತಾರೆ" ಎಂಬ ನಂಬಿಕೆ ಇರಬೇಕು. ದಾನ ಮಾಡದೆ ಎಲ್ಲ ಸಂಪತ್ತನ್ನು ಬಚ್ಚಿಟ್ಟರೆ ಅದು ಬೇರೆಯವರ ಪಾಲಾಗುವುದು ಖಂಡಿತ. ಆದ್ದರಿಂದ "ಪರೋಪಕಾರ್ಥಂ ಇದಂ ಶರೀರಂ" ಎಂಬಂತೆ ತನ್ನ ಸಂಪತ್ತಿನಲ್ಲಿ ಸ್ವಲ್ಪ ಭಾಗವನ್ನಾದರೂ ದಾನ ಮಾಡಬೇಕು ಎಂಬುದು ಈ ಗಾದೆಯ ಅರ್ಥವಾಗಿದ್ದು, ಈ ಗಾದೆಯು ದಾನದ ಶ್ರೇಷ್ಠತೆಯನ್ನು ತಿಳಿಸುತ್ತದೆ.

**8. ತಾಳಿದವನು ಬಾಳಿಯಾನು**

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ತಾಳಿದವನು ಬಾಳಿಯಾನು ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ. ತಾಳುವಿಕೆಗಿಂತ ಬೇರೊಂದು ತಪಸ್ಸು ಇಲ್ಲ, ತಾಳ್ಮೆಯೇ ನಿಜವಾದ ತಪಸ್ಸು. ತಲ್ಲಣಿಸದಿರು ಕಂಡ್ಯ ತಾಳು ಮನವೆ ಎಂದಿದ್ದಾರೆ ಕನಕದಾಸರು. ಶಬರಿ ತಾಳ್ಮೆಯಿಂದ ಸಾಕಷ್ಟು ವರ್ಷಗಳು ಕಾದಿದದ್ದಕ್ಕೆ ಶ್ರೀರಾಮನ ದರ್ಶನದಿಂದ ಮುಕ್ತಿ ದೊರೆಯಿತು. ತಾಳ್ಮೆಯಿಂದ ಯೋಚಿಸಿದ ಧರ್ಮಬುದ್ಧಿ ಸತ್ಯವನ್ನು ತೋರಿಸಿದನು. ಆದ್ದರಿಂದ ತಾಳ್ಮೆ ಬಹಳ ಮುಖ್ಯವಾದ ವಸ್ತು ಇದ್ದ ಹಾಗೆ. ಗಿಡ ನೆಟ್ಟ ಕೂಡಲೇ ಮರವಾಗಿ ಫಲ ಬಿಡಬೇಕು ಎಂದರೆ ಸಾಧ್ಯವಿಲ್ಲ. ಸಂಗೀತಾಭ್ಯಾಸ ಮಾಡಿದರೆ ಒಂದೇ ತಿಂಗಳಿನಲ್ಲಿ ಕಛೇರಿ ನೀಡುವಂತಾಗಬೇಕು, ಎನ್ನುವುದು ಸಾಧ್ಯವಿಲ್ಲ. ಪ್ರತಿಯೊಂದು ಸಾಧನೆಯಲ್ಲೂ ತಾಳ್ಮೆ ಬೇಕು. ತಾಳ್ಮೆ ಎಂದರೆ ಆಮೆಗತಿಯಲ್ಲಿ ಸಾಗುವುದು ಎಂದರ್ಥವಲ್ಲ ಯಾವ ಸಾಧನೆಗೆ ಎಷ್ಟು ಸಮಯ ಮತ್ತು ಪ್ರಯತ್ನಗಳು ಬೇಕೋ ಅವನ್ನು ಪೂರ್ಣತೆಯಿಂದ ಮಾಡಲು ಬೇಕಾಗುವ ಶಕ್ತಿಯೇ ತಾಳ್ಮೆ; ತಾಳ್ಮೆಯಿಂದ ಕಟ್ಟಿದ್ದು ಮತ್ತು ಪಡೆದಿದ್ದು ದೀರ್ಘಕಾಲ ಬಾಳುತ್ತದೆ. ತಾಳ್ಮೆಗೆಟ್ಟು ಕೋಪದ ಕೈಯಲ್ಲಿ ನಮ್ಮ ಮನಸ್ಸನ್ನು ನೀಡಿದರೆ ಅನಾಹುತವಾಗುವುದರಲ್ಲಿ ಸಂದೇಹವಿಲ್ಲ. ತಾಳ್ಮೆಯಿಂದ ಯೋಚಿಸಿದಾಗ ಒಳ್ಳೆಯ ಕಾರ್ಯಗಳು ಫಲಪ್ರದವಾಗುತ್ತವೆ. ಮಾಡಬೇಕಾದ ಕಾರ್ಯಗಳಿಗೆ ಯೋಜನೆಗಳು ಹೊಳೆಯುತ್ತವೆ. ಆದ್ದರಿಂದ ತಾಳ್ಮೆ ಪ್ರತಿಯೊಬ್ಬರಲ್ಲಿ ಇರಬೇಕಾದ ಅತ್ಯಮೂಲ್ಯವಾದ ಸಂಪತ್ತು ಎಂದೇ ಭಾವಿಸಿಕೊಂಡು ತಾಳ್ಮೆಯಿಂದ ಬಾಳಬೇಕು ಎಂದು ಹೇಳಬಹುದು.

**9. ಮನಸಿದ್ದರೆ ಮಾರ್ಗ.**

ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಮೇಲಿನ ಮನಸಿದ್ದರೆ ಮಾರ್ಗ ಎಂಬ ಗಾದೆಯು ಪ್ರಸಿದ್ಧವಾಗಿದೆ. ನಮ್ಮ ಒಳಿತು ಕೆಡುಕುಗಳಿಗೆ ಮನಸ್ಸೆ ಕಾರಣ ಆದ್ದರಿಂದ ನಮ್ಮ ಮನಸ್ಸನ್ನು ಒಳಿತಿಗೋಸ್ಕರ

ಉಪಯೋಗಿಸಬೇಕು. ಮನಸ್ಸು ಮಾಡಿದರೆ ನಾನು ಇದನ್ನು ಮಾಡಬಲ್ಲೆ ಎಂಬವವರ ಮಾತನ್ನು ಕೇಳಿದಾಗ ಮನಸ್ಸಿನ ಕೆಲಸ ಎಂತಹದ್ದು ಎಂಬುದು ಅರಿವಾಗುತ್ತದೆ. ನಾವು ಯಾವುದೇ ಒಂದು ಕೆಲಸವನ್ನು ಸರಿಯಾಗಿ ಮಾಡಲು ಮನದಲ್ಲಿ ಆಸಕ್ತಿ ಉಂಟಾಗಬೇಕು. ಹಾಗೆ ಆಸಕ್ತಿ ಮೂಡಲು ಮನಸ್ಸು ಮಾಡಬೇಕು. ಹಾಗೆ ಆ ಕೆಲಸದಲ್ಲಿ ಮನಸ್ಸಿಟ್ಟು ಮಾಡಿದಾಗ ಕೆಲಸಗಳು ಯಶಸ್ವಿಯಾಗುತ್ತದೆ. ಡಾ.ರಾಜಕುಮಾರವರ ಹಾಡು "ಕೈಲಾಗದು ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ ಮನಸೊಂದಿದ್ದರೆ ಮಾರ್ಗವು ಉಂಟು ಕೆಚ್ಚದೆ ಇರಬೇಕೆಂದು" ಎಂದು ಹೇಳಿರುವುದು ಗಮನಿಸಬಹುದು. ನನ್ನ ಕೈಯಲ್ಲಿ ಆಗುವುದಿಲ್ಲ ಎಂದು ಯೋಚಿಸುವುದರಿಂದ ಯಾವ ಕೆಲಸವೂ ಸಾಧ್ಯವಾಗುವುದಿಲ್ಲ. ಬದಲಾಗಿ ಮಾಡಿಯೇ ತೀರುತ್ತೇನೆ ಎಂದು ಮನಸ್ಸು ಮಾಡಿದರೆ ಎಂಥ ಕೆಲಸವಾದರೂ ಮಾಡಲು ಸಾಧ್ಯ ಎಂಬುದು ಈ ಗಾದೆ ಸೂಚಿಸುತ್ತದೆ.

### 10. ಕೈ ಕೆಸರಾದರೆ ಬಾಯಿ ಮೊಸರು

ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಮೇಲಿನ ಕೈ ಕೆಸರಾದರೆ ಬಾಯಿ ಮೊಸರು ಎಂಬ ಗಾದೆಯು ಪ್ರಸಿದ್ಧವಾಗಿದೆ. ಕರ್ಮವಿದ್ದಷ್ಟು ಫಲ ಎಂಬುದೊಂದು ಮಾತಿನಂತೆ ಕಷ್ಟಪಟ್ಟು ದುಡಿದರೆ ಮಾತ್ರ ಸುಖವಾಗಿ ಬಾಳು ಸಾಗಿಸಬಹುದು. ಮಂತ್ರದಿಂದ ಹಣ್ಣು ಉದುರಲು ಸಾಧ್ಯವಿಲ್ಲ. ಶಕ್ತಿ ಇಲ್ಲದೆ ನೆಡೆಯಲು ಸಾಧ್ಯವಿಲ್ಲ.ಹಾಗೆಯೇ ಕೈಮುಟ್ಟಿ ದುಡಿಯದಿದ್ದರೆ ಹೊಟ್ಟೆ ತುಂಬುವುದಿಲ್ಲ. ಕಷ್ಟಪಟ್ಟು ದುಡಿದರೆ ಹೊಟ್ಟೆ ತುಂಬುತ್ತದೆ. ರೈತನೊಬ್ಬ ಜಮೀನಿನಲ್ಲಿ ಕಷ್ಟಪಟ್ಟು ದುಡಿಯುತ್ತಾನೆ. ಬಂದಾಗ ಹಾಯಾಗಿ ಕುಳಿತು ಊಟ ಮಾಡಬಹುದು. ಅವನು ದುಡಿಯದಿದ್ದರೆ ಹೊಟ್ಟೆಗೆ ತಣ್ಣೀರ ಬಟ್ಟೆಯೇ ಗತಿ. ವಿದ್ಯಾರ್ಥಿಗಳು ಆಸಕ್ತಿಯಿಂದ ಕಷ್ಟಪಟ್ಟು ಓದಿದರೆ ಉತ್ತಮ ಅಂಕಗಳನ್ನು ಗಳಿಸಬಹುದೆಂದು ಹೇಳಬಹುದು. ಒಟ್ಟಿನಲ್ಲಿ ಕಷ್ಟಪಟ್ಟವರಿಗೆ ಸುಖಬಾಳು ಎಂಬುದನ್ನು ಮರೆಯಬಾರದು.

### 11. ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ\"ಕಟ್ಟುವುದು ಕಠಿಣ ಕೆಡವುಹುದು ಸುಲಭ"

ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಮೇಲಿನ ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ ಎಂಬ ಗಾದೆಯು ಪ್ರಸಿದ್ಧವಾಗಿದೆ.

ಯಾವುದೇ ಕೆಲಸವನ್ನು ಸರಿಯಾಗಿ ಮಾಡಬೇಕಾದರೆ ಕಷ್ಟಪಡಬೇಕು. ಆದರೆ ಹಾಳು ಮಾಡಲು ಕಷ್ಟ ಪಡಬೇಕಾಗಿಯೂ ಇಲ್ಲ. "ಕಟ್ಟುವುದು ಕಠಿಣ ಕೆಡವುಹುದು ಸುಲಭ" ಎಂಬ ಗಾದೆಯು ಇದೆ ಅರ್ಥವನ್ನು ಹೋಲುತ್ತದೆ. ಒಬ್ಬ ಕುಂಬಾರ ಮಡಕೆಗಳನ್ನು ಮಾಡಲು ಮಣ್ಣು ತಂದು ಅರಳನ್ನು ಬೇರ್ಪಡಿಸಿ ಮಣ್ಣನ್ನು ಹದಮಾಡಿ ಕಷ್ಟಪಟ್ಟು ಮಡಿಕೆಯನ್ನು ಮಾಡುತ್ತಾನೆ. ಆದರೆ ಆ ಮಡಿಕೆಯನ್ನು ಒಡೆಯಲು ಒಂದು ದೊಣ್ಣೆ ಪೆಟ್ಟು ಸಾಕು. ಯಾವುದೇ ಒಂದು ಉತ್ತಮ ಕೆಲಸ ಮಾಡುವುದು ತುಂಬಾ ಕಠಿಣ. ಆದರೆ ಅದೇ ಕೆಲಸವನ್ನು ಹಾಳು ಮಾಡುವುದು ಸುಲಭ. ಪ್ರಾಚೀನ ಭಾರತೀಯರು ಕಠಿಣ ಶ್ರಮವಹಿಸಿ ಭಾರತದ ಪ್ರಾಚೀನ ವಾಸ್ತುಶಿಲ್ಪಗಳನ್ನು ನಿರ್ಮಿಸಿದರು. ಆದರೆ ವಿದೇಶಿಯರು ಒಂದು ಕ್ಷಣಮಾತ್ರದಲ್ಲಿ ವಾಸ್ತುಶಿಲ್ಪಗಳನ್ನು ಕೆಡವಿ ಹಾಕಿದರು. ಹಾಗೆಯೇ ಮನುಷ್ಯ ತನ್ನ ಉತ್ತಮವಾದ ಜೀವನದ ಭವಿಷ್ಯವನ್ನು, ವ್ಯಕ್ತಿತ್ವವನ್ನು ನಿರ್ಮಿಸಿಕೊಳ್ಳಲು ಜೀವನವೆಲ್ಲ ಕಷ್ಟಪಡಬೇಕು. ಆದರೆ ವ್ಯಕ್ತಿತ್ವ ಹಾಳು ಮಾಡಿಕೊಳ್ಳುವುದಕ್ಕೆ ಒಂದರಗಳಿಗೆ ಸಾಕು. ಒಂದು ಕೊಡ ಹಾಲು ಕೆಡಲು ತೊಟ್ಟು ಹುಳಿ ಸಾಕಲ್ಲವೇ? ಆದ್ದರಿಂದ ಮಾನವ ತನ್ನ ಘನತೆಯನ್ನರಿತು ಕಾರ್ಯನಿರ್ವಹಿಸಬೇಕು ಎಂಬುದನ್ನು ಪ್ರಸ್ತುತ ಗಾದೆಯು ತಿಳಿಸುತ್ತದೆ.

### 12. ಮಾಡಿದ್ದುಣ್ಣೋ ಮಹಾರಾಯ.

ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಮೇಲಿನ ಮಾಡಿದ್ದುಣ್ಣೋ ಮಾರಾಯ ಎಂಬ ಗಾದೆಯು ಪ್ರಸಿದ್ಧವಾಗಿದೆ. ಮಾಡಿದವನಿಗೆ ನೀಡು ಭಿಕ್ಷೆ ಎಂಬ ಮಾತೊಂದಿದೆ. ನಾವು ಎಂತಹ ಕೆಲಸ

ಮಾಡುತ್ತೇವೆಯೋ ಅಂತಹ ಫಲ ದೊರೆಯುತ್ತದೆ. ಅಂದರೆ ಪ್ರತಿಯೊಬ್ಬರೂ ಮಾಡುವ ಕರ್ಮಕ್ಕೆ ಅವರ ಕರ್ಮಕ್ಕನುಸಾರವಾಗಿ ಫಲ ದೊರೆಯುತ್ತದೆ. ಭತ್ತ ಬಿತ್ತಿದರೆ, ಭತ್ತ ಬೆಳೆಯುತ್ತದೆ. ಬೇವಿನ ಬೀಜ ಬಿತ್ತಿದರೆ ಬೇವಿನ ಗಿಡ ಬೆಳೆಯುತ್ತದೆ. ಏನಾದರೂ ಕೆಟ್ಟ ಕೆಲಸ ಮಾಡಿ ಅದರಿಂದ ಕೆಟ್ಟ ಫಲವನ್ನು ಅನುಭವಿಸುವಾಗ ಸಂಕಟಪಡುವುದಕ್ಕಿಂತ ಮಾಡುವ ಕೆಲಸವನ್ನು ಒಳ್ಳೆಯದಾಗಿ ಫಲವನ್ನು ಅನುಭವಿಸಬೇಕು ನಾವು ಮಾಡುವ ಒಳ್ಳೆಯ ಕಾರ್ಯಗಳು ನಮ್ಮ ಒಳ್ಳೆಯ ವ್ಯಕ್ತಿತ್ವವನ್ನು ತೋರಿಸುತ್ತವೆ. ನಾವು ಮಾಡುವ ಕಾರ್ಯ ಸಮಾಜಕ್ಕೆ ಒಳ್ಳೆಯದಾಗಬೇಕು. ಆದ್ದರಿಂದ ನಿರ್ಮಲ ಮನಸ್ಸಿನಿಂದ ಒಳ್ಳೆಯ ಕಾರ್ಯಗಳನ್ನು ಮಾಡಿ ನಮ್ಮ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಬೇಕು. ನಾವು ಮಾಡುವ ಕೆಟ್ಟ ಕೆಲಸದಿಂದ ಕೆಟ್ಟ ಪರಿಣಾಮವನ್ನು ಅನುಭವಿಸಬೇಕಾಗುತ್ತದೆ. ನಾವು ಮತ್ತೊಬ್ಬರಿಗೆ ಕೆಟ್ಟದ್ದು ಮಾಡಿದರೆ ಬೇರೆ ಯಾವ ರೀತಿಯಿಂದಲಾದರೂ, ನಮಗೆ ಕೆಟ್ಟದ್ದೇ ಆಗುತ್ತದೆ. ಯಾವಾಗಲೂ ಪರದ್ರೋಹ ಕೆಟ್ಟದ್ದೇ. ಆದ್ದರಿಂದ ಸದಾ ಒಳ್ಳೆಯ ರೀತಿಯಲ್ಲಿ ಜೀವನವನ್ನು ಸಾಗಿಸಬೇಕು. ಒಳ್ಳೆಯ ಕಾರ್ಯಗಳನ್ನು ಒಳ್ಳೆಯ ಯೋಚನೆಗಳನ್ನು ಮಾಡಿದರೆ ದೇವರು ಸಹ ಮೆಚ್ಚುತ್ತಾನೆ.

**13. ಕೂಡಿಬಾಳಿದರೆ ಸ್ವರ್ಗ ಸುಖ.**

ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಮೇಲಿನ ಕೂಡಿಬಾಳಿದರೆ ಸ್ವರ್ಗ ಸುಖ ಎಂಬ ಗಾದೆಯು ಪ್ರಸಿದ್ಧವಾಗಿದೆ. ವಸುದೈವ ಕುಟುಂಬಂ ಎಂಬ ಮಾತನ್ನು ನೆನೆದರೆ ಸಾಕು ಈ ಗಾದೆ ಅರ್ಥ ಪರಿಪೂರ್ಣವಾಗುತ್ತದೆ. ಮನುಷ್ಯ ಸಂಘಜೀವಿ. ಅವನು ಒಬ್ಬಂಟಿಯಾಗಿ ಬದುಕುವುದು ಬಲು ಕಷ್ಟ. ಆದ್ದರಿಂದ ಎಲ್ಲರ ಸಮೂಹದಲ್ಲಿ ಸುಖವಾಗಿ ಬಾಳುತ್ತಾನೆ. ಹನಿ ಹನಿ ಕೂಡಿ ಹಳ್ಳ ತೆನೆ ತೆನೆ ಕೂಡಿ ಬಳ್ಳ ಎನ್ನುವ ಹಾಗೆ ಕುಟುಂಬದ , ಸಮಾಜದ ಎಲ್ಲಾ ಜನರು ಒಟ್ಟಾಗಿ ಕೂಡಿ ಬಾಳಿದರೆ ಸ್ವರ್ಗ ಸುಖವನ್ನು ಅನುಭವಿಸಬಹುದು. ಸ್ವರ್ಗಸುಖ ಬೇರೆಲ್ಲೂ ಇಲ್ಲ ನಮ್ಮ ಹೊಂದಾಣಿಕೆಯಲ್ಲಿದೆ. ಒಗ್ಗಟ್ಟಿನಲ್ಲಿದೆ. ಸಮೂಹವಾಗಿ ಕೂಡಿ ಬಾಳುವುದರಲ್ಲಿದೆ.ಒಂದು ಕಾಡಿನಲ್ಲಿ ವಿವಿಧ ಜಾತಿಯ ಪ್ರಾಣಿಗಳು ಒಗ್ಗಟ್ಟಾಗಿದ್ದವು. ಅವುಗಳು ಒಗ್ಗಟ್ಟಾಗಿದ್ದಾಗ ಕಾಡು ಬಹು ಸುಂದರವಾಗಿ, ಹಚ್ಚಹಸುರಿನಿಂದ ಕಂಗೊಳಿಸುತ್ತಿತ್ತು. ಯಾವುದೋ ಕಾರಣದಿಂದ ಬೇರೆ ಬೇರೆಯಾಗಿ ದೂರ ದೂರವಾದವು.ಈ ಸಮಯವನ್ನು ನೋಡಿದ ಮನುಷ್ಯ ಕಾಡನ್ನು ಕಡಿಯಲು ಪ್ರಾರಂಭಿಸಿದನು. ಇದರಿಂದ ಪ್ರಾಣಿಗಳಿಗೆ ಆಹಾರದ ಕೊರತೆಯುಂಟಾಯಿತು.ಇದನ್ನು ಅರಿತ ಪ್ರಾಣಿಗಳು ನಾವು ಹೀಗೆ ಬೇರೆ ಬೇರೆಯಾಗಿದ್ದರೆ ಮುಂದೆ ನಮ್ಮ ಆಹಾರಕ್ಕೆ ಸಂಪೂರ್ಣ ಕುತ್ತು ಬರುವುದೆಂದು ತಿಳಿದು ಮತ್ತೆ ಎಲ್ಲವೂ ಒಂದಾಗಲು ಪ್ರಾರಂಭಿಸಿದವು.ಇದರಿಂದ ಮನುಷ್ಯ ಅವುಗಳಿಗೆ ಹೆದರಿ ಕಾಡಿನಿಂದ ಓಡಿಹೋದನು. ಮತ್ತೆ ಸ್ವಲ್ಪ ದಿನಕ್ಕೆ ಕಾಡು ಸಮೃದ್ಧವಾಯಿತು. ಪ್ರಾಣಿಗಳೆಲ್ಲವೂ ಮತ್ತೆ ಎಂದಿನಂತೆ ಸುಖವಾಗಿದ್ದವು.ಇದರಿಂದ ಎಲ್ಲರೂ ಒಟ್ಟಾಗಿ ಬಾಳಿದರೆ ಸುಖವಾಗಿ ಇರಬಹುದು ಎಂದು ತಿಳಿಯಿತು.ಆದ್ದರಿಂದ ನಾವೆಲ್ಲರೂ ಅವರಿವರು ಎನ್ನದೇ ಕೂಡಿ ಬಾಳಿದರೆ ಸ್ವರ್ಗ ಸುಖವನ್ನು ಕಾಣಬಹುದು ಎಂದು ಹೇಳಬಹುದು.

**14. ಹೆತ್ತ ತಾಯಿ; ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು.**

ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಹೆತ್ತ ತಾಯಿ; ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ. 'ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ಇದು ವಾಲ್ಮೀಕಿ ರಾಮಾಯಣದಲ್ಲಿ ಬರುವ ಒಂದು ಮಾತು. ಇದರ ಅನುವಾದವೇ ಮೇಲಿನ ಹೇಳಿಕೆ. ಇದರಲ್ಲಿ ತಾಯಿ ಮತ್ತು ನಾಡಿನ ಮಹತ್ವ ಅಡಗಿದೆ. ಹೆತ್ತ ತಾಯಿ ಹೊತ್ತ ನಾಡು ಎರಡು ಒಂದೇ. ನಮ್ಮನ್ನು ಹೆತ್ತು ಹೊತ್ತು ಸಾಕಿ ಸಲುಹಿದ ತಾಯಿಯ ಮಡಿಲು ಸ್ವರ್ಗಕ್ಕಿಂತಲೂ ಮಿಗಿಲಾದ ಸುಖವನ್ನು ನೀಡುತ್ತದೆ ಎನ್ನುವುದು ಅನುಭವಿಗಳ ಹೇಳಿಕೆ. ಅಂತೆಯೇ ಹೊತ್ತನಾಡು ನಮ್ಮನ್ನು ಜೀವನ ಪೂರ್ತಿ ತನ್ನ ಮಡಿಲಲ್ಲಿಟ್ಟು ಪೋಷಿಸುತ್ತದೆ. ನಮ್ಮ ಜೀವನಕ್ಕೆ ಅಗತ್ಯವಾದಂತಹ ಅನ್ನ, ನೀರು, ಬಟ್ಟೆ, ವಸತಿ, ಹಾಗೂ ಇನ್ನಿತರ ಎಲ್ಲಾ ಅವಶ್ಯಕತೆಗಳನ್ನು ಪೂರೈಸುವಂತಹ ಜನ್ಮ ಭೂಮಿಯನ್ನು ತಾಯಿಗೆ ಹೋಲಿಸಿರುವುದು ಶ್ರೇಷ್ಠವಾಗಿದೆ. ಮಕ್ಕಳ ಪಾಲನೆಗಾಗಿ ತಾಯಿ ತನ್ನ ಸುಖವನ್ನೆಲ್ಲ ಮರೆತು ಆಹಾರ ನಿದ್ರೆಗಳನ್ನು ತೊರೆದು ಮಗುವಿನ ಲಾಲನೆ ಪೋಷಣೆಗಳಲ್ಲಿಯೇ ಸುಖವನ್ನು ಕಾಣುತ್ತಾಳೆ.

ತಾಯಿಯಂತೆಯೇ ನಾವು ಹುಟ್ಟಿದ ನಾಡು ಕೂಡ. ಆ ನೆಲದಲ್ಲಿ ಆಡುತ್ತೇವೆ, ಅಗೆಯುತ್ತೇವೆ. ಬೆಳೆಯನ್ನು ಬೆಳೆಯುತ್ತೇವೆ, ಬೆಳೆದುದನ್ನು ತಿಂದು ಬದುಕುತ್ತೇವೆ. ತಾಯಿಯಂತೆ ನಾಡು ನಮ್ಮನ್ನು ಪೋಷಿಸುತ್ತದೆ. ಅದ್ದರಿಂದ ಜನ್ಮಭೂಮಿಯನ್ನು ಮರೆತವರು ತಾಯಿಯನ್ನು ಮರೆತಂತೆಯೇ ಸರಿ. ಆದುದರಿಂದ ಹೆತ್ತತಾಯಿ ಹೊತ್ತನಾಡಿನ ಋಣವನ್ನು ಮರೆಯದೇ ಅವರ ಹಿರಿಮೆಯನ್ನು ಎತ್ತಿ ಹಿಡಿಯಬೇಕಾದದ್ದು ಪ್ರತಿಯೊಬ್ಬನ ಆದ್ಯಕರ್ತವ್ಯವಾಗಿದೆ ಎಂಬುದನ್ನು ಈ ಗಾದೆ ಮಾತು ಅರ್ಥೈಸುತ್ತದೆ.

**15. ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ**

ಗಾದೆ ವೇದಕ್ಕೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ. ಗಾದೆ ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ. ಸತ್ಯ ಸದಾ ಜೀವಂತವಾದುದು; ಸುಳ್ಳು ಎಂದು ಸುಖವನ್ನು ಕೊಡಲಾರದು ಎನ್ನುವುದು ಈ ಗಾದೆಯ ಅರ್ಥ. ಸತ್ಯ ಶಾಶ್ವತವಾದದ್ದು ಆ ದೃಷ್ಟಿಯಿಂದಲೆ ನಮ್ಮ ರಾಷ್ಟ್ರೀಯ ಲಾಂಛನದಲ್ಲಿ(ಅಶೋಕ ಚಕ್ರ)'ಸತ್ಯಮೇವ ಜಯತೇ'ಎಂಬ ಬರಹ ಕಲ್ಪಾಂತರಸ್ಥಾಯಿಯಾಗಿ ರಾರಾಜಿಸುತ್ತದೆ. 'ಸತ್ಯಕ್ಕೆ ಜಯ' ಸತ್ಯವಂತರಿಗೆ ಎಂದಿದ್ದರೂ ಜಯವಿದ್ದೇ ಇದೆ ಎಂದು ಎಲ್ಲಾ ಧರ್ಮಗಳಿಂದ ತಿಳಿದು ಬಂದಿದೆ. ಸತ್ಯ ಹರಿಶ್ಚಂದ್ರ ಜೀವನವೆಲ್ಲ ಸತ್ಯಕ್ಕಾಗಿ ಹೋರಾಡಿ ಶಾಶ್ವತವಾದ ಕೀರ್ತಿಯನ್ನು ಪಡೆದನು. ಗಾಂಧೀಜಿ, ಸ್ವಾಮಿ ವಿವೇಕಾನಂದ ಮೊದಲಾದ ಮಹಾತ್ಮರು ಸತ್ಯ ಜೀವನವನ್ನು ನಡೆಸಿದರು. ಸತ್ಯವನ್ನೆ ನುಡಿಯಿರಿ, ಪ್ರಿಯವಾದದ್ದನ್ನೆ ಹೀಳಿರಿ ಎಂಬ ನೀತಿವಾಕ್ಯವು ಸತ್ಯ ನಿತ್ಯವೆಂಬುದನ್ನು ಸಾರುತ್ತದೆ. ಸುಳ್ಳಿಗೆ ಸುಖವಿಲ್ಲ ಸುಳ್ಳಿನ ಒಡನಾಟ ಕೆಸರೊಳಗೆ ಮುಳ್ಳು ತುಳಿದಂತೆ. ಸುಳ್ಳು ಹೇಳಿ ಆ ಸುಳ್ಳು ಬಯಲಾದಾಗ ಮನುಷ್ಯ ತನ್ನ ಗೌರವ ಅಂತಸ್ತು, ನಂಬಿಕೆ ಕಳೆದು ಕೊಳ್ಳುವುದರ ಜೂತೆಗೆ ಮಾನಸಿಕವಾಗಿ ನೆಮ್ಮದಿಯನ್ನು ಹಾಳುಮಾಡಿಕೊಳ್ಳ ಬೇಕಾಗುತ್ತದೆ. ಸುಳ್ಳು ಒಂದು ಬಲೆ ಇದ್ದಹಾಗೆ ಅದರಲ್ಲಿ ಸಿಕ್ಕಿಬಿದ್ದರೆ ಹೊರಬರುವುದು ಕಷ್ಟ. ಆದುದರಿಂದ ಸುಳ್ಳಿನ ದಾಸರಾಗಿ ಜೀವನವನ್ನು ಹಾಳುಮಾಡಿಕೊಳ್ಳುವ ಬದಲು ಸತ್ಯವೆಂಬ ಬೆಳಕಿನ ಹಾದಿಯಲ್ಲಿ ನಡೆದು ಜೀವನ ಸಾರ್ಥಕಗೊಳಿಸಿಕೊಳ್ಳ ಬೇಕು.ಸತ್ಯವೇ ಬೆಳಕು, ಸುಳ್ಳೇ ಕತ್ತಲು, ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ ಎಂಬ ಮಾತನ್ನು ಎಂದಿಗೂ ಯಾರು ಮರೆಯಬಾರದು.

**16. ಆಳಾಗಬಲ್ಲವನು; ಅರಸಾಗಬಲ್ಲನು.**

ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಮೇಲಿನ "ಆಳಾಗಬಲ್ಲವನು; ಅರಸಾಗಬಲ್ಲನು" ಎಂಬ ಗಾದೆಯು ಪ್ರಸಿದ್ಧವಾಗಿದೆ. ಆಳಾಗಿ ದುಡಿದರೆ ಅರಸನಂತೆ ಉಣ್ಣಬಹುದು. ಹಾಗೆಯೇ ಕಾರ್ಮಿಕನಾಗಿ ದುಡಿದವನು ಮುಂದೊಂದು ದಿನ ಯಜಮಾನನಾಗಬಹುದು. ಕೈ ಕೆಸರಾದರೆ ಬಾಯಿ ಮೊಸರು ಎಂಬ ಗಾದೆ ಮಾತಿನಂತೆ ಆಳಾಗಿ ದುಡಿದರೆ ಮುಂದೊಂದು ದಿನ ಹಾಯಾಗಿ ಕುಳಿತು ಜೀವನ ಸಾಗಿಸಬಹುದು. ಆದ್ದರಿಂದ ಕಾಯಕದ ಘನತೆಯನ್ನು ಅರಿತು ಕಾರ್ಯ ನಿರ್ವಹಿಸಬೇಕು. ಯಾರೇ ಆಗಲಿ ಏಕಾ ಏಕಿ ಶ್ರೀಮಂತನಾಗಲು ಸಾಧ್ಯವಿಲ್ಲ. ಕಷ್ಟಪಟ್ಟು ದುಡಿದರೆ ಮಾತ್ರ ಉನ್ನತ ಸ್ಥಾನಕ್ಕೆ ಏರಬಲ್ಲನು. ಸಾಮಾನ್ಯ ಮನುಷ್ಯ ತನ್ನ ದುಡಿಮೆಯ ಬಲದಿಂದ ಎತ್ತರಕ್ಕೆ ಏರಿರುವ ಉದಾಹರಣೆಗಳು ಸಾಕಷ್ಟಿವೆ. ಕಾಯಕವೇ ಕೈಲಾಸ ಎಂಬ ವಚನಕಾರರ ಮಾತು ನಿತ್ಯ ಸ್ಮರಿಸುವಂತಹದ್ದು. ಆದ್ದರಿಂದ ಮೊದಲು ನಾವು ಆಳಾಗಿ ದುಡಿಯಬೇಕು ಅನಂತರ ಅರಸನಂತೆ ಸುಖವಾಗಿ ಬಾಳಬಹುದು ಎಂಬುದನ್ನು ಈ ಗಾದೆಯು ತಿಳಿಸುತ್ತದೆ.

**17. ಮಾತೇ ಮೃತ್ಯು-ಮಾತೇ ಮುತ್ತು ಗಾದೆ.**

ವೇದಕ್ಕೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ. ಗಾದೆ ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

ಈ ಗಾದೆಯು ನಿಮ್ಮ ಮಾತಿನ ಮಹತ್ವವನ್ನು ತಿಳಿಸುತ್ತದೆ. ಮಾತು ನಮ್ಮ ವ್ಯಕ್ತಿತ್ವದ ಕನ್ನಡಿಯಾಗಿದೆ. ನಮ್ಮ ಬೇಕು ಬೇಡಗಳನ್ನು ಅಭಿಪ್ರಾಯಗಳನ್ನು ಬೇರೆಯವರಿಗೆ ಮಾತುಗಳ ಮೂಲಕ ತಿಳಿಸುತ್ತೇವೆ ಹಾಗೇ ಅವರಿಂದ ತಿಳಿಯುತ್ತೇವೆ. "ಮಾತು ಬಲ್ಲವ ಮಾಣಿಕ್ಯ ತಂದ, ಮಾತರಿಯದವ ಜಗಳ ತಂದ, ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು, ಮಾತು ಬಲ್ಲವನಿಗೆ ಜಗಳವಿಲ್ಲ" ಎಂಬ ಗಾದೆ ಮಾತುಗಳು ಕೂಡ ಮಾತಿನ ಮಹತ್ವವನ್ನು ತಿಳಿಸುತ್ತದೆ. ಅಂತೆಯೇ ಬಸವಣ್ಣನವರು "ನುಡಿದರೆ ಮುತ್ತಿನ ಹಾರದಂತಿರಬೇಕು ಲಿಂಗಮೆಚ್ಚಿ ಅಹುದಹುದೆನಬೇಕು ಎಂದು ಹೇಳಿದ್ದಾರೆ.

ಮಾತು ಹಿತ-ಮಿತವಾಗಿ ಕೇಳುಗರಿಗೆ ಮಧುರವಾಗಿ ಮುತ್ತಿನಂತಿರಬೇಕು. ನಯವಾದ ವಿನಯ ಪೂರ್ವಕವಾದ ಮಾತು ಕೇಳುಗರಿಗೆ ಸಂತೋಷವನ್ನುಂಟು ಮಾಡುತ್ತದೆ. ಒರಟಾದ ಮಾತು ಅಸಂತೋಷವನ್ನುಂಟು ಮಾಡುತ್ತದೆ. ಹಾಗೆ ಜಗಳಕ್ಕೆ ಕಾರಣವಾಗಬಹುದು. ಕಠೋರವಾದ ಮಾತುಗಳು ಇತರರಿಗೆ ನೋವನ್ನು ತರಬಲ್ಲವು. ಆದ್ದರಿಂದ ಮಾತು ಮುತ್ತಿನಂತಿರಬೇಕು. ಒಳ್ಳೆಯ ಮಾತು ಸ್ನೇಹ ಸಂಬಂಧವನ್ನು ಬೆಳೆಸಿದರೆ ಕೆಟ್ಟಮಾತು ಒಡಕನ್ನು ಹುಟ್ಟುಹಾಕುತ್ತದೆ. ಅದಕ್ಕಾಗಿಯೇ ಸರ್ವಜ್ಞ ಕವಿಯು "ಮಾತಿನಿಂ ನಗೆನುಡಿಯು ಮಾತಿನಿಂ ಹಗೆ ಹತಿಯು ಮಾತಿನಿಂ ಸರ್ವಸಂಪದವು ಲೋಕಕ್ಕೆ ಮಾತೆ ಮಾಣಿಕವು" ಎಂದಿದ್ದಾನೆ. ಅದುದರಿಂದ ಮಾತು ಮೃದುವಾಗಿದ್ದರೆ ಮುತ್ತಿನಂತ ಮಾತು ಎಂದು ಮಾತು ಒರಟಾಗಿದ್ದರೆ ಮೃತ್ಯುವನ್ನು ತರಬಲ್ಲದು ಎಂದು ಎಚ್ಚರಿಯಿಂದ ಮಾತನಾಡಬೇಕು ಎಂಬ ಅರ್ಥವನ್ನು ಸ್ಫುರಿಸುತ್ತದೆ.

| ಗಾದೆ ವಿಸ್ತರಿಸಿ ಬರೆಯಿರಿ ಮೌಲ್ಯಮಾಪನ ಮಾಡಲು ಅನುಸರಿಸುವ ಹಂತಗಳು ಮತ್ತು ಅಂಕಗಳು | |
|---|---|
| **ಗಾದೆಯ ಮಹತ್ವದ ವಿವರಣೆ** | **1 ಅಂಕ** |
| **ಉದಾಹರಣೆಯೊಂದಿಗೆ ಅರ್ಥ ವಿವರಣೆ** | **1 ಅಂಕ** |
| **ಭಾಷಾಶೈಲಿ ಮತ್ತು ಪದಬಂಧಗಳಿಗೆ** | **1 ಅಂಕ** |
| **ಒಟ್ಟು** | **3 ಅಂಕಗಳು** |

# ಪತ್ರ ಲೇಖನ

ಆಧುನಿಕತೆ ಮತ್ತು ತಂತ್ರಜ್ಞಾನ ಮುಂದುವರೆಯುತ್ತಾ ಹೋದಂತೆ ಪತ್ರಗಳನ್ನು ಬರೆಯುವುದು, ಬಳಕೆಮಾಡುವುದು ತುಂಬಾ ಕಡಿಮೆಯಾಗುತ್ತಾ ಬಂದಿದೆ. ಆದರೂ ಕೂಡ ಪರೀಕ್ಷೆಯ ದೃಷ್ಠಿಯಿಂದ 5 ಅಂಕಗಳಿಗೆ ಪ್ರಶ್ನೆ ಬರುವುದರಿಂದ ಪತ್ರಲೇಖನದ ಬಗ್ಗೆ ಅತ್ಯಗತ್ಯವಾಗಿ ತಿಳಿದುಕೊಳ್ಳಬೇಕಾಗುತ್ತದೆ.

ನಮ್ಮ ಎದುರಿಗೆ ಇರುವವರ ಜೊತೆ ಸಂಭಾಷಣೆ ನಡೆಸಿದಂತೆ ದೂರದಲ್ಲಿರುವ (ಬೇರೆಡೆಯಲ್ಲಿ ವಾಸಿಸುತ್ತಿರುವ) ವ್ಯಕ್ತಿಗಳ ಜೊತೆ ಮಾತುಕತೆಗೆ ಪರಸ್ಪರ ವಿಚಾರ ವಿನಿಮಯಕ್ಕೆ ಬಳಕೆಯಾಗುವ ಪರಿಣಾಮಕಾರಿ ಸಾಧನ ಪತ್ರ. ಪತ್ರಲೇಖನ ಒಂದು ಕಲೆ. ಹಿಂದೊಮ್ಮೆ ಇದು ಬಹಳ ಪರಿಣಾಮಕಾರಿಯಾದ ಸಂಪರ್ಕ ಸಾಧನವಾಗಿತ್ತು. ಪುರಾಣ, ಕಾವ್ಯಗಳಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂದೇಶ ಕಳಿಸುವಾಗ ಪಾರಿವಾಳಗಳ ಮೂಲಕ ಕಳಿಸುವ ಪರಿಪಾಠವಿತ್ತು. ಕಾಳಿದಾಸನ ಮೇಘಸಂದೇಶ ಕಾವ್ಯದಲ್ಲಿ ಸಂದೇಶವನ್ನು ಕಳುಹಿಸಲು ಮೇಘಗಳನ್ನು ಬಳಸಿದ್ದನ್ನು ನೋಡಬಹುದು. ಕಾಲಾಂತರದಲ್ಲಿ ಸಂದೇಶಗಳನ್ನು ಕಳಿಸಲು ದೂತರ ಕುದುರೆಯ ಮೇಲೆ ಸಾಗುತ್ತಿದ್ದರು. ಎಲೆಗಳ ಮೇಲೆ ಬರೆಯುತ್ತದ್ದ ಸಂದೇಶಗಳನ್ನು ಕ್ರಮೇಣ ಕಾಗದಗಳ ಮೇಲೆ ಬರೆಯಲ್ಪಟ್ಟು ಅಂಚೆ ಇಲಾಖೆಗಳ ಮೂಲಕ ಪತ್ರದ ರೂಪತಾಳಿ ಪತ್ರ ವ್ಯವಹಾರ ಪ್ರಾರಂಭವಾಯಿತು.

ಇಂದು ದೂರವಾಣಿ, ಮೊಬೈಲ್, ಗಣಕಯಂತ್ರಗಳು ಬಂದ ಮೇಲೆ ಪತ್ರ ವ್ಯವಹಾರವು ತನ್ನ ಮೊದಲಿನ ಪ್ರಾಮುಖ್ಯತೆಯನ್ನು ಕಳೆದುಕೊಂಡಿದೆ. ಇಂದು ಅಂತರ್ಜಾಲ ಸೌಲಭ್ಯದಿಂದಾಗಿ ಹೆಚ್ಚಿನ ಸಂದೇಶಗಳು ಮಿಂಚಂಚೆಯ(Mail) ಮೂಲಕ ರವಾನೆಯಾಗುತ್ತಿವೆ. ಮೊಬೈಲ್‌ನಲ್ಲಿ ಎಷ್ಟೋ ದೂರದಲ್ಲಿರುವವರಿಗೆ Whatsapp, Hike, Telegram ಇದೇ ಮೊದಲಾದ ವ್ಯವಸ್ಥೆಗಳ ಮೂಲಕ ಕ್ಷಣ ಮಾತ್ರದಲ್ಲಿ ಸಂದೇಶವನ್ನು ರವಾನಿಸಬಹುದಾಗಿದೆ. ಹಾಗಾಗಿ ಇಂದು ಪತ್ರ ಬರೆಯುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಆದರೂ ಕೂಡ ಪತ್ರಲೇಖನವು ಒಂದು ಕಲೆ. ತನ್ನಲ್ಲಿನ ವಿಚಾರವನ್ನು ಇನ್ನೊಬ್ಬರಿಗೆ ಹೇಳಲು ಇರುವ ಪರಿಣಾಮಕಾರಿ ವಿಧಾನವೇ ಪತ್ರ. ಇಲ್ಲಿ ಪತ್ರ ಬರವಣಿಗೆ ಆಕರ್ಷಕ ಪ್ರಧಾನವಾದುದು. ಬರವಣಿಗೆ ಸುಂದರವಾಗಿರಬೇಕು ಎನ್ನುವುದರ ಜೊತೆಗೆ ಪದಗಳ ಬಳಕೆ ಸೊಗಸಾಗಿರಬೇಕು ಎನ್ನುವುದು ಮುಖ್ಯವಾಗಿರುತ್ತದೆ. ಅದು ಕಾಗದದಲ್ಲಿ ನೀಡುವ ಒಂದು ಬೇಟಿ. ಬರಹ ರೂಪದಲ್ಲಿ ಕಣ್ಣಿಗೆ ಕಾಣುವ ಸಾಧನ. ಹಲವು ಕಾಲ ಇರಿಸಿಕೊಂಡು ಮತ್ತೆ ಮತ್ತೆ ಓದಬಹುದು. ಗಾಂಧೀಜಿಯವರ ಪತ್ರಗಳು ಅಂಬೇಡ್ಕರ್‌ರವರ ಪತ್ರಗಳು, ನಿಹರೂರವರು ತಮ್ಮ ಮಗಳು ಇಂದಿರಾ ಪ್ರಿಯದರ್ಶಿನಿಗೆ ಬರೆದ ಪತ್ರಗಳು ಇಂದಿಗೂ ವಿಶ್ವವಿಖ್ಯಾತವಾಗಿರುವಂತವು.

ಪತ್ರಲೇಖನದ ವಿಧಗಳು

ಸಾಮಾನ್ಯವಾಗಿ ಪತ್ರ ವ್ಯವಹಾರದಲ್ಲಿ ಎರಡು ವಿಧಗಳಿವೆ.

1. ಖಾಸಗಿ ಪತ್ರಗಳು ಅಥವಾ ವೈಯಕ್ತಿಕ ಪತ್ರಗಳು

2. ವ್ಯವಹಾರಿಕ ಪತ್ರಗಳು.

ತಂದೆ–ತಾಯಿ, ಬಂಧು–ಬಳಗ, ಸ್ನೇಹಿತರಿಗೆ ಬರೆಯುವ ಪತ್ರಗಳು ವೈಯಕ್ತಿಕ ಪತ್ರಗಳು. ಶಾಲೆಯಲ್ಲಿ ಶಿಕ್ಷಕರು, ಮುಖ್ಯೋಪಾಧ್ಯಾಯರು, ಕಾಲೇಜಿನ ಪ್ರಾಂಶುಪಾಲರಿಗೆ ಕಛೇರಿಗಳಲ್ಲಿನ ಅಧಿಕಾರಿಗಳೊಂದಿಗೆ ಪತ್ರ ವ್ಯವಹಾರ ಮಾಡುವುದು ವ್ಯವಹಾರಿಕ ಪತ್ರಗಳು.

ಸಾಮಾನ್ಯವಾಗಿ ಪತ್ರ ಲೇಖನವು ಐದು ಅಂಶಗಳನ್ನು ಹೊಂದಿರಬೇಕು. ಇದನ್ನು ಪತ್ರದ ಚೌಕಟ್ಟು ಎಂದು ಕರೆಯಬಹುದು. ಖಾಸಗಿ ಪತ್ರವೇ ಆಗಿರಲಿ ಅಥವಾ ವ್ಯವಹಾರಿಕ ಪತ್ರವಾಗಲಿ ಅದರಲ್ಲಿ ಈ ಕೆಳಗಿನ ಅಂಶಗಳು ಇರಬೇಕು.

1. ಪತ್ರ ಶೀರ್ಷಿಕೆ (ಪತ್ರದ ಪ್ರಾರಂಭ)

2. ಸಂಬೋಧನೆ ಪತ್ರದ ಒಡಲು(ವಿಷಯ ವಿವರಣೆ)

3. ಮುಕ್ತಾಯ (ಪತ್ರದ ಅಂತ್ಯ)

4. ಸಹಿ

5. ಹೊರ ವಿಳಾಸ.

**ಸಂಬೋಧನಾ ವಾಕ್ಯಗಳು**

→ ತಂದೆಗೆ ಪತ್ರ ಬರೆಯುವಾಗ – ಪೂಜ್ಯ ತೀರ್ಥರೂಪರವರಿಗೆ

→ ತಾಯಿಗೆ ಪತ್ರ ಬರೆಯುವಾಗ – ಪೂಜ್ಯ ಮಾತೃಶ್ರೀಯವರಿಗೆ

→ ಅಣ್ಣನಿಗೆ ಪತ್ರ ಬರೆಯುವಾಗ – ಪೂಜ್ಯ ತೀರ್ಥರೂಪು ಸಮಾನರಾದ ಅಣ್ಣನವರಿಗೆ

→ ಅಕ್ಕನಿಗೆ ಪತ್ರ ಬರೆಯುವಾಗ – ಪೂಜ್ಯ ಮಾತೃಶ್ರೀ ಸಮಾನರಾದ ಅಕ್ಕನವರಿಗೆ

→ ಸ್ನೇಹಿತರಿಗೆ ಪತ್ರ ಬರೆಯುವಾಗ – ನನ್ನ ಪ್ರೀತಿಯ ಸ್ನೇಹಿತ/ತೆ.. (ಸ್ನೇಹಿತರ ಹೆಸರು ಬರೆಯಬೇಕು)

→ ದೊಡ್ಡಪ್ಪ, ಚಿಕ್ಕಪ್ಪ, ಮಾವ ಇತ್ಯಾದಿ ಹಿರಿಯ ರಕ್ತಸಂಬಂಧಿಗಳಿಗೆ (ಪುರುಷರಿಗೆ) ಪತ್ರ ಬರೆಯುವಾಗ – ಪೂಜ್ಯ ತೀರ್ಥರೂಪು ಸಮಾನರಾದ ದೊಡ್ಡಪ್ಪನವರಿಗೆ.ಚಿಕ್ಕಪ್ಪನವರಿಗೆ.ಮಾವನವರಿಗೆ......

→ ದೊಡ್ಡಮ್ಮ, ಚಿಕ್ಕಮ್ಮ, ಅತ್ತೆಯವರು ಹಿರಿಯ ರಕ್ತಸಂಬಂಧಿಗಳಿಗೆ (ಸ್ತ್ರೀಯರು) ಪತ್ರ ಬರೆಯುವಾಗ

– ಪೂಜ್ಯ ಮಾತೃಶ್ರೀ ಸಮಾನರಾದ ದೊಡ್ಡಮ್ಮನವರಿಗೆ,ಚಿಕ್ಕಮ್ಮನವರಿಗೆ,ಅತ್ತೆಯವರಿಗೆ

# ಖಾಸಗಿ ಪತ್ರಗಳು

**1) ನಿಮ್ಮನ್ನು ಬಳ್ಳಾರಿಯ ಶ್ರೀದುರ್ಗಾಂಭಿಕ ಪ್ರೌಢಶಾಲೆಯಲ್ಲಿ ಓದುತ್ತಿರುವ ಸುಮಂತ ಎಂದು ಭಾವಿಸಿಕೊಂಡು ನಿಮ್ಮಶಾಲೆಯಲ್ಲಿ ನಡೆಯುವ ಶಾಲಾ ವಾರ್ಷಿಕ್ಕೋತ್ಸವಕ್ಕೆ ಬರುವಂತೆ ಆಹ್ವಾನಿಸಿ ಮೈಸೂರಿನಲ್ಲಿರುವ ನಿಮ್ಮ ತಂದೆಗೊಂದು ಪತ್ರಬರೆಯಿರಿ.**

ಸುಮಂತ
10ನೇತರಗತಿ
ಶ್ರೀದುರ್ಗಾಂಭಿಕ ಪ್ರೌಢಶಾಲೆ
ರಾಯಲ್ ವೃತ್ತ ಬಳ್ಳಾರಿ
ದಿನಾಂಕ:15-02-2019

**ತೀರ್ಥರೂಪುರವರಿಗೆ** ನಿಮ್ಮ ಮಗ/ಳು ಸುಮಂತ ಮಾಡುವ ಶಿರಸಾಷ್ಟಾಂಗ ಪ್ರಣಾಮಗಳು.

ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ಅಲ್ಲಿ ನೀವೆಲ್ಲರೂ ಕ್ಷೇಮವಾಗಿದ್ದೀರಿ ಎಂದು ಭಾವಿಸಿರುತ್ತೇನೆ. ನನ್ನ ವಿದ್ಯಾಭ್ಯಾಸವು ಉತ್ತಮವಾಗಿ ನಡೆಯುತ್ತಿದೆ. ತಾಯಿಯವರಿಗೆ ನಮಸ್ಕಾರಗಳು. ದಿನಾಂಕ 30-02-2019 ರಂದು ನಮ್ಮ ಶಾಲೆಯಲ್ಲಿ ಶಾಲಾ ವಾರ್ಷಿಕೋತ್ಸವವನ್ನು ಅದ್ದೂರಿಯಿಂದ ಮಾಡಲು ಸಿದ್ದತೆ ಮಾಡುತ್ತಿದ್ದಾರೆ. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದ್ದು ನಾನೂ ಕೂಡ ಭಾಗವಹಿಸುತ್ತಿದ್ದೇನೆ. ಆದ್ದರಿಂದ ತಾಯಿಯವರೊಂದಿಗೆ ನೀವು ತಪ್ಪದೆ ಬರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ನಿಮ್ಮ ಆಶೀರ್ವಾದಗಳನ್ನು ಬೇಡುವ,

ಇಂತಿ ನಿಮ್ಮ ಪ್ರೀತಿಯ ಮಗ/ಳು
ಸುಮಂತ

**ಅಂಚೆ ವಿಳಾಸ**
ಶ್ರೀರವಿಭೂಷಣ.ಎಸ್
ಕುವೆಂಪು ನಗರ 3ನೇ ಮುಖ್ಯರಸ್ತೆ
ಮನೆ ನಂ-625
ಮೈಸೂರು
ಅಂಚೆಪೆಟ್ಟಿಗೆ ಸಂಖ್ಯೆ-563421

**2) ನಿಮ್ಮನ್ನು ಮೈಸೂರಿನ ಶ್ರೀವಿವೇಕಾನಂದ ಪ್ರೌಢಶಾಲೆಯಲ್ಲಿ ಓದುತ್ತಿರುವ ನಂದನ ಎಂದು ಭಾವಿಸಿಕೊಂಡು ನಿಮ್ಮಶಾಲೆಯಲ್ಲಿ ನಡೆಯುವ ಶಾಲಾ ಸ್ವಾತಂತ್ರ್ಯ ದಿನಾಚರಣೆಗೆ ಬರುವಂತೆ ಆಹ್ವಾನಿಸಿ ಬಳ್ಳಾರಿಯಲ್ಲಿರುವ ನಿಮ್ಮ ತಾಯಿಗೊಂದು ಪತ್ರಬರೆಯಿರಿ.**

ನಂದನ
10ನೇತರಗತಿ
ಶ್ರೀವಿವೇಕಾನಂದ ಪ್ರೌಢಶಾಲೆ
ಕುವೆಂಪುನಗರ ಮೈಸೂರು
ದಿನಾಂಕ: 01–02–2019

ಮಾತೃಶ್ರೀಯವರಿಗೆ ನಿಮ್ಮ ಮಗ/ಳು ನಂದನ ಮಾಡುವ ಶಿರಸಾಷ್ಟಾಂಗ ಪ್ರಣಾಮಗಳು. ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ಅಲ್ಲಿ ನೀವೆಲ್ಲರೂ ಕ್ಷೇಮವಾಗಿದ್ದೀರಿ ಎಂದು ಭಾವಿಸಿರುತ್ತೇನೆ. ನನ್ನ ವಿದ್ಯಾಭ್ಯಾಸವು ಉತ್ತಮವಾಗಿ ನಡೆಯುತ್ತಿದೆ. ತಂದೆವರಿಗೆ ಪ್ರಣಾಮಗಳು.ದಿನಾಂಕ 15–02–2019 ರಂದು ನಮ್ಮ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲು ಮಾಡಲು ಸಿದ್ದತೆ ಮಾಡುತ್ತಿದ್ದಾರೆ. ಅಂದು ಬೆಳಿಗ್ಗೆ 8 ಗಂಟೆಗೆ ಧ್ವಜಾರೋಹಣ ಕಾರ್ಯಕ್ರಮವಿರುತ್ತದೆ. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದ್ದು ನಾನೂ ಕೂಡ ಭಾಗವಹಿಸಿದ್ದೇನೆ. ದೇಶಭಕ್ತಿಗೀತೆಗೆ ನೃತ್ಯ ಮಾಡುತ್ತಿದ್ದೇನೆ. ಆದ್ದರಿಂದ ತಂಗಿ,ತಂದೆಯವರೊಂದಿಗೆ ನೀವು ತಪ್ಪದೆ ಬರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ನಿಮ್ಮ ಆಶೀರ್ವಾದಗಳನ್ನು ಬೇಡುವ,

ಇಂತಿ ನಿಮ್ಮ ಪ್ರೀತಿಯ ಮಗಳು
ನಂದನ

**ಅಂಚೆ ವಿಳಾಸ**
ಶ್ರೀಮತಿ ಸರೋಜಮ್ಮ
ವಿದ್ಯಾನಗರ 5ನೇ ಮುಖ್ಯರಸ್ತೆ
ಅನಂತಪುರ ರಸ್ತೆ
ಮನೆ ನಂ–125
ಬಳ್ಳಾರಿ,
ಅಂಚೆಪೆಟ್ಟಿಗೆ ಸಂಖ್ಯೆ–583136

**3) ನಿಮ್ಮನ್ನು ಬೆಳಗಾವಿಯ ಶ್ರೀಕಿತ್ತೂರುರಾಣಿ ಚೆನ್ನಮ್ಮ ಪ್ರೌಢಶಾಲೆಯಲ್ಲಿ ಓದುತ್ತಿರುವ ನಮನ ಎಂದು ಭಾವಿಸಿಕೊಂಡು ನಿಮ್ಮಶಾಲೆಯಲ್ಲಿ ನಡೆಯುವ ಕ್ರೀಡಾಕೂಟಕ್ಕೆ ಬರುವಂತೆ ಆಹ್ವಾನಿಸಿ ಬೆಂಗಳೂರಿನಲ್ಲಿರುವ ನಿಮ್ಮ ಅಣ್ಣನಿಗೊಂದು ಪತ್ರಬರೆಯಿರಿ.**

ನಮನ
10ನೇತರಗತಿ
ಶ್ರೀಕಿತ್ತೂರುರಾಣಿ ಚೆನ್ನಮ್ಮಪ್ರೌಢಶಾಲೆ
ರಾಯಣ್ಣ ವೃತ್ತ
ಬೆಳಗಾವಿ
ದಿನಾಂಕ:16-02-2019

ತೀರ್ಥರೂಪುಸಮಾನರಾದ ಅಣ್ಣನವರಿಗೆ ನಿಮ್ಮ ತಮ್ಮ/ತಂಗಿ ನಮನ ಮಾಡುವ ಶಿರಸಾಷ್ಟಾಂಗ ಪ್ರಣಾಮಗಳು.

ಅಣ್ಣ ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ಅಲ್ಲಿ ನೀವು ಕ್ಷೇಮವಾಗಿದ್ದೀರಿ ಎಂದು ಭಾವಿಸಿರುತ್ತೇನೆ. ನಿಮ್ಮ ಕೆಲಸ ಉತ್ತಮವಾಗಿ ಸಾಗಿದೆ ಎಂದು ತಂದೆಯವರು ಪತ್ರ ಬರೆದಾಗ ತಿಳಿಸಿದರು. ನನ್ನ ವಿದ್ಯಾಭ್ಯಾಸವು ಕೂಡ ಉತ್ತಮವಾಗಿ ನಡೆಯುತ್ತಿದೆ. ದಿನಾಂಕ 25-02-2019 ರಂದು ನಮ್ಮ ಶಾಲೆಯಲ್ಲಿ ವಲಯಮಟ್ಟದ ಕ್ರೀಡಾಕೂಟ ಏರ್ಪಡಿಸಲಾಗಿದೆ. ನಾನೂ ಕೂಡ ಖೋಖೋ ಆಟದಲ್ಲಿ ಭಾಗವಹಿಸುತ್ತಿದ್ದೇನೆ. ಆದ್ದರಿಂದ ನೀವು ಅತ್ತಿಗೆಯವರೊಂದಿಗೆ ತಪ್ಪದೆ ಬರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ನಿಮ್ಮ ಆಶೀರ್ವಾದಗಳನ್ನು ಬೇಡುವ,

ಇಂತಿ ನಿಮ್ಮ ಪ್ರೀತಿಯ ತಮ್ಮ/ತಂಗಿ

ನಮನ

**ಅಂಚೆ ವಿಳಾಸ**
ಶ್ರೀಶಿವಾನಂದ.ಬಿ
ಕೆಂಪೇಗೌಡ ಬಡಾವಣೆ
8ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ
ಮನೆ ನಂ-100, ಬೆಂಗಳೂರು
ಅಂಚೆಪೆಟ್ಟಿಗೆ ಸಂಖ್ಯೆ-743421

**4) ನಿಮ್ಮನ್ನು ಚಿತ್ರದುರ್ಗದ ಶ್ರೀವೀರಮದಕರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ಚೈತನ್ಯ ಎಂದು ಭಾವಿಸಿಕೊಂಡು ನಿಮ್ಮಶಾಲೆಯಲ್ಲಿ ನಡೆಯುವ ಪ್ರತಿಭಾ ಕಾರಂಜಿ ಕಾರ್ಯಕ್ರಮಕ್ಕೆ ಬರುವಂತೆ ಆಹ್ವಾನಿಸಿ ಮಡಿಕೇರಿಯಲ್ಲಿರುವ ನಿಮ್ಮ ಅಕ್ಕನಿಗೊಂದು ಪತ್ರಬರೆಯಿರಿ.**

ಚೈತನ್ಯ
10ನೇತರಗತಿ
ಶ್ರೀವೀರಮದಕರಿ ಪ್ರೌಢಶಾಲೆ
ಬೃಂದಾವನ ಬಡಾವಣೆ
ಚಿತ್ರದುರ್ಗ
ದಿನಾಂಕ:13–1–2019

ಮಾತೃಶ್ರೀ ಸಮಾನರಾದ ಅಕ್ಕನವರಿಗೆ ನಿಮ್ಮ ತಮ್ಮ/ತಂಗಿ ಚೈತನ್ಯ ಮಾಡುವ ಶಿರಸಾಷ್ಟಾಂಗ

ಪ್ರಣಾಮಗಳು. ನಾನು ಇಲ್ಲಿ ಕ್ಷೇಮವಾಗಿದ್ದೀನಿ ಅಲ್ಲಿ ನೀವು ಆರೋಗ್ಯವಾಗಿದ್ದೀರಿ ಎಂದು ಭಾವಿಸಿರುತ್ತೇನೆ. ಓದು ಉತ್ತಮವಾಗಿ ನಡೆಯುತ್ತಿದೆ ಎಂದು ಭಾವಿಸಿರುತ್ತೇನೆ. ನನ್ನ ವಿದ್ಯಾಭ್ಯಾಸವು ಕೂಡ ಉತ್ತಮವಾಗಿ ನಡೆಯುತ್ತಿದೆ. ದಿನಾಂಕ 26–1–2019 ರಂದು ನಮ್ಮ ಶಾಲೆಯಲ್ಲಿ ಪ್ರತಿಭಾ ಕಾರಂಜಿ ಕಾರ್ಯಕ್ರಮ ಏರ್ಪಡಿಸಲಾಗಿದೆ. ನಾನು "ಸ್ವಚ್ಛಭಾರತ" ಎಂಬ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇನೆ. ಆದ್ದರಿಂದ ನೀವು ತಪ್ಪದೆ ಬರಬೇಕು ಮತ್ತು ಮಾರ್ಗದರ್ಶನ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ನಿಮ್ಮ ಆಶೀರ್ವಾದಗಳನ್ನು ಬೇಡುವ,

ಇಂತಿ ನಿಮ್ಮ ಪ್ರೀತಿಯ ತಮ್ಮ/ತಂಗಿ
ಚೈತನ್ಯ

**ಅಂಚೆ ವಿಳಾಸ**
ಶ್ರೀಲಕ್ಷ್ಮಿದೇವಿ
ಶ್ರೀವೀರರಾಜೇಂದ್ರ ಪದವಿ ಕಾಲೇಜು
ರಾಜಸೀಟ್ ಹತ್ತಿರ
ಮಡಿಕೇರಿ
ಅಂಚೆಪೆಟ್ಟಿಗೆ ಸಂಖ್ಯೆ–593421

**5) ನಿಮ್ಮನ್ನು ಹಾಸನದ ಶ್ರೀಹೊಯ್ಸಳ ಪ್ರೌಢಶಾಲೆಯಲ್ಲಿ ಓದುತ್ತಿರುವ ರಕ್ಷಿತ ಎಂದು ಭಾವಿಸಿಕೊಂಡು ನಿಮ್ಮಶಾಲೆಯಲ್ಲಿ ನಡೆದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಕುರಿತು ತುಮಕೂರಿನ ಶ್ರೀಸಿದ್ಧಗಂಗ ಮಠದಲ್ಲಿ 10ನೇ ತರಗತಿ ಓದುತ್ತಿರುವ ನಿಮ್ಮ ಸ್ನೇಹಿತ/ತೆಗೊಂದು ಪತ್ರಬರೆಯಿರಿ.**

ರಕ್ಷಿತ
10ನೇತರಗತಿ
ಶ್ರೀಹೊಯ್ಸಳ ಪ್ರೌಢಶಾಲೆ
ಹಾಸನಾಂಬ ಬಡಾವಣೆ,
ಹಾಸನ
ದಿನಾಂಕ:28-1-2019

ನನ್ನ ಪ್ರೀತಿಯ ಸ್ನೇಹಿತ/ತೆ ವಸಂತ ಗೆಳಯ/ತಿ ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ಅಲ್ಲಿ ನೀನು ಕ್ಷೇಮವಾಗಿದ್ದೀ ಎಂದು ಭಾವಿಸಿರುತ್ತೇನೆ. ನಿನ್ನ ವಿದ್ಯಾಭ್ಯಾಸ ಚೆನ್ನಾಗಿ ನಡೆಯುತ್ತಿದೆ ಎಂದು ಭಾವಿಸಿದ್ದೇನೆ. ನನ್ನ ವಿದ್ಯಾಭ್ಯಾಸವು ಕೂಡ ಉತ್ತಮವಾಗಿ ನಡೆಯುತ್ತಿದೆ. ದಿನಾಂಕ 26-1-2019 ರಂದು ನಮ್ಮ ಶಾಲೆಯಲ್ಲಿ ಪ್ರತಿಭಾಕಾರಂಜಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ನಾನು "ಸ್ವಚ್ಛಭಾರತ" ಎಂಬ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೆ. ನನಗೆ ಪ್ರಥಮ ಸ್ಥಾನ ಬಂದಿದೆ. ತುಂಬಾ ಖುಷಿಯಾಯ್ತು. ನಿಮ್ಮ ಶಾಲೆಯಲ್ಲಿ ಪ್ರತಿಭಾ ಕಾರಂಜಿ ಹೇಗೆ ನಡೆಯಿತು ಮತ್ತು ನೀನು ಯಾವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ . ಫಲಿತಾಂಶ ಏನಾಯ್ತು ತಿಳಿಸು. ನಿನ್ನ ಪತ್ರಕ್ಕೋಸ್ಕರ ಕಾಯುತ್ತಿರುತ್ತೇನೆ.

ನಮಸ್ಕಾರಗಳೊಂದಿಗೆ,

ಇಂತಿ ನಿನ್ನ ಪ್ರೀತಿಯ ಸ್ನೇಹಿತ/ತೆ

ರಕ್ಷಿತ

**ಅಂಚೆ ವಿಳಾಸ**
ವಸಂತ 10ನೇ ತರಗತಿ 'ಎ'ವಿಭಾಗ
ಶ್ರೀಸಿದ್ಧಗಂಗ ಪ್ರೌಢಶಾಲೆ
ತುಮಕೂರು
ಅಂಚೆಪೆಟ್ಟಿಗೆ ಸಂಖ್ಯೆ-543428

**6) ನಿಮ್ಮನ್ನು ಹಾವೇರಿಯ ಶ್ರೀಕನಕದಾಸ ಪ್ರೌಢಶಾಲೆಯಲ್ಲಿ ಓದುತ್ತಿರುವ ಸೃಜನ ಎಂದು ಭಾವಿಸಿಕೊಂಡು ನಿಮ್ಮ ಪರೀಕ್ಷಾ ಸಿದ್ಧತೆಯನ್ನು ಕುರಿತು ಚಿಕ್ಕಬಳ್ಳಾಪುರದಲ್ಲಿರುವ ನಿಮ್ಮ ದೊಡ್ಡಪ್ಪನವರಿಗೆಒಂದು ಪತ್ರ ಬರೆಯಿರಿ.**

ಸೃಜನ
10ನೇತರಗತಿ
ಶ್ರೀಕನಕದಾಸ ಪ್ರೌಢಶಾಲೆ
ಆದಿಕೇಶವ ನಗರ,
ಹಾವೇರಿ
ದಿನಾಂಕ:28-1-2019

ತೀರ್ಥರೂಪುಸಮಾನರಾದ ದೊಡ್ಡಪ್ಪನವರಿಗೆ ನಿಮ್ಮ ಮಗ/ಳು ಸೃಜನ ಮಾಡುವ ಶಿರಸಾಷ್ಟಾಂಗ ಪ್ರಣಾಮಗಳು.

ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ಅಲ್ಲಿ ನೀವು ಕ್ಷೇಮವಾಗಿದ್ದೀರಿ ಎಂದು ಭಾವಿಸಿರುತ್ತೇನೆ. ದೊಡ್ಡಮ್ಮನವರಿಗೆ ನಮಸ್ಕಾರಗಳು. ನನ್ನ ವಿದ್ಯಾಭ್ಯಾಸವು ಕೂಡ ಉತ್ತಮವಾಗಿ ನಡೆಯುತ್ತಿದೆ. ದಿನಾಂಕ 21-03- 2019 ರಿಂದ ನನ್ನ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಳು ಆರಂಭವಾಗುತ್ತಿದ್ದು ಅದಕ್ಕೆ ಅತ್ಯುತ್ತಮವಾಗಿ ಸಿದ್ಧತೆ ಮಾಡಿಕೊಳ್ಳುತ್ತದ್ದೇನೆ. ಪ್ರತಿದಿನ ಬೆಳಿಗ್ಗೆ 5 ಗಂಟೆಗೆ ಎದ್ದು ಓದುತ್ತಿದ್ದೇನೆ.ನೀವು ಅಂದುಕೊಂಡಂತೆ 100% ಫಲಿತಾಂಶ ಪಡೆಯುವ ಭರವಸೆಯನ್ನು ನೀಡುತ್ತಿದ್ದೇನೆ. ನಿಮ್ಮ ಆಶೀರ್ವಾದ ಇರಲಿ. ತಂಗಿಯಾದ ಕೃತಿಕಾಗೆ ನನ್ನ ಆಶೀರ್ವಾದಗಳು. ಅವಳನ್ನು ಚೆನ್ನಾಗಿ ಓದಿಕೊಳ್ಳಲು ತಿಳಿಸಿ. ನಾವಿಬ್ಬರೂ ನಿಮಗೆ ಒಳ್ಳೆಯ ಹೆಸರನ್ನು ತಂದುಕೊಡುತ್ತವೆ.

ಆಶೀರ್ವಾದ ಬಯಸುತ್ತಾ ಪ್ರಣಾಮಗಳೊಂದಿಗೆ

ಇಂತಿ ನಿಮ್ಮ ಪ್ರೀತಿಯ ಮಗ/ಳು
ಸೃಜನ

**ಅಂಚೆ ವಿಳಾಸ**
ಶ್ರೀಯುತ ಶ್ರೀನಿವಾಸರವರು
ಮಾರುತಿ ನಿಲಯ
ಶಬರಿ ನಗರ
ಮನೆ ನಂ-599
ಚಿಕ್ಕಬಳ್ಳಾಪುರ-654355

# ವ್ಯವಹಾರಿಕ ಪತ್ರಗಳು

**1) ನಿಮ್ಮನ್ನು ದಾವಣಗೆರೆಯ ಶ್ರೀಭಾರತಮಾತಾ ಪ್ರೌಢಶಾಲೆಯಲ್ಲಿ ಓದುತ್ತಿರುವ ಧನುಷ್ ಎಂದು ಭಾವಿಸಿಕೊಂಡು ನಿಮ್ಮಶಾಲೆಯಲ್ಲಿ ನಡೆಯುವ ಕ್ರೀಡಾಕೂಟ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಆಹ್ವಾನಿಸಿ ನಿಮ್ಮ ಜಿಲ್ಲಾಧಿಕಾರಿಗಳಿಗೊಂದು ಪತ್ರಬರೆಯಿರಿ.**

ದಿನಾಂಕ:20–03–2019
ಸ್ಥಳ:ದಾವಣಗೆರೆ

**ಇವರಿಂದ,**
ಧನುಷ್ 10ನೇತರಗತಿ
ಶ್ರೀಭಾರತಮಾತಾ ಪ್ರೌಢಶಾಲೆ
ಸ್ವರ್ಣನಗರ,
ದಾವಣಗೆರೆ

**ಇವರಿಗೆ,**
ಮಾನ್ಯ ಜಿಲ್ಲಾಧಿಕಾರಿಗಳು
ದಾವಣಗೆರೆ ಜಿಲ್ಲೆ

**ಮಾನ್ಯರೇ**

**ವಿಷಯ: ಕ್ರೀಡಾಕೂಟದ ಉದ್ಘಾಟನಾ ಕಾರ್ಯಕ್ರಮಕ್ಕೆ ಆಗಮಿಸುವಂತೆ ಆಹ್ವಾನ.**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಶಾಲೆಯಲ್ಲಿ ದಿನಾಂಕ 21–03–2019 ರಂದು ವಲಯಮಟ್ಟದ ಕ್ರೀಡಾಕೂಟಗಳನ್ನು ಆಯೋಜಿಸಲಾಗಿದೆ. ಅಂದು ಬೆಳಿಗ್ಗೆ 7 ಗಂಟೆಗೆ ಉದ್ಘಾಟನಾ ಕಾರ್ಯಕ್ರಮವಿದ್ದು ದಯಾಮಾಡಿ ತಾವುಗಳು ಈ ಕಾರ್ಯಕ್ರಮಕ್ಕೆ ಆಗಮಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ನಮ್ಮ ಕ್ರೀಡಾಕೂಟಕ್ಕೆ ಪ್ರೇರಣೆ ನೀಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಧನ್ಯವಾದಗಳೊಂದಿಗೆ

ತಮ್ಮ ವಿಶ್ವಾಸಿ
ಧನುಷ್

**2) ನಿಮ್ಮನ್ನು ಬಿಜಾಪುರದ ಗೋಳಗೊಮ್ಮಟ ಪ್ರೌಢಶಾಲೆಯಲ್ಲಿ ಓದುತ್ತಿರುವ ಮಧು ಎಂದು ಭಾವಿಸಿಕೊಂಡು ನಿಮ್ಮ ಊರಿಗೊಂದು ಗ್ರಂಥಾಲಯ ನಿರ್ಮಿಸಿಕೊಡುವಂತೆ ನಿಮ್ಮರಾಜ್ಯದ ಶಿಕ್ಷಣ ಸಚಿವರಿಗೊಂದು ಮನವಿ ಪತ್ರಬರೆಯಿರಿ.**

ದಿನಾಂಕ : 18–04–2019

ಸ್ಥಳ : ಬಿಜಾಪುರ

**ಇವರಿಂದ,**

ಮಧು

10ನೇತರಗತಿ

ಗೋಳಗೊಮ್ಮಟ ಪ್ರೌಢಶಾಲೆ

ಬಿಜಾಪುರ

**ಇವರಿಗೆ,**

ಮಾನ್ಯ ಶಿಕ್ಷಣ ಸಚಿವರು

ಕರ್ನಾಟಕ ರಾಜ್ಯ ಸರ್ಕಾರ

**ಮಾನ್ಯರೇ**

**ವಿಷಯ:** ಗ್ರಂಥಾಲಯ ನಿರ್ಮಿಸಿಕೊಡುವಂತೆ ಮನವಿ

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಊರಿನಲ್ಲಿ ಸಾಕಷ್ಟು ವಿದ್ಯಾವಂತರಿದ್ದಾರೆ. ಆದರೆ ಸಮಯದ ಸದುಪಯೋಗ ಮಾಡಿಕೊಳ್ಳಲು ಹಾಗೂ ಹೆಚ್ಚಿನ ಜ್ಞಾನ ಸಂಪಾದಿಸಲು, ಓದಲೂ ನಮ್ಮ ಊರಿನಲ್ಲಿ ಗ್ರಂಥಾಲವೇ ಇಲ್ಲವಾಗಿದೆ. ನಾನೂ ಕೂಡ 10ನೇ ತರಗತಿಯಲ್ಲಿ ಓದುತ್ತಿದ್ದೇನೆ. ನನ್ನ ವಿದ್ಯಾಭ್ಯಾಸಕ್ಕೆ ಪೂರಕವಾದ ಮಾಹಿತಿ ಸಂಗ್ರಹಿಸಲು ಸಾಧ್ಯವಾಗುತ್ತಿಲ್ಲ. ದಯಮಾಡಿ ನಮ್ಮ ಊರಿಗೊಂದು ಗ್ರಂಥಾಲಯವನ್ನು ನಿರ್ಮಿಸಿಕೊಟ್ಟು ಹೆಚ್ಚಿನ ಜ್ಞಾನಸಂಪಾ ದಿಸಲು ಅನುವು ಮಾಡಿಕೊಡಬೇಕೆಂದು ತಮ್ಮಲ್ಲಿ ಕಳಾಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ

ಮಧು

**3) ನಿಮ್ಮನ್ನು ಉಡುಪಿ ಶ್ರೀಕೃಷ್ಣಪ್ರೌಢಶಾಲೆಯಲ್ಲಿ ಓದುತ್ತಿರುವ ಕಿರಣ ಎಂದು ಭಾವಿಸಿಕೊಂಡು ನಿಮ್ಮಶಾಲೆಯಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದ ಕುರಿತು ಪತ್ರಿಕೆಯಲ್ಲಿ ಪ್ರಕಟಿಸುವಂತೆ ಪ್ರಜಾವಾಣಿ ಪತ್ರಿಕೆಯ ಸಂಪಾದಕರಿಗೊಂದು ಪತ್ರಬರೆಯಿರಿ.**

ದಿನಾಂಕ : 26–01–2019
ಸ್ಥಳ : ಉಡುಪಿ

**ಇವರಿಂದ,**
ಕಿರಣ
10ನೇತರಗತಿ
ಶ್ರೀಕೃಷ್ಣಪ್ರೌಢಶಾಲೆ,
ಉಡುಪಿ

**ಇವರಿಗೆ,**
ಸಂಪಾದಕರು,
ಪ್ರಜಾವಾಣಿ ದಿನಪತ್ರಿಕೆ
ಕಲ್ಲುಕಟ್ಟಡ ರೂಮ್ ನಂ–5
ಸದಾಶಿವ ನಗರ, ಬೆಂಗಳೂರು–658432

**ಮಾನ್ಯರೇ**

**ವಿಷಯ: ಗಣರಾಜ್ಯೋತ್ಸವದ ವರದಿ ಪ್ರಕಟಿಸುವಂತೆ ಮನವಿ**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಶಾಲೆಯಲ್ಲಿ ದಿನಾಂಕ 26–01–2019 ರಂದು ಗಣರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು ಅದರ ವರದಿಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ. ದಿನಾಂಕ 26–01–2019 ರಂದು ಉಡುಪಿಯ ಶ್ರೀಕೃಷ್ಣಪ್ರೌಢಶಾಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಗಣರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀಯುತ ಎ.ಪಿ.ಜೆ.ಅಬ್ದುಲ್‌ಕಲಾಂರವರು ಧ್ವಜಾರೋಹಣ ನೆರವೇರಿಸಿ ಸಂವಿಧಾನದ ಆದರ್ಶಗಳನ್ನು ಎಲ್ಲರ ಮನಮುಟ್ಟುವಂತೆ ವಿವರಿಸಿದರು. ಇನ್ನೊಬ್ಬ ಅತಿಥಿಗಳಾಗಿದ್ದ ಶ್ರೀಯುತ ಡಿ.ವಿ.ಜಿ ಯವರು ಸಂವಿಧಾನನ ಮಹತ್ವಗಳನ್ನು ಕುರಿತು ಭಾಷಣ ಮಾಡಿದರು. ಜಿಲ್ಲಾಧಿಕಾರಿಗಳು ತಮ್ಮ ಅದ್ಯಕ್ಷಿಯ ಭಾಷಣದಲ್ಲಿ ಸಂವಿಧಾನದ ನಿರ್ಮಾತೃಗಳ ಕುರಿತು ಮತ್ತು ಭಾರತ ಗಣರಾಜ್ಯವಾದ ಬಗ್ಗೆ ತಿಳಿಸಿದರು. ಕನ್ನಡ ಶಿಕ್ಷಕರು ದೇಶಭಕ್ತಿಯ ಸ್ಲೋಗನ್ನುಗಳೊಂದಿಗೆ ಸ್ವಾಗತ ಮಾಡಿ ಎಲ್ಲರ ಗಮನ ಸೆಳೆದರು. ಸಮಾಜ ಶಿಕ್ಷಕರು ನಿರೂಪಿಸಿದರು. ವಿದ್ಯಾರ್ಥಿಗಳು ದೇಶಭಕ್ತಿ ಮೂಡಿಸುವ ಸಾಂಸ್ಕೃತಿಕ ಕಾರ್ಯಕ್ರಗಳನ್ನು ಮಾಡಿದರು. ಮುಖ್ಯಗುರುಗಳು ಸಮಾರಂಭದಲ್ಲಿ ಭಾಗವಹಿಸಿದ್ದ ಎಲ್ಲರಿಗೂ ವಂದನಾರ್ಪಣೆ ಅರ್ಪಿಸಿದರು.

**ಧನ್ಯವಾದಗಳೊಂದಿಗೆ,**

ತಮ್ಮ ವಿಶ್ವಾಸಿ
ಕಿರಣ

**4) ನಿಮ್ಮನ್ನು ಮಂಗಳೂರಿನ ರಾಣಿಅಬ್ಬಕ್ಕ ಪ್ರೌಢಶಾಲೆಯಲ್ಲಿ ಓದಿರುವ ಅರುಣ ಎಂದು ಭಾವಿಸಿಕೊಂಡು ನಿಮ್ಮ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ ಕೋರಿ ಮುಖ್ಯೋಪಾಧ್ಯರಿಗೊಂದು ಪತ್ರಬರೆಯಿರಿ.**

ದಿನಾಂಕ : 21–03–2019
ಸ್ಥಳ : ಮಂಗಳೂರು.

**ಇವರಿಂದ,**
ಅರುಣ
10ನೇತರಗತಿ
ರಾಣಿಅಬ್ಬಕ್ಕ ಪ್ರೌಢಶಾಲೆ
ಮಂಗಳೂರು–02

**ಇವರಿಗೆ,**
ಮುಖ್ಯೋಪಾಧ್ಯಾಯರು
ರಾಣಿಅಬ್ಬಕ್ಕ ಪ್ರೌಢಶಾಲೆ
ಮಂಗಳೂರು–02

**ಮಾನ್ಯರೇ**

**ವಿಷಯ: ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ ಕೋರಿ**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಾನು ಅರುಣ ನಿಮ್ಮ ಶಾಲೆಯಲ್ಲಿ 8ನೇ ತರಗತಿಯಿಂದ 10ನೇ ತರಗತಿಯವರೆಗೆ ಓದಿದ್ದು 2015– 16 ನೇಸಾಲಿನಲ್ಲಿ ನಡೆದ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದೇನೆ. ನನ್ನ ಮುಂದಿನ ವಿದ್ಯಾಭ್ಯಾಸಕ್ಕಾಗಿ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ ಕೊಡ ಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಧನ್ಯವಾದಗಳೊಂದಿಗೆ,

ಇಂತಿ ತಮ್ಮ ವಿದ್ಯಾರ್ಥಿ
ಅರುಣ

**5) ನಿಮ್ಮನ್ನು ಶಿವಮೊಗ್ಗದ ಕುವೆಂಪು ಪ್ರೌಢಶಾಲೆಯಲ್ಲಿ ಓದುತ್ತಿರುವ ಸಾನ್ವಿತ ಎಂದು ಭಾವಿಸಿಕೊಂಡು ನಿಮ್ಮ ಅಕ್ಕನ ಮದುವೆಗೆ ಹೋಗಲು 3 ದಿನ ರಜೆಕೋರಿ ಮುಖ್ಯೋಪಾಧ್ಯರಿಗೊಂದು ಪತ್ರಬರೆಯಿರಿ.**

ದಿನಾಂಕ : 21–03–2019
ಸ್ಥಳ : ಶಿವಮೊಗ್ಗ

**ಇವರಿಂದ,**

ಸಾನ್ವಿತ
10ನೇತರಗತಿ 'ಎ' ವಿಭಾಗ
ಕುವೆಂಪು ಪ್ರೌಢಶಾಲೆ
ತೀರ್ಥಹಳ್ಳಿ ರಸ್ತೆ ಶಿವಮೊಗ್ಗ–07

**ಇವರಿಗೆ,**

ಮುಖ್ಯೋಪಾಧ್ಯಾಯರು
ಕುವೆಂಪು ಪ್ರೌಢಶಾಲೆ
ತೀರ್ಥಹಳ್ಳಿ ರಸ್ತೆ ಶಿವಮೊಗ್ಗ–07

**ಮಾನ್ಯರೇ**

**ವಿಷಯ: ಮೂರು ದಿನಗಳ ರಜೆ ಕೋರಿ**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಮೂಲಕ ತಿಳಿಸುವುದೇನೆಂದರೆ ದಿ ನಾಂಕ 21–04–2019 ರಿಂದ 23–03–2019 ವರೆಗೆ ಹಾವೇರಿಯಲ್ಲಿ ನನ್ನ ಅಕ್ಕನ ಮದುವೆ ನಡೆಯುತ್ತಿದ್ದು ಮದುವೆಗೆ ಹೋಗಲು ಮೂರು ದಿನಗಳ ಕಾಲ ರಜೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಆ ದಿನಗಳಲ್ಲಿ ನಡೆದ ಪಾಠಗಳ ಬಗ್ಗೆ ಬಂದ ನಂತರ ಸ್ನೇಹಿತರಿಂದ ತಿಳಿದುಕೊಳ್ಳತ್ತೇನೆ ಎಂಬ ಭರವಸೆ ನೀಡುತ್ತಿದ್ದೇನೆ. ದಯಮಾಡಿ ಅನುಮತಿ ನೀಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಧನ್ಯವಾದಗಳೊಂದಿಗೆ,

ಇಂತಿ ತಮ್ಮ ವಿದ್ಯಾರ್ಥಿ
ಸಾನ್ವಿತ

**6) ನಿಮ್ಮನ್ನು ಮಂಡ್ಯದ ಶ್ರೀಕಾವೇರಿ ಪ್ರೌಢಶಾಲೆಯಲ್ಲಿ 10ನೇ ತರಗತಿ ಓದುತ್ತಿರುವ ಸುಮನ ಎಂದು ಭಾವಿಸಿಕೊಂಡು ಕನ್ನಡ ವಿಶ್ವಕೋಶ ಕಳಿಸಿಕೊಡುವಂತೆ ಜ್ಞಾನದೀಪಿಕಾ ಪುಸ್ತಕ ಭಂಡಾರಕ್ಕೆ ಒಂದು ಪತ್ರ ಬರೆಯಿರಿ.**

**ಇವರಿಂದ,**

ಸುಮನ
10ನೇ ತರಗತಿ
ಶ್ರೀಕಾವೇರಿ ಪ್ರೌಢಶಾಲೆ
ಮಂಡ್ಯ–09

**ಇವರಿಗೆ,**

ಮುಖ್ಯಸ್ಥರು
ಜ್ಞಾನದೀಪಿಕಾ ಪುಸ್ತಕ ಭಂಡಾರ
ಮೋತಿ ಸರ್ಕಲ್
ಬಳ್ಳಾರಿ–576523

**ಮಾನ್ಯರೇ**

**ವಿಷಯ: ಕನ್ನಡ ವಿಶ್ವಕೋಶ ಕಳಿಸಿಕೊಡುವಂತೆ ಕೋರಿ**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಮೂಲಕ ತಿಳಿಸುವುದೇನೆಂದರೆ ನಾನು 10ನೇ ತರಗತಿ ಓದುತ್ತಿದ್ದು , ನನ್ನ ವಿದ್ಯಾಭ್ಯಾಸಕ್ಕೆ ಪೂರಕವಾದ ಮಾಹಿತಿ ಸಂಗ್ರಹಿಸಲು ಕನ್ನಡ ವಿಶ್ವಕೋಶ ಬೇಕಾಗಿದೆ. ಆದ್ದರಿಂದ ದಯಮಾಡಿ ಆ ಪುಸ್ತಕ ಕಳುಹಿಸಿಕೊಡಲು ಮನವಿ ಮಾಡಿಕೊಳ್ಳುತ್ತಿದ್ದೇನೆ. ಅಂಚೆಯ ಮೂಲಕ ಕಳುಹಿಸಿದರೆ ಹಣ ಸಂದಾಯ ಮಾಡಿ ಬಿಡಿಸಿಕೊಳ್ಳುತ್ತೇನೆ ಎಂದು ತಿಳಿಸುತ್ತೇನೆ. ಅಂಚೆ ವಿಳಾಸ: ಸುಮನ,10ನೇ ತರಗತಿ ಶ್ರೀಕಾವೇರಿ ಪ್ರೌಢಶಾಲೆ,ಮಂಡ್ಯ ಜಿಲ್ಲೆ ಅಂಚೆಪೆಟ್ಟಿಗೆ ಸಂಖ್ಯೆ–657435.

ಧನ್ಯವಾದಗಳೊಂದಿಗೆ,

ದಿನಾಂಕ : 21–03–2019 ತಮ್ಮ ವಿಶ್ವಾಸಿ
ಸ್ಥಳ : ಮಂಡ್ಯ ಸುಮನ

# ಎಸ್.ಎಸ್.ಎಲ್.ಸಿ ವಾರ್ಷಿಕ ಪ್ರಶ್ನೆಪತ್ರಿಕೆ ಮಾರ್ಚ್/ಏಪ್ರಿಲ್–2019

ವಿಭಾಗ–ಎ

**ಅ) ಈ ಕೆಳಗಿನ ಪ್ರತಿಯೊಮ್ಮು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತಾರ ಬರೆಯಿರಿ**

1. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?
2. ಲಂಡನ್ನಿನಲ್ಲಿ ನೆಲ್ಸನ್‌ನವರ ಮೂರ್ತಿಯಿರುವ ಸ್ಥಳ ಯಾವುದು?
3. 'ಶಿವಾನುಭವ ಶಬ್ಧಕೋಶ' ಪುಸ್ತಕ ಬರೆದವರು ಯಾರು?
4. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು?
5. ಸುಕುಮಾರಸ್ವಾಮಿಗೆ ಯಾವ ಪಟ್ಟವನ್ನು ಕಟ್ಟಲಾಯಿತು?
6. ಅಶ್ವಿನಿದೇವತೆಗಳ ವರಬಲದಿಂದ ಜನಿಸಿದವರು ಯಾರು?
7. ಅಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ?
8. ದ್ರೋಣನು ಯಾರೊಡನೆ ಪರಶುರಾಮನ ಬಳಿಗೆ ಬಂದನು?
9. ಪುಟ್ಟ ಪೋರಿಯ ಅಮ್ಮ ಎಲ್ಲಿ ಮಲಗಿದ್ದಾಳೆ?

**ಆ) ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯದಲ್ಲಿ ಉತ್ತರ ಬರೆಯಿರಿ**

10. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು?
11. ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯವೇನು?
12. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಯನ್ನು ಸಂಕ್ಷಿಪ್ತವಾಗಿ ತಿಳಿಸಿ.
13. ವೃಷಭಾಂಕನು ಸುಕುಮಾರಸ್ವಾಮಿಗೆ ವ್ಯಾಧಿಯಿದೆ ಎಂದುಕೊಳ್ಳಲು ಕಾರಣವೇನು?
14. ಕವಿ ಕುವೆಂಪು ಅವರಿಗೆ ಆಗಸದಿಂದ ಸಂಜೆಯ ಬಿಸಿಲವರೆಗೂ ಎಲ್ಲೆಲ್ಲಿ ಹಸುರು ಕಂಡುಬಂದಿದೆ?
15. ದ್ರೋಣನು ಶಪಥ ಮಾಡುವಾಗ ಹೇಳಿದ ಮಾತುಗಳಾವುವು?
16. ವಿವೇಕಾನಂದರು ಏಕೆ ಧಾರ್ಮಿಕ ಮೂಲಭೂತವಾದಕ್ಕೆ ಉಗ್ರ ವಿರೋಧಿಯಾಗಿಧರು?
17. ಭಗತ್‌ಸಿಂಗ್ ತನಗೆ ಪ್ರಿಯವಾದ ಮಾವಿನ ಹಣ್ಣೊಂದನ್ನು ನಿರಾಕರಿಸಿದಕ್ಕೆ ಕಾರಣ ಹೇಗೆ ತಿಳಿಯಿತು?
18. ವರ್ತಕನು ನಗರದಿಂದ ಹಳ್ಳಿಗೆ ಹೊಗಬೇಕಾಗಿ ಬಂದ ಸಂದರ್ಭವನ್ನು ತಿಳಿಸಿ.
19. 'ಉಪ್ಪು' ಎಂಬ ಉತ್ತರ ಬರಲು ಹೇಳಿದ ಒಗಟನ್ನು ಬರೆಯಿರಿ.

**ಇ) ಈ ಕೆಳಗಿನ ಹೇಳಿಕೆಗಳಿಗೆ ಸಂಧರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ**

20. "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು".
21. "ಪ್ರಕೃತಿ ವಿಕೃತವಾದ ಮನುಷ್ಯನಾಯುಷ್ಯಂ ಕುಂದುಗಂ".
22. "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ".
23. 'ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ".

**ಈ) ಈ ಕೆಳಗಿನ ಕವಿ/ ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ, ಮತ್ತು ಬಿರುದು/ಪ್ರಶಸ್ಥಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ**

24. ಸಾರಾ ಅಬೂಬಕ್ಕರ್
25. ಕುಮಾರವ್ಯಾಸ

**ಉ) ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ**

26. ನೀಲಮೇಘ............. 0ಯುಗ0ಯುಗಗಳ...............

.................................... **ಅಥವಾ** ..........................................

ಹಾರುತಿದೆ ನೋಡಿದಿರಾ? ಹಾರುತಿದೆ ನೋಡಿದಿರಾ?

**ಊ) .ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ**

27. ನಿಮಗೆ ಪೊಡೆಮಟ್ಟು ಪೋಪೀ।
ಸಮಕಟ್ಟಿಂ ಬಂದೆನಹಿತರೊಳ್ ಸಂಧಿ0ಯನೇಂ॥
ಸಮಕೊಳಿಸಲೆಂದು ಬಂದೆನೆ ।
ಸಮರದೊಳೆನಗಜ್ಜ ಪೇಟೆಮಾವುದು ಕಜ್ಜಂ।

**ಋ) ಈ ಕೆಳಗಿನ ವಾಕ್ಯಗಳಲ್ಲಿ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ**

28. ವಿಶ್ವೇಶ್ವರ0ಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆ0ಯನ್ನು ಕುರಿತು ಬರೆಯಿರಿ.

**ಅಥವಾ**

ನಾಲ್ವಡಿ ಕೃಷ್ಣರಾಜ ಒಡೆ0ಯರ ಕಾಲದಲ್ಲಿ ಸ್ಥಾಪಿಸಲಾದ 'ಪ್ರಜಾಪ್ರತಿನಿಧಿ ಸಭೆ' ಹಾಗೂ 'ನ್ಯಾ0ಯ ವಿಧಾ0ಯಕ ಸಭೆ'0ಯನ್ನು ಕುರಿತು ವಿವರಿಸಿ.

29. ನಾವು 0ಯಾವ ಸಂಕಲ್ಪ ಕೈಗೊಳ್ಳಬೇಕೆಂದು ಕವಿ ಶಿವರುದ್ರಪ್ಪನವರ ಆಶ0ಯವಾಗಿದೆ? ವಿವರಿಸಿ.

**ಅಥವಾ**

ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಶಿವರುದ್ರಪ್ಪನವರ ಅಭಿಪ್ರಾ0ಯವನ್ನು ತಿಳಿಸಿ.

**ಎ) ಈ ಗದ್ಯಭಾಗವನ್ನು ಮನಸ್ಸಿನಲ್ಲಿ ಒದಿಕೊಂಡು ಕೊಡ್ತಿರುವ ಪ್ರಶ್ನೆಗಳಿಗೆ ಉತಾರ ಬರೆಯಿರಿ**

30. 0ಯುದ್ಧ, ಇತಿಹಾಸದುದ್ದಕ್ಕೂ ತನ್ನ ಇರುವಿಕೆ0ಯನ್ನು ತೋರಿಸುತ್ತಾ ಬಂದಿದೆ. 0ಯಾವುದೇ ಸಾಮ್ರಾಜ್ಯದ ಏಳುಬೀಳುಗಳಲ್ಲಿ ಅದು ಪ್ರಮುಖ ಪಾತ್ರವಹಿಸಿದೆ. 0ಯುದ್ಧ ನಡೆ0ಯಲು ಕಾರಣಗಳು ಹಲವು, ಸಾಮ್ರಾಜ್ಯ ವಿಸ್ತರಣೆ, ಲೋಭ, ವೀರತೆ0ಯ ಪ್ರದರ್ಶನ ಒಂದು ಕಡೆ0ಯಾದರೆ, ಕುಟುಂಬ ಕಲಹಗಳೂ 0ಯುದ್ಧಕ್ಕೆ ನಾಂದಿ0ಯಾದ ಘಟನೆಗಳು ದಾಖಲಾಗಿವೆ. ಸುಮಾರು ಐದು ಸಾವಿರ ವರ್ಷಗಳ ಹಿಂದೆ ನಡೆದ ಕುರುಕ್ಷೇತ್ರ 0ಯುದ್ಧ ಇದಕ್ಕೆ ಸ್ಪಷ್ಟ ನಿದರ್ಶನ. ಕುರುವಂಶದ ರಾಜಕುಮಾರರ ಅಂತಃಕಲಹ ಐವತ್ತು ಲಕ್ಷ ಜನರ ಪ್ರಾನಹಾನಿ0ಯೊದಿಗೆ ಪ0ರ್ಯವಸಾನವಾಯಿತು.ಐತಿಹ್ಯದಂತೆ ಕೇವಲ ಹದಿನೆಂಟು ದಿನ ನಡೆದ ಈ 0ಯುದ್ಧ, ಕಂಡ ಪರಿಣಾಮ ಅತ್ಯಂತ ಘೋರ. ಭಾರತ ತನ್ನ ಇತಿಹಾಸದಲ್ಲಿ ಕಂಡ ಅತ್ಯಂತ ವರ್ಣರಂಜಿತ ವ್ಯಕ್ತಿತ್ವ ಕೌಟಿಲ್ಯನದು. ತನ್ನ ಹಠದ ಪಟ್ಟನ್ನು ಸಡಿಲಿಸದೆ, ಮನೋನಿಶ್ಚ0ಯದಂತೆ ಅಪೂರ್ವಕುಶಲತೆ0ಯನ್ನು ತೋರಿದ ಪ್ರತಿಭಾವಂತನೀತ. ಸರಳ ತಂತ್ರೋಪಾ0ಯಗಳಿಂದ ಚಂದ್ರಗುಪ್ತನ ಶತ್ರುಬಲವನ್ನು ನಿರಾವಲಂಬನಗೊಳಿಸಿ ಮೌ0ರ್ಯ ವಂಶದ ಸ್ಥಾಪನೆಗೆ ಮಾರ್ಗದರ್ಶಕನಾಗುತ್ತಾನೆ. ತನ್ನನ್ನೇ ಹಿಂಬಾಲಿಸಿ ಬಂದ ರಾಜ್ಯಲಕ್ಷ್ಮಿ, ಅಧಿಕಾರಿಗಳನ್ನು ದೂರೀಕರಿಸಿ ವಿರಕ್ತನಂತೆ ಆಶ್ರಮವಾಸಿ0ಯಾಗುತ್ತಾನೆ. ಚಾಣಕ್ಯನ ಪ್ರಕಾರ 0ಯುದ್ಧದಲ್ಲಿ ಮೂರು ವಿಧಗಳು. ಮೊದಲನೆ0ಯದು ಪ್ರಕಾಶ0ಯುದ್ಧ – ಸೂಚಿತ ಸ್ಥಳಗಳಲ್ಲಿ ನಿರ್ದಿಷ್ಟ ಸಮ0ಯಕ್ಕೆ ನಡೆ0ಯುವ ಸಂಗ್ರಾಮ. ಎರಡನೆ0ಯದು ಕೂಟ0ಯುದ್ಧ – ತಂತ್ರಗಳ ಮೂಲಕ 0ಯುದ್ಧ ಮಾಡುವುದು. ಮೂರನೆ0ಯದು ಮೌನ0ಯುದ್ಧ – ಶತ್ರು ಅಧಿಕಾರಗಳನ್ನು ನಾಶಪಡಿಸಲು ಗುಪ್ತ ಕಾ0ರ್ಯಾಚರಣೆ ನಡೆಸುವುದು. 0ಯಾವಾಗ ರಾಜಶತ್ರುಗಳಿಗಿಂತ ಬಲಿಷ್ಠನಾಗಿದ್ದು ಪರಿಸ್ಥಿತಿ ಅನುಕೂಲಕರವಾಗಿರುತ್ತದೋ ಆಗ ಅವನು ಮುಕ್ತ 0ಯುದ್ಧವನ್ನೇ ಮಾಡಬೇಕು. ಸೂಚಿತ ಸ್ಥಳಗಳಲ್ಲಿ, ನಿರ್ದಿಷ್ಟ ಸಮ0ಯದಲ್ಲಿ ನಡೆ0ಯುವ ಮುಕ್ತ 0ಯುದ್ಧವೇ ಧರ್ಮ0ಯುದ್ಧ.

**ಪ್ರಶ್ನೆಗಳು**

ಅ) ಚಾಣಕ್ಯನ ಪ್ರಕಾರ ಮೂರು ಬಗೆ0ಯ 0ಯುದ್ಧಗಳಾವುವು? ವಿವರಿಸಿ.

ಬಿ) 0ಯುದ್ಧಕ್ಕೆ ಕಾರಣವಾದ ಅಂಶಗಳನ್ನು ಒಂದು ನಿದರ್ಶನದೊಂದಿಗೆ ಬರೆ0ಯಿರಿ.

**ವಿಭಾಗ–ಸಿ**

**ಏ) ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆ0ಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆ0ಯಿರಿ**

31. 'ಸಪ್ತಮೀ' ವಿಭಕ್ತಿ ಪ್ರತ್ಯ0ಯದ ಕಾರಕಾರ್ಥ

ಅ) ಸಂಬಂಧ ಬಿ) ಸಂಪ್ರದಾನ ಸಿ) ಅಧಿಕರಣ ಡಿ) ಅಪಾದಾನ

32. 'ವಾಗ್ದೇವಿ' ಪದವು ಈ ಸಂಧಿಗೆ ಉದಾಹರಣೆ0ಯಾಗಿದೆ.

ಅ) ಜಸ್ತ್ವ ಸಂಧಿ ಬಿ) ಶ್ಚುತ್ವ ಸಂಧಿ ಸಿ) ಆದೇಶಸಂಧಿ ಡಿ) 0ಯಣ್‌ಸಂಧಿ

33. 'ಮಾಡು' ಧಾತುವಿನ ವಿಧ್ಯರ್ಥಕ ರೂಪ

ಅ) ಮಾಡಿ0ಯಾನು ಬಿ) ಮಾಡದು ಸಿ) ಮಾಡೀತು ಡಿ) ಮಾಡಲಿ

34. ಸ್ವತಂತ್ರ ವಾಕ್ಯಗಳಲ್ಲಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾ0ಯ ವಾಕ್ಯವಾಗಿದ್ದರೆ ಅದು

ಅ) ಸಾಮಾನ್ಯವಾಕ್ಯ ಬಿ) ಸಂ0ಯೋಜಿತವಾಕ್ಯ ಸಿ) ಮಿಶ್ರವಾಕ್ಯ ಡಿ) ಪ್ರಶ್ನಾರ್ಥಕವಾಕ್ಯ

35. ಅನ್ವರ್ಥನಾಮ ಪದಕ್ಕೆ ಉದಾಹರಣೆ0ಯಾದ ಪದವಿದು

ಅ) ರಾಹುಲ ಬಿ) ಪರ್ವತ ಸಿ) ಮನುಷ್ಯ ಡಿ) ವಿಜ್ಞಾನಿ

36. ತತ್ಪುರುಷ ಸಮಾಸಕ್ಕೆ ಉದಾಹರಣೆ0ಯಾದ ಪದ

ಅ) ಬೆಟ್ಟದಾವರೆ ಬಿ) ಮುಕ್ಕಣ್ಣು ಸಿ) ಅಂಗೈ ಡಿ) ನೆ0ಯ್ದುವಸ್ತ್ರ

37. ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆ0ಯ ಪದಗಳನ್ನು ಬಳಸುವಾಗ, ಪ್ರಮುಖ ಪದವನ್ನು ಸೂಚಿಸುವಾಗ ಈ ಚಿಹ್ನೆ0ಯನ್ನು ಬಳಸಲಾಗುವುದು

ಅ) ಉದ್ಧರಣ ಚಿಹ್ನೆ ಬಿ) ಆವರಣ ಚಿಹ್ನೆ ಸಿ) ವಾಕ್ಯವೇಷ್ಠನ ಚಿಹ್ನ ಡಿ) ವಿವರಣಾತ್ಮಕ ಚಿಹ್ನೆ

38. ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚ0ಯವಾಗಿ ಹೇಳುವ ಸಂಧರ್ಭದಲ್ಲಿ ಈ ಅವ್ಯ0ಯವನ್ನು ಬಳಸಲಾಗುವುದು.

ಅ) ಅನುಕರಾಣಾವ್ಯ0ಯ ಬಿ) ಕ್ರಿ0ಯಾರ್ಥಕಾವ್ಯ0ಯ

ಸಿ) ಸಂಬಂಧಾರ್ಥಕಾವ್ಯ0ಯ ಡಿ) ಅವಧಾರಣಾರ್ಥಕಾವ್ಯ0ಯ

39. 'ಸ್ಯಾನಿಟರಿ' ಪದವು ಈ ಭಾಷೆಯಿಂದ ಬಂದಿದೆ

ಅ) ಹಿಂದುಸ್ಥಾನಿ ಬಿ) ಇಂಗ್ಲೀಷ್ ಸಿ) ಗ್ರೀಕ್ ಡಿ) ಪೋರ್ಚುಗೀಸ್

40. ತದ್ಧಿತಾಂತ ಭಾವನಾಮಕ್ಕೆ ಉದಾಹರಣೆ0ಯಾಗುವ ಪದವಿದು

ಅ) ಬಳೆಗಾರ ಬಿ) ಚಂದ್ರನಂತೆ ಸಿ) ಕಪ್ಪು ಡಿ) ಸಿರಿವಂತ

**ಐ) ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿರುವ ಸಂಬಂಧದಂತೆ0ಯೇ ಮೂರನೆ0ಯ ಪದಕ್ಕೆ ಸರಿ ಹೊಂದುವ ಸಂಬಂಧಿ ಪದವನ್ನು ಬರೆ0ಯಿರಿ.**

41. ಹಾಲ್ಜೇನು : ಜೋಡುನುಡಿ : : ಮೊಟ್ಟಮೊದಲು : ..................

42. ವಂಧ್ಯಾ : ಭಂಜೆ : : ಕೋಕಿಲಾ : ..................

43. ಚಿತ್ತ : ಮನಸು : : ಕೈವಾರ : ..................

44. ಸಕ್ಕಾರಿ : ಸಕ್ಕರೆ : : ಇಸವಾಸ : ..................

**ಒ) ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ**

45. ಕೊರಳ ಸೆರೆ ಹಿಗ್ಗಿದವು ಧೃಗುಜಲ
ಉರವಣಿಸಿ ಕಡು ನೊಂದನಕಾಟ
ಕುರುಪತಿಗೆ ಕೀದಾದುದೆಂದನು ತನ್ನ ಮನದೊಳಗೆ

**ಅಥವಾ**

ಅಂತೆಂಬನಾರ್ಗೆ ಪಿರಿದುಂ
ಭ್ರಾಂತುಂ ದಲೇಂ ದ್ರೋಣನೆಂಬನೇಂ ಪಾರ್ವಾನೆ ಪೇ

**ಓ) ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣ ಬರೆದು ಸಮನ್ವ0ಯಗೊಳಿಸಿ**

46. "ಭೀಮ ದು0ರ್ಯೋಧನರು ಮದಗಜಗಳಂತೆ ಹೋರಾಡಿದರು"

**ಅಥವಾ**

ಮಾತುಬಲ್ಲವನಿಗೆ ಜಗಳವಿಲ್ಲ: ಊಟ ಬಲ್ಲವನಿಗೆ ರೋಗವಿಲ್ಲ.

**ಔ) ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ 0ಯಾವುದಾದರು ಒಂದನ್ನು ವಿಸ್ತರಿಸಿ ಬರೆಯಿರಿ**

47. * ಹೆತ್ತತಾಯಿ, ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು
* ಚಿಂತೆ0ಯೇ ಮುಪ್ಪು; ಸಂತೋಷವೇ 0ಯೌವ್ವನ
* ದೇಶ ನೋಡು; ಕೋಶ ಓದು

48. ನಿಮ್ಮನ್ನು ಸರಗೂರಿನ ಕಾವೇರಿ ಪ್ರೌಢಶಾಲೆ0ಯ 'ಪ್ರಕೃತಿ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ 'ಕನ್ನಡ ರಾಜ್ಯೋತ್ಸವ ' ಕಾ0ರ್ಯಕ್ರಮದ ವರದಿ0ಯನ್ನು ಪ್ರಕಟಿಸುವಂತೆ ಕೋರಿ 'ವಿಜ0ಯವಾಣಿ' ಸಂಪಾದಕರಿಗೆ ಒಂದು ಮನವಿ ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಮಂಡ್ಯದ ಅನಿಕೇತನ ಪ್ರೌಢಶಾಲೆ0ಯ 'ಪ್ರಾರ್ಥನಾ' ಎಂದು ಭಾವಿಸಿಕೊಂಡು ನಿಮ್ಮ ವಿಧ್ಯಾಭ್ಯಾಸದ ಪ್ರಗತಿ0ಯ ಕುರಿತು ಭದ್ರಾವತಿ0ಯ ನೇತಾಜಿ ನಗರದಲ್ಲಿ ವಾಸವಾಗಿರುವ 'ವನಿತ' ಎಂಬ ಹೆಸರಿನ ತಾಯಿ0ಯವರಿಗೆ ಒಂದು ಪತ್ರ ಬರೆಯಿರಿ.

**ಅಂ) ಈ ಕೆಳಗಿನ ವಿಷ0ಯಗಳಲ್ಲಿ 0ಯಾವುದಾದರು ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆ ಎಲ್ಲದಂತೆ ಪ್ರಬಂಧ ಬರೆಯಿರಿ**

49. * ಜನಸಂಖ್ಯಾ ಸ್ಫೋಟಕ್ಕೆ ಕಾರಣ ಹಾಗೂ ಪರಿಹಾರೋಪಾ0ಯ
* ರಾಷ್ಟ್ರೀ0ಯ ಭಾವೈಕ್ಯತೆ
* ಜಾಗತಿಕ ತಾಪಮಾನದ ಹೆಚ್ಚಳದಿಂದಾಗುವ ದುಷ್ಪರಿಣಾಮ ಹಾಗೂ ಪರಿಹಾರಗಳು

# ಮಾರ್ಚ್ 2019

# ಪ್ರಥಮ ಭಾಷೆ– ಕನ್ನಡ – ಮಾದರಿ ಉತ್ತರ ಪತ್ರಿಕೆ

## ವಿಭಾಗ–ಎ

1. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಶಬರಿ.
2. ಲಂಡನಿನ್ನಲ್ಲಿ ನೆಲ್ಸನ್ ರವರ ಮೂರ್ತಿ ಇರುವ ಸ್ಥಳದ ಹೆಸರು"ಟ್ರಾಫಲ್ಗಾರ್ ಸ್ಕ್ವೇರ್"
3. 'ಶಿವಾನುಭವ ಶಬ್ದಕೋಶ ಪುಸ್ತಕ ಬರೆದವರು ಹಳಕಟ್ಟಿ
4. ಶಾನುಭೋಗರ ಬ್ರಹ್ಮಾಸ್ತ್ರ ಖಿರ್ದಿ ಪುಸ್ತಕ.
5. ಸುಕುಮಾರಸ್ವಾಮಿಗೆ ಸೆಟ್ಟಿಯ ಪಟ್ಟವನ್ನು ಕಟ್ಟಲಾಯಿತು.
6. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ನಕುಲ ಮತ್ತು ಸಹದೇವರು.
7. ಅಶ್ವಯುಜ ಬತ್ತದ ಗದ್ದೆಯ ಬಣ್ಣ ಗಿಳಿಯ ಹಸುರಿನಂತಿದೆ.
8. ದ್ರೋಣರು ಅಶ್ವತ್ಥಾಮರೊಡನೆ ಪರಶುರಾಮರ ಬಳಿಗೆ ಬಂದರು.
9. ಪುಟ್ಟ ಪೋರಿಯ ಅಮ್ಮ ಗುಡುಸಿಲಿನ ಒಳಗೆ ಮಲಗಿದ್ದಾಳೆ.
10. ಲಂಡನ್ ಪಟ್ಟಣದ ಪೇಟೆ ಬೀದಿಯಲ್ಲಿರುವ 'ವೂಲವರ್ಥ' ಎಂಬ ಸ್ಟೇಶನರಿ ಅಂಗಡಿಯಲ್ಲಿ ಎಲ್ಲಾ ತರಹದ ಸಾಮಾನುಗಳನ್ನು ಒಂದು ಪೆನ್ನಿಯಿಂದ ಆರು ಪೆನ್ನಿಯವರೆಗೆ ಮಾರುತ್ತಾರೆ. ಪ್ರಾಚೀನ ಮಹಾಕಾವ್ಯದಂತೆ ಇದೊಂದು ಮಹಾಕೋಶವಾಗಿದೆ. ಬೂಟು, ಕಾಲುಚೀಲ, ಚಣ್ಣ, ಸಾಬೂನು, ಔಷಧ, ಪುಸ್ತಕ, ಅಡಿಗೆಯ ಪಾತ್ರೆ, ಇಲೆಕ್ಟ್ರಿಕ್ ದೀಪದ ಸಾಮಾನು, ಫೋಟೋ, ಅಡವಿಯ ಹೂವು, ಯುದ್ದ ಸಾಮಾಗ್ರಿ ಹೀಗಿ ಎಲ್ಲವೂ ಇಲ್ಲಿ ದೊರೆಯುತ್ತದೆ.

11. ಡಾ॥ಅಶೋಕ ಪೈರವರು ಮನಸ್ಸಿನ ಬಗ್ಗೆ ನಡೆದ ಒಂದು ಸಂಶೋಧನಾ ಸತ್ಯವನ್ನು ಹೀಗೆ ಹೇಳಿದ್ದಾರೆ. ಕೆಲವರು ಒಂದು ಕೊಠಡಿಯಲ್ಲಿ ಕುಳಿತು ಟೆಲಿವಿಷನ್ ನೋಡುತ್ತಿದ್ದಾಗ, ಇನ್ನು ಕೆಲವರು ಇದರ ಅರಿವಿಲ್ಲದೆ ತಮ್ಮಷ್ಟಕ್ಕೆ ತಾವು ಪಕ್ಕದ ಕೊಠಡಿಯಲ್ಲಿ ಮಾತಾಡುತ್ತಿದ್ದಾರೆ. ಟೆಲಿವಿಶನ್‌ನಲ್ಲಿ ಬರುವ ಕೊಲೆಯ ದೃಶ್ಯ ನೋಡುತ್ತಿದ್ದವರ ದುಃಖದ ಭಾವನೆ ಪಕ್ಕದ ಕೊಠಡಿಯಲ್ಲಿರುವವರ ಮನಸ್ಸಿನಲ್ಲೂ ದುಗುಡ ಉಂಟುಮಾಡುತ್ತದೆ. ನೃತ್ಯದ ದೃಶ್ಯ ಖುಷಿಯ ಭಾವನೆಯನ್ನು ಉಂಟುಮಾಡುತ್ತದೆ. ಯಾವ ಜೀವಿಯೂ ತನ್ನಷ್ಟಕ್ಕೆ ತಾನಿರುವುದಿಲ್ಲ. ಒಂದು ಜೀವಿಗೆ ಆಗುವ ಧುಃಖ ದುಮ್ಮಾನ ಎಲ್ಲಾ ಜೀವಿಗಳಿಗೂ ಆಗುತ್ತದೆ ಎಂದಿದ್ದಾರೆ.

12. ಚಿಕ್ಕನಾಯಕನ ಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ರೈತರು ಅದೇ ದಾರಿಯಲ್ಲಿ ಹಿಂದಿರುಗುತ್ತಿದ್ದರು. ಶಾನುಭೋಗರು ಬಿದ್ದ ಸ್ಥಳಕ್ಕೆ ಕಾಲು ರಹದಾರಿ ಇರುವಾಗ ಎತ್ತುಗಳು ಮುಂದೆ ಹೋಗದೆ ಕಣಿ ಹಾಕಿಕೊಂಡವು. ಹುಲಿಯ ಘರ್ಜನೆ ಕೇಳಿಸಿತು. ಎತ್ತುಗಳ ಘಂಟೆಯ ಶಬ್ಧ, ರೈತರ ಮಾತುಗಳು ಕೇಳಿ ಹುಲಿ ಓಡಿಹೋಯಿತು. ರೈತರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ಗುಂಡು ಹಾರಿಸಿ, ಗಲಭೆ ಮಾಡುತ್ತ, ಪಂಜು ಹೊತ್ತಿಸಿಕೊಂಡು ಬರುತ್ತಿದ್ದಾಗ, ಬಿದ್ದಿದ್ದ ಶಾನುಭೋಗರನ್ನು ಕಂಡು ಮುಖದ ಮೇಲೆ ನೀರು ಹಾಕಿ ಎಚ್ಚರಿಸಿದರು.
13. ಅರಸ ವೃಷಭಾಂಕ ಮತ್ತು ಸುಕುಮಾರಸ್ವಾಮಿಯನ್ನು ಕುಳ್ಳಿರಿಸಿ ಬಂಧುಗಳು ಪರಿವಾರದವರು ಶುಭಕರವಾದ ಬಿಳಿಸಾಸಿವೆಯ ಅಕ್ಷತೆಯನ್ನು ಹಾಕಿದಾಗ ಸುಕುಮಾರಸ್ವಾಮಿಗೆ ಒತ್ತಿದಂತಾಗಿ ಸೊಂಟವನ್ನು ಅಲುಗಾಡಿಸುತ್ತಾನೆ. ದೀಪವನ್ನು ನೋಡಿದಾಗ ಕಣ್ಣೀರು ಸುರಿಸುತ್ತಾನೆ. ಊಟ ಮಾಡುವಾಗ ಅರ್ಧ ಉಟವನ್ನು ನುಂಗಿ, ಅರ್ಧ ಊಟವನ್ನು ಉಗುಳುವುದನ್ನು ಕಂಡು ಆಹಾರದ ಮೇಲಿನ ಅರುಚಿಯಿಂದ ಹೀಗೆ ಮಾಡುತ್ತಿದ್ದಾನೆ. ಈತನಿಗೆ ವ್ಯಾಧಿಯಿರಬಹುದೆಂದು ಅರಸ ಭಾವಿಸುತ್ತಾನೆ.

14. ಅಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚಹಸುರಿನೊಂದಿಗೆ ಆಗಸವು ಸಹ ಹಸುರಿನಿಂದ ಕೂಡಿದಂತೆ ಕಾಣುತ್ತಿದೆ. ಹಾಗೆ ಮುಗಿಲುಗಳು ಸಹ ಹಸುರಿನಿಂದ ಕೂಡಿದೆ. ಗದ್ದೆಯ ಬಯಲು ಹಸಿರಿನಿಂದ ಕಂಗೊಳಿಸುತ್ತಿದೆ. ಮಲೆಗಳು ಕಣಿವೆಗಳು ಸಸ್ಯ ಸಮೃದ್ಧಿಯಿಂದ ಕೂಡಿದೆ. ಇಡೀ ಪ್ರಕೃತಿಯೇ ಹಸುರಾಗಿರುವುದರಿಂದ ಸಂಜೆಯ ಬಿಸಿಲು ಕೂಡ ಹಸುರನ್ನೇ ಮೈಗೂಡಿಸಿಕೊಂಡಿದೆ. ಹೀಗೆ ಕವಿ ಕುವೆಂಪುರವರಿಗೆ ಆಗಸದಿಂದ ಸಂಜೆಯ ಬಿಸಿಲವರೆಗೂ ಹಸುರೆ ಕಂಡು ಬಂದಿದೆ.

15. ದ್ರೋಣನು ಶಪಥ ಮಾಡುತ್ತ, 'ಎಲೈ ಖಳನೇ ನೊಣಕ್ಕೆ ತಿಪ್ಪೆಯೇ ಶ್ರೇಷ್ಠವಾದುದ್ದು, ಎಂಬ ಗಾದೆ ಮಾತಿನಂತೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೇ. ನಾನು, ನೀನು ಒಂದೇ ಗುರುವಿನ ಬಳಿ ವಿದ್ಯಾಭ್ಯಾಸ ಮಾಡಿದ್ದೇವೆಂಬ ಕಾರಣದಿಂದ ನಿನ್ನನ್ನು ಕೊಲ್ಲದೇ ಬಿಡುತ್ತಿದ್ದೇನೆ . ಆದರೆ ಈ ಸಭಾ ಮದ್ಯದಲ್ಲಿ ನನ್ನನ್ನು ಹೀಯಾಳಿಸದೆ ನಿನ್ನನ್ನು ನನ್ನ ಶಿಷ್ಯರಿಂದಲೇ ಗಾಬರಿಯಾಗುವಂತೆ ಕಟ್ಟಿಸದಿದ್ದರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೇ"? ಎಂದು ಹೇಳಿದನು.

16. ದೈಹಿಕ ಹಸುವನ್ನು ಹಿಮ್ಮಿಗಿಸುವುದು ವಿವೇಕಾನಂದರ ಮೊದಲ ಆದ್ಯತೆಯಾಗಿತ್ತು. ಅನಂತರ ಆತ್ಮದ ಹಸಿವು, ವೇದಾಂತದ ಹಸಿವು, ಧಾರ್ಮಿಕ ಹಸಿವು. ಈ ಕಾರಣದಿಂದಾಗಿಯೇ ವಿವೇಕಾನಂದರು ಯಾವತ್ತೂ ಧಾರ್ಮಿಕ ಮೂಲಭೂತಿಯಾಗಿರಲ್ಲಿಲ್ಲ, ಬದಲಾಗಿ ಧಾರ್ಮಿಕ ಮೂಲ ಭೂತವಾದಕ್ಕೆ ಉಗ್ರ ವಿರೋಧಿಯಾಗಿದ್ದರು.

17. ಹನ್ನೆರಡು ವರ್ಷದ ಬಾಲಕ ಶಾಲೆಗೆ ಹೋಗದೆ ಅಮೃತಸರದ ಜಲಿಯನ್ ವಾಲಾಬಾಗ್ ಗೆ ಹೋಗಿ ಅಂತರ್ಮುಖಿಯಾಗಿ ನಿಂತು, ನಂತರ ಅಲ್ಲಿದ್ದ ಮಣ್ಣನ್ನು ಹಣೆಗಿಟ್ಟುಕೊಂಡು ಇನ್ನಷ್ಟನ್ನು ಡಬ್ಬಿಯಲ್ಲಿ ಶೇಖರಿಸಿಕೊಂಡು ರಾತ್ರಿ ಮನೆಗೆ ಹಿಂದಿರುಗಿದಾಗ ಎಂದಿನಂತೆ ಸಹೋದರಿ ಊಟಕ್ಕೆ ಎಬ್ಬಿಸಿದಾಗ ಒಲೆ ಎನ್ನುತ್ತಾನೆ. ಕಾರಣ ಕೇಳಿದಾಗ ಮನೆಯ ಹಿಂಭಾಗಕ್ಕೆ ರಕ್ತಸಿಕ್ತವಾದ ಮಣ್ಣನ್ನು ತೋರಿಸುತ್ತಾನೆ. ಅದು ಎಲ್ಲಿಯದೆಂದು ತಿಳಿದಾಗ ಭಗತ್‌ಸಿಂಗನು ಮಾವಿನ ಹಣ್ಣೊಂದನ್ನು ನಿರಾಕರಿಸಿದ್ದಕ್ಕೆ ಕಾರಣ ತಿಳಿಯುತ್ತದೆ.

18. ಮೃದು ಸ್ವಭಾವದ ವರ್ತಕ ಧರ್ಮವಂತನಾಗಿದ್ದ. ಹೀಗಿದ್ದಾಗ ವರ್ತಕನಿಗೆ ಕಷ್ಟಗಳು ಶುರುವಾದವು. ಅವನ ವ್ಯಾಪಾರ ಕುಸಿದು ಬಿತ್ತು. ಬರಬೇಕಾಗಿದ್ದ ಹಣ ಬರಲಿಲ್ಲ. ಸರಕುಗಳನ್ನು ತರಲು ದೂರದ ದೇಶಕ್ಕೆ ತೆರಳಿದ್ದ ಹಡಗುಗಳು ಹಿಂದಿರುಗಲಿಲ್ಲ. ಅವನ ಸಾಲಗಳು ಅವನನ್ನು ಬಾಧಿಸತೊಡಗಿದವು. ಇದ್ದ ಬದ್ದ ಸ್ಥಿರಾಸ್ತಿ, ಚರಾಸ್ಥಿಯನ್ನೆಲ್ಲ ಮಾರಿ ಸಾಲ ತೀರಿಸಿದ. ಇನ್ನು ನಗರದಲ್ಲಿ ವಾಸಿಸುವುದು ಆತನಿಗೆ ಕಷ್ಟವಾಯಿತು. ಆದ್ದರಿಂದ ಉಳಿದ ಪುಟ್ಟ ಮೊತ್ತದಲ್ಲಿ ಹಳ್ಳಿಯ ಕಡೆ ಒಂದು ಮನೆಕೊಂಡು ವಾಸಿಸಲು ನಿರ್ಧರಿಸಿ ನಗರದಿಂದ ಹಳ್ಳಿಗೆ ಹೊರಟನು.

19. "ನೀರಲ್ಲೆ ಹುಟ್ಟೋದು ನೀರಲ್ಲೆ ಬೆಳಿಯೋದು
ನೀರು ತಾಕಿದರೆ ಮಟಮಾಯ । ಕನ್ನಡದ
ಬೆಡಗೀನ ಜಾಣ್ಮೆ ತಿಳಿದ್ಹೇಳೆ"
ಇದು 'ಉಪ್ಪು' ಎಂಬ ಉತ್ತರ ಬರಲು ಹೇಳಿದ ಒಗಟಾಗಿದೆ.

20. **ಆಯ್ಕೆ:** ಪ್ರಸ್ತುತ ಹೇಳಿಕೆಯನ್ನು ಪು.ತಿ.ನರಸಿಂಹಾಚಾರ್ ರವರು ರಚಿಸಿರುವ 'ಏಕಾಂಕ ನಾಟಕಗಳು' ಕೃತಿಯಿಂದ ಆಯ್ದು 'ಶಬರಿ' ಎಂಬ ಗೀತ ನಾಟಕದಿಂದ ಆರಿಸಿಕೊಳ್ಳಲಾಗಿದೆ.
**ಸಂದರ್ಭ:** ಶ್ರೀರಾಮನನ್ನು ಕಾಣುವುದೇ ಜೀವನದ ಏಕೈಕ ಗುರಿಎಂದು ಭಾವಿಸಿದ್ದ ಶಬರಿ ರಾಮ ಧ್ಯಾನದಲ್ಲಿ ತೊಡಗಿ ರಾಮನ ದರ್ಶನಕ್ಕಾಗಿ ಮತಂಗ ಋಷಿಯ ಆಶ್ರಮದಲ್ಲಿರುತ್ತಾಳೆ. ತಪಸ್ವಿಯಾದ ದನುವಿನ ಸಲಹೆಯಂತೆ ಮತಂಗಾಶ್ರಮವನ್ನು ಪ್ರವೇಶಿಸಿದ ರಾಮಲಕ್ಷ್ಮಣರು ಶಬರಿಯನ್ನು ಕಾಣುತ್ತಾರೆ. ತನ್ನ

ಆರಾಧ್ಯದೈವ ಶ್ರೀರಾಮನನ್ನು ಕಂಡು, ಆನಂದಿಸಿ, ಧನ್ಯತೆ ಭಾವನೆಯಿಂದ ಮುಕ್ತಿಯನ್ನು ಬಯಸಿದ ಶಬರಿಗೆ ಶ್ರೀರಾಮನು ಮುಕ್ತಿಯನ್ನು ಕರುಣಿಸಿದ ಸಂಧರ್ಭದಲ್ಲಿ ರಾಮನು ಲಕ್ಷ್ಮಣನಿಗೆ ಈ ಮಾತನ್ನು ಹೇಳುತ್ತಾನೆ.
**ಸ್ವಾರಸ್ಯ:** ರಮಲಕ್ಷ್ಮಣರನ್ನು ಅವರ ಆಥಿತ್ಯದಿಂದ ಸತ್ಕರಿಸಿ, ಗೌರವಿಸಿ ತನ್ನ ಬಾಳಿನ ಹಂಬಲ ತೀರಿದ ನಂತರ ಬಾಳು ಅರ್ಥಹೀನವೆಂದು ಭಾವಿಸಿ ಮುಕ್ತಿಯನ್ನು ಪಡೆಯುವ ಶಬರಿಯ ಪರಮಭಕ್ತಿ, ತಾಳ್ಮೆ. ಶ್ರೀರಾಮನ ಸರಳ ಹಿತ–ಮಿತ ಮೃದುವಚನ, ಲಕ್ಷ್ಮಣ ಸಹಚರತೆಯು ಇಲ್ಲಿ ಅತ್ಯಂತ ಮನೋಜ್ಞವಾಗಿ ಮೂಡಿ ಬಂದಿದೆ. ಶಬರಿಯ ವ್ಯಕ್ತಿತ್ವಕ್ಕೆ "ಪರೋಪಕಾರ್ಥಂ ಎದಂ ಶರೀರಂ", ಎಂಬ ಉಕ್ತಿಯು ಈ ಮಾತಿನಲ್ಲಿ ಅಭಿವ್ಯಕ್ತಗೊಂಡಿದೆ.

21. **ಆಯ್ಕೆ :**ಪ್ರಸ್ತುತ ಹೇಳಿಕೆಯನ್ನು ದುರ್ಗಸಿಂಹ ಕವಿ ರಚಿಸಿರುವ 'ಕರ್ನಾಟಕ ಪಂಚತಂತ್ರ' ಕ್ರುತಿಯಿಂದ ಆಯ್ದ 'ವೃಕ್ಷಸಾಕ್ಷಿ' ಎಂಬ ಗದ್ಯಪಾಠದಿಂದ ಆರಿಸಿಕೊಳಲಾಗಿದೆ.
**ಸಂಧರ್ಭ:** ಧರ್ಮಬುದ್ದಿ ಮತ್ತು ದುಷ್ಟಬುದ್ದಿ ಇವರಿಬ್ಬರ ನಡುವಿನ ವ್ಯಾಜ್ಯವನ್ನು ಬಗೆಹರಿಸಲು ವಟವೃಕ್ಷದ ಬಳಿಗೆ ಬಂದ ಧರ್ಮಾಧಿಕರಣ ವೃಕ್ಷವನ್ನು ಕುರಿತು ಯಕ್ಷಾದಿ ದಿವ್ಯದೇವತೆಗಳು ವಾಸ ಮಾಡುವ ವೃಕ್ಷವಾದ ಕಾರಣ ನಿನ್ನನ್ನು ಸಾಕ್ಷಿಯನ್ನಾಗಿ ಮಾಡಿ ನಿನ್ನನ್ನು ಕೇಳುತ್ತಿದ್ದೇನೆ. ನೀನು ತಪ್ಪದೆ ಸತ್ಯವನ್ನು ನುಡಿ ಎಂದಾಗ ಆ ವೃಕ್ಷದ ಪೊಟರೆಯೊಳಗೆ ಅಡಗಿ ಕುಳಿತಿದ್ದ ದುಷ್ಟಬುದ್ದಿಯ ತಂದೆ ಪ್ರೇಮಮತಿ ಮತಿಗೆಟ್ಟು ಧರ್ಮವನ್ನು ಬಿಟ್ಟು, ಹೊನ್ನೆಲವನ್ನು ಧರ್ಮಬುದ್ಧಿಯೇ ತೆಗೆದುಕೊಂಡನು ಎಂದು ನುಡಿದ ಸಂಧರ್ಭದಲ್ಲಿ ಕವಿಯು ಈ ಮೇಲ್ಕಂಡ ಮಾತನ್ನು ಅಲಂಕಾರಿಕವಾಗಿ ಹೇಳಿದ್ದಾನೆ.
**ಸ್ವಾರಸ್ಯ:** ದುಷ್ಟಬುದ್ದಿಯು ತನ್ನ ವಂಚನೆ, ಕಪಟತನ, ಮೋಸದಿಂದ ತಾನು ಹಾಳಾಗುವುದಲ್ಲದೆ, ಸಂಪತ್ತಿಗಾಗಿ ತನ್ನ ತಂದೆಯನ್ನು ಬಲಿಕೊಡುವ ಹೃದಯ ಹೀನ ಕೃತ್ಯದಿಂದ 'ಮಾಡಿದ್ದುಣ್ಣೋ ಮಾರಾಯ' ಎಂಬ ನೀತಿಯಂತೆ ಕೆಟ್ಟ ಫಲವನ್ನು ಅನುಭವಿಸುವಂತಾಯಿತು ಎಂದು ಅತ್ಯಂತ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

22. **ಆಯ್ಕೆ:** ಪ್ರಸ್ತುತ ಹೇಳಿಕೆಯನ್ನು ಡಾ.ಬಿ.ಎಸ್.ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ 'ಹಲಗಲಿ ಬೇಡರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.
**ಸಂದರ್ಭ:** ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟೀಷರು 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಭಾರತೀಯರ ಮೇಲೆ ನಿಶ್ಶಸ್ತ್ರೀಕರಣ ಆದೇಶವನ್ನು ಹೊರಡಿಸಿದರು. ಈ ಶಾಸನದ ಪ್ರಕಾರ ಬ್ರಿಟೀಷ್ ಸರ್ಕಾರದ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುದ್ದಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬುದಾಗಿತ್ತು. ಈ ಆದೇಶವನ್ನು ವಿರೋಧಿಸಿ ಹಲಗಲಿ ರಾಮ, ಬಾಲ, ಹನುಮ, ಜಡಗ ಮೊದಲಾದ ವೀರರು ದಂಗೆ ಎದ್ದ ಸಂಧರ್ಭದಲ್ಲಿ ಈ ಮೇಲ್ಕಂಡ ಮಾತು ಬಂದಿದೆ.
**ಸ್ವಾರಸ್ಯ:** ಬ್ರಿಟೀಷರು ಹೊಸ ಹೊಸ ಕಾಯ್ದೆಗಳನ್ನು ತರುವ ಮೂಲಕ ಭಾರತೀಯರ ಮೇಲೆ ನಿರಂತರವಾಗಿ ದಬ್ಬಾಳಿಕೆ, ದೌರ್ಜನ್ಯಗಳನ್ನು ಮಾಡುತ್ತಿದ್ದರು ಎಂಬುದನ್ನು ಅತ್ಯಂತ ಗಂಭೀರವಾಗಿ ವ್ಯಕ್ತ ಪಡಿಸಲಾಗಿದೆ.

23. **ಆಯ್ಕೆ:** ಪ್ರಸ್ತುತ ಹೇಳಿಕೆಯನ್ನು ಲಕ್ಷ್ಮೀಶ ಕವಿ ರಚಿಸಿರುವ 'ಜೈಮಿನಿ ಭಾರತ ಕೃತಿಯಿಂದ ಆಯ್ದ 'ವೀರಲವ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.
**ಸಂದರ್ಭ:** ಶ್ರೀರಾಮನ ಅಶ್ವಮೇಧ ಯಾಗದ ಕುದುರೆಯು ವಾಲ್ಮೀಕಿಯ ಆಶ್ರಮವನ್ನು ಪ್ರವೇಶಿಸಿ, ಹಸುರಾದ ಹುಲ್ಲನ್ನು ತಿನ್ನುವಾಗ, ಆ ತೋಟದ ಕಾವಲು ಕಾಯುತ್ತಿದ್ದ ಲವನು ಕುದುರೆಯ ಬಳಿ ಬಂದು ಅದರ ನೆತ್ತಿಯ ಮೇಲಿದ್ದ ಇಡೀ ಭೂಮಂಡಲದಲ್ಲಿ ಕೌಸಲ್ಯೆಯ ಮಗನಾದ ಶ್ರೀರಾಮನೊಬ್ಬನೇ ವೀರನು. ಇದು ಆತನ ಯಜ್ಞದ ಕುದುರೆ. ಇದನ್ನು ನಿರ್ವಹಿಸುವರು ಯಾರಾದರು ಇದ್ದರೆ ಅದನ್ನು ತಡೆಯಲಿ ಎಂದಿದ್ದ ಲೇಖನವನ್ನು ಓದಿ, ಕೋಪಗೊಂಡ ಸಂಧರ್ಭದಲ್ಲಿ ಮೇಲ್ಕಂಡ ಮಾತನ್ನು ಹೇಳಿಕೊಳ್ಳುತ್ತಾನೆ.

**ಸ್ವಾರಸ್ಯ:** ಲವ ಕುಶರು ಹುಟ್ಟಿದ್ದು ಋಷ್ಯಾಶ್ರಮದಲ್ಲಾದರೂ ಸಹಜ ಕ್ಷಾತ್ರಗಣ ವೀರತೆಯಿಂದ ಕುದುರೆ0ಯನ್ನು ಕಟ್ಟಿ ಹಾಕುತ್ತಾರೆ. ಕಷ್ಟ-ಸವಾಲುಗಳು ಬಂದಾಗ ಚಿಕ್ಕವರು, ಅಸಮರ್ಥರು ಎಂದು ಕೊರದೆ ದಿಟ್ಟ ತನದಿಂದ ಎದುರಿಸಬೇಕು. ಬಾಲ್ಯ ಸಹಜ ಸಾಹಸ ಪ್ರವೃತ್ತಿ ಹಾಗೂ ಲವನಿಗೆ ತನ್ನ ತಾಯಿ0ಯ ಮೇಲಿದ್ದ ಗೌರವ, ಅಭಿಮಾನಗಳನ್ನು ಸ್ವಾರಸ್ಯ ಪೂರ್ಣವಾಗಿ ವರ್ಣಿಸಲಾಗಿದೆ.

24. ಸಾ ರಾ ಅಬೂಬಕ್ಕರ್
ಲೇಖಕಿ ಸಾ ರಾ ಅಬೂಬಕ್ಕರ್ ಅವರು 30 ಜೂನ್ 1936 ರಂದು ಕಾಸರಗೋಡಿನಲ್ಲಿ ಜನಿಸಿದರು. ಮಹಿಳೆ0ಯರು ಸಾಹಿತ್ಯ ಲೋಕದಲ್ಲಿ ತೊಡಗಿಸಿಕೊಳ್ಳುವುದು ಅಪರೂಪ ಎನ್ನುವ ಸಂಧರ್ಭದಲ್ಲಿ ಬರವಣಿಗೆ ಆರಂಭಿಸಿದ ಇವರು ಇಂದು ನಾಡಿನ ಕಥೆಗಾರ್ತಿ ಹಾಗೂ ಕಾದಂಬರಿಗಾರ್ತಿ0ಯಾಗಿ ಜನಪ್ರಿ0ಯತೆ0ಯನ್ನು ಗಳಿಸಿದ್ದಾರೆ
ಚಂದ್ರಗಿರಿ0ಯ ತೀರದಲ್ಲಿ, ಸಹನಾ, ಕದನ ವಿರಾಮ, ವಜ್ರಗಳು, ಸುಳಿ0ಯಲ್ಲಿ ಸಿಕ್ಕವರು, ತಳ ಒಡೆದ ದೋಣಿ0ಯಲಿ, ಮೊದಲಾದವು ಇವರ ಪ್ರಮುಖ ಕಾದಂಬರಿಗಳು. ಚಪ್ಪಲಿಗಳು, ಖೆಡ್ಡಾ, ಅರ್ಧರಾತ್ರಿ0ಯಲ್ಲಿ ಹುಟ್ಟಿದ ಕೂಸು, ಪ0ಯಣ ಇವು ಕಥಾಸಂಕಲನಗಳು. ಇವರ ಸಾಹಿತ್ಯ ಕೃಷಿಗಾಗಿ ಅನೇಕ ಪ್ರಶಸ್ತಿಗಳು ಹಾಗು ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ ಲಭಿಸಿವೆ. ಕರ್ನಾಟಕದ ಸಂಸ್ಕೃತಿ ಚಿಂತಕರಲ್ಲಿ ಇವರೂ ಕೂಡ ಒಬ್ಬರಾಗಿದ್ದಾರೆ.

25. ಕುಮಾರವ್ಯಾಸ ಎಂದೆ ಪ್ರಸಿದ್ಧನಾಗಿರುವ ಗದುಗಿನ ನಾರಣಪ್ಪ ಗದುಗಿನ ಪ್ರಾಂತ್ಯದ ಕೋಳಿವಾಡದಲ್ಲಿ ಕ್ರಿ.ಶ.1430ರಲ್ಲಿ ಜನಿಸಿದರು. ಆದಿಕವಿ ಪಂಪನ ಅನಂತರ ವ್ಯಾಸರ ಮಹಾಭಾರತವನ್ನು ಕನ್ನಡದಲ್ಲಿ ಮೊದಲ ಹತ್ತು ಪರ್ವಗಳನ್ನು ರಚಿಸಿ ಪಂಡಿತರಿಗೆ ಮಾತ್ರವಲ್ಲದೆ, ಪಾಮರರಿಗೂ ಕಾಮಧೇನು ಎಂಬ ಗೌರವಕ್ಕೆ ಪಾತ್ರನಾದವನು ಕುಮಾರವ್ಯಾಸ.
ಕನ್ನಡ ಭಾರತ, ಗದುಗಿನ ಭಾರತ, ಕುಮಾರವ್ಯಾಸ ಭಾರತ ಎಂಬ ಹೆಸರನ್ನು ಹೊಂದಿರುವ ಕರ್ಣಾಟ ಭಾರತ ಕಥಾಮಂಜರಿ ಎಂಬ ಕಾವ್ಯವನ್ನು ಬರೆದು ಖ್ಯಾತನಾದ ಐರಾವತ ಎಂಬ ಕೃತಿ0ಯನ್ನು ರಚಿಸಿದ್ದಾನೆಂದು ತಿಳಿದುಬಂದಿದೆ. ರೂಪಕಲಂಕಾರವನ್ನು ನಿರರ್ಗಳವಾಗಿ ಪ್ರ0ಯೋಗಿಸಿ "ರೂಪಕ ಸಾಮ್ರಾಜ್ಯ ಚಕ್ರವರ್ತಿ" ಎಂಬ ಬಿರುದನ್ನು ಪಡೆದಿದ್ದಾನೆ. ವೀರನಾರಾ0ಯಣನ ಪರಮಭಕ್ತನಾದ ಈತ ಭಾಗವತ ಸಂಪ್ರದಾ0ಯವನ್ನು ಸರಳ, ಸುಂದರ ಹಾಗು ರಂಜನೀ0ಯವಾಗಿ ಪರಿಚಯಿಸಿ ಜನಪ್ರಿ0ಯಗೊಳಿಸಿದ್ದಾನೆ. ನಡುಗನ್ನಡ ಕಾವ್ಯ ಪರಂಪರೆ0ಯಲ್ಲಿ ಗದುಗಿನ ಭಾರತ ಅತ್ಯಂತ ಜನಪ್ರಿ0ಯವಾದ ಮಹಾಕಾವ್ಯವಾಗಿದೆ.

26. ನೀಲಮೇಘ ಮಂಡಲ-ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೋ ಅಣ್ಣಾ
ಚಿಕ್ಕೆ0ಯಮಾಲೆ0ಯ ಸಿಕ್ಕಿಸಿಕೊಂಡು
ಸೂ0ರ್ಯ-ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

**ಅಥವಾ**

0ಯುಗ-0ಯುಗಗಳ ಹಣಿಬರಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆ0ಯ ಬೀಸಿ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

27. ದುರ್ಯೋಧನನು ತನ್ನ ತಂದೆ ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆದಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬಂದಾಗ ಭೀಷ್ಮರು" ಪಾಂಡವರೊಂದಿಗೆ ಯುದ್ಧ ಮಾಡದೆ, ಸಂಧಿಯನ್ನು ಮಾಡಿಕೋ, ಅವರು ಎಂದಿಗೂ ನನ್ನ ಮಾತುಗಳನ್ನು ಮೀರುವವರಲ್ಲ, ನೀನು ಸಹ ಹೇಳಿದ್ದನ್ನು ಮೀರದೆ ಕೇಳು" ಎಂದು ದುರ್ಯೋಧನನಿಗೆ ಹೇಳಿದಾಗ, ಆತ ಮುಗುಳ್ನಗೆ ನಕ್ಕು" ತಾತ ನಿಮಗೆ ನಮಸ್ಕರಿಸಿ ನಿಮ್ಮಿಂದ ಆಶೀರ್ವಾದವನ್ನು ಪಡೆದು ಹೋಗುವ ಉದ್ದೇಶದಿಂದ ಬಂದೆನೇ ವಿನಃ ಶತ್ರುಗಳಾದ ಪಾಂಡವರೊಡನೆ ಸಂಧಿಯ ಒಪ್ಪಂದವನ್ನು ಏರ್ಪಡಿಸು ಎಂದು ಕೇಳಲು ಬಂದೆನೇ. ಅಜ್ಜ ನಾಳೆ ನಡೆಯುವ ಸಮರದಲ್ಲಿ ನನ್ನ ಕೆಲಸ ಯಾವುದೆಂದು ಹೇಳು" ಎಂದನು.

ಒಟ್ಟಾರೆಯಾಗಿ ಭೀಷ್ಮರ ಎದುರಿನಲ್ಲಿಯೇ ಸಂಧಿಗೆ ಒಪ್ಪದೆ, ಯುದ್ಧ ಮಾಡಿಯೇ ತೀರಬೇಕೆಂಬ ದುರ್ಯೋಧನನ ಛಲ ಅವನ ಸ್ವಭಾವಕ್ಕೆ ತಕ್ಕದ್ದಾಗಿ ವ್ಯಕ್ತಗೊಂಡಿರುವುದು ಹಾಗೂ ಹಿರಿಯರನ್ನು ಗೌರವಿಸುವುದು, ವಿನಯ ಕಾರ್ಯದಕ್ಷತೆಯ ದೃಢನಿಶ್ಚಯ, ಸಮರ್ಥ ನಾಯಕನ ಗುಣಲಕ್ಷಣಗಳು ಈ ಪದ್ಯದಲ್ಲಿ ಕಂಡು ಬರುವ ಉತ್ತಮ ಮೌಲ್ಯಗಳಾಗಿವೆ.

28. ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರನ್ನಾಗಿ ನೇಮಿಸಿದ ನಂತರ ಆಡಳಿತದಲ್ಲಿ, ಕಚೇರಿಯ ಕೆಲಸ ಕಾರ್ಯಗಳಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿ ಸ್ಥಳೀಯ ಮಟ್ಟದಲ್ಲಿ ಕೇಂದ್ರಿಕೃತವಾಗಿದ್ದ ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದರು. ವಿಶ್ವೇಶ್ವರಯ್ಯ ಅವರು 1913ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದು, ಸಂಸ್ಥಾನವೇ ಪ್ರತ್ಯೇಕವಾದ ಪ್ರೌಢಶಿಕ್ಷಣ ಅಂತಿಮ ಪರೀಕ್ಷೆ ನಡೆಸುವ ಯೋಜನೆಯನ್ನು ಆರ್ಥಿಕ ಪರಿಷತ್ತಿನ ಮೂಲಕ ರೂಪಗೊಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಜೊತೆಗೆ ಬೆಂಗಳೂರಿನಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ಶಾಲೆ, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಹಾಗು ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು.

ವಿಶ್ವೇಶ್ವರಯ್ಯನವರು ಕೈಗಾರಿಕೆಗೆ ಅಗ್ರಪ್ರಾಶಸ್ತ್ಯ ನೀಡಿ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಹೆಂಚು, ಸಕ್ಕರೆ, ಗಂಧದ ಎಣ್ಣೆ, ಕಾಗದದ ಕಾರ್ಖಾನೆ ಹೀಗೆ ನೂರಾರು ಕೈಗಾರಿಕೆಗಳನ್ನು ಆರಂಭಿಸಿದರು. 1913 ರಲ್ಲಿ ಮೈಸೂರು ಬ್ಯಾಂಕ್ ನಂತರ ಉಳಿತಾಯ ಬ್ಯಾಂಕ್, ಕೈಗಾರಿಕೆಗಳ ಅಭಿವೃದ್ಧಿಗೆ ಫ್ಲೀಡರ್ ಬ್ಯಾಂಕ್, ಕೈಗಾರಿಕೆ ಹೂಡಿಕೆ ಮತ್ತು ಅಭಿವೃಧಿ ನಿಧಿ, ಸಾರ್ವಜನಿಕ ಜೀವವಿಮಾ ಯೋಜನೆ, ಪ್ರಾಂತಿಯ ಸಹಕಾರಿ ಬ್ಯಾಂಕ್‌ಗಳನ್ನು ಸ್ಥಾಪಿಸಿದರು. ಕಾವೇರಿ ನದಿಗೆ ಕನ್ನಂಬಾಡಿ ಜಲಾಶಯ ನಿರ್ಮಾಣ, ರೈಲು ಮಾರ್ಗಗಳ ವಿಸ್ತರಣೆಗೆ ಕ್ರಮ, ಮಾರಿ ಕಣಿವೆ ಜಲಾಶಯದ ನೀರು ಹಂಚಿಕೆಯ ಪುನರ್ವ್ಯವಸ್ಥೆಯ, ಸಣ್ಣನೀರಾವರಿ ವ್ಯವಸ್ಥೆಗೆ ಮರುಜೀವ. ಹೀಗೆ ಅನೇಕ ಕಾರ್ಯಗಳನ್ನು ಅತ್ಯಂತ ಯಶಸ್ವಿಯಾಗಿ ಕಾರ್ಯತಗೊಳಿಸಿದರು.

**ಅಥವಾ**

'ಮಾದರಿ ಮೈಸೂರು' ಸಂಸ್ಥಾನದ ನಿರ್ಮಾತೃ ನಾಲ್ವಡಿ ಕ್ರಷ್ಣರಾಜ ಒಡೆಯರು ಅರಸು ಮನೆತನದಿಂದ ಬಂದವರಾಗಿದ್ದರು ಸಹ, ಜನತೆ ಆಡಳಿತದಲ್ಲಿ ಪಾಲ್ಗೊಳ್ಳುವಿಕೆಯ ಪರವಾಗಿದ್ದರು.

**ಪ್ರಜಾಪ್ರತಿನಿಧಿ ಸಭೆ :** ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಪ್ರಜಾಪ್ರತಿನಿಧಿ ಸಭೆಯ ಜನಪ್ರತಿನಿಧಿ ಸಭೆಯಾಗಿ ಪರಿವರ್ತನೆಯಾಯಿತು. 1923 ರಲ್ಲಿ ಹೊಸ ಕಾನೂನೊಂದನ್ನು ಜಾರಿಗೆ ತಂದು, ಪ್ರಜಾಪ್ರತಿನಿದಿ ಸಭೆಯನ್ನು ಶಾಸನ ಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದರು. ಇದು ಪ್ರಜಾತಂತ್ರದ ದೃಷ್ಟಿಯಿಂದ ಭಾರತದಲ್ಲಿಯೇ ಮಾದರಿಯಾದ ಸಂಸ್ಥೆಯಾಗಿ ಕಾರ್ಯ ನಿರ್ವಹಿಸಲು ಆರಂಭಿಸಿತು. ಪ್ರಜಾಪ್ರತಿನಿಧಿ ಸಭೆಯ ವರ್ಷಕ್ಕೆ ಎರಡು ಬಾರಿ ಎಂದರೆ ಜೂನ್ 1 ಮಹಾರಾಜರ ವರ್ಧಂತಿ, ಅಕ್ಟೋಬರ್ 2 ದಸರಾ ಮಹೋತ್ಸವ ಸಂಧರ್ಭಗಳಲ್ಲಿ ಸಮಾವೇಶಗೊಂಡು ಕಲಾಪಗಳನ್ನು ನಡೆಸುತ್ತಿತ್ತು. ಅಲ್ಲಿ ವಾರ್ಷಿಕ ಆಯವ್ಯಯ ಪರಿಶೀಲನೆ, ಪ್ರಶ್ನೋತ್ತರಗಳು, ಠರಾವುಗಳನ್ನು ಮಂಡಿಸುವುದು ಮುಂತಾದ ಸಂಸದೀಯ ಮಾದರಿಯ ನಡವಳಿಕೆಗಳು ನಡೆಯುತ್ತಿದ್ದವು. ಪ್ರಜಾಪ್ರತಿನಿಧಿ ಸಭೆಯಲ್ಲಿದ್ದ 275 ಸದಸ್ಯರಲ್ಲಿ ಹೆಚ್ಚು ಪ್ರತಿನಿಧಿಗಳು ಜನರಿಂದ ಆಯ್ಕೆಯಾದವರಾಗಿದ್ದರು.

**ನ್ಯಾಯ ವಿಧಾಯಕ ಸಭೆ:** ನಾಲ್ವಡಿ ಕೃಷ್ಣರಾಜ ಒಡೆಯರು 1907ರಲ್ಲಿ ನ್ಯಾಯ ವಿಧಾಯಕ ಸಭೆಯನ್ನು ಸಹ

ಸ್ಥಾಪಿಸಿದರು. ಇದರ ಸದಸ್ಯರ ಸಂಖ್ಯೆ 50. ಇದರಲ್ಲಿ ಜನರಿಂದ ಆಯ್ಕೆಯಾದವರು 22 ಸದಸ್ಯರು. ಮೇಲ್ಮನೆ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಈ ಸಂಸ್ಥೆ ಜೂನ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಬೆಂಗಳೂರಿನಲ್ಲಿ ಸಮಾವೇಶಗೊಳ್ಳುತ್ತಿತ್ತು ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲಾ ವಿಷಯಗಳನ್ನು ಸಹ ವಿಮರ್ಶಿಸುವ ಅಧಿಕಾರ ಆ ಸಭೆಗೆ ಇದ್ದಿತು. ಮುಖ್ಯವಾಗಿ ಯಾವುದೇ ಕಾನೂನುಗಳನ್ನು ಜಾರಿಗೊಳಿಸಲು ಆ ಸಭೆಯ ಅನುಮತಿ ಅಗತ್ಯವಾಗಿತ್ತು. ಆ ಸಭೆಗೆ ಸರ್ಕಾರದ ಖರ್ಚುಗಳನ್ನು ಕಡಿಮೆ ಮಾಡುವ ಅಧಿಕಾರ ಸಹ ಇದ್ದಿತು.

29. ನಮ್ಮ ಸುತ್ತಲು ಕವಿದಿರುವ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸಲು ಪ್ರೀತಿಯ ಹಣತೆಯನ್ನು ಹಚ್ಚೋಣ. ಬಿರುಗಾಳಿಗೆ ಹೊಯ್ದಾಡುತ್ತಿರುವ ಸಂಸಾರವೆಂಬ ಹಡಗನ್ನು ಎಚ್ಚರಿಕೆಯಿಂದ ಮುಂದೆ ನಡೆಸೋಣ ನಮ್ಮ ಸುತ್ತಮುತ್ತಲಿನ ಪರಿಸರವು ನಿರಂತರವಾಗಿ ಕಲುಷಿತಗೊಳ್ಳುತ್ತದೆ. ಹೀಗೆ ಕಲುಷಿತಗೊಂಡಿರುವ ನದಿ ಜಲಗಳೊಂದಿಗೆ ಮುಂಗಾರಿನ ಮಳೆಯಾಗೋಣ. ಬರಡಾಗಿರುವ ಕಾಡುಮೇಡುಗಳಿಗೆ ವಸಂತವಾಗೋಣ. ಸಮಾಜದಲ್ಲಿ ಜನರು ಅನೇಕ ಕಾರಣಗಳಿಂದ ಭಯಭೀತರಾಗಿದ್ದಾರೆ. ದುಃಖಿತರಾಗಿದ್ದಾರೆ, ಆತ್ಮವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಅವರಲ್ಲಿ ಹೊಸ ಭರವಸೆಗಳನ್ನು ತುಂಬೋಣ. ಧರ್ಮ, ಜಾತಿ, ಭಾಷೆ ಮುಂತಾದ ಕಾರಣಗಳಿಂದ ಮನುಜ-ಮನುಜರ ನಡುವೆ ಭೇದ ಭಾವಗಳು ನಿರ್ಮಾಣಗೊಂಡು ದ್ವೇಷ, ಅಸೂಯೆ ಮುಂತಾದವು ಮನೆಮಾಡಿವೆ. ಇವುಗಳನ್ನು ಪ್ರೀತಿ ವಿಶ್ವಾಸ ಮುಂತಾದವುಗಳಿಂದ ಹೋಗಲಾಡಿಸಿ ಮನುಷ್ಯರ ನಡುವೆ ಸಮಾನತೆಯ ಸೇತುವೆಯಾಗೋಣ. ಪ್ರತಿಯೊಂದು ಮತಗಳು ದಾರಿಯನ್ನು ತೋರಿಸುವ ದೀವಿಗೆಗಳು ಎಂಬುದನ್ನು ಅರಿತು ಎಚ್ಚರದಿಂದ ಬದುಕನ್ನು ಮುನ್ನಡೆಸೋಣ. ಭಯ-ಸಂಶಯಗಳಿಂದ ಕೂಡಿದ ಕಣ್ಣುಗಳಿಗೆ ನಾಳಿನ ಕನಸ್ಸುಗಳನ್ನು ಬಿತ್ತುವುದರ ಮೂಲಕ ಅವರಲ್ಲಿ ನವ ಚೈತನ್ಯವನ್ನು ತುಂಬೋಣ ಎಂಬುದು ಕವಿ ಶಿವರುದ್ರಪ್ಪನವರ ಆಶಯವಾಗಿದೆ.

**ಅಥವಾ**

ನಮ್ಮ ಸುತ್ತಲು ಆವರಿಸಿರುವ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸಬೇಕೆಂಬ ಸಂಕಲ್ಪ ಮಾಡಿದರೆ, ಅಲ್ಲಿ ಜ್ಞಾನವೆಂಬ ಹಣತೆಯನ್ನು ಹಚ್ಚುವುದರ ಮೂಲಕ ಆರೋಗ್ಯಕರ ಸಮಾಜವನ್ನು ನಿರ್ಮಾಣ ಮಾಡಬಹುದಾಗಿದೆ. ಬಿರುಗಾಳಿಗೆ ಹೊಯ್ದಾಡುವ ಸಂಸಾರವೆಂಬ ಹಡಗನ್ನು ಎಚ್ಚರದಲ್ಲಿ ಮುನ್ನೆಡಿಸಬೇಕು ಎಂಬ ಸಂಕಲ್ಪ ಕೈಗೊಂಡರೆ ಜೀವನವನ್ನು ಅತ್ಯಂತ ಸಮತೋಲನದಿಂದ ಮುನ್ನೆಡಸಲು ಸಾಧ್ಯವಾಗುತ್ತದೆ. ಪರಿಸರವು ನಿರಂತರವಾಗಿ ಮಲೀನಗೊಳ್ಳುತ್ತಿರುವುದರಿಂದ ನದೀಜಲಗಳು ಕಲುಷಿತಗೊಂಡಿವೆ. ಹೀಗೆ ಕಲುಷಿತಗೊಂಡಿರುವ ಪರಿಸರವನ್ನು ಸ್ವಚ್ಛ ಮಾಡಬೇಕಾದರೆ ಮುಂಗಾರು ಮಳೆಯ ರೀತಿಯಲ್ಲಿ ಪರಿಸರ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಸಿಕೊಳಬೇಕು.ಬರಡಾಗಿರುವ ಕಾಡುಮೇಡುಗಳನ್ನು ಸಂರಕ್ಷಿಸುವ ಸಂಕಲ್ಪ ಮಾಡಿದರೆ ಗಿಡಮರಗಳನ್ನು ನೆಟ್ಟು ಪೋಷಿಸುವ ಕೆಲಸವನ್ನು ಮಾಡಬೇಕು. ಸಮಾಜದಲ್ಲಿ ಅನೇಕ ಜನರು ಭಯ ಭೀತರಾಗಿ, ಆತ್ಮವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಇಂಥವರನ್ನು ಮೇಲೆತ್ತಲು ಹೊಸ ಭರವಸೆ, ಆತ್ಮವಿಶ್ವಾಸವನ್ನು ತುಂಬುವುದರ ಮೂಲಕ ಚೈತನ್ಯವನ್ನು ಉಂಟು ಮಾಡೋಣ. ಜಾತಿ ಭಾಷೆ ಮುಂತಾದ ಕಾರಣಗಳಿಂದ ಮನುಜ-ಮನುಜರ ನಡುವೆ ಭೇದ ಭಾವಗಳು ನಿರ್ಮಾಣಗೊಂಡಿವೆ. ಇವುಗಳನ್ನು ಹೋಗಲಾಡಿಸಬೇಕೆಂಬ ಸಂಕಲ್ಪ ಕೈಗೊಂಡರೆ ಮನುಷ್ಯರ ನಡುವೆ ಪ್ರೀತಿ, ವಿಶ್ವಾಸ, ಸಹೋದರತೆ, ಸಹಬಾಳ್ವೆ ಮುಂತಾದ ಮೌಲ್ಯಗಳನ್ನು ಬಿತ್ತೋಣ. ಪ್ರತಿಯೊಂದು ಮಾತುಗಳು ನಮಗೆ ದಾರಿಯನ್ನು ತೋರಿಸುವ ದೀವಿಗೆಗಳು ಎಂಬುದನ್ನು ತಿಳಿಸುವ ಸಂಕಲ್ಪ ಕೈಗೊಂಡರೆ ಪ್ರತಿಯೊಂದು ಧರ್ಮದ ಮಹತ್ವ, ಮೌಲ್ಯಗಳನ್ನು ತಿಳಿಸುವಂತಹ ಕೆಲಸಗಳನ್ನು ಮಾಡೋಣ. ಹೀಗೆ ಸಂಕಲ್ಪ ಮತ್ತು ಅನುಸಾನಗಳ ಕುರಿತು ಕವಿ ಶಿವರುದ್ರಪ್ಪನವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

**30. ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು. (ಅಂಶಗಳನ್ನಾಧರಿಸಿ ಪ್ರತಿ ಸರಿ0ಯುತ್ತರಕ್ಕೆ2 ಅಂಕಗಳು)**

0ಯುದ್ದ, ಇತಿಹಾಸದದ್ದುಕ್ಕೂ ತನ್ನ ಇರುವಿಕೆ0ಯನ್ನು ತೋರಿಸುತ್ತಾ ಬಂದಿದೆ. 0ಯಾವುದೇ ಸಾಮ್ರಾಜ್ಯದ ಏಳುಬೀಳುಗಳಲ್ಲಿ ಅದು ಪ್ರಮುಖ ಪಾತ್ರವಹಿಸಿದೆ. 0ಯುದ್ಧ ನಡೆ0ಯಲು ಕಾರಣಗಳು ಹಲವು, ಸಾಮ್ರಾಜ್ಯ ವಿಸ್ತರಣೆ, ಲೋಭ, ವೀರತೆ0ಯ ಪ್ರದರ್ಶನ ಒಂದು ಕಡೆ0ಯಾದರೆ, ಕುಟುಂಬ ಕಲಹಗಳೂ 0ಯುದ್ಧಕ್ಕೆ ನಾಂದಿ ಹಾಡಿದ ಘಟನೆಗಳು ದಾಖಲಾಗಿವೆ, ಸುಮಾರು ಐದು ಸಾವಿರ ವರ್ಷಗಳ ಹಿಂದೆ ನಡೆದ ಕುರುಕ್ಷೇತ್ರ 0ಯುದ್ಧ ಇದಕ್ಕೆ ಸ್ಪಷ್ಟ ನಿದರ್ಶನ, ಕುರುವಂಶದ ರಾಜಕುಮಾರರ ಅಂತಃಕಲಹ ಐವತ್ತು ಲಕ್ಷ ಜನರ ಪ್ರಾಣಹಾನಿ0ಯೊಂದಿಗೆ ಪರ್0ಯವಸಾನವಾಯಿತು. ಐತಿಹ್ಯದಂತೆ ಕೇವಲ ಹದಿನೆಂಟು ದಿನ ನಡೆದ ಈ 0ಯುದ್ಧ, ಕಂಡ ಪರಿಣಾಮ ಅತ್ಯಂತ ಘೋರ.

ಭಾರತ ತನ್ನ ಇತಿಹಾಸದಲ್ಲಿ ಕಂಡ ಅತ್ಯಂತ ವರ್ಣರಂಜಿತ ವ್ಯಕ್ತಿತ್ವ ಕೌಟಿಲ್ಯನದು. ತನ್ನ ಹಠದ ಪಟ್ಟನ್ನು ಸಡಿಲಿಸದೆ, ಮನೋನಿಶ್ಚ0ಯದಂತೆ ಅಪೂರ್ವಕುಶಲತೆ0ಯನ್ನು ತೋರಿದ ಪ್ರತಿಭಾವಂತನೀತ, ಸರಳ ತಂತ್ರೋಪಾ0ಯಗಳಿಂದ ಚಂದ್ರಗುಪ್ತನ ಶತ್ರುಬಲವನ್ನು ನಿರಾವಂಬಲಗೊಳಿಸಿ ಮೌರ್0ಯ ವಂಶದ ಸ್ಥಾಪನೆಗೆ ಮಾರ್ಗದರ್ಶಕನಾಗುತ್ತಾನೆ. ತನ್ನನ್ನೇ ಹಿಂಬಾಲಿಸಿ ಬಂದ ರಾಜಲಕ್ಷ್ಮೀ, ಅಧಿಕಾರಗಳನ್ನು ದೂರೀಕರಿಸಿ ವಿರಕ್ತನಂತೆ ಆಶ್ರಮವಾಸಿ0ಯಾಗುತ್ತಾನೆ. ಚಾಣಕ್ಯನ ಪ್ರಕಾರ 0ಯುದ್ಧದಲ್ಲಿ ಮೂರು ವಿಧಗಳು. ಮೊದಲನೆ0ಯದು ಪ್ರಕಾಶ 0ಯುದ್ಧ – ಸೂಚಿತ ಸ್ಥಳದಲ್ಲಿ ನಿರ್ದಿಷ್ಟ ಸಮ0ಯಕ್ಕೆ ನಡೆ0ಯುವ ಸಂಗ್ರಾಮ. ಎರಡನೆ0ಯದು ಕೂಟ 0ಯುದ್ಧ – ತಂತ್ರಗಳ ಮೂಲಕ 0ಯುದ್ಧ ಮಾಡುವುದು. ಮೂರನೆ0ಯದು ಮೌನ 0ಯುದ್ಧ – ಶತ್ರು ಅಧಿಕಾರಗಳನ್ನು ನಾಶಪಡಿಸಲು ಗುಪ್ತ ಕಾ0ರ್ಯಾಚರಣೆ ನಡೆಸುವುದು. 0ಯಾವಾಗ ರಾಜ ಶತ್ರುಗಳಿಗಿಂತ ಬಲಿಷ್ಠನಾಗಿದ್ದು, ಪರಿಸ್ಥಿತಿ ಅನುಕೂಲಕರವಾಗಿರುತ್ತದೋ ಆಗ ಅವನು ಮುಕ್ತ 0ಯುದ್ಧವನ್ನೇ ಮಾಡಬೇಕು. ಸೂಚಿತ ಸ್ಥಳದಲ್ಲಿ, ನಿರ್ದಿಷ್ಟ ಸಮ0ಯದಲ್ಲಿ ನಡೆ0ಯುವ ಮುಕ್ತ 0ಯುದ್ಧವೇ ಧರ್ಮ0ಯುದ್ಧ.

**<u>ಪ್ರಶ್ನೆಗಳು</u>**

ಅ) ಚಾಣಕ್ಯನ ಪ್ರಕಾರ ಮೂರು ಬಗೆ0ಯ 0ಯುದ್ಧಗಗಳಾವುವು? ವಿವರಿಸಿ.

ಆ) 0ಯುದ್ಧಕ್ಕೆ ಕಾರಣವಾದ ಅಂಶಗಳನ್ನು ಒಂದು ನಿದರ್ಶನದೊಂದಿಗೆ ಬರೆ0ಯಿರಿ.

ಅ) ಚಾಣಕ್ಯನ ಪ್ರಕಾರ 0ಯುದ್ದದ್ದಲ್ಲಿ ಮೂರು ವಿಧಗಳಿವೆ. ಮೊದಲನೆ0ಯದು ಪ್ರಕಾಶ 0ಯುದ್ದ–ಸೂಚಿತ ಸ್ಥಳಗಳಲ್ಲಿ ನಿರ್ಧಿಷ್ಟ ಸಮ0ಯಕ್ಕೆ ನಡೆ0ಯುವ ಸಂಗ್ರಾಮ. ಎರಡನೆ0ಯದು ಕೂಟ0ಯುದ್ದ– ತಂತ್ರಗಳ ಮೂಲಕ 0ಯುದ್ದ ಮಾಡುವುದು. ಮೂರನೆ0ಯದು ಮೌನ0ಯುದ್ಧ – ಶತ್ರು ಅಧಿಕಾರಿಗಳನ್ನು ನಾಶಪಡಿಸಲು ಗುಪ್ತ ಕಾ0ರ್ಯಾಚರಣೆ ನಡೆಸುವುದು.

ಆ) 0ಯುದ್ಧ ನಡೆ0ಯಲು ಕಾರಣಗಳು ಹಲವು. ಸಾಮ್ರಾಜ್ಯ ವಿಸ್ತರಣೆ, ಲೋಭ ವೀರತೆ0ಯ ಪ್ರದರ್ಶನ ಒಂದು ಕಡೆ0ಯಾದರೆ, ಕುಟುಂಬ ಕಲಹಗಳು 0ಯುದ್ಧಕ್ಕೆ ನಾಂದಿ ಹಾಡಿದ ಘಟನೆಗಳು ದಾಖಲೆಗಳು. ಎಇದಕ್ಕೆ ಒಂದು ಸ್ಪಷ್ಟ ನಿದರ್ಶನ ಸುಮಾರು ಐದು ಸಾವಿರ ವರ್ಷಗಳ ಹಿಂದೆ ನಡೆದ ಕುರುಕ್ಷೇತ್ರ 0ಯುದ್ಧ. ಕುರುವಂಶದ ರಾಜಕುಮಾರ ಅಂತಃಕಾಲ ಐವತ್ತು ಲಕ್ಷಜನರು ಪ್ರಾಣಹಾನಿ0ಯೊಂದಿಗೆ ಪರ್0ಯವಸಾನವಾಯಿ0ಯು. ಐತಿಹ್ಯದಂತೆ ಕೇವಲ ಹದಿನೆಂಟು ದಿನ ನಡೆದ ಈ 0ಯುದ್ಧ, ಕಂದ ಪರಿಣಾಮ ಅತ್ಯಂತ ಘೋರವಾಗಿತ್ತು.

## <u>ವಿಭಾಗ–ಬಿ</u>

## (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

## ಬಹು ಆ0ಯ್ಕೆ ಪ್ರಶ್ನೆ ( ಕ್ರಮಾಕ್ಷರದೊಂದಿಗೆ ಪ್ರತಿ ಸರಿ0ಯುತ್ತರಕ್ಕೆ 1 ಅಂಕ)

31. ಸಿ) ಅಧೀಕರಣ
32. ಎ) ಜಸ್ತ್ವಸಂಧಿ
33. ಡಿ) ಮಾಡಲಿ
34. ಬಿ) ಸಂ0ಯೋಜಿತ ವಾಕ್ಯ
35. ಡಿ) ವಿಘ್ವಾನಿ
36. ಎ) ಬೆಟ್ಟದಾವರೆ
37. ಸಿ) ವಾಕ್ಯವೇಷ್ಠನ ಚಿಹ್ನೆ
38. ಡಿ) ಅವಧಾರಣಾರ್ತಕಾವ್ಯ0ಯ
39. ಬಿ) ಇಂಗ್ಲೀಷ್
40. ಸಿ) ಕಪ್ಪು
41. ದ್ವಿರುಕ್ತಿ
42. ಕೋಗಿಲೆ
43. ಹೊಗಳಿಕೆ
44. ವಿಶ್ವಾಸ

**45.** **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು:**

∪ ∪ ∪| ∪ ∪ –|∪ ∪ ∪| ∪ ∪ ∪ ∪
ಕೊರಳ। ಸೆರೆ ।ಹಿಗ್ಗಿದವು। ದೃಗುಜಲ
∪ ∪ ∪| ∪ ∪ ∪ ∪| – ∪| ∪ ∪ –
ಊರವ।ಣಿಸಿ ಕಡು। ನೊಂದ।ನಕಟಾ
∪ ∪ ∪| ∪ ∪ –| – ∪| – ∪ ∪| – ∪ |∪ ∪ ∪ ∪ |–
ಕುರುಪ।ತಿಗೆ ಕೇಡಾ।ದುದೆಂ।ದನು ತ।ನ್ನ ಮನ।ದೊಳಗೆ
ಇದು ಮಾತ್ರಾಗಣ ಛಂದಸ್ಸಿನ ಭಾಮಿನಿ ಷಟ್ಪದಿ0ಯಲ್ಲಿ ರಚಿತವಾಗಿದೆ.

**ಅಥವಾ**

– – | ∪ – ∪ | ∪ ∪ –
ಅಂತೆಂ।ಬನಾರ್ಗೆ। ಪಿರಿದುಂ
– ∪ ∪| – – | ∪ – ∪ |– – |∪ ∪ –
ಭ್ರಾಂತು ದ।ಲೇಂ ದ್ರೋ।ಣನೆಂಬ।ನೇಂ ಪಾ।ರ್ಥನೆ ಪೇ
**ಇದು ಮಾತ್ರಾಗಣ ಛಂದಸ್ಸಿನ ಕಂದ ಪದ್ಯದಲ್ಲಿ ರಚಿತವಾಗಿದೆ.**

46. ಅಲಂಕಾರದ ಹೆಸರು : **ಉಪಮಾಲಂಕಾರ**

ಲಕ್ಷಣ : ಎರಡು ವಸ್ತುಗಳಿಗೆ ಇರುವ ಪರಸ್ಪರ ಹೋಲಿಕೆ0ಯನ್ನು ಹೇಳುವುದೇ ಉಪಮಾಲಂಕಾರ.
ಸಮನ್ವ0ಯ : ಉಪಮೇ0ಯ: ಭೀಮ ದು0ರ್ಯೋಧನರು
ಉಪಮಾನ : ಮದಗಜಗಳು
ಉಪಮವಾಚಕಪದ: ಅಂತೆ
ಸಮಾನಧರ್ಮ : ಹೋರಾಟ.

ಇಲ್ಲಿ ಉಪಮೇಯವಾದ ಭೀಮ ದುರ್ಯೋಧನರನ್ನು ಉಪಮಾನವಾದ ಮದ ಗಜಗಳಿಗೆ ಹೋಲಿಸಲಾಗಿದೆ. 'ಅಂತೆ' ಎಂಬ ಉಪಮವಾಚಕಪದವಿದ್ದು 'ಹೋರಾಟ' ಎಂಬ ಸಮಾನ ಧರ್ಮವಿರುವುದರಿಂದ ಪೂರ್ಣೋಪಮಾಲಂಕಾರ (ಉಪಮಾಲಂಕಾರ) ದ ಲಕ್ಷಣವಾಗಿದೆ.

**ಅಥವಾ**

ಲಕ್ಷಣ: ದೃಷ್ಟಾಂತಾಲಂಕಾರ

ಲಕ್ಷನ: ಎರಡು ಬೇರೆ ಬೇರೆ ವಾಕ್ಯಗಳಲ್ಲಿ ಅರ್ಥ ಸಾದೃಶ್ಯದಿಂದ ಬಿಂಬ–ಪ್ರತಿಬಿಂಬ ಭಾವವು ತೋರಿ ಬಂದರೆ ಅದು ದೃಷ್ಟಾಂತಾಲಂಕಾರ

ಸಮನ್ವಯ: ಉಪಮೇಯ: ಮಾತುಬಲ್ಲವನಿಗೆ ಜಗಳವಿಲ್ಲ (ಪ್ರತಿಬಿಂಬ)

ಉಪಮಾನ: ಊಟ ಬಲ್ಲವನಿಗೆ ರೋಗವಿಲ್ಲ( ಬಿಂಬ)

ಇಲ್ಲಿ ಊಟಬಲ್ಲವನಿಗೆ ರೋಗವಿಲ್ಲ ಎಂಬ ಉಪಮಾನ ವಾಕ್ಯಕ್ಕೂ ಮಾತುಬಲ್ಲವನಿಗೆ ಜಗಳವಿಲ್ಲ ಎಂಬ ಉಪಮೇಯ ವಾಕ್ಯಕ್ಕೂ ಅರ್ಥ ಸಾದೃಶ್ಯದಿಂದ ಪರಸ್ಪರ ಬಿಂಬ ಪ್ರತಿಬಿಂಬ ಭಾವವು ಕಂಡು ಬರುತ್ತಿರುವುದರಿಂದ ಈ ಮೇಲಿನ ಲಕ್ಷ್ಯವು ದೃಷ್ಟಾಂತಾಲಂಕಾರವಾಗಿದೆ

(ಈ ಅಲಂಕಾರದಲ್ಲಿ ಬಿಂಬ ಮತ್ತು ಪ್ರತಿಬಿಂಬ ಅಂಶಗಳು ಅದಲು ಬದಲಾಗಿ ಇರಬಹುದು)

**********

## ವಿಭಾಗ–'ಎ'

**ಅ) ಒಂದೊಂದು ವಾಕ್ಯದಲ್ಲಿ ಉತ್ತರ ಬರೆ0ಯುವುದು :**

1. ರಾಹಿಲನು ಮುದುಕಿ0ಯ ಎದುರಿಗೆ ನುಡಿದ ಗಂಭೀರವಾದ ಮಾತು 0ಯಾವುದು?

**ಉ:** ಮುದುಕಿ0ಯ ಎದುರಿಗೆ ರಾಹಿಲನು "ನನು 0ಯುದ್ಧ ಮಾಡುವ ಮೂರ್ಖರ ಕಡೆ0ಯವನಲ್ಲ ಸಂಕಷ್ಟಕ್ಕೀಡಾದ ಮನುಷ್ಯರ ಕಡೆ0ಯುವನು" ಎಂದು ಗಂಭೀರವಾಗಿ ನುಡಿದನು.

2. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ0ಯ ಹೆಸರೇನು?

**ಉ:** ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ0ಯ ಶಬರಿ

3. "ವೆಸ್ಟ್ ಮಿನಿಸ್ಟರ್ ಅಬೆ" 0ಯಾರ ಸ್ಮಾರಕವಾಗಿದೆ?

**ಉ:** "ವೆಸ್ಟ್ ಮಿನಿಸ್ಟರ್ ಅಬೆ" ಎಂಬುದು ಸಂತರು ಸಾರ್ವಭೌಮರು ಕವಿಪುಂಗವರ ಸತ್ತವರ ಸ್ಮರಕವಾಗಿದೆ.

4. ಹುಲಿ0ಯನ್ನು ಎದುರಿಸಲು ಶಾನುಭೋಗರಿಗೆ 0ಯಾವುದು ಬ್ರಹ್ಮಾಸ್ತ್ರವಾಯಿತು?

**ಉ:** ಹುಲಿ0ಯನ್ನು ಎದುರಿಸಲು ಶಾನುಭೋಗರಿಗೆ ಖೀರ್ದಿ ಪುಸ್ತಕ ಬ್ರಹ್ಮಾಸ್ತ್ರವಾಯಿತು.

5. ಸುಕುಮಾರ ಸ್ವಾಮಿ0ಯ ತಂದೆ–ತಾಯಿಗಳ ಹೆಸರೇನು?

**ಉ:** ಸುಕುಮಾರ ಸ್ವಾಮಿ0ಯ ತಂದೆ–ತಾಯಿಗಳ ಸೂರದತ್ತ, ಮತ್ತು 0ಯಶೋಭದ್ರೆ.

6. ಕವಿ ಬೇಂದ್ರೆ0ಯವರ ಪ್ರಕಾರ ಹಕ್ಕಿ0ಯು 0ಯಾವುದರ ಸಂಕೇತವಾಗಿದೆ?

**ಉ:** ಕವಿ ಬೇಂದ್ರೆ0ಯವರ ಪ್ರಕಾರ ಹಕ್ಕಿ0ಯು ಕಾಲದ ಗತಿ0ಯ ಸಂಕೇತವಾಗಿದೆ.

7. ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು?

**ಉ:** ತಮ್ಮ ಅನುಮತಿಯಿಲ್ಲದೆ ಭಾರತೀ0ಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆ0ಯುಧಗಳನ್ನು ಸರ್ಕಾರಕ್ಕೆ ಒಪ್ಪಿಸುವಂತೆ ಕುಂಪಣಿ ಸರ್ಕಾರ ಆದೇಶ ಹೊರಡಿಸಿತು.

8. ಪರಶುರಾಮನು ದ್ರೋಣನಿಗೆ ಕೊಟ್ಟ ಪ್ರಧಾನ ಅಸ್ತ್ರಗಳು 0ಯಾವುವು?

**ಉ:** ಪರಶುರಾಮನು ದ್ರೋಣನಿಗೆ ಕೊಟ್ಟ ಪ್ರಧಾನ ಅಸ್ತ್ರಗಳೆಂದರೆ : ವರುಣ, ವಾ0ಯು, ಅಗ್ನಿ, ಇಂದ್ರ ಮೊದಲಾದವುಗಳು,

9. ವಸಂತ 0ಯಾರಿಗೆ ಮುಖ ತೋರಲಿಲ್ಲ ?

**ಉ:** ಕಮ್ಮಾರ, ಕುಂಬಾರ, ನೇಕಾರ, ಕೇರಿ0ಯಾ, ಮಾರ, ಇಂತಹವರಾರಿಗೂ ವಸಂತ ಮುಖ ತೋರಲಿಲ್ಲ.

**ಆ) ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ :**

10. ಮಹಿಳೆ0ಯ ಆರ್ತನಾದ ಕೇಳಿ ರಾಹಿಲನು ಮನದಲ್ಲಿ ಏನೆಂದುಕೊಂಡನು?

**ಉ:** ಆ ಮಹಿಳೆ 0ಯಾವ ಅಪಾ0ಯದಲ್ಲಿ ಸಿಲುಕಿದ್ದಾಳೆ? ಆ ಮನೆ0ಯೊಳಗೆ ಏನು ಸಂಭವಿಸುತ್ತಿದೆ ? ತಾನೀಗ ಕದವನ್ನು ತಟ್ಟಿದರೆ ಪರಿಣಾಮವೇನಾಗಬಹುದು? ಗಡಿ ಪ್ರದೇಶದಲ್ಲಿ 'ಬ್ಲಾಕೌಟ್ ನಿ0ಯಮ " ಪಾಲಿಸಲಾಗುತ್ತಿದೆ. ಇಂತಹ ಸಮ0ಯದಲ್ಲಿ ಆ ಮನೆ0ಯೊಳಗೆ 0ಯಾವ ರೀತಿ0ಯ ಕೌರ್0ಯ ನಡೆ0ಯುತ್ತಿದೆ? ಎಂಬ ವಿಚಾರಗಳನ್ನು ರಾಹಿಲನು ತನ್ನ ಮನದಲ್ಲಿ ಅಂದುಕೊಂಡನು.

11. ಸಾಮ್ರಾಟರ ರಾಜ್ಯಾಭಿಷೇಕವಾಗುವಾಗ ಸಿಂಹಾಸನದ ಮೇಲಿರುವ ಕಲ್ಲುಪಾಟಿ0ಯ ವಿಶೇಷತೆ0ಯೇನು?

**ಉ:** ಸಾಮ್ರಾಟರು ಪಟ್ಟಾಭಿಷೇಕವಗುವ ಮಾತ್ರ ಇದರ ಮೇಲೆ ಕೂಡಬೇಕು. ಈ ಶಿಲೆ0ಯನ್ನು ಒಳಗೊಂಡ ಸಿಂಹಾಸನವು 'ವೆಸ್ಟ್ ಮಿನಿಸ್ಟರ್' ಮಂದಿರದ ಒಂದು ಭಾಗದಲ್ಲಿ 'ಸ್ಟೋನ್ ಆಫ್ ಸ್ಕೋನ್' ಎಂದು ಇದರ ಹೆಸರು 3ನೇ ಎಡ್ವರ್ಡನು ಸ್ಕಾಟ್ ಲೆಂಡಿನ ಅರಸರಿಂದ ಕಿತ್ತುಕೊಂಡು ಬಂದಂತೆ ಕಾಣುತ್ತದೆ. ಅಂದಿನಿಂದ ಎಲ್ಲಾ ಸಾಮ್ರಾಟರು ಅಭಿಷೇಕವೂ ಈ ಕಲ್ಲಿನ ಮೇಲೆ0ಯೇ ಆಗಿದೆ. ಅದರಲ್ಲಿ 0ಯಾವ ಸಿದ್ಧಿ ಮಂತ್ರವಿದೆ0ಯೋ ಇಂಗ್ಲೆಂಡಿನ ಅತುಲ ವೈಭವವನ್ನು ನೋಡಿದರೆ ಇಂಥದೊಂದು ವಿಶೇಷವೇನಾದರೂ ಇದರಲ್ಲಿ ಇರಬೇಕೆನಿಸುತ್ತದೆ.

12. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರ ಮನದಲ್ಲಿ ಮೂಡಿದ ಭಾವನೆಗಳೇನು?
**ಉ:** ಶಾನುಭೋಗರು ಒಂದು ಬಾರಿ ಇರಸಾಲಿಗಾಗಿ ಚಿಕ್ಕನಾಯಕನಹಳ್ಳಿ ಹೋಗಿ ಖನಾಜನೆಗೆ ಹಣಕಟ್ಟಿ ಅಲ್ಲಿಯ ಸ್ನೇಹಿತರನ್ನು, ಕಂಡು ಅಲ್ಲಿಂದ ವಾಪಾಸ್ಸು ಹೊರಡುವ ವೇಳೆಗೆ ಸಂಜೆ ಆರು ಘಂಟೆಯಾಗಿತ್ತು. ಅವರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ, ಮದಲಿಂಗನ ಕಣಿವೆಯನ್ನು ದಾಟಿ ಬರಬೇಕು. ಆಗ ಅವರ ಮನದಲ್ಲಿ "ಕಾಡುದಾರಿ , ಆದರೂ ಬೆಳದಿಂಗಳ ದಿನ , ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು " ಎಂದುಕೊಂಡು ಯೋಚಿಸುತ್ತಾ ಬೇಗ ಬೇಗ ಹೆಜ್ಜೆ ಹಾಕಿ ನಡೆಯತೊಡಗಿದನು.

13. ಸುಕುಮಾರ ಸ್ವಾಮಿಯು ಹೇಗೆ ಸುಖಭೋಗಗಳನ್ನು ಅನುಭವಿಸುತ್ತಿದ್ದನು?
**ಉ:** ಸುಕುಮಾರ ಸ್ವಾಮಿಯು ಯೌವನವಾಗಿ ಅತ್ಯಂತ ರೂಪ ಲಾವಣ್ಯ, ಸೌಭಾಗ್ಯಕಾಂತಿಯಿಂದ ಕಂಗೊಳಿಸುತ್ತಿದ್ದ, ಆತನಿಗೆ ಮೂವತ್ತೆರಡು ಬಳ್ಳಿ, ಮಾಂಡಗಳು, ಅತ್ಯಂತ ರೂಪ ಲಾವಣ್ಯ, ಸೌಭಾಗ್ಯ, ಕಾಂತಿ ಹಾವಭಾವ, ವಿಲಾಸ, ವಿಭ್ರಮಗಳೊಂದಿಗೆ ದೇವಣಿಕೆಯನ್ನು ಹೋಲುವ ಮೂವತ್ತಿರ್ವರ್ ದಿವ್ಯಸ್ತ್ರೀಯರ್ಕಳ್ ಮೂವತ್ತೆರಡು ನಾಟಕಂಗಳ್ ಮೂವತ್ತೆರಡು ಕೋಟಿ ಕಸವರಮಂ, ಪಂಚರತ್ನಗಳೊಡಗೂಡಿದ ಸುಕುಮಾರಸ್ವಾಮಿಯ ಸುಖಭೋಗಗಳನ್ನು ಅನುಭವಿಸುತ್ತಿದ್ದರು.

14. ಲಾವಣಿಗಳನ್ನು ಏಕೆ ವೀರಗೀತೆಗಳನ್ನು ಎನ್ನಲಾಗಿದೆ?
**ಉ:** ಜನಪದ ಸಾಹಿತ್ಯ ಶ್ರೀಸಾಮಾನ್ಯನ ಅನುಭವ ಹಾಗೂ ಕ್ರಿಯೆಯೊಂದಿಗೆ ಸಹಜಸ್ಫೂರ್ತಿಯಿಂದ ಹೊರಹೊಮ್ಮಿದ ನುಡಿಮುತ್ತು 'ಲಾವಣಿಗಳು' ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ, ಗದ್ಯದ ಹೊಳಹನ್ನು ಭಾವಗೀತದ ಸತ್ವವನ್ನು ಹೊಂದಿರುವ ಲಾವಣಿಗಳನ್ನು ವೀರಗೀತೆಗಳೆಂದು ಕರೆಯುವುದು ವಾಡಿಕೆಯಾಗಿದೆ.

15. ಪರಶುರಾಮನು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು?
**ಉ:** ಪರಶುರಾಮನು ತನ್ನಲ್ಲಿದ್ದ ಎಲ್ಲಾ ಆಭರಣಗಳನ್ನು ಬೇಡಿದವರಿಗೆ ನೀಡಿದ್ದ. ಭೂಮಿಯನ್ನು ಗುರುವಿಗೆ ನೀಡಿ, ಜಟಾಧಾರಿಯಾಗಿ ತಪಸ್ಸಿಗೆ ಹೋಗಲು ಸಿದ್ಧನಾಗಿದ್ದನು. ಇಂತಹ ಸಮಯದಲ್ಲಿ ಸಂಪತ್ತನ್ನು ಬೇಡಲು, ಬಂದ ದ್ರೋಣನಿಗೆ ಅರ್ಘ್ಯವನ್ನು ನೀಡಲು ಚಿನ್ನದ ಪಾತ್ರೆ ಇಲ್ಲವಾದ್ದರಿಂದ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ನೀಡಿದನು.

16. ಜಾತಿ ವ್ಯವಸ್ಥೆಯ ಬಗೆಗೆ ವಿವೇಕಾನಂದರ ಅಭಿಪ್ರಾಯವೇನು?
**ಉ:** ಜಾತಿ ಎಂಬುದು ಸಮಾಜದ ಒಂದು ಆಂತರಿಕ ಭಾಗವಾಗಿದೆ. ಹಿಂದೆ ಅದು ವಿಕಾಸವಾಗುತ್ತಿತ್ತು. ಇದು ಒಂದು ಘನೀಭೂತವಾಗಿದೆ. ಅದರ ದುರ್ಗಂಧದಿಂದ ಭಾರತದ ವಾತಾವರಣವೆಲ್ಲ ತುಂಬಿದೆ. ಜಾತಿ ವ್ಯವಸ್ಥೆಯ ಕ್ರೌರ್ಯಕ್ಕೆ, ತುತ್ತಾಗಿ ಶೂದ್ರರು ಅಸ್ಪೃಶ್ಯರು ಸ್ವಾತಂತ್ರ್ಯ ಹೀನರಾಗಿ ಗುಲಾಮತನ ಅನುಭವಿಸುವಂತಾಗಿದೆ. ಶೂದ್ರರು ತಮ್ಮ ಶೂದ್ರತ್ವದ ಶಕ್ತಿಯಿಂದಲೇ ಮೇಲೇಳುವ ಕಾಲ ಬರುತ್ತದೆ ಎಂದು ವಿವೇಕಾನಂದರು ಅಭಿಪ್ರಾಯವಾಗಿದೆ.

17. ಜನರಲ್ ಡಯರ್‌ನು ಜಲಿಯನ್ ವಾಲಾಬಾಗ್ ನಲ್ಲಿ ನೆರೆದಿದ್ದ ಜನಸಮೂಹವನ್ನು ಕಂಡು ಬ್ರಿಟಿಷ್ ಸಾಮ್ರಾಜ್ಯದ ಅನವರತ ಏಳಿಗೆಗೆ ಇದಕ್ಕಿಂತಲೂ ಸುಲಭವಾದ ಮಾರ್ಗವನ್ನು ಚಿಂತಿಸಲು ಅಶಕ್ತನಾಗಿ, ಕ್ರೂರ, ಪೈಶಾಚಿಕ ಮನೋಭಾವನೆಯ ಆತ ಅಂದು ಅಲ್ಲಿ ಏನೊಂದು ಗೊತ್ತಿರದ ಅಮಾಯಕ ಭಾರತೀಯರ ಮೇಲೆ 1650 ಸುತ್ತುಗಳಷ್ಟು ಗುಂಡಿನ ಮಳೆ ಕರೆಯಿಸಿದ್ದ. ಅಷ್ಟೆ ಸಂಖ್ಯೆಯ ಮುಗ್ಧ ಭಾರತೀಯರ ಪ್ರಾಣ ತೆಗೆಯುವ ಪೈಶಾಚಿಕ ಕೃತ್ಯವನ್ನು ಮಾಡಿಸಿದ.

18. ಸುಂದರಿಗೆ ಮೃಗವನ್ನು ಮತ್ತೆ ನೋಡಬೇಕೆಂಬ ಆಸೆ ತೀವ್ರವಾಗಲು ಕಾರಣವೇನು?
**ಉ:** ಮೃಗ ಎಂದು ತನ್ನ ವಚನ ಮುರಿದಿರಲಿಲ್ಲ ಮನನೋಯಿಸಿರಲಿಲ್ಲ ತನ್ನನ್ನು ನೆಮ್ಮದಿಯಾಗಿಡುವುದೇ ಅದರ ಸುಖವಾಗಿತ್ತು ಅರಣ್ಯದ ಅರಮನೆಯ ಸುಖಕ್ಕಿಂತ ಮೃಗದ ವ್ಯಕ್ತಿತ್ವ ಆಕೆಯ ಮನಸ್ಸು ತುಂಬಿತ್ತು, ಅದರ ಮುಖ , ಚಲನ–ವಲನ ನೆನಪಾಗಿ ಮತ್ತೆ ನೋಡಬೇಕೆಂಬ ಆಸೆ ತೀವ್ರವಾಯಿತು.

19. 'ಉತ್ತರಾಣಿ ಗಿಡ' ಎಂಬ ಉತ್ತರ ಬರಲು ಹೇಳಿದ ಒಗಟನ್ನು ಬಿಡಿಸಿ.
**ಉ:** "ಬದಿನಲ್ಲಿ ಹುಟ್ಟೋದು ಬದಿನಲ್ಲಿ ಬೆಳೆಯೋದು
ಹೋಗೋರ ಮುಂಜರಗ ಹಿಡಿಯೋದು – ಎಲೆಬಾಲೆ
ಬಾರೆ ಇದರರ್ಥ ಒಡೆದೇಳೆ

ಇದು 'ಉತ್ತರಾಣಿ ಗಿಡ' ಎಂಬ ಉತ್ತರ ಬರಲು ಜನಪದರು ಹೇಳಿದ ಒಗಟಾಗಿದೆ.

**ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆ0ುುವುದು:**

20. "0ಯಾವ ಜೀವಿ0ಯೂ ತನ್ನಷ್ಟಕ್ಕೆ ತಾನಿಲ್ಲ"

**ಉ: ಆ0ಯ್ಕೆ:** ಪ್ರಸ್ತುತ ಹೇಳಿಕೆ0ಯನ್ನು ದೇವನೂರು ಮಹಾದೇವರವರು ಬರೆದಿರುವ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ;** ಮನೋವೈದ್ಯರಾದ ಡಾ. ಅಶೋಕ ಪೈ ಅವರು ಹೇಳಿದ ಮನಸ್ಸಿನ ಬಗ್ಗೆ ನಡೆದಿರುವ ಸಂಶೋಧನೆ ಪ್ರಕಾರ ಒಂದು ಕೊಠಡಿ0ಯಲ್ಲಿ ಟೆಲಿವಿಷನ್ ನೋಡುತ್ತಾ ಕುಳಿತಿರುವವರು ಕೊಲೆ ದೃಷ್ಯ ಬಂದಾಗ ಅವರ ದುಗುಡ ದುಃಖದ ಭಾವನೆಗಳು ನೃತ್ಯದ ದೃಷ್ಯ ಬಂದಾಗ ಖುಷಿ0ಯ ಭಾವನೆಗಳು ಇದು ಏನೂ ಗೊತ್ತಿಲ್ಲದೆ ಪಕ್ಕದ ಕೊಠಡಿ0ಯಲ್ಲಿ ಕುಳಿತವರ ಮನಸ್ಸಿಗೂ ದುಃಖ ಸಂತೋಷದ ಭಾವನೆಗಳನ್ನು ಉಂಟಾಗುವಂತೆ ಎನ್ನುವುದನ್ನು ವಿವರಿಸುತ್ತಾ ಲೇಖಕರು ಈ ಮಾತನ್ನು ಹೇಳಿದ್ದಾರೆ.

**ಸ್ವಾರಸ್ಯ :** ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತಾ ಎಲ್ಲ ಜೀವಿಗಳಲ್ಲೂ ಕಂಪನ ಉಂಟುಮಾಡುತ್ತಿರುತ್ತದೇನೋ ಈ ಅನುಕಂಪನ ಇಡೀ ಜೀವಸಂಕುಲವನ್ನೇ ಒಂದು ಎಂದು ಹೇಳುತ್ತದೆ.

21. "ಈತನ ಮಾತು ಅಶ್ರುತಪೂರ್ವಮ್"

**ಉ: ಆ0ಯ್ಕೆ :** ಪ್ರಸ್ತುತ ಹೇಳಿಕೆ0ಯನ್ನು ದುರ್ಗಸಿಂಹ ಕವಿ ರಚಿಸಿರುವ 'ಕರ್ಣಾಟಕ ಪಂಚತಂತ್ರಂ' ಕೃತಿಯಿಂದ ಆ0ಯ್ದ ವೃಕ್ಷಸಾಕ್ಷಿ ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ವಣಿಕ ಪುತ್ರನಾದ ಧರ್ಮಬುದ್ಧಿ ದುಷ್ಟಬುದ್ದಿ0ಯರು ವ್ಯಾಪಾರ ಮಾಡಿ ಹೆಚ್ಚಿನ ಲಾಭ ಗಳಿಸಿಕೊಂಡು ಮರಳಿ ತಮ್ಮೂರಿಗೆ ಬರುವಾಗ ಮಧುರಪುರದ ಹೊರವಲ0ಯದ ಉದ್ಯಾನದಲ್ಲಿ ರಾತ್ರಿ ಕಳೆ0ಯುತ್ತಿದ್ದಾಗ , ಧರ್ಮಬುದ್ಧಿ0ಯು ನಾವು ಗಳಿಸಿಕೊಂಡು ತಂದ ಈ ಎಲ್ಲಾ ಹೊನ್ನನ್ನು ಮನೆಗೆ ಒ0ಯ್ಯುವುದು ಬೇಡ. ಏಕೆಂದರೆ ನಾವು ಮತ್ತೆ ವ್ಯಾಪಾರಕ್ಕಾಗಿ ಬೇರೆ ಬೇರೆ ಊರುಗಳಿಗೆ ತೆರಳುವೆವು ಆದ್ದರಿಂದ ಸದ್ಯ ಬೇಕಾದಷ್ಟು ಇಟ್ಟುಕೊಂಡು ಉಳಿದ ಎಲ್ಲ ಹೊನ್ನನ್ನು ವಟವೃಕ್ಷದ ಪೊಳಲಲ್ಲಿ ಅಡಗಿಸಿಟ್ಟು ಬೇಕಾದಾಗ ಬಂದು ತೆಗೆದುಕೊಂಡು ಹೋಗೋಣ ಎಂದ ಮಾತಿನಂತೆ ಇರ್ವರೂ ಒಪ್ಪಿ ಹಾಗೇ0ಯೇ ಮಾಡಿ ಹೋಗುತ್ತಾರೆ. ಕೆಲದಿನಗಳ ನಂತರ ದುಷ್ಟನಾದ ದುಷ್ಟಬುದ್ಧಿ ಓರ್ವನೇ ಬಂದು ಪೊನ್ನನೆಲ್ಲವನ್ನು ಕದ್ದು ಒ0ಯ್ದು ನಂತರ ಕಳುವನ್ನು ಧರ್ಮಬುದ್ಧಿ0ಯ ಮೇಲೆ ಹಾಕಿ ನ್ಯಾ0ಯಕ್ಕಾಗಿ ಧರ್ಮಾಧಿಕರಣರು ಆಶ್ಚ0ರ್ಯಪಟ್ಟು ಈ ವಾಕ್ಯವನ್ನು ಉದ್ಗರಿಸುತ್ತಾರೆ.

**ಸ್ವಾರಸ್ಯ :** ಕಳ್ಳತನ ಮಾಡಿ ಅದರಿಂದ ಪಾರಾಗಲು ವೃಕ್ಷವನ್ನೇ ಸಾಕ್ಷಿ ಮಾಡಿಕೊಂಡದ್ದು ಮನುಷ್ಯರ ಸುಕೃತ ದುಷ್ಕೃತಗಳು ದೈವಗಳಿಗೆ ಅರಿವಾಗುತ್ತದೆ. ಆ ಕಾರಣಕ್ಕಾಗಿ ಈ ಸಾಕ್ಷಿ0ಯು ಉಚಿತವೆಂದು ಹೇಳಿರುವುದು ಇಲ್ಲಿನ ವಿಶೇಷತೆ0ಯಾಗಿದೆ.

22. "ಹೊಸಗಾಲದ ಹಸುಮಕ್ಕಳ ಹರಸಿ "

**ಉ : ಆ0ಯ್ಕೆ :** ಪ್ರಸ್ತುತ ಈ ಹೇಲಿಕೆ0ಯನ್ನು ದ.ರಾ ಬೇಂದ್ರೆ0ಯವರು ರಚಿಸಿರುವ 'ಗರಿ'ಕವನಸಂಕಲನದಿಂದ ಆ0ಯ್ದುಕೊಂಡ "ಹಕ್ಕಿ ಹಾರುತಿದೆ ನೋಡಿದಿರಾ" ಎಂಬ ಕವಿತೆಯಿಂದ ಆರಿಸಿಕೊಳ್ಳಲಾಗಿದೆ.

ಉ: ಪು.ತಿ.ನ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಪುರೋಹಿತ ತಿರುನಾರಾ0ಯಣ ಅ0ಯ್ಯಂಗಾ0ರ್ಯ ನರಸಿಂಹಚಾರ್. ಇವರು ಕನ್ನಡ ನವೋದ0ಯ ಪ್ರಮುಖ ಕವಿಗಳಲ್ಲಿ ಒಬ್ಬರಾಗಿದ್ದಾರೆ. ಇವರು 1905ರಲ್ಲಿ ಮಂಡ್ಯ ಜಿಲ್ಲೆ0ಯ ಮೇಲುಕೋಟೆ0ಯಲ್ಲಿ ಜನಿಸಿದರು ಕನ್ನಡ ವಿಶ್ವಕೋಶದ ಭಾಷಾಂತಕಾರರಾಗಿ ಮೈಸೂರು ವಿಶ್ವವಿದ್ಯಾನಿಲ0ಯದ ಇಂಗ್ಲೀಷ್–ಕನ್ನಡ ನಿಘಂಟು ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ.

ಕನ್ನಡ ನವೋದ0ಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಪು.ತಿ.ನ ಅವರು ಗೀತನಾಟಕ, ಕವಿತೆ ಸಣ್ಣಕಥೆ, ಪ್ರಬಂಧ, ವಿಚಾರಸಾಹಿತ್ಯ, ಮೊದಲಾದ ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿದ್ದಾರೆ. ಗೀತನಾಟಕ ಇವರ ಪ್ರಾಧಿನಿಕ ಪ್ರಕಾರ್. ಅಹಲ್ಯೆ, ಗೋಕುಲ ನಿರ್ಗಮನ, ಶಬರಿ, ವಿಕಟಕವಿಜ0ಯ, ಹಂಸದಮ0ಯಂತಿ ಮತ್ತು ಇತರ ರೂಪಕ್ಷಣತೆ, ರಸಸರಸ್ವತಿ, ಗಣೇಶ ದರ್ಶನ, ಶಾರದಾ0ಯಾಮಿನಿ, ಶ್ರೀಹರಿಚರಿತೆ, ರಥಸಪ್ತಮಿ ಇವರ ಪ್ರಮುಖ

ಕ್ರುತಿಗಳು. ಹಂಸದಮ೦ಯಂತಿ ಮತ್ತು ಇತರ ರೂಪಕಗಳು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಪ್ರಶಸ್ತಿ, ಶ್ರೀಹರಿಚರಿತೆ ಕಾವ್ಯಕ್ಕೆ ಪಂಪ ಪ್ರಶಸ್ತಿ ಲಭಿಸಿದೆ. ಮೈಸೂರು ವಿಶ್ವವಿದ್ಯಾನಿಲ೦ಯ ಗೌರವ ಡಿ.ಲಿಟ್ ಪದವಿ ನೀಡಿ ಗೌರವಿಸಿದೆ ಚಿಕ್ಕಮಗಳೂರಿನಲ್ಲಿ1981 ರಲ್ಲಿ ಸಮಾವೇಶಗೊಂಡ 53ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

29. ಜಿ.ಎಸ್.ಶಿವರುದ್ರಪ್ಪ

ಉ; ಜಿ.ಎಸ್ ಶಿವರುದ್ರಪ್ಪ ಎಂದೇ ಪ್ರಸಿದ್ಧರಾಗಿರುವ ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ ಅವರು1926ರಲ್ಲಿ ಜನಿಸಿದರು. ಇವರು ಶಿವಮೊಗ್ಗ ಜಿಲ್ಲೆ೦ಯ ಶಿಕಾರಿಪುರದವರು. ಮೈಸೂರು, ಉಸ್ಮಾನಿ೦ಯಾ ಮತ್ತು ಬೆಂಗಳೂರು ವಿಶ್ವವಿದ್ಯಾನಿಲ೦ಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕನ್ನಡ ಅಧ್ಯ೦ಯನ ಕೇಂದ್ರದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಆಧುನಿಕ ಕನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಶಿವರುದ್ರಪ್ಪ ಅವರು ಸಾಮಗಾನ, ಚೆಲುವು–ಒಲವು ದೇವಶಿಲ್ಪಿ, ದೀಪದ ಹೆಜ್ಜೆ, ಅನಾವರಣ, ವಿಮರ್ಶೆ೦ಯ ಪೂರ್ವ ಪಶ್ಚಿಮ, ಮಾಸ್ಕೋದಲ್ಲಿ ಇಪ್ಪತ್ತೆರಡು ದಿನಗಳು ಸೌಂದ೦ರ್ಯ ಸಮೀಕ್ಷೆ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.
ಕಾವ್ಯಾರ್ಥಚಿಂತನ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿರುವ ಶಿವರುದ್ರಪ್ಪ ಅವರು ಹಂಪಿ ಕನ್ನಡ ವಿಶ್ವವಿದ್ಯಾನಿಲ೦ಯದ ನಾಡೋಜಾ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ಬೆಂಗಳೂರು ಮತ್ತು ಕುವೆಂಪು ವಿಶ್ವವಿದ್ಯಾನಿಲ೦ಯಗಳ ಗೌರವ ಡಿ.ಲಿಟ್ ಪದವಿ ರಾಷ್ಟ್ರಕವಿ ಅಭಿದಾನ ಮತ್ತು ಪಂಪ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. 1992 ರಲ್ಲಿ ದಾವಣಗೆರೆ೦ಯಲ್ಲಿ ಸಮಾವೇಶಗೊಂಡ 61ನೆ೦ಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

**ಊ) ಪ್ರಸ್ತಾರ ಹಾಕಿ ಗಣ ವಿಭಾಗಿಸಿ ಛಂದಸ್ಸನ್ನು ಹೆಸರಿಸುವುದು:**

30.

ಎಲೆ ಶಬರ ಕಾಡ ಬಡನರಿ
ಮೊಲ ಪುಲ್ಲೆಗಳಲ್ಲಿ ನಿನ್ನ ಸಾಹಸಮುಂದೋ

U U U U| U – U | UU UU|
ಎಲೆ ಶಬ|ರ ಕಾಡ |ಬಡನರಿ | =12

U U – |U U –| U –U | – UU| – –
ಮೊಲ ಪು|ಲ್ಲೆಗಳ| ಲ್ಲಿ ನಿನ್ನ |ಸಾಹಸ|ಮುಂದೋ = 20

**ಇದು ಮಾತ್ರಾಗಣ ಛಂದಸ್ಸಿನ ಕಂದ ಪದ್ಯದಲ್ಲಿ ರಚಿತವಾಗಿದೆ.**

**ಋ) ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವ೦ಯ ಮಾಡುವುದು;**

31. "ಗೀಜುಗನ ಗೂಡುಗಳು ತೂಗುವ ತೊಟ್ಟಿಲಿನಂತೆ ತೂಗುತ್ತಿದ್ದವು"

ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ ; ಎರಡು ವಸ್ತುಗಳಿಗೆ ಇರುವ ಪರಸ್ಪರ ಹೋಲಿಕೆ೦ಯನ್ನು ಹೇಳುವುದೇ ಉಪಮಾಲಂಕಾರ

ಸಮನ್ವ೦ಯ : ಉಪಮೇ೦ಯ : ಗೀಜಗನ ಗೂಡುಗಳು
ಉಪಮಾನ : ತೂಗುವ ತೊಟ್ಟಿಲು
ಉಪಮಾವಾಚಕ ಪದ ; ಅಂತೆ
ಸಮಾನಧರ್ಮ : ತೂಗುವುದು

ಇಲ್ಲಿ ಗೀಜುಗನಗೂಡು ಎಂಬ ಉಪಮೇ೦ಯವನ್ನು ತೂಗುವ ತೊಟ್ಟಿಲು ಉಪಮಾನಕ್ಕೆ 'ಅಂತೆ' ಎಂಬ ಉಪಮಾವಾಚಕದ ಮೂಲಕ'ತೂಗುವುದು' ಎಂಬ ಸಮಾನ ಧರ್ಮವನ್ನು ಹೇಳಿ ಪರಸ್ಪರ ಹೋಲಿಸಿರುವುದರಿಂದ ಇದು ಪೂರ್ಣೋಪಮಲಾಂಕಾರ(ಉಪಮಾಲಂಕಾರ)ದ ಲಕ್ಷಣವಾಗಿದೆ.

ಎ) **ಈ ಗಾದೆ0ುನ್ನು ವಿಸ್ತರಿಸಿ ಬರೆ0ುುವುದು:**

32. ಅರಮನೆಗಿಂತ ನೆರೆಮನೆ0ೀೆ ಲೇಸು

**ಅಥವಾ**

ಮಾಡಿದ್ದುಣ್ಣೋ ಮಹರಾ0ು

ಏ) **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯಿರಿ;**

33. "ನಾನು 0ುುದ್ಧಮಾಡುವ ಮೂರ್ಖರ ಕಡೆ0ುವನಲ್ಲ"

ಉ: **ಆ0ು್ಕೆ ;** ಪ್ರಸ್ತುತ ಹೇಳಿಕೆ0ುನ್ನು ಸಾರಾ ಅಬೂಬಕ್ಕರ್ ಅವರು ರಚಿಸಿರುವ 'ಚಪ್ಪಲಿಗಳು' ಎಂಬ ಕಥಾ ಸಂಕಲನದಿಂದ ಆ0ು್ದ '0ುುದ್ಧ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** 0ುುದ್ಧದಲ್ಲಿನ ವೈಮಾನಿಕ ದಾಳಿಯಿಂದ ಪಾರಾದ ಡಾಕ್ಟರ್ ರಾಹಿಲನು ಗಾ0ುಗೊಂಡು ತೆವಳುತ್ತಾ ರಕ್ಷಣೆಗಾಗಿ ಶತ್ರು ದೇಶದವರ ಮನೆ0ು ಬಾಗಿಲು ಬಡಿ0ುುತ್ತಾನೆ. ಆಗ ಮುದುಕಿ0ೊಬ್ಬಳು ಗೊಣಗಿಕೊಳ್ಳುತ್ತಾ ಬಾಗಿಲು ತೆರೆದು ಸಮೀಪ ಬಂದು " 0ಾರಪ್ಪ ನೀನು? ನಮ್ಮ ಕಡೆ0ುವನು ತಾನೇ "? ಎಂದು ಭ0ು ಮತ್ತು ಸಂದೇಹದಿಂದ ರಾಹಿಲನನ್ನು ಪ್ರಶ್ನಿಸಿದ ಸಂದರ್ಭದಲ್ಲಿ ರಾಹಿಲನು ಮುದುಕಿಗೆ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ;** ಜನಸಾಮನ್ಯರಲ್ಲಿ 0ುುದ್ಧದ ಬಗ್ಗೆ ಇರುವ ತಿರಸ್ಕಾರವನ್ನು, 0ುುದ್ಧದಲ್ಲಿ ನೊಂದವರು ದರ್ಮಭಿನ್ನತೆ, ದೇಶ ಭಿನ್ನತೆ, ವೈರಿ–ಮಿತ್ರ ಎಂಬುದನ್ನು ಪರಿಗಣಿಸದೇ ಪರಸ್ಪರರು ಸಂಕಷ್ಟ ಪರಿಹಾರಕ್ಕೆ, ರಕ್ಷಣೆಗೆ ತೊಡಗುವ ಮಾನವೀ0ು ಮೌಲ್ಯ0ುುತ ನಡವಳಿಕೆಗಳು ಇಲ್ಲಿ ಮನೋಜ್ಞವಾಗಿ ಮೂಡಿಬಂದಿವೆ.

34. " ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೂ ನನಗೂ ಮನೆ ಬೇಡ".

ಉ: **ಆ0ು್ಕೆ :** ಪ್ರಸ್ತುತ ಹೇಳಿಕೆ0ುನ್ನು ದೇವನೂರು ಮಹದೇವ ಅವರು ರಚಿಸಿರುವ "ಎದೆಗೆ ಬಿದ್ದ ಅಕ್ಷರ" ಎಂಬ ವೈಚಾರಿಕ ಬಿಡಿ ಲೇಖನಗಳ ಸಂಕಲನದಿಂದ ಆ0ು್ದ 'ಎದೆಗೆ ಬಿದ್ದ ಅಕ್ಷರ" ಎಂಬ ಗದ್ಯಪಾಠದಿಂದ ಆ0ು್ದುಕೊಳ್ಳಲಾಗಿದೆ.

**ಸಂದರ್ಭ :** ಒಮ್ಮೆ ಒಂದು ಗ್ರಾಮದ ಜನರೆಲ್ಲಾ ಸೇರಿ ಮಂಚಮ್ಮದೇವತೆಗೆ ಗುಡಿ ಕಟ್ಟುತ್ತಿರುವಾಗ ಒಬ್ಬನ ಮೈಮೇಲೆ ಆ ದೇವತೆ ಆವಾಹಿಸಿಕೊಂಡು "ಏನ್ರ0ು್ಯಾ ಏನ್ ಮಾಡ್ತಾ ಇದ್ದೀರಿ"? ಎಂದಾಗ ಜನರು' ನಿನಗೊಂದು ಗುಡಿಮನೆ ಕಟ್ತಾ ಇದ್ದೀವಿ ತಾಯಿ' ಅಂತಾರೆ. ಆಗ ಆ ದೇವತೆ ನಿಮಗೆಲ್ಲಾ ಮನೆ ಉಂಟಾ ಎಂದು ಪ್ರಶ್ನಿಸಿದಾಗ ಅಲ್ಲೊಬ್ಬ "ನನಗಿಲ್ಲ ತಾಯಿ" ಎಂದು ಹೇಳಿದ ಸಂದರ್ಭದಲ್ಲಿ ಮಂಚಮ್ಮದೇವಿ0ುು ಗ್ರಾಮದ ಜನರಿಗೆ ಈ ಮಾತನ್ನು ಹೇಳುತ್ತಾಳೆ.

**ಸ್ವಾರಸ್ಯ :** ಸಾಮಾಜಿಕ ಸಾಮರಸ್ಯಕ್ಕೆ ಮೊದಲನೆ0ು ಅಡ್ಡಿ ಮೌಢ್ಯ, ಮೌಢ್ಯ ಮರೆ0ಾಗುವವರೆಗೆ ಸಾಮರಸ್ಯವೆಂಬುದು ಕನಸಾಗಿ0ೀೆ ಉಳಿ0ುುತ್ತದೆ. ಅಂತರಂಗದ ಹೊಂದಾಣಿಕೆಯಿಂದ ಮಾತ್ರ ಸಾಮರಸ್ಯ ಸಾಧ್ಯವಾಗುತ್ತದೆ,ಆದ್ದರಿಂದ ಕಾರುಣ್ಯ, ಸಮತೆಗಳೇ ದೇವರು. ಇವುಗಳಿಂದ ಜಾಗೃತರಾಗಿರಬೇಕೆಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

35. "ಹುಸಿ0ುದ ಬೇಹಾರಿ0ೀೆ ಇಲ್ಲ "

ಉ : **ಆ0ು್ಕೆ :** ಪ್ರಸ್ತುತ ಹೇಳಿಕೆ0ುನ್ನು ದುರ್ಗಸಿಂಹ ಕವಿ ರಚಿಸಿರುವ ' ಕರ್ಣಾಟಕ ಪಂಚತಂತ್ರ' ಕೃತಿಯಿಂದ ಆ0ು್ದ ವೃಕ್ಷಸಾಕ್ಷಿ ಎಂಬ ಗದ್ಯ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಮರದ ಪೊಟರೆ0ೊಳಗೆ ಅಡಗಿ ಕುಳಿತಿದ್ದ ದುಷ್ಟಬುದ್ದಿ0ು ತಂದೆ ಪ್ರೇಮವತಿ0ುು ಮತಿಗೆಟ್ಟು ಧರ್ಮಬುದ್ಧಿ0ೀೆ ಸಂಪತ್ತನ್ನು ತೆಗೆದುಕೊಂಡನು ಎಂದು ಹೇಳಿದಾಗ ಧರ್ಮಬುದ್ಧಿ0ುು ಇದು ಆಶ್ಚ0ರ್ುಕರವಾದುದ್ದು ಎಂದು 0ೋಚಿಸಿ, ಆ ಮರವನ್ನು ಪ್ರದಕ್ಷಿಣೆ ಮಾಡಿ ಬರುವಾಗ ಅಲ್ಲಿ ಮನುಷ್ಯ ಸಂಚಾರವಾಗಿರುವುದನ್ನು ಗಮನಿಸಿದ ಸಂದರ್ಭದಲ್ಲಿ ಧರ್ಮಾಧೀಕರಣದವರಿಗೆ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ;** ದುಷ್ಟಬುದ್ಧಿ0ುು ತನ್ನ ವಂಚನೆ, ಕಪಟತನ, ಮೋಸದಿಂದ ತಾನು ಹಾಳಾಗುವುದಲ್ಲದೇ, ಸಂಪತ್ತಿಗಾಗಿ ತನ್ನ ತಂದೆ0ುನ್ನು ಬಲಿಕೊಡುವ ಹೃದ0ುಹೀನ ಕೃತ್ಯದಿಂದ ಮಾಡಿದ್ದುಣ್ಣೋ ಮಹರಾ0ು ಎಂಬಂತೆ

ಕೆಟ್ಟ ಫಲವನ್ನು ಅನುಭವಿಸುವಂತಾಯಿತು. ಹಾಗೆ 'ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ' ಎಂಬ ನೀತಿಯನ್ನು ಅತ್ಯಂತ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

36. "ನಿನ್ನಯ ವೀರರೈವರ ನೋಯಿಸೆನು ರಾಜೀವ ಸಖನಾಣೆ"

**ಉ : ಆಯ್ಕೆ :** ಪ್ರಸ್ತುತ ಹೇಳಿಕೆಯನ್ನು ಕುಮಾರವ್ಯಾಸ ಕವಿ ರಚಿಸಿರುವ ಕರ್ಣಾಟ ಭಾರತ ಕಥಾ ಮಂಜರಿ ಎಂಬ ಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು ಎಂಬ ಪದ್ಯ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:**ಶ್ರೀ ಕೃಷ್ಣನು ಪಾಂಡವರು, ಕೌರವರ ನಡುವೆ ಸಂಧಿ ಮಾಡಲು ಹೋಗಿ ವಿಫಲನಾಗಿ ಹಿಂದಿರುಗಿರುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ತನ್ನ ಪಕ್ಕದಲ್ಲಿಯೇ ತೊಡೆ ತಾಗುವಂತೆ ರಥದಲ್ಲಿ ಕೂರಿಸಿಕೊಂಡನು ಆತನಿಗೆ ಜನ್ಮ ರಹಸ್ಯವನ್ನು ತಿಳಿಸಿ ಅನೇಕ, ಆಮಿಷಗಳನ್ನು ಒಡ್ಡಿದ ಸಂದರ್ಬದಲ್ಲಿ ಕರ್ಣನು ಶ್ರೀ ಕೃಷ್ಣನಿಗೆ ಈ ಮಾತನ್ನು ಹೆಳುತ್ತಾನೆ.

**ಸ್ವಾರಸ್ಯ :** ಅಸಮಾನ್ಯನೂ , ಶೌರ್ಯಕ್ಕೆ , ದಾನಕ್ಕೆ ,ಉದಾತ್ತತೆಗೆ , ಕರುಣೆಗೆ ಹೆಸರಾಗಿದ್ದ ಕರ್ಣನಿಗೆ ಆತನ ಜನ್ಮರಹಸ್ಯವನ್ನು ಎಂತಹ ಸಂಕಟವನ್ನು ಉಂಟುಮಾಡಿತು. ಅವನ ಸ್ವಾಮಿನಿಷ್ಟೆ ಮುಂದೆ ಶ್ರೀಕೃಷ್ಣನೊಡ್ಡಿದ ಪ್ರಲೋಭನೆ ಹೇಗೆ ವ್ಯರ್ಥವಾಯಿತು ಹಾಗೂ ಅಸಹಾಯಕನಾದ ಸ್ಥಿತಿಯಲ್ಲಿ ನೋವು ಸಂಕಟದಿಂದ ಬಳಲುವ ಕರ್ಣನ ವ್ಯಕ್ತಿತ್ವದ ಹಿರಿಮೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

37. "ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್"

**ಉ : ಆಯ್ಕೆ :** ಪ್ರಸ್ತುತ ಹೇಳಿಕೆಯನ್ನು ಕುವೆಂಪು ಅವರು ರಚಿಸಿರುವ 'ಪಕ್ಷಿಕಾಶಿ' ಎಂಬ ಕವನ ಸಂಕಲನದಿಂದ ಆಯ್ದ 'ಹಸುರು ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ;** ಕುವೆಂಪು ಅವರು ಮಲೆನಾಡಿನ ಕುಪ್ಪಳ್ಳಿಯ ಕವಿಶೈಲದಲ್ಲಿ ಆಶ್ವಯುಜ ಮಾಸದ ನವರಾತ್ರಿಯಲ್ಲಿ ಕುಳಿತು ಆನಂದದಿಂದ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರಿನ ಸೌದರ್ಯಾನುಭವವನ್ನು ಅನುಭವಿಸುತ್ತಾ ತಲ್ಲೀನರಾಗಿರುವುದನ್ನು ವರ್ಣನೆ ಮಾಡುವ ಸಂದರ್ಭದಲ್ಲಿ ಮೇಲ್ಕಂಡ ಮಾತು ಬಂದಿದೆ.

**ಸ್ವಾರಸ್ಯ :**ನವರಾತ್ರಿಯ ಸಂದರ್ಭದಲ್ಲಿ ಮಲೆನಾಡಿನ ತುಂಬೆಲ್ಲಾ ಎತ್ತ ನೋಡಿದರತ್ತ ಹಸುರು ವ್ಯಾಪಿಸಿರುತ್ತದೆ. ಆ ಸಮಯದಲ್ಲಿ ಕವಿಯ ಆತ್ಮವು ರಸಪಾನದಿಂದ ಮಿಂದು ಹಸುರಾಗಿದೆ. ಆ ಮೂಲಕ ಅಲ್ಲಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಸಂಬಂಧ ಹಾಗೂ ಪ್ರಕೃತಿಯ ರಸಸ್ವಾದನೆ ಇಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ . ಕವಿ ಮತ್ತು ಪ್ರಕೃತಿ ಒಂದಾಗುವ ಅವರ ಕಾವ್ಯದ ಅದ್ವೈತ್ವ ಸ್ಥಿತಿ ಅಭಿವ್ಯಕ್ತಗೊಂಡಿದೆ.

38. "ಪಾರ್ವರ ಮಕ್ಕಳಂಜಿದೊಡೆ ಜಾನಕಿಯ ಮಗನಿದಕೆ ಬೆದರುವನೆ"

**ಉ: ಆಯ್ಕೆ :** ಪ್ರಸ್ತುತ ಈ ಹೇಳಿಕೆಯನ್ನು ಲಕ್ಷ್ಮೀಶ ಕವಿ ರಚಿಸಿರುವ 'ಜೈಮಿನಿ ಭಾರತ' ಎಂಬ ಕಾವ್ಯದಿಂದ ಆಯ್ದ 'ವೀರಲವ' ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಶ್ರೀ ರಾಮನ ಅಶ್ವಮೇಧ ಯಾಗದ ಕುದುರೆಯು ವಾಲ್ಮೀಕಿ ಆಶ್ರಮವನ್ನು ಪ್ರವೇಶಿಸಿ, ಹಸುರಾದ ಹುಲ್ಲನ್ನು ತಿನ್ನುವಾಗ , ಆ ತೋಟದ ಕಾವಲು ಕಾಯುತ್ತಿದ್ದ ಲವನು ತನ್ನ ಉತ್ತರೀಯದಿಂದ ಕಟ್ಟಿಹಾಕಿದನು. ಆಗ ಮುನಿಸುತರು ಹೆದರಿ ಕುದುರೆಯನ್ನು ಬಿಟ್ಟುಬಿಡು ಇಲ್ಲದಿದ್ದರೆ ನಮ್ಮನ್ನು ಹೊಡೆಯುತ್ತಾರೆ ಎಂದು ಹೇಳಿದ ಸಂದರ್ಭದಲ್ಲಿ ಲವನು ನಗುತ್ತಾ ಮುನಿಸುತರಿಗೆ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :** ಲವಕುಶರು ಹುಟ್ಟಿದ್ದು ಋಷ್ಯಾಶ್ರಮದಲ್ಲಾದರು ಸಹಜ ಕ್ಷಾತ್ರಗುಣ , ವೀರತೆಯಿಂದ ಕುದುರೆಯನ್ನು ಕಟ್ಟಿಹಾಕುತ್ತಾರೆ. ಕಷ್ಟ ಸವಾಲುಗಳು ಬಂದಾಗ ಚಿಕ್ಕವರು, ಅಸಮರ್ಥರು ಎಂದು ಕೂರದೆ ದಿಟ್ಟತನದಿಂದ ಎದುರಿಸಬೇಕೆಂಬ ಬಾಲಸಹಜ ಸಾಹಸ ಪ್ರವೃತ್ತಿ ಹಾಗೂ ಲವನಿಗೆ ತನ್ನ ತಾಯಿಯ ಮೇಲಿದ್ದ ಗೌರವ, ಅಭಿಮಾನಿಗಳನ್ನು ಇಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**ಐ) ಪದ್ಯಭಾಗ ಪೂರ್ಣ ಮಾಡುವುದು :**

**39.** 0ಯುಗ–0ಯುಗಗಳ ______________

______________________________

______________________________

____________________ ಹರಸಿ

ಹಕ್ಕಿ ಹಾರುತಿದೆ ನೋಡಿದಿರಾ?

**ಅಥವಾ**

ನೀಲಮೇಘ ______________________

____________________________

______________________________

___________________________ಕಣ್ಣಾ

ಹಕ್ಕಿ ಹರುತಿದೆ ನೋಡಿದಿರಾ?

0ಯುಗ 0ಯುಗಗಳ ಹಣೆಬರಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆ0ಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿಹಾರುತಿದೆ ನೋಡಿದಿರಾ?

ಅಥವಾ

ನೀಲಮೇಘಮಂಡಲ ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೋ ಅಣ್ಣಾ
ಚುಕ್ಕೆ0ಯಮಾಲೆ0ಯ ಸಿಕ್ಕಿಸಿಕೊಂಡು
ಸೂ0ರ್ಯ – ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿಹಾರುತಿದೆ ನೋಡಿದಿರಾ?

**ಒ) ಪದ್ಯಭಾಗವನ್ನು ಓದಿ, ಅರ್ಥಮಾಡಿಕೊಂಡು , ಮೌಲ್ಯವನ್ನಾಧಿರಿಸಿ ಸಾರಾಂಶ ಬರೆ0ಯುವುದು.**

40 ಒಡವೆ0ಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ
ದಡಕೆ0ಯುಮಿಲ್ಲ ಕೈ0ಯೊಳೆರೆದಂ ಶ್ರುತಪಾರಗನೆಂತು ಸಂತಸಂ
ಬಡಿಸುವೆನಿನ್ನಿದೊಂದು ಧನುವಿರ್ದುದು ದಿವ್ಯಶರಾವಳಿಯಿರ್ದುದಿ
ಲ್ಲೊಡಮೆ ಸಮಂತು ಪೇಟಿವರೊಳಾವುದನೀವುದೊ ಕುಂಭಸಂಭವ

**ಉ:** ದ್ರೋಣನು ತನಗೆ ಬಡತನ ಉಂಟಾಗಲು ಅಶ್ವತ್ಥಾಮನ ಜೊತೆಗೂಡಿ ದೇಶದೇಶಗಳನ್ನೆಲ್ಲಾ ಸುತ್ತಿ, ಪರಶುರಾಮನ ಬಳಿಗೆ ಬಂದನು. ನಾರುಮಡಿಯಿಂದ ಕೂಡಿದ ಸೊಂಟವುಳ್ಳವನು, ಜಟಾಸಮೂಹದಿಂದ ಕೂಡಿದ ಪರಶುರಾಮನು ತನ್ನ ಬಳಿಗೆ ದ್ರವ್ಯಾರ್ಥಿ0ಯಾಗಿ ಬಂದ ದ್ರೋಣನನ್ನು ಚಿನ್ನದ ಪಾತ್ರೆ ಇಲ್ಲದೆ ಇದ್ದುದ್ದರಿಂದ ಮಣ್ಣಿನ ಪಾತ್ರೆ 0ಯಲ್ಲಿ ಅರ್ಘ್ಯವನ್ನು ಕೊಟ್ಟು ಪೂಜಿಸಿದನು. ನಂತರ ಪರಶುರಾಮನು ತನ್ನಲ್ಲಿರುವ ಒಡವೆ0ಯನ್ನು ಬೇಡಿದವರಿಗೆ ಕೊಟ್ಟೇನು, ಭೂಮಂಡಲವನ್ನು ಗುರುವಿಗೆ ಕೊಟ್ಟೆನು. ಈಗ ನನ್ನಲ್ಲಿ ಒಂದು ಅಡಕೆ0ಯು ಇಲ್ಲ. ಬೇಡುವವನಾದರೂ ವೇದಶಾಸ್ತ್ರಪಾರಂಗತನು. ಹೇಗೆ ಅವನನ್ನು ಸಂತೋಷ ಪಡಿಸಲಿ ಎಂದು 0ಯೋಚಿಸಿ ನಂತರ ದ್ರೋಣನನ್ನು ಕುರಿತು ಈಗ ಇದೊಂದು ಬಿಲ್ಲು ಇದೆ. ಇನ್ನೊಂದು ದಿವ್ಯಾಸ್ತ್ರಗಳ ಸಮೂಹ ಇದೆ. ಬೇರೆ ಆಸ್ತಿಯಿಲ್ಲ ಇವುಗಳಲ್ಲಿ 0ಯಾವುದನ್ನು ಕೊಡಲಿ ಚೆನ್ನಾಗಿ 0ಯೋಚಿಸಿ ಹೇಳಿ ಎಂದನು. ಒಟ್ಟಾರೆ0ಯಾಗಿ ಪರಶುರಾಮನು ತನ್ನ ಬಳಿಗೆ ಬಂದ ದ್ರೋಣನನ್ನು ಆದರ ಆತಿಥ್ಯದಿಂದ ಸತ್ಕರಿಸಿ, ಪೂಜಿಸಿದ್ದು ಹಾಗೂ ಪರಶುರಾಮನ ಪ್ರಾಮಾಣಿಕತೆ, ಸರಳ, ಹಿತ–ಮಿತ ಮೃದು–ವಚನ, ವಿನ0ಯದ ಸಹಚರತೆ , ಗುರು–ಹಿರಿ0ಯನ್ನು ಗೌರವಿಸುವುದು, ವಿದ್ಯೆ0ಯ ಮಹತ್ವ, ತನ್ನ ಪ್ರಸ್ತುತ ಸ್ಥಿತಿ0ಯನ್ನು ತಿಳಿಸಿದ್ದು ಇನ್ನೂ ಮುಂತಾದ ಗುಣಲಕ್ಷಣಗಳು ಈ ಪದ್ಯದಲ್ಲಿ ಕಂಡುಬರುವ ಮೌಲ್ಯಗಳಾಗಿವೆ.

**ಓ) ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ:**

41. ವಿಶ್ವೇಶ್ವರಯ್ಯನವರು ಮುಂಬೈ ಪ್ರಾಂತ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ;

**ಅಥವಾ**

ನಾಲ್ವಡಿ ಕೃಷ್ಣರಾಜ ಒಡೆಯರು ಸ್ಥಾಪಿಸಿದ "ನ್ಯಾಯವಿಧಾಯಕ ಸಭೆ" ಮತ್ತು ಜಾರಿಗೆ ತಂದ ಸಾಮಾಜಿಕ ಕಾನೂನುಗಳನ್ನು ಕುರಿತು ಬರೆಯಿರಿ:

**ಉ:** ವಿಶ್ವೇಶ್ವರಯ್ಯನವರು 1884ರಲ್ಲಿ ಮುಂಬೈ ಪ್ರಾಂತ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಎಂಜಿನಿಯರ್ ಆಗಿ ಸೇವೆ ಪ್ರಾರಂಭಿಸಿದರು. ಖಾನ್ ದೇಶ ಮತ್ತು ನಾಸಿಕ್ ಜಿಲ್ಲೆಗಳಲ್ಲಿ ಹರಿಯುತ್ತಿದ್ದ ಪಂಜ್ರಾ ನದಿಯ ನೀರಾವರಿ ಕಾಲುವೆಗೆ ತೂಬು ಮೇಲ್ಗಾಲುವೆಯನ್ನು ನಿರ್ಮಿಸುವ ಕಾರ್ಯದಲ್ಲಿ ಯಶಸ್ಸು ಗಳಿಸಿ ಮೇಲಾಧಿಕಾರಿಗಳ ಮೆಚ್ಚುಗೆಗೆ ಪಾತ್ರರಾದರು. ಮುಂಬೈ ಸರ್ಕಾರದ ಸೂಚನೆಯ ಮೇರೆಗೆ ಸಿಂಧ್ ಪ್ರಾಂತ್ಯದ ಸುಕ್ಕೂರು ಪಟ್ಟಣಕ್ಕೆ ಕುಡಿಯುವ ನೀರಿನ ಪೂರೈಕೆಯ ಕಾರ್ಯವನ್ನು ಯಶಸ್ವಿಯಾಗಿ ಪೂರೈಸಿದರು. ಅಂದಿನ ಮುಂಬೈ ಪ್ರಾಂತ್ಯದ ಗವರ್ನರ್ ಆಗಿದ್ದ ಲಾರ್ಡ್ ಸಂಡ್ ಹರ್ಸ್ಟ್ ಅವರು ಇವರನ್ನು ಮುಕ್ತಕಂಠದಿಂದ ಹಾಡಿ ಹೊಗಳಿದರು. ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಫೀಪ್ ಜಲಾಶಯಕ್ಕೆ ಸ್ವಯಂಚಾಲಿತ ಬಾಗಿಲುಗಳನ್ನು 'ಅಳವಡಿಸಿದರು. ಸ್ವಯಂಚಾಲಿತ ಬಾಗಿಲುಗಳ ಅನ್ವೇಷಣೆ ವಿಶ್ವೇಶ್ವರಯ್ಯ ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು. ನಂತರ ನಾಲ್ಕು ವರ್ಷಗಳ ಕಾಲ ಮುಂಬೈ ಪ್ರಾಂತ್ಯದ ಸ್ಯಾನಿಟರಿ ಎಂಜಿನಿಯರ್ ಆಗಿ ನೇಮಕಗೊಂಡರು. ಈ ಹುದ್ದೆಗೆ ನೇಮಕವಾದ ಪ್ರಥಮ ಭಾರತೀಯರು ಎಂಬುದು ಗಮನಾರ್ಹ ಅಂಶವಾಗಿದೆ.

**ಅಥವಾ**

ನಾಲ್ವಡಿ ಕೃಷ್ಣರಾಜ ಒಡೆಯರು ಸ್ಥಾಪಿಸಿದ 'ನ್ಯಾಯ ವಿಧಾಯಕ ಸಭೆ ಮತ್ತು ಜಾರಿಗೆ ತಂದ ಸಾಮಾಜಿಕ ಕಾನೂನುಗಳು'. ನ್ಯಾಯ ವಿಧಾಯಕ ಸಭೆ : ನಾಲ್ವಡಿ ಕೃಷ್ಣರಾಜ ಒಡೆಯರು 1907ರಲ್ಲಿ ನ್ಯಾಯವಿಧಾಯಕ ಸಭೆಯನ್ನು ಸ್ಥಾಪಿಸಿದರು ಇದರ ಸದಸ್ಯರ ಸಂಖ್ಯೆ 50. ಇದರಲ್ಲಿ ಜನರಿಂದ ಆಯ್ಕೆಯಾದವರು 22 ಸದಸ್ಯರು ಮೇಲ್ಮನೆಯ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಈ ಸಂಸ್ಥೆ , ಜೂನ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಬೆಂಗಳೂರಿನಲ್ಲಿ ಸಮಾವೇಶಗೊಳ್ಳುತ್ತಿತ್ತು. ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲಾ ವಿಷಯಗಳನ್ನು ವಿಮರ್ಶಿಸುವ ಅಧಿಕಾರ ಈ ಸಂಸ್ಥೆಗೆ ಇದ್ದಿತು. ಮುಖ್ಯವಾದ ಯಾವುದೇ ಕಾನೂನನ್ನು ಜಾರಿಗೊಳಿಸಲು ಆ ಸಭೆಯ ಅನುಮತಿ ಅಗತ್ಯವಾಗಿತ್ತು ಆ ಸಭೆಗೆ ಸರ್ಕಾರದ ಖರ್ಚುಗಳನ್ನು ಕಡಿಮೆ ಮಾಡುವ ಅಧಿಕಾರ ಸಹ ಇದ್ದಿತ್ತು.

42. ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

ಅಥವಾ

ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ:

**ಉ:** ದುರ್ಯೋಧನನು ಭೀಷ್ಮರನ್ನು ಕುರಿತು ನಾನು ಪಾಂಡವರೊಡನೆ ನೆಲಕ್ಕಾಗಿ ಹೋರಾಡುವೆನೆಂದು ಭಾವಿಸಿದಿರಾ, ನಾನು ಛಲಕ್ಕಾಗಿ ಯುದ್ಧ ಮಾಡುವೆನು. ಈ ಭೂಮಿ ನನಗೆ ಪಾಳು ಭೂಮಿ ಕರ್ಣನನ್ನು ಕೊಲ್ಲಿಸಿದ ನೆಲದೊಡನೆ ಮತ್ತೆ ನಾನು ಬಾಳುವುದುಂಟೇ ? ನನ್ನ ಪ್ರೀತಿಯ ಗೆಳೆಯ ಕರ್ಣನನ್ನು , ಪ್ರೀತಿಯ ತಮ್ಮನಾದ ದುಶ್ಯಾಸನನನ್ನು ಕೊಂದ ಅರ್ಜುನ –ಭೀಮರು ಇರುವ ತನಕ , ನನ್ನ ದೇಹದಲ್ಲಿ ನನ್ನ ಪ್ರಾಣ ಇರುವ ತನಕ ನಾನು ಸಂಧಿ ಮಾಡಿಕೊಳ್ಳುವುದಿಲ್ಲ. ಮೊದಲು ಆ ಇಬ್ಬರನ್ನು ಕೊಂದು ನಂತರ ನನ್ನ ದುಃಖವು ತಣ್ಣಗಾದಾಗ ಪ್ರಸಿದ್ಧವಾದ ಧರ್ಮರಾಯನೊಡನೆ ಸಂಧಿ ಮಾಡಿಕೊಳ್ಳಲು ಆಗುವುದಿಲ್ಲ ಎಂದು ಹೇಳುವೆನೇ? ನನ್ನ ಒಡಹುಟ್ಟಿದ ನೂರು ಮಂದಿ ಸಹೋದರರು ಯುದ್ಧದಲ್ಲಿ ಹೋರಾಡಿ ಸತ್ತರು. ಆಗ ನನಗೆ ಕೋಪವು ಹುಟ್ಟಿ ಹೊರ ಹೊಮ್ಮಿತು. ಸತ್ತವರೇನು ಮತ್ತೆ ಹುಟ್ಟುವುದಿಲ್ಲ . ಆದ್ದರಿಂದ ಪಾಂಡವರೊಡನೆ ಯುದ್ಧ ಮಾಡದೇ ಇರುವುದಿಲ್ಲ. ನಾಳಿನ ಸಮರಸದಲ್ಲಿ ಈ ಭೂಮಿಗೆ ಪಾಂಡವರು ಒಡೆಯರಾಗಬೇಕು ಇಲ್ಲವೇ ನಾನು ಒಡಯನಾಗಬೇಕು. ಆದ್ದರಿಂದ ಯುದ್ಧವನ್ನೇ ಮಾಡುವೆನು ಎಂದು ಹೇಳಿದನು. ಹೀಗೆ ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿದೆ.

**ಅಥವಾ**

ದುರ್ಯೋಧನನು ತಂದೆ–ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮರ ಬಳಿಗೆ ಬಂದಾಗ ಭೀಷ್ಮರು ದುರ್ಯೋಧನನಿಗೆ ಸಲಹೆಯನ್ನು ನೀಡುತ್ತಾ ನೀನು ಒಪ್ಪಿಕೊಳ್ಳುವುದಾದರೆ ಪಾಂಡವರನ್ನು ಒಪ್ಪಿಸಿ ಅವರೊಂದಿಗೆ ಸಂಧಿಯನ್ನುಮಾಡಿ ಮೊದಲಿನಂತೆಯೇ ಅವರು ನಡೆಯುವ ಹಾಗೇ ಮಾಡುವೆನು. ಇನ್ನೂ ಅವರು ನಾವು ಹೇಳಿದ್ದನ್ನು ಒಪ್ಪಿಕೊಳ್ಳುತ್ತಾರೆ. ನನ್ನ ಮಾತನ್ನು ಮೀರುವವರಲ್ಲ. ನೀನು ಕೂಡ ನಾವು ಹೇಳಿದುದನ್ನು ಮೀರದೆ ನಡೆದುಕೊಳ್ಳಬೇಕು. ಎಂದಾಗ ದುರ್ಯೋಧನನು ಮುಗುಳ್ನಗೆ ನಕ್ಕು ಅಜ್ಜ, ನಿಮಗೆ ನಮಸ್ಕರಿಸಿ ನಿಮ್ಮಿಂದ ಆಶೀರ್ವಾದ ಪಡೆದುಕೊಂಡು ಹೋಗಲೆಂದು ಬಂದೆನೇ ವಿನಃ ಆ ನನ್ನ ಶತ್ರುಗಳಾದ ಪಾಂಡವರೊಡನೆ ನೆಲಕ್ಕಾಗಿ ಹೋರಾಡುತ್ತಿಲ್ಲ ಛಲಕ್ಕಾಗಿ ಹೋರಾಡುವೆನು. ಈ ಭೂಮಿ ನನಗೆ ಪಾಳು ಭೂಮಿ . ಕರ್ಣನನ್ನು ಕೊಲ್ಲಿಸಿದ ನೆಲದೊಡನೆ ನಾನು ಮತ್ತೆ ಬಾಳುವುದುಂಟೆ? ಪ್ರೀತಿಯ ಗೆಳೆಯ ಕರ್ಣ, ಪ್ರೀತಿಯ ತಮ್ಮ ದುಶ್ಯಾಸನನನ್ನು ಕೊಂದ ಅರ್ಜುನ–ಭೀಮರು ಇರುವ ತನಕ , ನನ್ನ ದೇಹದಲ್ಲಿ ಪ್ರಾಣ ಇರುವ ತನಕ ಅಜ್ಜ, ಸಂಧಿಯನ್ನು ಮಾಡಿಕೊಳ್ಳುವುದಿಲ್ಲ . ಮೊದಲು ಆ ಇಬ್ಬರನ್ನು ಕೊಂದು ನಂತರ ಧರ್ಮರಾಯನೊಡನೆ ಸಂಧಿ ಮಾಡಿಕೊಳ್ಳಲು ಆಗುವುದಿಲ್ಲ ಎಂದು ಹೇಳುವನೇ? ನನ್ನ ಒಡಹುಟ್ಟಿದ ನೂರು ಮಂದಿ ಸಹೋದರರು ಯುದ್ಧದಲ್ಲಿ ಹೋರಾಡಿ ಛಲವನ್ನೇ ಮೆರೆಯುವೆನು. ಅಜ್ಜ, ನಾನು ಪಾಂಡವರೊಂದಿಗೆ ಯುದ್ಧ ಮಾಡದೇ ಇರುವುದಿಲ್ಲ. ನಾಳಿನ ಸಮರಸದಲ್ಲಿ ಈ ಭೂಮಿಗೆ ಪಾಂಡವರು ಒಡೆಯರಾಗಬೇಕು ಇಲ್ಲವೇ ನಾನು ಒಡೆಯನಾಗಬೇಕು ಆದ್ದರಿಂದ ನಾನು ಯುದ್ಧವನ್ನೆ ಮಾಡುವೆನು ಎಂದು ಹೇಳಿದನು.

**ಔ) ಗದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರಿಸುವುದು.**

ವಿಜ್ಞಾನದ ಯಾವುದೇ ವಿಭಾಗ ಸಮಾಜದ ಒಳಿತಿಗಾಗಿ ನೆರವಾಗಬಲ್ಲದು. ವಿಶೇಷವಾಗಿ ರಸಾಯನಶಾಸ್ತ್ರ ಜೀವನದ ಅನೇಕ ಕ್ಷೇತ್ರಗಳಲ್ಲಿ ಬಳಕೆಯಾಗಿರುವುದು ಕಂಡುಬರುತ್ತದೆ ರಾಸಾಯನಿಕ ಕ್ರಿಯೆಗಳಿಲ್ಲದ ಕಾರ್ಯಗಳೇ ಅಪರೂಪ. ವಿಜ್ಞಾನದ ಈ ವಿಭಾಗದಲ್ಲಿ ಆಳವಾದ ಸಂಶೋಧನೆಗಳು ನಡೆದು ಮನುಕುಲದ ಪ್ರಗತಿಗೆ (ಏಳಿಗೆಗೆ)ಕಾರಣೀಭೂತವಾಗಬೇಕಾಗಿದೆ. ವಿಜ್ಞಾನಿಗಳು ತಮ್ಮ ಅಮೂಲ್ಯವಾದ ಜ್ಞಾನವನ್ನು ಸಾಮಾನ್ಯ ಜನರ ಮನೋಭಾವಗಳನ್ನು ತಿದ್ದುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು.ಸಮಾಜದ ಸುಧಾರಣೆಗೆ ನೆರವಾಗಬೇಕು. ವಿಜ್ಞಾನಿಯ ವರ್ತನೆ ಮನೋಭವವನ್ನು ಅವನು ದಂತಗೋಪುರದಲ್ಲಿರುವ ಅಪೂರ್ವ ಬುದ್ಧಿಶಾಲಿ ಎಂಬ ಭಾವನೆ ಜನರಲ್ಲಿ ಮೂಡುವಂತಿರಬಾರದು. ಸಮಾಜದ ದುಡಿಮೆಯಲ್ಲಿ ಶಿಕ್ಷಣವನ್ನು ಪಡೆದಿರುವ ವಿಜ್ಞಾನಿ, ಸಾಮಾನ್ಯ ಜನರ ಯೋಚನಾ ಶಕ್ತಿಯನ್ನು ಬೆಳೆಸುವಲ್ಲಿ ಶ್ರಮಿಸುವುದು ಆತನ ಕರ್ತವ್ಯವೇ ಹೊರತು ಉಪಕಾರವೇನೂ ಅಲ್ಲ. ವಿಶೇಷ ಸಂದರ್ಭಗಳಲ್ಲಿ ಜನಪ್ರಿಯ ಉಪನ್ಯಾಸಗಳು ವಿಜ್ಞಾನ ವಿಷಯದಲ್ಲಿ ಆಸಕ್ತರಾಗಿರುವ ಬಹು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಸಹಾಯವಾಗುತ್ತದೆ. ನಮ್ಮ ದೇಶದಲ್ಲಿ ವಿಜ್ಞಾನಿಗಳು ಹಲವಾರು ಸಂದರ್ಭದಲ್ಲಿ ಪರಸ್ಪರ ವೈರುಧ್ಯದ ಮನೋಭಾವವನ್ನು ವ್ಯಕ್ತಪಡಿಸುತ್ತಿರುವುದು.ದುರದುಷ್ಟಕರ. ಅವರು ಪ್ರಯೋಗಶಾಲೆಯಲ್ಲಿ ತಮ್ಮ ಹೆಚ್ಚಿನವಿಚಾರಶಕ್ತಿಯನ್ನೂ, ವೈಜ್ಞಾನಿಕ ಮನೋಭಾವವನ್ನು ಪ್ರದರ್ಶಿಸುತ್ತಾರೆ. ಆದರೇ ಅದು ನಿಜ ಜೀವನದಲ್ಲಿ ಅವರ ಯೋಚನಾ ಶಕ್ತಿ 'ರಜೆ' ತೆಗೆದುಕೊಂಡಿದೆಯೋ ಎಂಬಂತೆ ಅವೈಜ್ಞಾನಿಕವಾಗಿ ವರ್ತಿಸುತ್ತಾರೆ. ಒಂದೆ ಮನಸ್ಸು ಒಮ್ಮೆ ತಾರ್ಕಿಕವಾಗಿ ಚಿಂತಿಸಿದರೆ ಮತ್ತೊಮ್ಮೆ ಅತಾರ್ಕಿಕವಾಗಿ ಯೋಚಿಸುತ್ತದೆ. ಯೋಚನೆಯಲ್ಲಿ ಏಕಸೂತ್ರತೆ ಕಂಡು ಬರುವುದಿಲ್ಲ.

43. **ಪ್ರಶ್ನೆಗಳು ;**

ಅ) ವಿಜ್ಞಾನಿಗಳ ವೈರುದ್ಯ ಭಾವನೆಯನ್ನು ತಿಳಿಸಿ.

ಆ) ಸಮಾಜದ ಸುಧಾರಣೆಗೆ ವಿಜ್ಞಾನಿಗಳು ಹೇಗೆ ನೆರವಾಗಬೇಕು?

**ಉ:** ನಮ್ಮ ದೇಶದಲ್ಲಿ ವಿಜ್ಞಾನಿಗಳು ಹಲವಾರು ಸಂದರ್ಭದಲ್ಲಿ ಪರಸ್ಪರ ವೈರುಧ್ಯದ ಮನೋಭಾವವನ್ನು ವ್ಯಕ್ತಪಡಿಸುತ್ತಿರುವುದು. ದುರದೃಷ್ಟಕರ. ಅವರು ಪ್ರಯೋಗಶಾಲೆಯಲ್ಲಿ ತಮ್ಮ ಹೆಚ್ಚಿನ ವಿಚಾರಶಕ್ತಿಯನ್ನೂ, ವೈಜ್ಞಾನಿಕ ಮನೋಭಾವವನ್ನು ಪ್ರದರ್ಶಿಸುತ್ತಾರೆ. ಆದರೇ ಅದು ನಿಜ ಜೀವನದಲ್ಲಿ ಅವರ ಯೋಚನಾ ಶಕ್ತಿ 'ರಜೆ' ತೆಗೆದುಕೋಂಡಿದೆಯೋ ಎಂಬಂತೆ ಅವೈಜ್ಞಾನಿಕವಾಗಿ ವರ್ತಿಸುತ್ತಾರೆ. ಒಂದೆ ಮನಸ್ಸು ಒಮ್ಮೆ

ತಾರ್ಕಿಕವಾಗಿ ಚಿಂತಿಸಿದರೆ ಮತ್ತೊಮ್ಮೆ ಅತಾರ್ಕಿಕವಾಗಿ ೦ಯೋಚಿಸುತ್ತದೆ. ೦ಯೋಚನೆ೦ಯಲ್ಲಿ ಏಕಸೂತ್ರತೆ ಕಂಡು ಬರುವುದಿಲ್ಲ.

ಆ) ವಿಜ್ಞಾನಿಗಳು ತಮ್ಮ ಅಮೂಲ್ಯವಾದ ಜ್ಞಾನವನ್ನು ಸಾಮಾನ್ಯ ಜನರ ಮನೋಭಾವಗಳನ್ನು ತಿದ್ದುವ ಕಾ೦ರ್ುದಲ್ಲಿ ತೊಡಗಿಸಿಕೊಳ್ಳಬೇಕು. ಸಮಾಜದ ಸುಧಾರಣೆಗೆ ನೆರವಾಗಬೇಕು. ವಿಜ್ಞಾನಿ೦ಯ ವರ್ತನೆ ಮನೋಭಾವವನ್ನು ಅವನು ದಂತಗೋಪುರದಲ್ಲಿರುವ ಅಪೂರ್ವ ಬುದ್ಧಿಶಾಲಿ ಎಂಬ ಭಾವನೆ ಜನರಲ್ಲಿ ಮೂಡುವಂತಿರಬಾರದು. ಸಮಾಜದ ದುಡಿಮೆ೦ಯಲ್ಲಿ ಶಿಕ್ಷಣವನ್ನು ಪಡೆದಿರುವ ವಿಜ್ಞಾನಿ, ಸಾಮಾನ್ಯ ಜನರ ೦ಯೋಚನಾ ಶಕ್ತಿ೦ಯನ್ನು ಬೆಳೆಸುವಲ್ಲಿ ಶ್ರಮಿಸುವುದು ಆತನ ಕರ್ತವ್ಯವೇ ಹೊರತು ಉಪಕಾರವೇನೂ ಅಲ್ಲ. ವಿಶೇಷ ಸಂದರ್ಭಗಳಲ್ಲಿ ಜನಪ್ರಿ೦ಯ ಉಪನ್ಯಾಸಗಳು ವಿಜ್ಞಾನ ವಿಷ೦ಯದಲ್ಲಿ ಆಸಕ್ತರಾಗಿರುವ ಬಹು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಸಹಾ೦ಯವಾಗುತ್ತದೆ. ಆ ಮೂಲಕ ಸಮಾಜ ಸುಧಾರಣೆಗೆ ನೆರವಾಗಬೇಕು.

**ಅಂ) ಪತ್ರಲೇಖನ ಬರೆ೦ಯುವುದು:**

44. ನಿಮ್ಮನ್ನು ಶಿವಮೊಗ್ಗದ ಸರ್ಕಾರಿ ಪ್ರೌಢಶಾಲೆ೦ಯ 'ಅಂಜಲಿ' ಎಂದು ಭಾವಿಸಿಕೊಂಡು , ಶಾಲೆ೦ಯಲ್ಲಿ 'ಭಾಷಾ ಪ್ರ೦ಯೋಗಾಲ೦ಯ' ಪ್ರಾರಂಭಿಸಲು ಅಗತ್ಯ ನೆರವು ನೀಡುವಂತೆ ಮೈಸೂರಿನ ಕೇಂದ್ರೀ೦ಯ ಭಾಷಾ ಸಂಸ್ಥಾನದ ನಿರ್ದೇಶಕರಿಗೆ ಮನವಿ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಧಾರವಾಡದ ಸರ್ಕಾರಿ ಪ್ರೌಢಶಾಲೆ೦ಯ ' ರಮೇಶ್' ಎಂದು ಭಾವಿಸಿಕೊಂಡು , ಶಾಲೆ೦ಯಲ್ಲಿ ನಡೆ೦ಯುವ ' ಶಾಲಾ ವಾರ್ಷಿಕೋತ್ಸವ ಕಾ೦ರ್ುಕ್ರಮಕ್ಕೆ ಆಗಮಿಸುವಂತೆ ವಿನಂತಿಸಿ ಮಡಕೇರಿ೦ಯ ಪೇಟೆ ಬೀದಿ೦ಯ ನಿವಾಸಿ ' ನಟರಾಜು' ಎಂಬ ಹೆಸರಿನ ತಂದೆಗೆ ಪತ್ರವನ್ನು ಬರೆಯಿರಿ

**ಅಃ) ಪತ್ರ ಬರೆವಣಿಗೆ**

45. ಶಾಲಾಭಿವೃದ್ಧಿ೦ಯಲ್ಲಿ ಜನಪ್ರತಿನಿಧಿಗಳ ಪಾತ್ರ

**ಅಥವಾ**

ನನ್ನ ನೆಚ್ಚಿನ ಪ್ರವಾಸಿತಾಣಗಳು

***********

**ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ**

**ಅವಧಿ: 3 ಗಂಟೆಗಳು** **ಮಾದರಿ ಪ್ರಶ್ನೆಪತ್ರಿಕೆ ಮತ್ತು ಉತ್ತರಗಳು** **ಗರಿಷ್ಠ ಅಂಕ : 100**

**ವಿಷಯ ಸಂಕೇತ :01K**

**ಅ) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.**

**1x6=6**

1. ಧರ್ಮಬುದ್ಧಿ ಮತ್ತು ದುಷ್ಟಬುದ್ಧಿ ಎಂಬುವವರು ವ್ಯಾಪಾರಿಗಳ ಮಕ್ಕಳಾಗಿದ್ದರು – ಈ ವಾಕ್ಯದಲ್ಲಿನ ಅನ್ವರ್ಥನಾಮ ಪದ ;
   ಎ)ಧರ್ಮಬುದ್ಧಿ ಬಿ)ಮತ್ತು ಸಿ) ವ್ಯಾಪಾರಿ ಡಿ) ಮಕ್ಕಳಾಗಿದ್ದರು
   **ಉತ್ತರ : ಸಿ) ವ್ಯಾಪಾರಿ**
2. 'ದೆಸೆಯಿಂದ' ಎಂಬುದು ಈ ವಿಭಕ್ತಿ ಪ್ರತ್ಯ0ಯ
   ಎ) ಪ್ರಥಮಾ ಬಿ) ತೃತೀ0ಯಾ ಸಿ) ಸಪ್ತಮಿ ಡಿ) ಪಂಚಮಿ
   **ಉತ್ತರ: ಡಿ) ಪಂಚಮಿ**
3. ಸಾಕ್ಷಿಮಾಡಿ ಪದವನ್ನು ವಿಗ್ರಹವಾಕ್ಯ ಮಾಡಿದಾಗ :
   ಎ) ಸಾಕ್ಷಿ + ಮಾಡಿ ಬಿ) ಸಾಕ್ಷಿ0ಯನ್ನು + ಮಾಡಿಸಿ) ಸಾಕ್ಷಿಯಿಂದ+ ಮಾಡಿ ಡಿ) ಸಾಕ್ಷಿಗೆ + ಮಾಡಿ
   **ಉತ್ತರ : ಬಿ) ಸಾಕ್ಷಿ0ಯನ್ನು + ಮಾಡಿ**
4. 'ಅಜಮಾಯಿಸಿ' ಪದದ ಮೂಲ ಭಾಷೆ
   ಎ) ಪರ್ಷಿ0ಯನ್ ಬಿ) ಪೋರ್ಚುಗೀಸ್ ಸಿ) ಅರಬ್ಬಿ ಡಿ) ಗ್ರಿಕ್
   **ಉತ್ತರ : ಎ) ಪರ್ಷಿ0ಯನ್**
5. ತದ್ಧಿತಾಂತವ್ಯ0ಯಕ್ಕೆ ಉದಾಹರಣೆ:
   ಎ)ಮಾಲೆಗಾರ್ತಿ ಬಿ) ನೋಟ ಸಿ) ಶಾಲೆ0ಯವರೆಗೆ ಡಿ) ಜಾಣತನ
   **ಉತ್ತರ : ಸಿ) ಶಾಲೆ0ಯವರೆಗೆ**
6. ಕಾರವಾರದಲ್ಲಿ ಮಲೇರಿ0ಯಾ ವ್ಯಾಪಕವಾಗಿ ಹಬ್ಬಿತು ; ಆದ್ದರಿಂದ ವೀರೇಶ್ವರ

**ಆ) ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4x1=4**

7. ಬರೆಯಲಿ : ವಿಧ್ಯರ್ಥಕ : : ಬರೆದಾರು : **ಸಂಭವನಾರ್ಥಕ**
8. ಬೇಧವಿಲ್ಲ : ಆಗಮಸಂಧಿ : : ನಿಮ್ಮಡಿಗಳಲಿ : **ಲೋಪಸಂಧಿ**
9. ಸಾಕು : ಕ್ರಿಯಾರ್ಥಕಾವ್ಯಯ : : ಭಳಿರೆ! : **ಭಾವಸೂಚಕಾವ್ಯಯ**
10. ಅಳವು : ಪರಾಕ್ರಮ : : ಖಳ : **ದುಷ್ಟ**

**ಇ) ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ** **1x7=7**

**11. ಮುದುಕಿಯ ಕಣ್ಣುಗಳು ಕ್ಷಣಕಾಲ ರೋಷದಿಂದ ಏಕೆ ಕೆರಳಿದವು?**
**ಉತ್ತರ:** ತಮ್ಮ ಮನೆಗೆ ಬಂದಿರುವಾತ ತಮ್ಮವನಲ್ಲ, ತಮಗೆ, ತಮ್ಮ ದೇಶಕ್ಕೆ ದ್ರೋಹ ಬಗೆಯುವವನು ಎಂದು ಮುದುಕಿಯ ಕಣ್ಣುಗಳು ಕ್ಷಣಕಾಲ ರೋಷದಿಂದ ಕೆರಳಿದವು.

**12. ಲಂಡನ್ ನಗರದಲ್ಲಿ ಇಂಡಿಯಾ ಆಫೀಸು ಯಾವ ಓಣಿಯಲ್ಲಿದೆ?**
**ಉತ್ತರ:** ಲಂಡನ್ ನಗರದಲ್ಲಿ ಇಂಡಿಯಾ ಆಫೀಸು 'ಚೇರಿಂಗ್ ಕ್ರಾಸ್' ಎಂಬ ಓಣಿಯಲ್ಲಿದೆ.

**13. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು?**
**ಉತ್ತರ:** ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರನ್ನಾಗಿ ನೇಮಿಸಿದರು.

**14. ದೇವನೂರರ ನನ್ನ ದೇವರು ಯಾರೆಂಬುದನ್ನು ಸ್ಪಷ್ಟೀಕರಿಸಿ.**
**ಉತ್ತರ:** ಚಾವಣಿ ಇಲ್ಲದ ಗುಡಿಯಲ್ಲಿ ಕಾರುಣ್ಯ ಸಮತೆಯ ಬುದ್ಧನನ್ನು ಇಟ್ಟರೆ ಅದೇ ನನ್ನ ದೇವರಾಗುತ್ತದೆ ಎಂದು ದೇವನೂರ ಮಹಾದೇವ ಅವರು ನನ್ನ ದೇವರು ಯಾರು ಎಂಬುದನ್ನು ಸ್ಪಷ್ಟಿಕರಿಸುತ್ತಾರೆ.

**15.** **ಕಂಪನಿ ಸರ್ಕಾರದ ದೌರ್ಜನ್ಯವನ್ನು ವಿರೋಧಿಸಿದ ಕಥೆಯನ್ನೊಳಗೊಂಡ ಲಾವಣಿ ಯಾವುದು?**

**ಉತ್ತರ:** ಕಂಪನಿ ಸರ್ಕಾರದ ದೌರ್ಜನ್ಯವನ್ನು ವಿರೋಧಿಸಿದ ಕಥೆಯನ್ನೊಳಗೊಂಡ ಲಾವಣಿ ಹಲಗಲಿ ಬೇಡರ ಲಾವಣಿ.

**16.** **ಆಶ್ವಯುಜದ ಭತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ?**

**ಉತ್ತರ:** ಅಶ್ವಯುಜದ ಭತ್ತದ ಗದ್ದೆಯ ಬಣ್ಣ ಗಿಳಿಯ ಹಸುರಿನಂತಿದೆ.

**17.** **ವಿವೇಕಾನಂದರು ಯಾವುದನ್ನು ಜೀವ ವಿರೋಧವೆಂದು ಭಾವಿಸಿದ್ದರು?**

**ಉತ್ತರ:** ವಿವೇಕಾನಂದರು ಏಕಧರ್ಮ ಶ್ರೇಷ್ಠತೆ ಮತ್ತು ವಿಸ್ತರಣೆಯು ಜೀವವಿರೋಧವೆಂದು ಭಾವಿಸಿದ್ದರು.

**ಈ)** **ಈ ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **10x2=20**

**18.** **ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆಯೇನು?**

**ಉತ್ತರ:** ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆ ಏನೆಂದರೇ ಬ್ರಿಟೀಷ್ ಸಾಮ್ರಾಟರ ರಾಜ್ಯಾಭಿಷೇಕವಾಗುವಾಗ ಅವರೂ ಕೂರುವ ಸಿಂಹಾಸನದ ಮೇಲೆ ಈ ಕಲ್ಲು ಪಾಟಿಯನ್ನು ಹಾಕುತ್ತಾರೆ. ಪಟ್ಟಾಭಿಷೇಕವಾಗುವಾಗ ಮಾತ್ರ ಸಾಮ್ರಾಟರು ಇದರ ಮೇಲೆ ಕೂಡ ಬೇಕು. ಈ ಶಿಲೆಯನ್ನು 3ನೇ ಎಡ್ವರ್ಡನು ಸ್ಕಾಟ್‌ಲೆಂಡಿನ ಅರಸರಿಂದ ಇದನ್ನು ಕಿತ್ತುಕೊಂಡು ಬಂದಂತೆ ಕಾಣುತ್ತದೆ. ಅಂದಿನಿಂದ ಎಲ್ಲ ಸಾಮ್ರಾಟರ ಅಭಿಷೇಕವು ಈ ಕಲ್ಲಿನ ಮೇಲೆಯೇ ಆಗಿದೆ. ಈ ಕಲ್ಲುಪಾಟಿ ಎಂಬ ಶಿಲೆಯನ್ನೊಳಗೊಂಡ ರಾಜರ ಸಿಂಹಾಸನವಿದೆ. ಸ್ಟೋನ್ ಆಫ್ ಸ್ಕೋನ್ ಎಂದು ಇದರ ಹೆಸರು.

**19.** **ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬಂದವು?**

**ಉತ್ತರ:** ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 1900ರಲ್ಲಿ ಶಿವನಸಮುದ್ರದ ಬಳಿ ಕಾವೇರಿ ನದಿ ನೀರಿನಿಂದ ಪ್ರಾರಂಭಿಸಿದ ಶಿವನಸಮುದ್ರ ಜಲವಿದ್ಯುತ್ ಯೋಜನೆ, 1907ರಲ್ಲಿ ವಾಣಿ ವಿಲಾಸ ಸಾಗರ ಅಣೆಕಟ್ಟು (ಮಾರಿ ಕಣಿವೆ) ಮತ್ತು 1911ರಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಕನ್ನಂಬಾಡಿಯಲ್ಲಿ ಕೃಷ್ಣರಾಜ ಸಾಗರ ಆಣೆಕಟ್ಟು ನಿರ್ಮಾಣ ಮುಂತಾದ ವಿದ್ಯುತ್ ಮತ್ತು ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬಂದವು.

**20.** **ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು? ವಿವರಿಸಿ.**

**ಉತ್ತರ:** ವಚನಕಾರರ ದೃಷ್ಟಿಯಲ್ಲಿ ಅರಿವು ಅಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳಿವಳಿಕೆ, ಜ್ಞಾನ ಮಾತ್ರ ಅಲ್ಲ. ಅದು ಕ್ರಿಯೆಯ ಅನುಭವದಿಂದ ಒಡಮೂಡಿ ಬರುವುದು. ಅದು ಕೇಳಿ ತಿಳಿದಿದ್ದಲ್ಲ. ಕ್ರಿಯೆಯಲ್ಲಿ ಮೂಡಿದ ತಿಳುವಳಿಕೆ, ಅದು ತರ್ಕವಲ್ಲ. ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು ಎಂದು ಹೇಳಲಾಗಿದೆ.

**21.** **ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು?**

**ಉತ್ತರ:** ಧರ್ಮಬುದ್ಧಿಗೆ ದುಷ್ಟಬುದ್ಧಿಯು ,ಈ ಹೊನ್ನನ್ನು ಹಂಚಿಕೊಂಡು ಮನೆಯಲ್ಲ ಸ್ವೇಚ್ಛೆಯಿಂದ ಇರುವವರಲ್ಲ. ಮತ್ತೆ ವ್ಯಾಪಾರಕ್ಕಾಗಿ ದೂರದೇಶಕ್ಕೆ ಹೋಗಬೇಕಾಗುತ್ತದೆ. ಆಕಾರಣದಿಂದ ನಿನಗೂ ನನಗೂ ವ್ಯಯಕ್ಕೆ (ಖರ್ಚಿಗೆ) ತಕ್ಕಷ್ಟು ಹೊನ್ನನ್ನು ತೆಗೆದುಕೊಂಡು, ಉಳಿದ ಹೊನ್ನನೆಲ್ಲವನ್ನು ಇಲ್ಲಿಯೇ ಇಡೋಣ' ಎಂದು ಸಹೆಯಿತ್ತನು.

**22.** **ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ?**

**ಉತ್ತರ:** ಶೋಷಣೆಗೊಳಗಾದ ಜನರನ್ನು ಎಲ್ಲರಂತೆ ಸಮಾನವಾಗಿ ಬದುಕುವ ಹೊಸ ಭರವಸೆಗಳನ್ನು ಮೂಡಿಸಬೇಕು. ಭಾಷೆ, ಜಾತಿ, ಮತಧರ್ಮಗಳ ಭೇದಭಾವದಿಂದ ಮನುಜರ ನಡುವೆ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಅವುಗಳನ್ನು ಕೆಡವಬೇಕು. ಮನುಜ ಮನುಜರ ನಡುವೆ ಪ್ರೀತಿ, ಸ್ನೇಹ, ವಿಶ್ವಾಸದ ಸೇತುವೆಯಾಗಬೇಕಿದೆ.

**23.** **ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು?**

**ಉತ್ತರ:** ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರು, ಅತ್ತ ನೋಡಿದರೂ ಹಸುರು, ಇತ್ತ ನೋಡಿದರೂ ಹಸುರು, ಎತ್ತೆತ್ತ ನೋಡಿದರೂ ಹಚ್ಚ ಹಸುರು. ಆಗಸ, ಮುಗಿಲು, ಬಯಲು, ಬೆಟ್ಟ, ಕಣಿವೆ, ಬಿಸಿಲು, ಭತ್ತದ ಗದ್ದೆ, ಅಡಕೆಯ ತೋಟ, ಹೂವಿನ ಕಂಪು, ಗಾಳಿಯ ತಂಪು, ಹಕ್ಕಿಯ

ಧ್ವನಿ, ಇಳೆಯ ಗಾಳಿ, ಕಡಲು ಸರ್ವವು ಹಸುರಿನ ಭಾವ ಕವಿಯ ಮನದಲ್ಲಿ ಮೂಡಿದ್ದರಿಂದ ಒಡಲಿನಲ್ಲಿರುವ ನೆತ್ತರೂ ಹಸುರಾಗಿ ಕವಿಯಾತ್ಮವು ಹಸುರುಗಟ್ಟಲು ಕಾರಣವಾಯಿತು.

24. **ಪುಟ್ಟ ಪೋರಿ ಏಕೆ ಮೂಕವಿಸ್ಮಿತಳಾಗಿದ್ದಾಳೆ?**

**ಉತ್ತರ:** ಹಬ್ಬದ ಸಂಭ್ರಮದಲ್ಲಿ ಒಡೆಯನ ಮನೆಯ ಬಾಗಿಲಲ್ಲಿ ತೂಗಾಡುತ್ತಿರುವ ಮಾವಿನೆಲೆಯ ತೋರಣ, ಮಲ್ಲಿಗೆ ಹೂವಲ್ಲಿ ಬೀರುವ ಮುಗುಳು ನಗೆಯನ್ನು ನೋಡಿ, ಹೊರಗೆ ಹಾಕಿರುವ ಹೊಳೆಯುವ ರಂಗೋಲಿಯಲ್ಲಿ ಥಳಥಳ ಎಂದು ಹೊಳೆಯುವ ಬಾಲ ರವಿಯ ಕಂಡು ಮೂಕವಿಸ್ಮಿತಳಾಗಿದ್ದಾಳೆ.

25. **ಜಲಿಯನ್ ವಾಲಾಬಾಗ್ ನಲ್ಲಿರುವ ಒಕ್ಕಣೆ ಏನು?**

**ಉತ್ತರ:** ಜಲಯನ್ ವಾಲಾಬಾಗ್‌ನಲ್ಲಿರುವ ಒಕ್ಕಣೆ ಹೀಗಿದೆ. ,ಏಪ್ರಿಲ್– 13– 1919 ರಂದು ಬ್ರಿಟೀಷರ ಗುಂಡುಗಳಿಗೆ ಆಹುತಿಯಾದ ಸುಮಾರು 2000 ಮುಗ್ಧ ಹಿಂದೂ, ಸಿಖ್ ಮತ್ತು ಮುಸಲ್ಮಾನರ ಸಮ್ಮಿಳಿತ ರಕ್ತದಿಂದ ಈ ಪ್ರದೇಶ ಪಾವನವಾಗಿದೆ.'

26. **ಶಾಪ ವಿಮೋಚನೆಯ ಫಲವೇನು?**

**ಉತ್ತರ:** ಸುಂದರಿ ಮೃಗವನ್ನು ಮನಸಾರೆ ಪ್ರೀತಿಸಿ ಮದುವೆಯಾಗುತ್ತೇನೆ ಎಂದಿದ್ದರಿಂದ ಮೃಗರೂಪದಲ್ಲಿದ್ದ ರಾಜಕುಮಾರನ ಮೃಗತ್ವ ಕರಗಿತು. ರಾಜಕುಮಾರ ತನ್ನ ಮಂತ್ರದಂಡದಿಂದ ತನ್ನ ಪ್ರಜೆಗಳನ್ನೆಲ್ಲಾ ಕರೆದ. ಅರಮನೆ ಇನ್ನೂ ಮೋಹಕವಾಗಿ ಝಗಮಗಿಸತೊಡಗಿತು. ಸುಂದರಿ ಮತ್ತು ರಾಜಕುಮಾರ ಮದುವೆಯಾಗಿ ನೆಮ್ಮದಿಯಿಂದ ರಾಜ್ಯಭಾರ ನಡೆಸತೊಡಗಿದರು.

27. **ಹೊಲದಲ್ಲಿ ಹುಟ್ಟಿದ ಉತ್ತರಾಣಿ ಹಾಗೂ ಗರಿಕೆ ಕೊಡುವ ತೊಂದರೆಯನ್ನು ಒಗಟುಗಳು ಹೇಗೆ ವಿವರಿಸುತ್ತವೆ?**

**ಉತ್ತರ:** ಉತ್ತರಾಣಿ ಎಂಬ ಗಿಡ ಹೊಲದ ಬದುವಿನಲ್ಲಿ ಹುಟ್ಟುತ್ತದೆ. ಆ ಬದುವಿನಲ್ಲಿ ಓಡಾಡುವವರ ಬಟ್ಟೆಯನ್ನು ಅದರಲ್ಲಿ ಮುಳ್ಳುಗಳು ಹಿಡಿಯುತ್ತವೆ. ಆದ್ದರಿಂದ ಜನಪದರು ಬದಿನಲ್ಲಿ ಹುಟ್ಟೋದು ಬದಿನಲ್ಲಿ ಬೆಳೆಯೋದು ಹೋಗೋರ ಮುಂಜೆರಗ ಹಿಡಿಯೋದು – ಉತ್ತರಾಣಿಗಿಡ ಎಂದು ಹೇಳಿದ್ದಾರೆ. ಅದೇ ರೀತಿ ಗರಕೆಯ ಹುಲ್ಲು ಹೊಲದಲ್ಲಿ ಹುಟ್ಟಿ ಹೊಲದಲ್ಲಿ ಬೆಳೆಯೋದು, ಬೆಳಗಳಿಗೆ ಅಡ್ಡಿ ಮಾಡುತ್ತದೆ. ಅಂತಹ ಹುಲ್ಲು ಉಳುವಾನ (ರೈತನ) ಕಂಡು ನಗುವುದು ಎಂದು ಒಗಟಿನಲ್ಲಿ ವಿವರಿಸಲಾಗಿದೆ.

**ಉ) ಕೆಳಗಿನ ಕವಿ/ ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ / ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.**

**2x3=6**

28. **ದುರ್ಗಸಿಂಹ** : ದುರ್ಗಸಿಂಹ ಕವಿ ಕಿಸುಕಾಡು ನಾಡಿನ ಸಯ್ಯಡಿಯಲ್ಲಿ (ಈಗಿನ ಗದಗ ಜಿಲ್ಲೆಯ ರೋಣ ತಾಲೂಕಿನ ಸವಡಿ)ಕ್ರಿ.ಶ.ಸು.1031 ಜನಿಸಿದನು. ಒಂದನೆಯ ಜಗದೇಕಮಲ್ಲನ ಆಸ್ಥಾನದಲ್ಲಿ ದಂಡನಾಯಕನೂ ಸಂಧಿವಿಗ್ರಹಿಯೂ ಆಗಿದ್ದನು. ಮತಧರ್ಮ ಸಮನ್ವಯಕಾರನಾದ ಈತ ಸಯ್ಯಡಿಯಲ್ಲಿ ಹಲವಾರು ಹರಿಹರಭವನಗಳನ್ನು ನಿರ್ಮಿಸಿದನೆಂದು ತಿಳಿದುಬಂದಿದೆ. ಈತನು ' ಪಂಚತಂತ್ರ ' ಎಂಬ ಕೃತಿಯನ್ನು ರಚಿಸಿದ್ದಾನೆ. ಪಂಚತಂತ್ರದಲ್ಲಿ ಭೇದ, ಪರೀಕ್ಷಾ, ವಿಶ್ವಾಸ, ವಂಚನಾ ಮತ್ತು ಮಿತ್ರಕಾರ್ಯ ಎಂಬ ಐದು ತಂತ್ರಗಳನ್ನಾಧರಿಸಿದ 48 ಉಪಕತೆಗಳಿವೆ.

29. **ಜಿ.ಎಸ್.ಶಿವರುದ್ರಪ್ಪ :** ಜಿ.ಎಸ್.ಶಿವರುದ್ರಪ್ಪ ಎಂದೇ ಪ್ರಸಿದ್ಧರಾಗಿರುವ ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ ನವರು ಕ್ರಿ.ಶ.1926 ರಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಜನಿಸಿದರು.

ಆಧುನಿಕ ಕನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಶಿವರುದ್ರಪ್ಪನವರು ಸಾಮಗಾನ, ಚೆಲುವು–ಒಲವು, ದೇವಶಿಲ್ಪ, ದೀಪದಹೆಜ್ಜೆ, ಅನಾವರಣ. ವಿಮರ್ಶೆಯ ಪೂರ್ವಪಶ್ಚಿಮ, ಮಾಸ್ಕೊದಲ್ಲಿ ಇಪ್ಪತ್ತೆರಡು ದಿನಗಳು, ಸೌಂದರ್ಯ ಸಮೀಕ್ಷೆ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

ಕಾವ್ಯಾರ್ಥಚಿಂತನ ಕೃತಿಗೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿರುವ ಶಿವರುದ್ರಪ್ಪ ಅವರು ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ನಾಡೋಜ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ರಾಷ್ಟ್ರಕವಿ ಅಭಿಧಾನ ಮತ್ತು ಪಂಪಪ್ರಶಸ್ತಿಗೆ ಪಾತ್ರರಾಗಿದ್ದಾರೆ.

**ಊ) ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1x3=3**

ಸ ಭ ರ ನ ಮ ಯ ಲಘು

30. ∪ ∪ –| – ∪∪| – ∪ –| ∪ ∪ ∪| – ∪–| ∪ – –| ∪ –

ಕೆರೆಯುಂ। ಕಟ್ಟಿಸು। ಬಾವಿಯುಂ। ಸವೆಸು। ದೇವಗಾ। ರಮಂ ಮಾ। ಡಿಸ

ಛಂದಸ್ಸು – ಮತ್ತೇಭ ವಿಕ್ರೀಡಿತ ವೃತ್ತದ ಲಕ್ಷಣವನ್ನು ಹೊಂದಿದೆ. ಆದ್ದರಿಂದ ಇದು ಮತ್ತೇಭ ವಿಕ್ರೀಡಿತ ವೃತ್ತ ಛಂದಸ್ಸಾಗಿದೆ.

**ಋ) ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿರಿ. 1x3=3**

31. ಅಚ್ಛೋದ ಸರೋವರವು ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನ ಗನ್ನಡಿಯೋ ಎಂಬಂತೆ ಶೋಭಿಸಿತು.

**ಅಲಂಕಾರ :– ಉತ್ಪ್ರೇಕ್ಷಾಲಂಕಾರ .**

**ಉಪಮೇಯ :–** ಅಚ್ಛೋದ ಸರೋವರ

**ಉಪಮಾನ :–** ರನ್ನಗನ್ನಡಿ

**ಸಮನ್ವಯ :–**ಉಪಮೇಯವಾದ ಅಚ್ಛೋದ ಸರೋವರವನ್ನು ಉಪಮಾನವಾದ ರನ್ನಗನ್ನಡಿ ಎಂಬುದಾಗಿ ಸಂಭಾವಿಸಿ (ಕಲ್ಪಿಸಿ) ವರ್ಣಿಸಲಾಗಿದೆ.

**ಲಕ್ಷಣ :** ಉಪಮೇಯವಾದ ವಸ್ತುವನ್ನು ಅಥವಾ ಸನ್ನಿವೇಶವನ್ನು ಉಪಮಾನವಾದ ವಸ್ತುವನ್ನಾಗಿ ಅಥವಾ ಸನ್ನಿವೇಶವನ್ನಾಗಿ ಕಲ್ಪಿಸುವುದೇ **ಉತ್ಪ್ರೇಕ್ಷಾಲಂಕಾರ.**

**ಎ) ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.**

**1x3=3**

**32. ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ**

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಗಾದೆಗಳು ಜೀವನದನುಭವಕ್ಕೆ ಹಿಡಿದ ಕನ್ನಡಿಯಾಗಿವೆ. **ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ. ಸತ್ಯ ಸದಾ ಜೀವಂತವಾದುದು; ಸುಳ್ಳು ಎಂದು ಸುಖವನ್ನು ಕೊಡಲಾರದು ಎನ್ನುವುದು ಈ ಗಾದೆಯ ಅರ್ಥ. ಸತ್ಯ ಶಾಶ್ವತವಾದದ್ದು ಆ ದೃಷ್ಟಿಯಿಂದಲೆ ನಮ್ಮ ರಾಷ್ಟ್ರೀಯ ಲಾಂಛನದಲ್ಲಿ (ಅಶೋಕ ಚಕ್ರ) **'ಸತ್ಯಮೇವ ಜಯತೇ'**ಎಂಬ ಬರಹ ಕಲ್ಪಾಂತರಸ್ಥಾಯಿಯಾಗಿ ರಾರಾಜಿಸುತ್ತದೆ. **'ಸತ್ಯಕ್ಕೆ ಜಯ'** ಸತ್ಯವಂತರಿಗೆ ಎಂದಿದ್ದರೂ ಜಯವಿದ್ದೇ ಇದೆ ಎಂದು ಎಲ್ಲಾ ಧರ್ಮಗಳಿಂದ ತಿಳಿದು ಬಂದಿದೆ. ಸತ್ಯ ಹರಿಶ್ಚಂದ್ರ ಜೀವನವೆಲ್ಲ ಸತ್ಯಕ್ಕಾಗಿ ಹೋರಾಡಿ ಶಾಶ್ವತವಾದ ಕೀರ್ತಿಯನ್ನು ಪಡೆದನು. ಗಾಂಧೀಜಿ, ಸ್ವಾಮಿ ವಿವೇಕಾನಂದ ಮೊದಲಾದ ಮಹಾತ್ಮರು ಸತ್ಯ ಜೀವನವನ್ನು ನಡೆಸಿದರು. ಸತ್ಯವನ್ನೆ ನುಡಿಯಿರಿ, ಪ್ರಿಯವಾದದ್ದನ್ನೆ ಹೇಳಿರಿ ಎಂಬ ನೀತಿವಾಕ್ಯವು ಸತ್ಯ ನಿತ್ಯವೆಂಬುದನ್ನು ಸಾರುತ್ತದೆ. ಸುಳ್ಳಿಗೆ ಸುಖವಿಲ್ಲ ಸುಳ್ಳಿನ ಒಡನಾಟ ಕೆಸರೊಳಗೆ ಮುಳ್ಳು ತುಳಿದಂತೆ. ಸುಳ್ಳು ಹೇಳಿ ಆ ಸುಳ್ಳು ಬಯಲಾದಾಗ ಮನುಷ್ಯ ತನ್ನ ಗೌರವ ಅಂತಸ್ತು ನಂಬಿಕೆ ಕಳೆದು ಕೊಳ್ಳುವುದರ ಜೊತೆಗೆ ಮಾನಸಿಕವಾಗಿ ನೆಮ್ಮದಿಯನ್ನು ಹಾಳು ಮಾಡಿಕೊಳ್ಳಬೇಕಾಗುತ್ತದೆ. ಸುಳ್ಳು ಒಂದು ಬಲೆ ಇದ್ದಹಾಗೆ ಅದರಲ್ಲಿ ಸಿಕ್ಕಿಬಿದ್ದರೆ ಹೊರಬರುವುದು ಕಷ್ಟ. ಆದುದರಿಂದ ಸುಳ್ಳಿನ ದಾಸರಾಗಿ ಜೀವನವನ್ನು ಹಾಳುಮಾಡಿಕೊಳ್ಳುವ ಬದಲು ಸತ್ಯವೆಂಬ ಬೆಳಕಿನ ಹಾದಿಯಲ್ಲಿ ನಡೆದು ಜೀವನ ಸಾರ್ಥಕಗೊಳಿಸಿಕೊಳ್ಳ ಬೇಕು. ಸತ್ಯವೇ ಬೆಳಕು, ಸುಳ್ಳೇ ಕತ್ತಲು, ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ ಎಂಬ ಮಾತನ್ನು ಎಂದಿಗೂ ಯಾರು ಮರೆಯಬಾರದು.

**ಅಥವಾ**

**ಆರಮನೆಗಿಂತ ನೆರಮನೆ ಲೇಸು.**

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಗಾದೆಗಳು ಜೀವನದನುಭವಕ್ಕೆ ಹಿಡಿದ ಕನ್ನಡಿಯಾಗಿವೆ. ಆದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ. **ಅರಮನೆಗಿಂತ ನೆರಮನೆ ಲೇಸು** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ. ಇಲ್ಲಿ ಅರಮನೆ ಎಂದಿರುವುದು ಹಣ ಅಂತಸ್ತು, ಅಧಿಕಾರ ಎಂದು ಮೆರೆದಾಡುವ ಶ್ರೀಮಂತಜನರ ಮನೆ ಎಂದರ್ಥ. ಇಂತಹ ಶ್ರೀಮಂತರ ಮನೆಯವರಿಗೆ ಬಡವರ ಕಷ್ಟ ಅರ್ಥವಾಗುವುದಿಲ್ಲ. ಬಡವರನ್ನು ಇವರು ತಮ್ಮ ನೆರೆಮನೆಯವರಾಗಿ ನೋಡಲು ಇಷ್ಟಪಡುವುದಿಲ್ಲ. ಬಡವರಿಗೆ ಕಷ್ಟ, ಚಿಂತೆ, ನೋವುಗಳ ಅನುಭವವಿರುವುದರಿಂದ ಕಷ್ಟದಲ್ಲಿರುವ ನೆರೆಮನೆಯವರ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತಾರೆ. ಆದ್ದರಿಂದ ಸರ್ವಜ್ಞ ಕವಿ "ಹಂಗಿನ ಅರಮನೆಗಿಂತ ವಿಂಗಡದ ಗುಡಿ ಲೇಸು" ಎಂದಿದ್ದಾನೆ. ಶ್ರೀಮಂತರು ಹಂಗಿಸಿ ಬಡವರನ್ನು ತಮ್ಮ ದಾಸ್ಯದಲ್ಲಿರಿಸಿಕೊಳ್ಳುತ್ತಾರೆ. ಅವರ ಮೇಲೆ ದಬ್ಬಾಳಿಕೆ

ಮಾಡುತ್ತಾರೆ. ಆದರೆ ನೆರೆಮನೆಯು ಸ್ನೇಹ ಸೌಹಾರ್ದದ ಸಂಕೇತವಾಗಿದೆ. "ಸಿರಿವಂತರಲ್ಲಿ ನೋಟ– ಬಡವರಲ್ಲಿ ಊಟ" ಎನ್ನುವ ಮಾತು ಇದೆ ಅರ್ಥವನ್ನು ನೀಡುತ್ತದೆ.

**ಏ) ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6x3=18**

**33. 'ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ! '**

**ಆಯ್ಕೆ:–** ಈ ವಾಕ್ಯವನ್ನು 'ಶ್ರೀಮತಿ **ಸಾ ರಾ ಅಬೂಬಕ್ಕರ್'** ಅವರ 'ಚಪ್ಪಲಿಗಳು' ಕಥಾಸಂಕಲನದಿಂದ ಆಯ್ದ **'ಯುದ್ಧ'** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–** ಈ ಮಾತನ್ನು ಮುದುಕಿಯು ತನ್ನ ದೇಶದ ಸೈನಿಕರಿಗೆ ಹೇಳಿದಳು. ರಾಹಿಲನು ಮುದುಕಿಯ ಮನೆಯಲ್ಲಿ ರಕ್ಷಣೆ ಪಡೆಯುತ್ತಿದ್ದ ಸಂದರ್ಭದಲ್ಲಿ ಸೈನಿಕ ಉಡುಪಿನಲ್ಲಿದ್ದ ನಾಲ್ಕೈದು ಜನರು ಮುದುಕಿಯ ಮನೆಗೆ ಬಂದು ,ಈ ಕಡೆ ಯಾರಾದರೂ ಗಾಯಗೊಂಡ ಸೈನಿಕರು ಬಂದಿದ್ದಾರೆಯೇ?' ಎಂದು ಕೇಳುತ್ತಾ ಒಳನುಗ್ಗಿದರು. ಮುದುಕಿ ಇಲ್ಲವಲ್ಲಾ?' ಎಂದು ನುಡಿದಳು. ,ಆದರೂ ಈ ಮನೆಯಲ್ಲೊಮ್ಮೆ ನೋಡಿ ಬಿಡಿ.'ಎಂದು ಒಬ್ಬ ಅಪ್ಪಣೆ ಕೊಟ್ಟನು. ಉಳಿದವರು ಒಳಹೊಕ್ಕು ಶೋಧಿಸುವಾಗ ಮುದುಕಿ ಅಳುತ್ತಾ, ಹೂಂ...ನೋಡಿ; ,ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ!' ಎಂದು ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:–** ಯುದ್ಧ ತನ್ನ ಮೊಮ್ಮಗನನ್ನು ಬಲಿ ತೆಗೆದುಕೊಂಡಿತು ಎಂಬ ಮುದುಕಿಯ ದುಃಖದ ಭಾವನೆ ಈ ವಾಕ್ಯದಲ್ಲಿ ಮಡುಗಟ್ಟಿದೆ.

**34. ,ಆವುದೀ ಮರುಳು? ನಮ್ಮೆಡೆಗೆ ಬರುತಿಹುದು.'**

**ಆಯ್ಕೆ:–** ಈ ವಾಕ್ಯವನ್ನು **' ಪು. ತಿ. ನರಸಿಂಹಾಚಾರ್ '** ಅವರು ರಚಿಸಿರುವ **'ಶಬರಿ'** ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಪಾಠದಿಂದ ಆರಿಸಲಾಗಿದೆ.

**ಸಂದರ್ಭ:–** ಈ ವಾಕ್ಯವನ್ನು ರಾಮನು ಲಕ್ಷ್ಮಣನಿಗೆ ಹೇಳುತ್ತಾನೆ. ಸೀತಾಪಹರಣದನಂತರ ಶೋಕತಪ್ತರಾದ ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತ ಬರುವಾಗ ತಪಸ್ವಿ ದನು ಮಹರ್ಷಿಗಳು ಸಿಗುತ್ತಾರೆ. ಅವರು ಶಬರಿಯ ವೃತ್ತಾಂತವನ್ನು ಹೇಳಿ ಶಬರಿ ಇರುವ ಮತಂಗಾಶ್ರಮಕ್ಕೆ ಹೋಗಲು ಸೂಚಿಸುತ್ತಾರೆ. ಅವರ ಸೂಚನೆಯಂತೆ ಮತಂಗಾಶ್ರಮವನ್ನು ಪ್ರವೇಶಿಸುವ ಸಂದರ್ಭದಲ್ಲಿ ಎದುರಿಗೆ ಬರುತ್ತಿದ್ದ ವೃದ್ಧೆಯನ್ನು (ಶಬರಿಯನ್ನು) ಕಂಡ ರಾಮನು ಅಗೋ ನೋಡು ಲಕ್ಷ್ಮಣ ,ಆವುದೀ ಮರುಳು? ನಮ್ಮೆಡೆಗೆ ಬರುತಿಹುದು' ಇದರ ಬಯಕೆ ಏನೆಂದು ತಿಳಿಯೋಣ ಎಂದು ಲಕ್ಷ್ಮಣನಿಗೆ ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:–** ಶ್ರೀರಾಮನ ದರ್ಶನಕ್ಕಾಗಿ ಕಾದು, ಕಾತರಿಸಿ, ಹುಚ್ಚಿಯಂತೆ ಆಗಿದ್ದ ವೃದ್ಧೆ ಶಬರಿಯನ್ನು ಕಂಡು ರಾಮಲಕ್ಷ್ಮಣರು ಭಯಗೊಂಡದ್ದನ್ನು ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ವರ್ಣಿಸಲಾಗಿದೆ.

**35. ,ಅರ್ಧಾಹಾರಮಂ ನುಂಗುಗುಮರ್ಧಾಹಾರಮನುಗುಟ್ಟುಗುಮದಂ ನೋಡಿ'**

**ಆಯ್ಕೆ:** ಈ ವಾಕ್ಯವನ್ನು **'ಶಿವಕೋಟ್ಯಾಚಾರ್ಯರು'** ಬರೆದಿರುವ **'ವಡ್ಡಾರಾಧನೆ'** ಕೃತಿಯಿಂದ ಆರಿಸಲಾದ **'ಸುಕುಮಾರಸ್ವಾಮಿ ಕಥೆ'** ಎಂಬ ಪಾಠ ದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ವೃಷಭಾಂಕನು ಸುಕುಮಾರನೊಂದಿಗೆ ಕುಳಿತುಕೊಂಡು ನಾನಾ ಪ್ರಕಾರದ ಸಿಹಿಯಾದ ತಿನಿಸು ಗಳನ್ನು ಊಟಮಾಡುತ್ತಿದ್ದ ಸಂದರ್ಭದಲ್ಲಿ ಸುಕುಮಾರಸ್ವಾಮಿ **,ಅರ್ಧಾಹಾರಮಂ ನುಂಗುಗುಮರ್ಧಾಹಾರ ಮನುಗುಟ್ಟುಗುಮದಂ ನೋಡಿ'** (ಅರ್ಧ ಆಹಾರವನ್ನು ನುಂಗುತ್ತಿರಲು ಅರ್ಧ ಆಹಾರವನ್ನು ಉಗುಳುವುದನ್ನು ನೋಡಿ) ಇದು ಸಹ ಒಂದು ರೋಗ, ಊಟದ ಮೇಲೆ ರುಚಿಯಿಲ್ಲದುದು" ಎಂದು ರಾಜನು ಭಾವಿಸಿಕೊಂಡ ಸಂದರ್ಭವಾಗಿದೆ.

**36. ,ಮಂಗಳ ಲೋಕದ ಅಂಗಳಕೇರಿ'**

**ಆಯ್ಕೆ:–** ಈ ವಾಕ್ಯವನ್ನು **ದ.ರಾ.ಬೇಂದ್ರೆ** ವಿರಚಿತ **'ಗರಿ'** ಕವನ ಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:–** ಕಾಲದ ವೈಜ್ಞಾನಿಕ ಗತಿಯನ್ನು ಹೇಳುವ ಸಂದರ್ಭದಲ್ಲಿ ದ.ರಾ.ಬೇಂದ್ರೆ ಅವರು ಈ ವಾಕ್ಯವನ್ನು ಹೇಳುತ್ತಾರೆ. ಕಾಲಪಕ್ಷಿಯು ಬೆಳ್ಳಿಚುಕ್ಕಿ (ಶುಕ್ರಗ್ರಹ) ಎಂಬ ಹಳ್ಳಿಯ ಮೇರೆಯನ್ನು ದಾಟಿ, ಚಂದ್ರಲೋಕಕ್ಕೆ

ಹಾರಿ ನೀರಿನ್ನು ಹೀರಿ ಹಾಗೆಯೇ ಮುಂದೆ ಹಾರಾಡುತ್ತ ಹಾರಾಡುತ್ತ ಮಂಗಳ ಲೋಕ(ಗ್ರಹ)ದ ಅಂಗಳಕ್ಕೆ ಏರಿ ಹೋಗುತ್ತಿದೆ ಎಂದು ವಿವರಿಸುವ ಸಂದರ್ಭದಲ್ಲಿ ಈ ವಾಕ್ಯ ಬಂದಿದೆ.

**ಸ್ವಾರಸ್ಯ :–** ವೈಜ್ಞಾನಿಕವಾಗಿ ಭಾರತೀಯರು ಶುಕ್ರ, ಚಂದ್ರ, ಮಂಗಳನ ಅಂಗಳಕ್ಕೆ ಹೋಗಿ ಸಂಶೋಧನೆ ಮಾಡುವ ಗುರಿಯನ್ನು ಪರೋಕ್ಷವಾಗಿ ಅಭಿವ್ಯಕ್ತಪಡಿಸಿದ್ದಾರೆ.

**37.** **ಜೀವ ಸತ್ತು ಹೋಗುವುದು ಗೊತ್ತ'**

**ಆಯ್ಕೆ :–**ಈ ವಾಕ್ಯವನ್ನು **ಡಾ. ಬಿ. ಎಸ್. ಗದ್ದಗಿಮಠ** ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದು ನೀಡಿರುವ **'ಹಲಗಲಿ ಬೇಡರು'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:–** ಇದು ಹಲಗಲಿ ಬೇಡರು ಹೇಳಿದ ಮಾತಾಗಿದೆ. ಕುಂಪಣಿ ಸರಕಾರ ನಿಶ್ಶಸ್ತ್ರೀಕರಣ ಕಾಯ್ದೆಯಡಿ ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ ಎಂಬ ಆದೇಶ ಹೊರಡಿಸಿದಾಗ, ಹಲಗಲಿಯ ಪ್ರಮುಖರಾದ ಪೂಜಾರಿ ಹನುಮಾ, ಬ್ಯಾಡರ ಬಾಲ, ಜಡಗ, ರಾಮ ಎಂಬ ನಾಲ್ಕು ಮಂದಿ ಕೂಡಿಕೊಂಡು ನಾವು ನಮ್ಮ ಬಳಿಯಿರುವ ಆಯಧಗಳನ್ನು ಸತಾಯಿಸಿದರೂ ಕೊಡಬಾರದು. ಆಯುಧಗಳು ಹೋದರೆ **ನಮ್ಮ ಜೀವ ಸತ್ತು ಹೋಗುತ್ತದೆ** ಎಂದು ಪಿತೂರಿ ಮಾಡಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:–** ಆಯುಧಗಳು ತಮ್ಮ ಪ್ರಾಣಕ್ಕಿಂತ ಮಿಗಿಲಾದವು, ಅವು ಹೋದರೆ ನಮ್ಮ ಪ್ರಾಣಕ್ಕೆ ಸಂಚಕಾರ ಎಂಬ ಭಾವನೆ ಹಲಗಲಿಯ ಬೇಡರ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಂತೆ ಇದೆ.

**38.** **'ನಿನ್ನಪದೆಸೆಯ ಬಯಸುವನಲ್ಲ'**

**ಆಯ್ಕೆ:–** ಈ ವಾಕ್ಯವನ್ನು **'ಕುಮಾರವ್ಯಾಸ'** ವಿರಚಿತ **'ಕರ್ಣಾಟ ಭಾರತ ಕಥಾಮಂಜರಿ'** ಎಂಬ ಕೃತಿಯಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು'** ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–** ಈ ವಾಕ್ಯವನ್ನು ಕೃಷ್ಣನು ಕರ್ಣನಿಗೆ ಹೇಳಿದನು. ಕರ್ಣನು ತನ್ನ ಜನ್ಮರಹಸ್ಯವನ್ನು ತಿಳಿದು ಮನಸ್ಸು ದ್ವಂದ್ವದಲ್ಲಿ ಸಿಲುಕಿ ಚಿಂತಾಕ್ರಾಂತನಾಗಿ ಮೌನವಾದಾಗ ಕೃಷ್ಣನು ,ಏನು ಹೇಳು ಕರ್ಣ ಮನದಲ್ಲಿರುವ ತಲ್ಲಣ ಯಾವುದು? ಕುಂತಿಯ ಮಕ್ಕಳಿಂದ ಸೇವೆ ಮಾಡಿಸಿಕೊಳ್ಳವುದು ಇಷ್ಟವಿಲ್ಲವೇ? ಎನ್ನಾಣೆಗೂ ನಿನಗೆ ಯಾವುದೇ ನಷ್ಟವಿಲ್ಲ. ಮಾತನಾಡು ಮೌನವೇತಕೆ, ಭ್ರಮೆಗೊಳಗಾಗುವುದು ಬೇಡ. ನಾನು ನಿನಗೆ ಕೇಡನ್ನು ಬಯಸುವುದಿಲ್ಲ ಎಂದು ಕೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:–** ,ಕರ್ಣ ನಾನು ನಿನಗೆ ಕೇಡಾಗಲೆಂದು ಬಯಸುವುದ್ಲಿ ನಿನಗೆ ಒಳ್ಳೆಯದನ್ನೆ ಬಯಸುವೆ' ಎಂದು ಕೃಷ್ಣ ಹೇಳುವ ಹಿತಚಿಂತನೆಯ ಮಾತು ಸ್ವಾರಸ್ಯಪೂರ್ಣವಾಗಿದೆ.

**ಐ)** **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1x4=4**

ನೆಲಕಿಜಿವೆನೆಂದು ಬಗೆದಿರೆ
ಚಲಕಿಜೆವೆಂ ಪಾಂಡುಸುತರೊಳೀನೆಲನಿದು ಪಾ
ಟ್ಟಿಲನೆನಗೆ ದಿನಪಸುತನಂ
ಪುದುವಾಟ್ದಿಪೆನೇ
ಕೊಲಿಸಿದ ನೆಲನೊಡನೆ ಮತ್ತೆ

ಅಥವಾ
ಪುಟ್ಟಿದ ನೂರ್ವರುಮೆನ್ನೊಡ
ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ
ಪುಟ್ಟಿ ಪೊದಟ್ದುದು ಸತ್ತರ್
ಪುಟ್ಟರೆ ಪಾಂಡವರೊಳಿಜಿದು ಛಲಮನೆ
ಮೆಜಿವೆಂ

ಒ) **ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ** **1x4=4**

ಉರ್ವಿ೦ಯೊಳ್ ಕೌಸಲ್ಯೆ ಪಡೆದ
ಕುವರಂ ರಾಮ ನೊರ್ವನೇ
ವೀರನಾತನ ೦ಯಜ್ಞತುರಗಮಿದು
ನಿರ್ವಹಿಸಲಾರ್ಪರಾರಾದೊಡಂ
ತಡೆ೦ಯಲೆಂದಿರ್ದ ಲೇಖನವನೋದಿ
ಗರ್ವಮಂ ಬಿಡಿಸದಿರ್ದೊಡೆ ತನ್ನ
ಮಾತೆ೦ಯಂ ಸರ್ವಜನಮುಂ
ಬಂಜೆ೦ಯನ್ನದಿರ್ದಪುದೆ ತನ
ಗುರ್ವತೋಳ್ಗಳಿವೇತಕೆಂದು ಸಲೆ
ವಾಸಿ೦ಯಂ ತೊಟ್ಟು ಲವನುರಿದೆದ್ದನು

**ಮೌಲ್ಯಧಾರಿತ ಸಾರಾಂಶ : ,ಹುಟ್ಟುಗುಣ ಗಟ್ಟಹತ್ತಿದರೂ ಹೋಗದು'** ಎಂಬುದು ನಾಣ್ಣುಡಿ. ಪ್ರತಿಯೊಂದು ಜೀವಿಯೂ ಹುಟ್ಟಿನಿಂದಲೇ ಕೆಲವೊಂದು ಗುಣಗಳನ್ನು ಪಡೆದಿರುತ್ತದೆ. ಇದಕ್ಕೆ ಅದರ ವಂಶವಾಹಿನಿ ಕಾರಣವಾಗಿರುತ್ತದೆ. ಕ್ಷತ್ರಿಯ ಕುಮಾರನಾದ ಲವ ಹುಟ್ಟಿದ್ದು ಋಷ್ಯಾಶ್ರಮದಲ್ಲಿ, ಬೆಳೆದದ್ದು ಋಷಿಕುಮಾರರ ಜೊತೆಗೆ. ಆದರೂ ಅವನ ದೇಹದಲ್ಲಿ ಹರಿಯುತ್ತಿರುವುದು ಕ್ಷತ್ರಿಯ ಗುಣವುಳ್ಳರಕ್ತ. ಹೀಗಾಗಿ ಆಶ್ರಮಕ್ಕೆ ಬಂದ ಕುದುರೆಯ ಹಣೆಯಲ್ಲಿದ್ದ ಲೇಖನದ ಒಕ್ಕಣೆ ಓದಿ ಕ್ಷತ್ರಿಯ ಸಹಜಗುಣ ಅವನಲ್ಲಿ ಉದ್ದೀಪನಗೊಂಡ ಸನ್ನಿವೇಶವನ್ನು ಇಲ್ಲಿ ಕಾಣಬಹುದು.
ಭೂಮಂಡಲದಲ್ಲಿ ಕೌಸಲ್ಯ ಪಡೆದ ಕುಮಾರ ಶ್ರೀರಾಮನೊಬ್ಬನೇ ವೀರನು, ಆತನ ಯಜ್ಞದ ಕುದುರೆ ಇದು. ನಿರ್ವಹಿಸಲು ಸಮರ್ಥರಾದವರು ಯಾರಾದರೂ ಇದ್ದರೆ ತಡೆಯಲಿ ಎಂದು ಇದ್ದ ಲೇಖನವನ್ನು ಓದಿ, ಇವನ ಅಹಂಕಾರವನ್ನು ಬಿಡಿಸದೆ ಇದ್ದರೆ ನನ್ನ ತಾಯಿಯನ್ನು ಎಲ್ಲಾ ಜನರೂ ಬಂಜೆ ಎನ್ನದೆ ಇರುವರೇ, ತನಗೆ ಇರುವ ಈ ತೋಳುಗಳು ಏತಕ್ಕೆ ಬೇಕು ಎಂದು ಪ್ರತಿಜ್ಞೆಯನ್ನು ಕೈಗೊಂಡು ಲವನು ಉರಿದೆದ್ದನು(ಆಕ್ರೋಶಗೊಂಡನು). ಲವನು ತನ್ನ ತಾಯಿ ವೀರಜನನಿ ಎಂಬ ಮಾತೃಪ್ರೇಮವನ್ನು ಮತ್ತು ತನ್ನ ವೀರತ್ವವನ್ನು ಪ್ರದರ್ಶಿಸುವುದು ಈ ಪದ್ಯದಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

ಓ) **ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2x4=8**

**41. ಮೂರ್ತಿರಾಯರ ದೃಷ್ಟಿಯಲ್ಲಿ ಹುಲಿಯು ಬೇಟೆಯಾಡುವ ಬಗೆಯನ್ನು ವಿವರಿಸಿ.**

**ಉತ್ತರ:** ಹುಲಿ ಎಂದರೆ ಕ್ರೂರಪ್ರಾಣಿ, ಕೊಂದು ತಿನ್ನುವುದೊಂದೆ ಅದರ ಸ್ವಭಾವ ಎಂದು ಭಾವಿಸುವವರು ಸಾಕಷ್ಟು ಜನರಿದ್ದಾರೆ. ಆದರೆ ಹುಲಿ ಆಹಾರಕ್ಕಾಗಿ ಬೇಟೆಯಾಡಿ ಪ್ರಾಣಿಗಳನ್ನು ಕೊಂದು ತಿನ್ನುವುದೇನೋ ಉಂಟು. ಆದರೆ ನಿಷ್ಪಕ್ಷಪಾತವಾದ ದೃಷ್ಟಿಯಿಂದ ನೋಡಿದರೆ ಅದರಲ್ಲಿ ತಪ್ಪೇನು ಇಲ್ಲ. ಯಾಕೆಂದರೆ ಅವು ಮೂಲತಃ ಮಾಂಸಹಾರಿಗಳು. ಶಾಖಾಹಾರವನ್ನು ತಿಂದು ಬದುಕಬಹುದಾದ ಮಾನವನೇ ಮಾಂಸವನ್ನು ತಿನ್ನಬಹುದಾದರೆ ಮಾಂಸಹಾರಿಯಾದ ಹುಲಿಯಲ್ಲಿ ಅದೊಂದು ದೊಡ್ಡ ಅಪರಾಧವೇನಲ್ಲ. ಅದು ಆಹಾರಕ್ಕಾಗಿ ಪ್ರಾಣಿಗಳನ್ನು ಕೊಲ್ಲುವುದರಲ್ಲೇನೂ ತಪ್ಪಿಲ್ಲ. ಆದರೆ ಹಾಗೆ ಕೊಲ್ಲುವಾಗ ಯಾವುದಾದ ರೊಂದು ಧರ್ಮವನ್ನು ಅನುಸರಿಸಿ ಕೊಲ್ಲುತ್ತದೆಯೇ ಅಥವಾ ಧರ್ಮಾಧರ್ಮಗಳ ಲೆಕ್ಕವನ್ನೇ ಇಡದೆ ಸ್ವಚ್ಛಂದದಿಂದ ವರ್ತಿಸುತ್ತದೆಯೇ ಎಂಬುದೇ ಇಲ್ಲಿ ಮುಖ್ಯ ಪ್ರಶ್ನೆ. ಹುಲಿಗೆ ಧರ್ಮವೇನು ಬಂತು ಎನ್ನಬಹುದು. ಇತರ ದೇಶಗಳಲ್ಲಿರುವ ಹುಲಿಗಳು ವಿಷಯ ಹೇಗೋ ನನಗೆ ತಿಳಿಯದು ಆದರೆ ಭರತಖಂಡದ ಹುಲಿಗಳ ಧರ್ಮಶ್ರದ್ಧೆಯನ್ನು ಅನುಸರಿಸಿ ಬೇಟೆಯಾಡುತ್ತವೆ. ಯಾವ ನಾಡಿನಲ್ಲಿ ಶ್ರೀರಾಮನಂಥ ದೊರೆಗಳು ಆಳಿದರೋ, ಮಹರ್ಷಿ ವೇದವ್ಯಾಸರಿಂದ ರಚಿತವಾದ ಭಗದ್ಗೀತೆಯಂಥ ಗ್ರಂಥ ಉದ್ಭವಿಸಿತೋ, ಇಂತಹ ಈ ಭರತ ಭೂಮಿಯಲ್ಲಿ ಜನಿಸಿದ ಹುಲಿಗಳು ಅಧರ್ಮದಿಂದ ನಡೆದುಕೊಳ್ಳುವುದಿಲ್ಲ. ಯಾರನ್ನೇ ಆಗಲಿ, ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಶತ್ರುವನ್ನಾದರೂ ಸರಿಯೇ, ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ.

ಆದ್ದರಿಂದಲೇ ಹುಲಿಯು ಶಾನುಭೋಗರನ್ನು ಹಿಂದಿನಿಂದ ಹಾರಿ ಕೊಲ್ಲಲಿಲ್ಲ. ಎಂದು ಮೂರ್ತಿರಾಯರು ಹುಲಿ ಬೇಟೆಯಾಡುವ ಬಗೆಯನ್ನು ವಿವರಿಸಿದ್ದಾರೆ.

**ಅಥವಾ**

**ಶಾನುಭೋಗರನ್ನು ರಕ್ಷಿಸಿದುದು ಖಿರ್ದಿ ಪುಸ್ತಕವೇ? ಹುಲಿಯ ಧರ್ಮವೇ? ಸಮರ್ಥನೆಯೊಂದಿಗೆ ವಿವರಿಸಿ.**

**ಉತ್ತರ:** ಹುಲಿಯ ಗಮನವನ್ನು ಬೇರೆಡೆಗೆ ಸೆಳೆದ, ಅರೆ ನಿಮಿಷದ ಅವಕಾಶವನ್ನು ಒದಗಿಸಿಕೊಟ್ಟು ನನ್ನ ಪ್ರಾಣವನ್ನು ರಕ್ಷಿಸಿದ್ದು ಖಿರ್ದಿಪುಸ್ತವೆಂದು ತಿಳಿದು ಅದಕ್ಕೆ ಅನಂತವಾತ್ಸಲ್ಯದಿಂದ, ಕೃತಜ್ಞತೆಯನ್ನು ಸಲ್ಲಿಸಿದ ಶಾನುಭೋಗರ ಮನಸ್ಸನ್ನು ಗಮನಿಸಿದರೆ ಖಿರ್ದಿಪುಸ್ತಕವೇ ನನ್ನನ್ನು ರಕ್ಷಿಸಿತು ಎಂದು ತಿಳಿದಿದ್ದಾರೆ. ಆದರೆ ನಿಜವಾಗಿ ನೋಡಿದರೆ ಶಾನುಭೋಗರು ಉಳಿದದ್ದು ಖಿರ್ದಿ ಪುಸ್ತಕದಿಂದಲ್ಲ, ಹುಲಿಯ ಧರ್ಮಶ್ರದ್ಧೆಯಿಂದ ಎಂದು ಹೇಳಬಹುದು. ಏಕೆಂದರೆ ಅವರ ದುಂಡುದುಂಡಾದ ಶರೀರವನ್ನು ನೋಡಿದ ಹುಲಿ ಅವರು ಬೆನ್ನು ತಿರುಗಿಸಿ ನಡೆಯುತ್ತಿದ್ದರೂ ಮೇಲೆ ಬಿದ್ದು ಕೊಲ್ಲಬಹುದಾಗಿತ್ತು. ಶಾನುಭೋಗರು ಎಚ್ಚರ ತಪ್ಪಿ ಕೆಳಗೆ ಬಿದ್ದಾಗ ಅವರನ್ನು ಎಳೆದುಕೊಂಡು ಹೋಗಿ ತಿನ್ನಬಹುದಿತ್ತು. ಆದರೆ ಅದು ಹಾಗೆ ಮಾಡಲಿಲ್ಲ. ಏಕೆಂದರೆ ಭರತಖಂಡದ ಹುಲಿಗಳು ಶತ್ರುವನ್ನಾದರೂ ಸರಿ ಬೆನ್ನ ಹಿಂದಿನಿಂದ ಹಾರಿ ಕೊಲ್ಲುವುದು ಧರ್ಮವಲ್ಲ. ಶಾನುಭೋಗರು ಬೆನ್ನ ಮೇಲೆ ಮಾಡಿ ಬಿದ್ದಿದ್ದರಿಂದ ಹುಲಿಯು ಅವರನ್ನು ತಿನ್ನದೆ ಬಿಟ್ಟಿತು. ಅದು ಕೊನೆಯವರೆಗೂ ತನ್ನ ಧರ್ಮಶ್ರದ್ಧೆಯನ್ನು ಅನುಸರಿಸಿತು.ಆದ್ದರಿಂದ ಶಾನುಭೊಗರನ್ನು ರಕ್ಷಿಸಿದ್ದು ಹುಲಿಯ ಧರ್ಮವೇ ಎಂದು ಸಮರ್ಥವಾಗಿ ಹೇಳಬಹುದು.

**42. ದ್ರುಪದನಿಗೂ ದ್ರೋಣನಿಗೂ ನಡೆದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ?**

**ಉತ್ತರ:** ತನ್ನ ಒಡನಾಡಿಯೂ ಗೆಳೆಯನೂ ಆದ ದ್ರುಪದನು ಛತ್ರಾವತಿಯಲ್ಲಿ ರಾಜ್ಯಭಾರ ಮಾಡುತ್ತಿದ್ದಾನೆ ಎಂದು ಕೇಳಿ, ದ್ರೋಣನು ಆ ಪಟ್ಟಣಕ್ಕೆ ಬಂದು ದ್ರುಪದನ ಅರಮನೆಯ ಬಾಗಿಲಿನಲ್ಲಿ ನಿಂತು, ದ್ವಾರಪಾಲಕನನ್ನು ಕರೆದು, ನಿಮ್ಮ ಗೆಳೆಯನಾದ ದ್ರೋಣ ಎಂಬ ಬ್ರಾಹ್ಮನು ಬಂದಿದ್ದಾನೆ ಎಂದು ನಿಮ್ಮ ರಾಜನಿಗೆ ತಿಳಿಯಪಡಿಸು`ಎಂದು ಹೇಳು ಆ ದ್ವಾರಪಾಲಕನು ಆ ರೀತಿಯಲ್ಲಿಯೇ ಬಂದು ರಾಜನಿಗೆ ತಿಳಿಸಿದನು. ಅವನು ನನಗೆ ಹೇಗೆ ಗೆಳೆಯನು? ಅಂತಹವನನ್ನು ನಾನು ತಿಳಿಯೆನು. ಅವನನ್ನು ಹೊರಗೆ ನೂಕು` ಎಂದು ಸಭಾಮಧ್ಯದಲ್ಲ ಕೆಟ್ಟದಾಗಿ ಮಾತನಾಡಿದನು. ಆಗ ದ್ರೋಣನು ಒತ್ತಂಬರದಿಂದ ಅರಮನೆ ಪ್ರವೇಶಿಸಿ ದ್ರುಪದನನ್ನು ಕುರಿತು, ಅಣ್ಣಾ, ನೀವೂ ನಾವೂ ಜೊತೆಯಲ್ಲಿ ಓದಿದಿವೆಂಬುದನ್ನು ತಿಳಿದ್ದಿವೇ?` ಎಂದಾಗ ದ್ರುಪದನು ,ನಿನ್ನನ್ನು ನಾನು ತಿಳಿಯೆನು. ಎನ್ನನ್ನು ನೀನು ಅದೆಲ್ಲಿ ಕಂಡಿದ್ದಿಯೋ? ರಾಜನಿಗೂ ಬ್ರಾಹ್ಮಣವಂಶದವನಿಗೂ ಯಾವ ವಿಧವಾದ ಗೆಳೆತನ? ಹೀಗೆ ಮನುಷ್ಯರಾದವರು ನಾಚಿಕೆಯಿಲ್ಲದವರಾಗುತ್ತಾರೆಯೇ? `ಎಂಬ ಮಾತುಗಳಿಂದ ದ್ರೋಣನಿಗೆ ದ್ರುಪದನು ಮರ್ಮಭೇದಕವಾಗುವಂತೆ ತೀವ್ರವಾದ ನಾಚಿಕೆಗೆ ಈಡಾಗುವಂತೆ ಮಾಡಿದನು. ಆಗ ದ್ರೋಣನು ದ್ರುಪದನನ್ನು ಕುರಿತು ,ಎಲೈ ದುಷ್ಟನೆ 'ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಠವಾದುದು ಎಂಬಂತೆ ನಿನ್ನ ಪರಾಕ್ರಮ ನನ್ನವರೆಗೂ ಉಂಟೇ? ಜೊತೆಯಲ್ಲಿ ಓದಿದವು ಎಂಬ ಉತ್ಸಾಹಕ್ಕೆ ನಿನ್ನನ್ನು ಎನಗೆ ಕೊಲ್ಲಲಾಗದು. ಈ ಸಭಾವಲಯದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ಅನಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿಪಡುವಂತೆ ಕಟ್ಟಿಸದೆ ಬಿಟ್ಟರೆ ಸುಮ್ಮನೆ ಮೀಸೆ ಹೊತ್ತಿರುವುನೇ (ಮೀಸೆ ಹೊತ್ತಿರುವುದು ವ್ಯರ್ಥವಲ್ಲ?)` ಎಂದು ಪ್ರತಿಜ್ಞೆಯನ್ನು ಮಾಡುತ್ತಾನೆ.

**ಅಥವಾ**

**ದ್ರೋಣನೂ ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಅಂಶಗಳನ್ನು ವಿವರಿಸಿ?**

**ಉತ್ತರ:** ತನ್ನ ಒಡನಾಡಿಯೂ ಗೆಳೆಯನೂ ಆದ ದ್ರುಪದನು ಛತ್ರಾವತಿಯಲ್ಲಿ ರಾಜ್ಯಭಾರ ಮಾಡುತ್ತಿದ್ದಾನೆ ಎಂದು ಕೇಳಿ, ದ್ರೋಣನು ಆ ಪಟ್ಟಣಕ್ಕೆ ಬಂದು ದ್ರುಪದನ ಅರಮನೆಯ ಬಾಗಿಲಿನಲ್ಲಿ ನಿಂತು, ದ್ವಾರಪಾಲಕನನ್ನು ಕರೆದು,ನಿಮ್ಮ ಗೆಳೆಯನಾದ ದ್ರೋಣ ಎಂಬ ಬ್ರಾಹ್ಮಣನು ಬಂದಿದ್ದಾನೆ ಎಂದು ನಿಮ್ಮ ರಾಜನಿಗೆ ತಿಳಿಯಪಡಿಸು`ಎಂದು ಹೇಳಿದಾಗ ಆ ದ್ವಾರಪಾಲಕನು ಆ ರೀತಿಯಲ್ಲಿಯೇ ಬಂದು ರಾಜನಿಗೆ

ತಿಳಿಸಿದನು. ಅವನು ನನಗೆ ಹೇಗೆ ಗೆಳೆಯನು? ಅಂತಹವನನ್ನು ನಾನು ತಿಳಿಯೆನು.ಅವನನ್ನು ಹೊರಗೆ ನೂಕು` ಎಂದು ಸಭಾಮಧ್ಯದಲ್ಲ ಕೆಟ್ಟದಾಗಿ ಮಾತನಾಡಿದನು. ದ್ರೋಣನು ಒತ್ತಂಬರದಿಂದ ಅರಮನೆ ಪ್ರವೇಶಿಸಿ ದ್ರುಪದನನ್ನು ಕುರಿತು ,ಅಣ್ಣಾ, ನೀವೂ ನಾವೂ ಜೊತೆಯಲ್ಲಿ ಓದಿದಿವೆಂಬುದನ್ನು ತಿಳಿದಿಲ್ಲವೇ?` ಎಂದಾಗ ದ್ರುಪದನು ,ನಿನ್ನನ್ನು ನಾನು ತಿಳಿಯೆನು. ಎನ್ನನ್ನು ನೀನು ಅದೆಲ್ಲಿ ಕಂಡಿದ್ದಿಯೋ? ರಾಜನಿಗೂ ಬ್ರಾಹ್ಮಣವಂಶದವನಿಗೂ ಯಾವ ವಿಧವಾದ ಗೆಳೆತನ? ಹೀಗೆ ಮನುಷ್ಯರಾದವರು ನಾಚಿಕೆಯಿಲ್ಲದವರಾಗುತ್ತಾರೆಯೇ?`ಎಂಬ ಮಾತುಗಳಿಂದ ದ್ರೋಣನಿಗೆ ದ್ರುಪದನು ಮರ್ಮಭೇದಕವಾಗುವಂತೆ ತೀವ್ರವಾದ ನಾಚಿಕೆಗೆ ಈಡಾಗುವಂತೆ ಮಾಡಿದನು. ಆಗ ದ್ರೋಣನು ದ್ರುಪದನನ್ನು ಕುರಿತು ,ಎಲೈ ದುಷ್ಟನೇ, 'ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಠ ವಾದುದು' ಎಂಬಂತೆ ನಿನ್ನ ಪರಾಕ್ರಮ ನನ್ನವರೆಗೂ ಉಂಟೇ? ಜೊತೆಯಲ್ಲಿ ಓದಿದವು ಎಂಬ ಉತ್ಸಾಹಕ್ಕೆ ನಿನ್ನನ್ನು ಎನಗೆ ಕೊಲ್ಲಲಾಗದು. ಈ ಸಭಾವಲಯದಲ್ಲಿ ನನ್ನನ್ನು ಹಿಯ್ಯಾಳಿಸಿದ ನಿನ್ನನ್ನು ಅನಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿ ಪಡುವಂತೆ ಕಟ್ಟಿಸದೆ ಬಿಟ್ಟರೆ ಸುಮ್ಮನೆ ಮೀಸೆ ಹೊತ್ತಿರುವುನೇ (ಮೀಸೆ ಹೊತ್ತಿರುವುದು ವ್ಯರ್ಥವಲ್ಲ?)` ಎಂದು ಪ್ರತಿಜ್ಞೆಯನ್ನು ಮಾಡುತ್ತಾನೆ.

**ಔ) ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4=(2+2)**

ಮಹಾತ್ಮ ಬಸವಣ್ಣನವರು ಕಟ್ಟ ಬಯಸಿದ್ದು ಸರ್ವ ಶೋಷಣೆಗಳಿಂದ ಮುಕ್ತವಾದ ಸ್ವಾತಂತ್ರ್ಯ , ಸಮಾನತೆ , ಸೌಹಾರ್ದತೆಗಳ ಅಡಿಗಲ್ಲಿನ ಮೇಲೆ ನಿಂತ ಸರ್ವೋದಯ ನಿಷ್ಠವಾದ ಒಂದು ಆದರ್ಶ ಸಮಾಜವನ್ನು ಎಂದು ಹೇಳಬಹುದು. ಅವರು ಈ ನೆಲದ ಮೇಲೆ ನಡೆದಾಡಿ ಸುಮಾರು ಎಂಟು ನೂರು ವರ್ಷಗಳಾಗಿ ಹೋದವು. ಅವರು ಕಲ್ಪಿಸಿಕೊಂಡು ಕಟ್ಟ ಬಯಸಿದ ಸಮಾಜ ಇಂದಿಗೂ ಸಂಪೂರ್ಣವಾಗಿ ಅಸ್ತಿತ್ವಕ್ಕೆ ಬಂದಿಲ್ಲ ಎಂಬುದನ್ನು ಗಮನಿಸಿದಾಗ ಅಷ್ಟು ಹಿಂದೆಯೇ ಅವರು ಕಂಡ ಕನಸು ಮತ್ತು ಅದನ್ನು ನನಸು ಮಾಡಲೂ ಮಾಡಿದ ಹೋರಾಟ ಎಷ್ಟು ದೊಡ್ಡದೆಂಬುದ ಅರಿವಾಗದೆ ಇರಲಾರದು. ದೇವ ಲೋಕ ಮರ್ತ್ಯಲೋಕಗಳಿಗೆ ಹೊಸ ಅರ್ಥ ಕಲ್ಪಿಸದವರು ಬಸವಣ್ಣ ಅವರ ದೃಷಿಯಲ್ಲಿ ದೇವಲೋಕ ಎಲ್ಲೋ ಇರುವಂತಹದ್ದಲ್ಲ. ಸತ್ತ ಮೇಲೆ ಗಳಿಸುವಂತದ್ದಲ್ಲ. ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ. ಬಸವಣ್ಣವರು ಪರವನ್ನು ಮರೆಯದೇ ಇಹ ಲೋಕದ ಶುದ್ಧಿ ಆರ್ಜವಗಳಿಗೆ ಪರಮ ಪ್ರಾಶಸ್ತ್ಯ ಕೊಡುತ್ತಾರೆ. ಮರ್ತ್ಯವೆಂಬುದು ಕರ್ತಾರನ ಕಮ್ಮಟವಯ್ಯ ಇಲ್ಲಿ ಸಲ್ಲವವರು ಅಲ್ಲಿಯೂ ಸಲ್ಲುವರಯ್ಯ ಅಂದು ನುಡಿಯುತ್ತಾರೆ. ಮರ್ತ್ಯದಲ್ಲಿ ಹೇಗೋ ಬದುಕಿ ಸ್ವರ್ಗ ಸೇರಿಕೊಳ್ಳುವುದು ಸಾಧ್ಯವಿಲ್ಲ. ಅಂಥಹ ಯಾವುದು ಸುಲಭೋಪಾಯವು ಇಲ್ಲ. ಸ್ವರ್ಗದ ಕೀಲಿ ಕೈ ಇರುವುದು ಮರ್ತ್ಯದಲ್ಲಿ ಅದನ್ನು ಇಲ್ಲೆ ಕಷ್ಟಪಟ್ಟು ಸಂಪಾದನೆ ಮಾಡಬೇಕು. ಹೀಗೆ ಇಹವನ್ನು ಪರವಾಗಿ ಅರಳಿಸುವ ಕ್ರಾಂತಿಕಾರಕ ಮನೋಧರ್ಮ ಬಸವಣ್ಣನವರದಾಗಿತ್ತು.

**43. ಅ) ಮಹಾತ್ಮ ಬಸವಣ್ಣನವರು ಎಂತಹ ಸಮಾಜವನ್ನು ಕಟ್ಟಬಯಸಿದ್ದರು ?**

**ಉತ್ತರ:** ಮಹಾತ್ಮ ಬಸವಣ್ಣನವರು ಕಟ್ಟ ಬಯಸಿದ್ದು ಸರ್ವ ಶೋಷಣೆಗಳಿಂದ ಮುಕ್ತವಾದ ಸ್ವಾತಂತ್ರ್ಯ, ಸಮಾನತೆ, ಸೌಹಾರ್ಧತೆಗಳ ಅಡಿಗಲ್ಲಿನ ಮೇಲೆ ನಿಂತ ಸರ್ವೋದಯ ನಿಷ್ಠವಾದ ಒಂದು ಆದರ್ಶ ಸಮಾಜವನ್ನು ಎಂದು ಹೇಳಬಹುದು.

**ಆ) ಬಸವಣ್ಣನವರು ಮರ್ತ್ಯಲೋಕಕ್ಕೆ ನೀಡಿದ ಹೊಸ ಅರ್ಥವನ್ನು ತಿಳಿಸಿ.**

**ಉತ್ತರ:** ಬಸವಣ್ಣನವರು "ಮರ್ತ್ಯವೆಂಬುದು ಕರ್ತಾರನ ಕಮ್ಮಟವಯ್ಯ ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ" ಅಂದು ನುಡಿಯುತ್ತಾರೆ. ಮರ್ತ್ಯದಲ್ಲಿ ಹೇಗೋ ಬದುಕಿ ಸ್ವರ್ಗ ಸೇರಿಕೊಳ್ಳುವುದು ಸಾಧ್ಯವಿಲ್ಲ. ಅಂಥಹ ಯಾವುದು ಸುಲಭೋಪಾಯವು ಇಲ್ಲ. ಸ್ವರ್ಗದ ಕೀಲಿ ಕೈ ಇರುವುದು ಮರ್ತ್ಯದಲ್ಲಿ ಅದನ್ನು ಇಲ್ಲೆ ಕಷ್ಟಪಟ್ಟು ಸಂಪಾದನೆ ಮಾಡಬೇಕು.

**ಅಂ) ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ 1x5=5**

**44. ನಿಮ್ಮನ್ನು ಹಾವೇರಿಯ ಶ್ರೀಕನಕದಾಸ ಪ್ರೌಢಶಾಲೆಯಲ್ಲಿ ಓದುತ್ತಿರುವ ಸೃಜನ ಎಂದು ಭಾವಿಸಿಕೊಂಡು ನಿಮ್ಮ ಪರೀಕ್ಷಾ ಸಿದ್ಧತೆಯನ್ನು ಕುರಿತು ಚಿಕ್ಕಬಳ್ಳಾಪುರದಲ್ಲಿರುವ ನಿಮ್ಮ ದೊಡ್ಡಪ್ಪನವರಿಗೆ ಒಂದು ಪತ್ರ ಬರೆಯಿರಿ.**

ಸೃಜನ
10ನೇ ತರಗತಿ ಶ್ರೀಕನಕದಾಸ
ಪ್ರೌಢಶಾಲೆ ಆದಿಕೇಶವ ನಗರ,
ಹಾವೇರಿ
ದಿನಾಂಕ:28–1–2020

ಪೂಜ್ಯ ತೀರ್ಥರೂಪುಸಮಾನರಾದ ದೊಡ್ಡಪ್ಪನವರಿಗೆ ನಿಮ್ಮ ಮಗ/ಳು ಸೃಜನ ಮಾಡುವ ಶಿರಸಾಷ್ಟಾಂಗ ಪ್ರಣಾಮಗಳು. ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ಅಲ್ಲಿ ನೀವು ಕ್ಷೇಮವಾಗಿದ್ದೀರಿ ಎಂದು ಭಾವಿಸಿರುತ್ತೇನೆ. ದೊಡ್ಡಮ್ಮನವರಿಗೆ ನಮಸ್ಕಾರಗಳು. ನನ್ನ ವಿದ್ಯಾಭ್ಯಾಸವು ಕೂಡ ಉತ್ತಮವಾಗಿ ನಡೆಯುತ್ತಿದೆ. ದಿನಾಂಕ 21–03– 2020 ರಿಂದ ನನ್ನ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಳು ಆರಂಭವಾಗುತ್ತಿದ್ದು ಅದಕ್ಕೆ ಅತ್ಯುತ್ತಮವಾಗಿ ಸಿದ್ಧತೆ ಮಾಡಿಕೊಳ್ಳುತ್ತಿದ್ದೇನೆ. ಪ್ರತಿದಿನ ಬೆಳಿಗ್ಗೆ 5 ಗಂಟೆಗೆ ಎದ್ದು ಓದುತ್ತಿದ್ದೇನೆ. ನೀವು ಅಂದುಕೊಂಡಂತೆ 100% ಫಲಿತಾಂಶ ಪಡೆಯುವ ಭರವಸೆಯನ್ನು ನೀಡುತ್ತಿದ್ದೇನೆ. ನಿಮ್ಮ ಆಶೀರ್ವಾದ ಇರಲಿ. ತಂಗಿಯಾದ ಕೃತಿಕಾಗೆ ನನ್ನ ಆಶೀರ್ವಾದಗಳು. ಅವಳನ್ನು ಚೆನ್ನಾಗಿ ಓದಿಕೊಳ್ಳಲು ತಿಳಿಸಿ. ನಾವಿಬ್ಬರೂ ನಿಮಗೆ ಒಳ್ಳೆಯ ಹೆಸರನ್ನು ತಂದುಕೊಡುತ್ತವೆ.
ನಿಮ್ಮ ಆಶೀರ್ವಾದ ಬಯಸುತ್ತಾ ಪ್ರಣಾಮಗಳೊಂದಿಗೆ

ಇಂತಿ ನಿಮ್ಮ ಪ್ರೀತಿಯ ಮಗ/ಳು
ಸೃಜನ

**ಅಂಚೆ ವಿಳಾಸ**
ಶ್ರೀಯುತ ಆದಿಕೇಶವಪ್ಪನವರು
ಮಾರುತಿ ನಿಲಯ
ಶಬರಿ ನಗರ
ಮನೆ ನಂ–599
ಚಿಕ್ಕಬಳ್ಳಾಪುರ–654355

**ನಿಮ್ಮನ್ನು ಮಂಗಳೂರಿನ ರಾಣಿಅಬ್ಬಕ್ಕ ಪ್ರೌಢಶಾಲೆಯಲ್ಲಿ 10ನೇ ತರಗತಿ ಓದಿರುವ ಅರುಣ ಎಂದು ಭಾವಿಸಿಕೊಂಡು ನಿಮ್ಮ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ ಕೋರಿ ಮುಖ್ಯೋಪಾಧ್ಯಯರಿಗೊಂದು ಪತ್ರಬರೆಯಿರಿ.**

**ಇವರಿಂದ,**

ಅರುಣ
10ನೇತರಗತಿ
ರಾಣಿಅಬ್ಬಕ್ಕ ಪ್ರೌಢಶಾಲೆ
ಮಂಗಳೂರು–02

**ಇವರಿಗೆ,**

ಮುಖ್ಯೋಪಾಧ್ಯಾಯರು
ರಾಣಿಅಬ್ಬಕ್ಕ ಪ್ರೌಢಶಾಲೆ
ಮಂಗಳೂರು–02

ಮಾನ್ಯರೇ

**ವಿಷಯ: ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ ಕೋರಿ**

ಸರ್, ಈ ಮೂಲಕ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ನಾನು ನಿಮ್ಮ ರಾಣಿಅಬ್ಬಕ್ಕ ಪ್ರೌಢಶಾಲೆಯಲ್ಲಿ 8ನೇ ತರಗತಿಯಿಂದ 10ನೇ ತರಗತಿಯವರೆಗೆ ಓದಿದ್ದು 2018–19 ನೇ ಸಾಲಿನಲ್ಲಿ ನಡೆದ ಎಸ್.ಎಸ್.ಎಲ್.ಸಿವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದೇನೆ. ನನ್ನ ಮುಂದಿನ ವಿದ್ಯಾಭ್ಯಾಸಕ್ಕಾಗಿ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ ಕೊಡ ಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಧನ್ಯವಾದಗಳೊಂದಿಗೆ

ದಿನಾಂಕ: 21–03–2020 ಇಂತಿ ತಮ್ಮ ವಿದ್ಯಾರ್ಥಿ
ಸ್ಥಳ : ಮಂಗಳೂರು–02 ಅರುಣ

ಅಃ) **ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1x5=5**

45. **ಮಹಿಳಾ ಸಬಲೀಕರಣ**

**ಪೀಠಿಕೆ :** ಮಹಿಳೆಯರಲ್ಲಿ ಮಾನಸಿಕವಾಗಿ , ಬೌದ್ಧಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಸಬಲತೆಯನ್ನು ಹೆಚ್ಚಿಸಿ ಅವರು ಆತ್ಮ ವಿಶ್ವಾಸವನ್ನು ಹೊಂದುವಂತೆ ಮಾಡುವುದೇ ಮಹಿಳಾ ಸಬಲೀಕರಣ ಎಂದು ಹೇಳಬಹುದು. ಇಂದು ಪುರುಷರಷ್ಟೆ ಮಹಿಳೆಯರು ಸಮಾನರಾಗಿದ್ದು ಪ್ರತಿಯೊಂದು ಕ್ಷೇತ್ರಗಳಲ್ಲಿ ಪುರುಷರಷ್ಟೆ ಸಾಧನೆಯನ್ನು ಮಾಡುವ ಸಾಮರ್ಥ್ಯ ಹೊಂದಿದ್ದಾರೆ. ಸಮಾನತೆ ಎನ್ನುವುದು ಮಹಿಳೆಯರಿಗೂ ಅನ್ವಯಿಸುತ್ತದೆ.

**ವಿಷಯ ನಿರೂಪಣೆ :** ಯಾವುದೇ ರೀತಿಯ ಶೋಷಣೆ , ಅಸಮಾನತೆಗೆ ಒಳಗಾಗದೆ ಶಿಕ್ಷಣ, ಉದ್ಯೋಗ, ವಿವಾಹ ಜೀವನ, ಸಾಮಾಜಿಕ, ರಾಜಕೀಯ ಮತ್ತು ಆಡಳಿತದಲ್ಲಿ ಪಾಲ್ಗೊಂಡು ಆತ್ಮ ವಿಶ್ವಾಸದಿಂದ ಬಾಳುವ ಶಕ್ತಿಯೇ ಮಹಿಳಾ ಸಬಲತೆ. ನಾಲ್ಕು ಗೋಡೆಗಳ ಮಧ್ಯೆ ಬಿಟ್ಟು ಎಲ್ಲರ ಜೊತೆಯಾಗಿ ಬೆರೆತು ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಇಂದಿನ ಮಹಿಳೆಯರು ಹೊಂದಿರುವುದು ಮಹಿಳಾ ಸಬಲೀಕರಣವನ್ನು ಎತ್ತಿ ತೋರಿಸುತ್ತದೆ. ಮೊದಲು ಮಹಿಳೆಯರು ಶೈಕ್ಷಣಿಕವಾಗಿ ಸಬಲರಾಗಬೇಕು. ಈ ಉದ್ದೇಶದಿಂದ ಉಚಿತ ಶಿಕ್ಷಣವನ್ನು ನೀಡಲಾಗುತ್ತಿದೆ. ಮಹಿಳೆಯರ ಶಿಕ್ಷಣಕ್ಕಾಗಿ ಆದ್ಯತೆ ನೀಡಲಾಗಿದೆ. ಮಹಿಳೆಯರ ವಿಕಾಸವಾದಲ್ಲಿ ಮನೆಯಲ್ಲಿನ ಮಕ್ಕಳು ಸಂಸ್ಕಾರವಂತರಾಗಲು ಸಾಧ್ಯವಿದೆ. ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಸ್ಥಾಪಿತ ಸರ್ಕಾರಗಳು ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿರುವುದನ್ನು ನೋಡಬಹುದು. ಸ್ತ್ರೀಶಕ್ತಿ ಯೋಜನೆ, ಮಹಿಳಾ ಸ್ವಸಹಾಯ ಸಂಘಗಳು ಇವೆ.

ಮಹಿಳೆಯರಿಗಾಗಿ ಸೂಕ್ತವಾದ ಮತ್ತು ಮಾನವೀಯತೆಯಿಂದ ಕೂಡಿದ ಕೆಲಸದ ವಾತಾವರಣವನ್ನು ಮತ್ತು ಮಾತೃತ್ವದ ಸವಲತ್ತುಗಳನ್ನು ನೀಡುವಂತಹ ಅವಕಾಶಗಳನ್ನು ಕಲ್ಪಿಸಲಾಗಿದೆ.
ಸಾಮಾಜಿಕವಾಗಿ ಮುಂದುವರಿಯಲು ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಅವಕಾಶ ನೀಡಲಾಗಿದೆ. ಸಮಾಜದ ಅರಿವು ಅವರಿಗಾಗಿ ಎಲ್ಲ ಕಾರ್ಯಗಳಲ್ಲಿ ತೊಡಗುವಂತಾಗಬೇಕು. ಲಿಂಗ ತಾರತಮ್ಯವನ್ನು ಹೋಗಲಾಡಿಸಿ ಪ್ರತಿಯೊಂದು ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಅವಕಾಶ ನೀಡಲಾಗಿದೆ. ಕೆಲವೊಂದು ಸಾಂಪ್ರದಾಯಿಕ ಕಾರಣಗಳಿಂದ ಮಹಿಳೆಯರು ಹಿಂದುಳಿದಿದ್ದಾರೆ ಎನ್ನುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಆದ್ದರಿಂದ ಅನವಶ್ಯಕವೆನಿಸಿದ ಸಾಂಪ್ರದಾಯಿಕ ಚೌಕಟ್ಟನ್ನು ಮೀರಿ ಇಂದಿನ ಮಹಿಳೆಯರು ಸಬಲರಾಗಬೇಕಾಗುತ್ತದೆ. ಮಹಿಳೆಯರ ಪರವಾಗಿ ಕಾಯಿದೆ–ಕಾನೂನುಗಳು ರೂಪುಗೊಂಡಿವೆ. ಮಹಿಳೆಯರ ಸ್ವಾವಲಂಬನೆ ಮತ್ತು ಕಲ್ಯಾಣಕ್ಕಾಗಿ ಇಲಾಖೆಯೇ ಇದೆ. ಮಹಿಳೆಯರ ರಕ್ಷಣೆಗಾಗಿ ಬೇಟಿ ಬಚಾವೋ, ಬೇಟಿಪಡಾವೋದಂತಹ ಯೋಜನೆಗಳನ್ನು ಜಾರಿ ತಂದಿರುವುದನ್ನು ನೋಡಬಹುದು. ಮಹಿಳೆಯರು ಕೂಡ ಸ್ವಉದ್ಯೋಗ ಮಾಡಲು ಅವಕಾಶ ನೀಡಿ ಸ್ವಾವಲಂಬಿಯಾಗಿ ಬದುಕಲು ಅವಕಾಶ ನೀಡಬೇಕು. ಮಹಿಳೆಯ ಸಬಲೀಕರಣಕ್ಕಾಗಿ ರಾಜಕೀಯವಾಗಿ, ಔದ್ಯೋಗಿಕವಾಗಿ, ಶೈಕ್ಷಣಿವಾಗಿ ಮಹಿಳಾ ಮೀಸಲಾತಿಯನ್ನು ಕೂಡ ನೀಡಲಾಗಿದೆ. ತೊಟ್ಟಿಲನ್ನು ತೂಗುವ ಕೈ ಜಗತ್ತನ್ನೆ ಆಳಬಲ್ಲದು. ಆದ್ದರಿಂದ ಮಹಿಳೆಯರ ಸಬಲೀಕರಣವಾದರೆ ಜಗತ್ತು ಉದ್ಧಾರವಾದೀತು.
**ಉಪಸಂಹಾರ** : ಮಹಿಳೆಯರ ಸಶಕ್ತರಾದರೆ ದೇಶವೂ ಸಶಕ್ತವಾಗುತ್ತದೆ. ಆದ್ದರಿಂದ ಮಹಿಳೆಯರಿಗೆ ಸಬಲರಾಗಲೂ ಅವಕಾಶ ನೀಡಬೇಕು. ಒಬ್ಬ ಮಹಿಳೆಯು ಶಕ್ತಿವಂತಳಾಗಿ, ಸ್ವತಂತ್ರವಾಗಿ ತನ್ನ ಇಚ್ಛೆಯಂತೆ ಸ್ವಾವಲಂಬಿಯಾಗಿ ಬಾಳುವ ಸ್ಥಿತಿಯನ್ನು ಅವರಿಗೆ ನೀಡಿದಾಗ ಮಹಿಳಾ ಸಬಲೀಕರಣ ಸಾಧ್ಯವೆಂದು ಹೇಳಬಹುದು.

**ಅಥವಾ**

**ಪ್ರಕೃತಿ ವಿಕೋಪಗಳು**

**ಪೀಠಿಕೆ :** ಮಾನವನ ಜೀವ ಅಥವಾ ಸಾಮಾಜಿಕ ಚಟುವಟಿಕೆಗಳಿಗೆ ಹಾನಿಯುಂಟುಮಾಡುವ ನೈಸರ್ಗಿಕ ಪ್ರಕ್ರಿಯೆಗಳ ಪರಿಣಾಮಗಳನ್ನು ಪ್ರಕೃತಿ ವಿಕೋಪ ಎಂದು ಕರೆಯಬಹುದು. ಪ್ರಕೃತಿ ತನ್ನ ಸಹಜ ವರ್ತನೆಗಳನ್ನು ಬಿಟ್ಟು ಅಸಹಜವಾಗಿ ತನ್ನ ರೂಪವನ್ನು ತೋರಿಸುವುದು. ಹವಾಮಾನ ವೈಪರಿತ್ಯದಿಂದಾಗಿ ಉಂಟಾಗುವ ಅತಿವೃಷ್ಟಿ– ಅನಾವೃಷ್ಟಿ , ನೆರೆಹಾವಳಿ , ಪ್ರವಾಹ , ಬಿರುಗಾಳಿ, ಚಂಡಮಾರುತ, ಜ್ವಾಲಮುಖಿ ಸ್ಫೋಟ, ಭೂಕಂಪ , ಭೂಕುಸಿತ , ಸುನಾಮಿ , ಸೈಕ್ಲೋನ್ ಇತ್ಯಾದಿಗಳಿಂದ ಪ್ರಕೃತಿ ವಿಕೋಪ ಯುಂಟಾಗುತ್ತದೆ.
**ವಿಷಯ ನಿರೂಪಣೆ** : ವಿಶ್ವದ ನಾನಾ ದೇಶಗಳು ಒಂದಲ್ಲ ಒಂದು ಸಾರಿ ಪ್ರಕೃತಿಯ ವಿಕೋಪಕ್ಕೆ ತುತ್ತಾಗಿರುವುದನ್ನು ಅರಿಯಬಹುದು. ಇದಕ್ಕೆ ಭಾರತವೂ ಹೊರತಾಗಿಲ್ಲ. ಮಾನವನ ಸ್ವಾರ್ಥ , ದುರುದ್ದೇಶಗಳು ಹಾಗೂ ಅವಮಾನ ವೈಪರಿತ್ಯಗಳು ಇದಕ್ಕೆಲ್ಲ ಮುಖ್ಯ ಕಾರಣವಾಗಿದೆ. ಸಾಕಷ್ಟು ಪ್ರಮಾಣದಲ್ಲಿ ಜೀವಹಾನಿ,ಆಸ್ತಿ–ಪಾಸ್ತಿ ನಷ್ಟ , ಮನುಷ್ಯರ, ಪ್ರಾಣಿಗಳ ಸಹಜ ಜೀವನಕ್ಕೆ ಅಡಚಣೆ ಉಂಟಾಗುತ್ತದೆ. ನಮ್ಮ ಪರಿಸರದ ಜೀವ ಸಂಕುಲಗಳಿಗೆ ಅಪಾರವಾದ ಹಾನಿಯುಂಟು ಮಾಡುತ್ತದೆ. ಎಷ್ಟೋ ಜನರು ತಮ್ಮ ಆಸ್ತಿ–ಪಾಸ್ತಿ ,ಮನೆ–ಹೊಲಗಳನ್ನು ಕಳೆದುಕೊಂಡು ನಿರಾಶ್ರಿತರಾಗಿ ಬದುಕುವ ಸ್ಥಿತಿಗೆ ತಂದೊಡ್ಡುತ್ತದೆ. ಉದಾಹರಣೆಗೆ ನಮ್ಮ ದೇಶದ ಗುಜರಾತ್‌ನಲ್ಲಿ 2001ರಲ್ಲಿ ನಡೆದ ಭೂಕಂಪ , 2004 ರಲ್ಲಿ ತಮಿಳುನಾಡು, ಕೇರಳದಲ್ಲಿ ಸಂಭವಿದ ಸುನಾಮಿ, 2013ರಲ್ಲಿ ಉತ್ತರಖಂಡದಲ್ಲಿ ಸುರಿದ ಮಹಾಮಳೆ, ಇತ್ತೀಚಿಗೆ ಒರಿಸ್ಸಾ , ಪಶ್ಚಿಮ ಬಂಗಾಳದಲ್ಲಿ ಉಂಟಾದ ಬಿರುಗಾಳಿ ಸಹಿತ ಚಂಡಮಾರುತ , ನಮ್ಮ ಕರ್ನಾಟಕದ ಕೊಡಗಿನಲ್ಲಿ ಸಂಭಸಿದ ಮಳೆಯ ಆರ್ಭಟ, ಭೂಕುಸಿತ , ಉತ್ತರ ಕರ್ನಾಟಕದಲ್ಲಿ ಮಹಾಮಳೆಯಿಂದ ಉಂಟಾದ ಪ್ರವಾಹ ಪರಿಸ್ಥಿತಿಯನ್ನು ನೋಡಿದರೆ ಪ್ರಕೃತಿಯ ರುದ್ರನರ್ತನ ಹೇಗಿರುತ್ತದೆ ಎಂದು ವಿಸ್ಮಯವಾಗುತ್ತದೆ. ನಮ್ಮಲ್ಲಿ ಸಾಕಷ್ಟು ವಿಜ್ಞಾನ–ತಂತ್ರಜ್ಞಾನ ಮುಂದುವರಿದಿದ್ದರೂ ಪ್ರಕೃತಿಯ ಆಟದ ಮುಂದೆ ಕೆಲವೊಂದು ಬಾರಿಸೋಲು ಇದ್ದೆ ಇದೆ. ಇದನ್ನು ಮೆಟ್ಟಿ ನಿಲ್ಲುವ ಹಂತಕ್ಕೆ ನಮ್ಮ ವ್ಯವಸ್ಥೆಯನ್ನು ಸರಿಪಡಿಸಿಕೊಳ್ಳಬೇಕು. ವಿಕೋಪ ಸಂದರ್ಭದಲ್ಲಿ ಸ್ಥಾಪಿತ ಸರ್ಕಾರಗಳು ಕ್ಷಿಪ್ರಗತಿಯಲ್ಲಿ ಪರಿಹಾರ ಕ್ರಮಗಳನ್ನು ಕೈಗೊಂಡು ಜನರು ಪುನಃ ಬದುಕು ಕಟ್ಟಿಕೊಳ್ಳುವಂತೆ ಏರ್ಪಾಡು ಮಾಡುವುದು ಅತಿ ಅವಶ್ಯವಾಗಿರುವಂತಹದ್ದು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಪತ್ತು ಪರಿಹಾರ ನಿಧಿಯನ್ನು ಬಳಸಿಕೊಂಡು ಜನರ ಸ್ಥಿತಿಯನ್ನು ಸಹಜ ಜೀವನಕ್ಕೆ ಮರಳುವಂತೆ ವ್ಯವಸ್ಥೆ ಮಾಡಬೇಕು. ಹಲವಾರು

ಸಂಘ –ಸಂಸ್ಥೆಗಳು , ವ್ಯಕ್ತಿಗಳು ವಿಕೋಪ ನಿಧಿಗೆ ಸಹಾಯವನ್ನು ಮಾಡುವುದರ ಮೂಲಕ ತಮ್ಮ ಸಹಕಾರ ಮನೋಭಾವವನ್ನು ತೋರಬಹುದು. ಉದಾಹರಣೆಗೆ ನಮ್ಮ ಇನ್ಫೋಸಿಸ್‌ನ ಸುಧಾಮೂರ್ತಿ ಅಮ್ಮನವರು, ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರು ಕೈಗೊಂಡ ಪರಿಹಾರ ವ್ಯವಸ್ಥೆಗೆ ಮೆಚ್ಚಲೆಬೇಕು.

**ಉಪಸಂಹಾರ** : ಜಗತ್ತಿನಾದ್ಯಂತ ಪ್ರಕೃತಿ ವಿಕೋಪದ ದುರಂತಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ವಿಕೋಪಗಳ ಮುನ್ನೆಚ್ಚರಿಕೆ ಕ್ರಮಗಳನ್ನು ಬಲಪಡಿಸಲು ಜಾಗೃತಿ ಯೋಜನೆಗಳನ್ನು ಹಾಕಿಕೊಳ್ಳಬೇಕು. ಸಮಸ್ಯೆಗಳನ್ನು ಪರಿಹರಿಸಲು ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳಬೇಕಾಗುತ್ತದೆ. ಒಟ್ಟಿನಲ್ಲಿ ಪ್ರಕೃತಿ ವಿಕೋಪಗಳಿಂದ ಉಂಟಾಗುವ ಹಾನಿಯನ್ನು ತಡೆಯಲು ನಮ್ಮ – ನಿಮ್ಮೆಲ್ಲರ ಸಹಕಾರ ಅಗತ್ಯವೆಂದು ಹೇಳಬಹುದು.